ಬುಧವಾರ, ಏಪ್ರಿಲ್ 15, 2026| ₹ 7.00

prajavani.net prajavani

www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಪುಸ್ತಕ ಓದು...
ಬೆಂಗಳೂರಿನಲ್ಲಿ ನಡೆದ ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಕಲಾವಿದರಿಬ್ಬರು ಪುಸ್ತಕ ಓದುವುದರಲ್ಲಿ ನಿರತರಾಗಿದ್ದರು

ಡೇವಿಡ್ ತಾಲೀಮು
ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಗುರುವಾರ ಲಖನೌ ಸೂಪರ್ ಜೈಂಟ್ಸ್ ಎದುರಿನ ಐಪಿಎಲ್ ಪಂದ್ಯದಲ್ಲಿ ಆಡುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಟಿಮ್ ಡೇವಿಡ್ ಮಂಗಳವಾರ ತಾಲೀಮು ನಡೆಸಿದರು

ಗಲ್ಫ್ ಯುದ್ಧವು ನಿಮ್ಮ ಆಭರಣ ಖರೀದಿ ಯೋಜನೆಗಳನ್ನು ಅಸ್ತವ್ಯಸ್ತಗೊಳಿಸಿದೆ.
ಜಾಗತಿಕ ಬೆಲೆಗಳು ಅನಿರೀಕ್ಷಿತವಾಗಿ ಏರಿಕೆಯಾಗಿದೆ. ಜಗತ್ತು ಇದಕ್ಕೆ ಸಿದ್ಧವಾಗಿರಲಿಲ್ಲ.
ಎಲ್ಲರಿಗೂ ಸ್ವಲ್ಪ ವಿನಾಯಿತಿ ಸಿಗಲಿ ಎಂದು ನೀವು ಬಯಸುತ್ತೀರಿ.

ಆ ಅವಕಾಶ ಈಗ ಇಲ್ಲಿದೆ!

ಈಗಲೇ ಖರೀದಿಸಿ!

ನಮ್ಮ ಅದ್ಭುತವಾದ ಚಿನ್ನ, ವಜ್ರ, ಪ್ಲಾಟಿನಂ ಆಭರಣಗಳು ಮತ್ತು ಬೆಳ್ಳಿಯ ವಸ್ತುಗಳನ್ನು 2026 ಜನವರಿ 1ರ ದರದಲ್ಲಿ* ಅಥವಾ ಗರಿಷ್ಠ ಮಿತಿಗಳೊಂದಿಗೆ 18.69% ರವರೆಗೆ ರಿಯಾಯಿತಿಯಲ್ಲಿ* ಪಡೆಯಿರಿ.

*ಗರಿಷ್ಠ ಮಿತಿಗಳಿಗೆ ಒಳಪಟ್ಟಿದೆ.

ಈ ಗ್ರ್ಯಾಂಡ್ 1869 ವಾರ್ ಸೇಲ್* ಅಡಿಯಲ್ಲಿ ನೀವು ಉಳಿಸುವ ಎಲ್ಲಾ ಮೊತ್ತವನ್ನು ಕಡ್ಡಾಯವಾಗಿ ಸಿ. ಕೃಷ್ಣಯ್ಯ ಚೆಟ್ಟಿ ಅವರ ಸಿಗ್ನೇಚರ್ **ಮನಿಪೆನ್ನಿ™** - ಯಾವುದೇ ಸಮಯದ ಆಭರಣ ಪಾವತಿ ಯೋಜನೆಗೆ ಹೂಡಿಕೆ ಮಾಡಲಾಗುತ್ತದೆ. ಈ ಯೋಜನೆ ಅನೇಕ ಲಾಭಗಳನ್ನು ನೀಡುತ್ತದೆ ಮತ್ತು 11 ತಿಂಗಳ* ಕೊನೆಯಲ್ಲಿ ಪೂರ್ಣಗೊಳ್ಳುತ್ತದೆ.

ಏಕೆಂದರೆ ನಾವು ನಿಮ್ಮ ಕಾಳಜಿ ವಹಿಸುತ್ತೇವೆ!

ಸಿ. ಕೃಷ್ಣಯ್ಯ ಚೆಟ್ಟಿ ಯಲ್ಲಿ, ಪ್ರತಿಯೊಬ್ಬ ಗ್ರಾಹಕರೊಂದಿಗೆ ನಮ್ಮ ಜೀವನಪರ್ಯಂತದ ಸಂಬಂಧದಲ್ಲಿ ಉತ್ತಮ ಆಭರಣಗಳ ಒಡೆತನದ ವೆಚ್ಚವನ್ನು ಕಡಿಮೆ ಮಾಡಲು ನಾವು ಹೆಚ್ಚಿನ ಪ್ರಯತ್ನಗಳನ್ನು ಮಾಡುತ್ತೇವೆ.

ಈಗಲೇ ಡೌನ್‌ಲೋಡ್ ಮಾಡಿ ಮತ್ತು ಮನಿಪೆನ್ನಿ™ ಆಪ್ ಅನ್ನು ಪ್ರಾರಂಭಿಸಿ.
ಇದಕ್ಕೆ ಸಮಾನವಾದದು ಇನ್ನಾವುದೂ ಇಲ್ಲ

ಸಿ. ಕೃಷ್ಣಯ್ಯ ಚೆಟ್ಟಿ™
ಗ್ರೂಪ್ ಆಫ್ ಜ್ಯುವೆಲರ್ಸ್

ಭವ್ಯವಾದ ಶೋರೂಮ್‌ಗಳು ಮತ್ತು ಬೂಟಿಕ್ ಗಳು

ಪರಂಪರೆಯ ಮಳಿಗೆ
ಕಮರ್ಷಿಯಲ್ ಸ್ಟ್ರೀಟ್

ದಿ ಟಚ್‌ಸ್ಟೋನ್
ಮೇನ್ ಗಾರ್ಡ್ ಕ್ರಾಸ್ ರಸ್ತೆ

ದಿ ಟಚ್‌ಸ್ಟೋನ್ ಸೌತ್
5ನೆ ಬ್ಲಾಕ್, ಜಯನಗರ

ದಿ ಟಚ್‌ಸ್ಟೋನ್ ವೆಸ್ಟ್
ಮಲ್ಲೇಶ್ವರಂ

ಹೆಚ್ಚಿನ ಮಾಹಿತಿಗಾಗಿ ನಮ್ಮ ಮೀಸಲಿಟ್ಟ ಸಂಬಂಧಿತ ವ್ಯವಸ್ಥಾಪಕರಿಗೆ ಕರೆ ಮಾಡಿ: +91 95 1313 1869
Tel: 080-4000 1869 / 4100 1869 | www.ckcjewellers.com

ಸಿಕೆಸಿ ಸಮೂಹ ಕಂಪನಿಗಳು C. KRISHNIAH CHETTY & SONS C. KRISHNIAH CHETTY JEWELLERS THE 1869 GUILD C. Krishniah Chetty & Sons C. KRISHNIAH CHETTY CHARITABLE TRUST

*ಎಚ್ಚರಿಕೆ ಸೂಚನೆ – ಸಾರ್ವಜನಿಕ ಹಿತಾಸಕ್ತಿಯಲ್ಲಿ: * ಪ್ರಸ್ತುತ ನಮ್ಮ ಕಂಪನಿಯ ನಿರ್ದೇಶಕರು ಆಗಿರುವ ಶ್ರೀ ಸಿ. ಗಣೇಶ್ ನಾರಾಯಣ್ ಮತ್ತು ಅವರ ಪತ್ನಿಯೊಂದಿಗೆ ನಡೆಸುತ್ತಿರುವ ದೀಪಾಲಿ ಕಂ. ಪ್ರೈ. ಲಿ., ಎಂಬ ಕಂಪನಿಯ ಹೆಸರನ್ನು ಮೋಸತನದಿಂದ ನಮ್ಮ ಹೆಸರಿನಂತೆಯೇ ಬದಲಾಯಿಸಿ ನಮಗೆ ಸಂಬಂಧವಿಲ್ಲದ ಒಂದು ವ್ಯಾಪಾರ ಸಂಸ್ಥೆಯನ್ನು ಆರಂಭ ಮಾಡಿರುತ್ತಾರೆ. ಈ ನೂತನ ಅನಧಿಕೃತ ಮಳಿಗೆಯು ಟಚ್‌ಸ್ಟೋನ್ (ನಮ್ಮ ಪ್ರಮುಖ ಶೋರೂಮ್‌ನ ಪಕ್ಕ) ಎಡಭಾಗದಲ್ಲಿ ತೆರೆಯಲಾಗಿದೆ. ಈ ಸಂಸ್ಥೆಯು, ನ್ಯಾಯಾಲಯದ ಆದೇಶಗಳ ಉಲ್ಲಂಘನೆಯ ಅಡಿಯಲ್ಲಿ ನಿರ್ಬಂಧಗಳಿಗೆ ಒಳಪಟ್ಟಿರುತ್ತದೆ. ಆದ್ದರಿಂದ, ನಮ್ಮ ಎಲ್ಲಾ ಗ್ರಾಹಕರಿಗೆ/ಸಾರ್ವಜನಿಕರಿಗೆ ತಿಳಿಸುವ ಎಚ್ಚರಿಕೆ ಸೂಚನೆ ಏನೆಂದರೆ, ದಯವಿಟ್ಟು ಮತ್ತೊಂದು ಅಧಿಕೃತ ಸಿ. ಕೃಷ್ಣಯ್ಯ ಚೆಟ್ಟಿ ಶೋರೂಮ್ ಇದೆಯೆಂಬ ತಪ್ಪು ಕಲ್ಪನೆಗೆ ಒಳಗಾಗದಿರಿ. ವಾಸ್ತವವಾಗಿ ಅದು ಸಿಕೆಸಿ ಹೆಸರು ಅಥವಾ ಸಿಕೆಸಿ ಗ್ರೂಪ್ ಲೋಗೊ ಬಳಸಿಕೊಳ್ಳಲು ಅಧಿಕೃತ ಸಂಸ್ಥೆಯಲ್ಲ. ವಿಷಯಗಳು ನ್ಯಾಯಾಲಯಗಳಲ್ಲಿ ತೀವ್ರ ಆದ್ಯತೆಯ ಮೇರೆಗಿನ ವಿಚಾರಣೆಗೆ ಬಾಕಿ ಇರುತ್ತವೆ. ಗಮನಿಸಿ: *ಒಂದು ವೇಳೆ, ಕಾನೂನಿನ ಪ್ರಕಾರ ಅವರ ವ್ಯವಹಾರ ಸ್ಥಗಿತವಾದಲ್ಲಿ, ಅವರಿಂದ ಮಾರಾಟ ಮಾಡಲಾಗಿರುವ ಉತ್ಪನ್ನಗಳನ್ನು (ಅವರ ಸಂಘರ್ಷಮಯ ವ್ಯಾಪಾರ ಆರಂಭವಾದ ದಿನಾಂಕ 15.03.2023 ರಿಂದ), ನಮ್ಮ ಸಿಕೆಸಿ ನಿಯಮಗಳ ಅಡಿಯಲ್ಲಿ ಮರು–ಖರೀದಿಗೆ/ವಿನಿಮಯ ಯೋಜನೆಯಲ್ಲಿ ಪರಿಗಣಿಸಲಾಗುವುದಿಲ್ಲ. ಇದಲ್ಲದೆ, ಅನಧಿಕೃತ ವ್ಯವಹಾರದೊಂದಿಗೆ ವ್ಯವಹರಿಸುವಾಗ ನೀವು ಆರ್ಥಿಕ ನಷ್ಟವನ್ನು ಅನುಭವಿಸಬಹುದು.*

*ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. • ಗುರುತುಗಳು, ಲೋಗೋಗಳು, ಹೆಸರುಗಳು ಮತ್ತು ನೋಂದಾಯಿತ ಟ್ರೇಡ್‌ಮಾರ್ಕ್‌ಗಳ ಅನಧಿಕೃತ ಬಳಕೆಯನ್ನು ನಿಷೇಧಿಸಲಾಗಿದೆ.

ನಿರುದ್ಯೋಗಿ ಯುವಕರ ಬಿಡುಗಡೆಗೆ ಆಗ್ರಹ

ಬೆಂಗಳೂರು: ಧಾರವಾಡದಲ್ಲಿ ಪ್ರತಿಭಟನೆ ನಡೆಸಿದ ನಿರುದ್ಯೋಗಿ ಯುವಕರನ್ನು ಬಂಧಿಸಿದ್ದು, ಕೂಡಲೇ ಅವರನ್ನು ಬಿಡುಗಡೆ ಮಾಡಬೇಕು. ಇಲ್ಲವಾದರೆ ಪಕ್ಷದ ವತಿಯಿಂದ ಹೋರಾಟಕ್ಕೆ ಇಳಿಯಬೇಕಾಗುತ್ತದೆ ಎಂದು ಎಂದು ವಿಧಾನಪರಿಷತ್ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್ ಎಚ್ಚರಿಸಿದ್ದಾರೆ.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ನಿರುದ್ಯೋಗಿ ಯುವಜನರು ಬೆಂಗಳೂರು ಸೇರಿ ವಿವಿಧೆಡೆ ಹೋರಾಟ ಮಾಡಿದ್ದಾರೆ. ಅವರನ್ನು ಬಂಧಿಸುವ ಕಾರ್ಯ ನಡೆದಿದೆ' ಎಂದು ಹೇಳಿದರು.

'ನಿರುದ್ಯೋಗಿ ಯುವ ಜನರನ್ನು ಮಾತುಕತೆಗೆ ಕರೆದು ಹುದ್ದೆಗಳ ಭರ್ತಿ ಮಾಡಬೇಕು. 56 ಸಾವಿರ ಹುದ್ದೆಗಳನ್ನು ಭರ್ತಿ ಮಾಡುವುದಾಗಿ ಸರ್ಕಾರ ಹೇಳಿತ್ತು. ಆದರೆ, ಈವರೆಗೂ ಅದಕ್ಕೆ ಚಾಲನೆ ನೀಡಿಲ್ಲ. 2.84 ಲಕ್ಷ ಹುದ್ದೆ ಖಾಲಿ ಇವೆ. ಆದರೆ, ಸರ್ಕಾರ ಖಜಾನೆ ಖಾಲಿ ಮಾಡಿಕೊಂಡು ಕುಂಟು ನೆಪ ಹೇಳುತ್ತಿದೆ' ಎಂದು ಅವರು ದೂರಿದರು.

'ಹಿಂದೂ ಧರ್ಮ ತ್ಯಜಿಸಿದ್ದ ಅಂಬೇಡ್ಕರ್'

ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಂಬೇಡ್ಕರ್ ಅವರು ಹಿಂದೂ ಧರ್ಮದ ಸುಧಾರಣೆಗಾಗಿ ಬಹಳ ಪ್ರಯತ್ನ ಮಾಡಿದರು. ಆದರೆ ಕಡೆಗೆ ಅದು ಕೈಗೂಡದೆ ಹಿಂದೂ ಧರ್ಮವನ್ನು ತ್ಯಜಿಸಿದರು. ಅಸಮಾನತೆಗೆ ಕಾರಣವಾದ ಮನುವಾದವನ್ನು ತಿರಸ್ಕರಿಸಿದ್ದರು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಮಂಗಳವಾರ ಆಯೋಜಿಸಲಾಗಿದ್ದ 'ಸಂವಿಧಾನ ಶಿಲ್ಪಿ ಬಾಬಾ ಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಜನ್ಮ ದಿನಾಚರಣೆ ಹಾಗೂ ಡಾ.ಬಿ. ಆರ್. ಅಂಬೇಡ್ಕರ್ ಪ್ರಶಸ್ತಿ ಪ್ರದಾನ' ಸಮಾರಂಭದಲ್ಲಿ ಅವರು ಮಾತನಾಡಿದರು.

'ಜಾತಿ ವ್ಯವಸ್ಥೆ ಇರುವವರೆಗೂ ಅಸ್ಪೃಶ್ಯತೆ ಇರುತ್ತದೆ. ಸಾಮಾಜಿಕ, ಆರ್ಥಿಕ ಅಸಮಾನತೆ ಇರುವವರೆಗೆ ಜಾತೀಯತೆ ಇರಲಿದೆ ಎಂದು ಅಂಬೇಡ್ಕರ್ ಸ್ಪಷ್ಟವಾಗಿ ಹೇಳಿದ್ದರು. ಅವರು, ಎಲ್ಲಾ ದಮನಿತರ, ಪರಿಶಿಷ್ಟ ವರ್ಗಗಳ, ಶೋಷಿತರ, ಅವಕಾಶ ವಂಚಿತ ಜನರ ಪರವಾಗಿ ತಮ್ಮ ಜೀವನದುದ್ದಕ್ಕೂ ಹೋರಾಟವನ್ನು ಮಾಡಿದ್ದರು. ದಲಿತರ ಪರ ಮಾತ್ರವಲ್ಲದೇ ಅವಕಾಶ ವಂಚಿತರ, ದೌರ್ಜನ್ಯಕ್ಕೆ ಒಳಗಾದ ಎಲ್ಲರ ಪರವಾಗಿ ಹೋರಾಟ ಮಾಡಿದ್ದರು' ಎಂದರು.

'ಅಂಬೇಡ್ಕರ್ ಅವರು ಹೇಳಿರುವಂತೆ ಎಲ್ಲ ಸಂಕೋಲೆಗಳಿಂದ ವಿಮುಕ್ತರಾಗಲು ಶಿಕ್ಷಣ ಒಂದೇ ಪ್ರಬಲ ಅಸ್ತ್ರ. ಸಾಮಾಜಿಕ, ಆರ್ಥಿಕ ಶಕ್ತಿ ಎಲ್ಲರಿಗೂ ದೊರಕಿದಾಗ ಮಾತ್ರ ಸ್ವಾವಲಂಬನೆ ಸಾಧ್ಯ' ಎಂದು ಹೇಳಿದರು.

'ವೈಜ್ಞಾನಿಕ ಶಿಕ್ಷಣ ದೊರೆಯದಿದ್ದರೆ ಸಮ ಸಮಾಜದ ನಿರ್ಮಾಣ ಅಸಾಧ್ಯ. ಸರ್ಕಾರದ ಗ್ಯಾರಂಟಿ ಯೋಜನೆಗಳು ಸಾಮಾಜಿಕ, ಆರ್ಥಿಕ ಶಕ್ತಿ ತುಂಬುವ ಕೆಲಸ ಮಾಡುತ್ತಿದ್ದು, ಸಮ ಸಮಾಜದ ನಿರ್ಮಾಣಕ್ಕೆ ಸರ್ಕಾರ ಮಾಡುತ್ತಿರುವ ಪ್ರಾಮಾಣಿಕ ಪ್ರಯತ್ನವಾಗಿದೆ' ಎಂದರು.

'ಸರ್ಕಾರ ನಡೆಸುವ ವಸತಿ ಶಾಲೆಗಳಲ್ಲಿ ಶೇ 97.22ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಪಿಯುಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ್ದಾರೆ. ಇದು ಸರ್ಕಾರದ ಹೆಗ್ಗಳಿಕೆ' ಎಂದು ಸಿದ್ದರಾಮಯ್ಯ ಹೇಳಿದರು.

ಸಮಾಜ ಕಲ್ಯಾಣ ಸಚಿವ ಸಚಿವ ಎಚ್.ಸಿ ಮಹದೇವಪ್ಪ, ಆಹಾರ ಸಚಿವ ಕೆ.ಎಚ್.ಮುನಿಯಪ್ಪ, ವಿಧಾನ ಪರಿಷತ್‌ನಲ್ಲಿ ಸರ್ಕಾರದ ಮುಖ್ಯ ಸಚೇತಕ ಸಲೀಂ ಅಹಮದ್, ಶಾಸಕರಾದ ರಿಜ್ವಾನ್ ಅರ್ಷದ್, ಎಸ್.ಎಲ್. ಭೋಜೇಗೌಡ, ಗೋವಿಂದರಾಜು, ಮಾಜಿ ಸಂಸದ ಚಂದ್ರಪ್ಪ, ಮಾಜಿ ಸಚಿವ ಎಚ್. ಆಂಜನೇಯ, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಉಪಸ್ಥಿತರಿದ್ದರು.

ಸಿದ್ದರಾಮಯ್ಯ ಅವರು ಮಂಗ್ಳೂರ ವಿಜಯ, ಹನುಮಂತರಾವ್ ದೊಡ್ಡಮನಿ, ಎಚ್‌.ಎನ್‌. ಅಣ್ಣಯ್ಯ, ಸಿ.ಎಂ. ಮುನಿಯಪ್ಪ, ಶೋಭಾ ಗಸ್ತಿ ಅವರಿಗೆ ಬಿ.ಆರ್‌.ಅಂಬೇಡ್ಕರ್ ಪ್ರಶಸ್ತಿ ಪ್ರದಾನ ಮಾಡಿದರು. ಎಸ್‌.ಎಲ್‌. ಭೋಜೇಗೌಡ, ಎಚ್‌. ಆಂಜನೇಯ, ರಿಜ್ವಾನ್ ಅರ್ಷದ್, ಸಲೀಂ ಅಹಮದ್, ಶಾಲಿನಿ ರಜನೀಶ್, ಎಚ್‌.ಸಿ. ಮಹದೇವಪ್ಪ, ಸಂಪತ್ ರಾಜ್ ಉಪಸ್ಥಿತರಿದ್ದರು
ಪ್ರಜಾವಾಣಿ ಚಿತ್ರ

ಸುದ್ದಿ 2 ನಿಮಿಷ

ಒಳಮೀಸಲಾತಿ: ಬಿಜೆಪಿ ದಾರಿ ತಪ್ಪಿಸುತ್ತಿದೆ– ಡಿಕೆಶಿ

ಬೆಂಗಳೂರು: 'ಒಳಮೀಸಲಾತಿ ವಿಚಾರದಲ್ಲಿ ಬಿಜೆಪಿ ಸರ್ಕಾರ ಮಾಡದ ಕೆಲಸವನ್ನು ಕಾಂಗ್ರೆಸ್ ಸರ್ಕಾರ ಮಾಡಿದೆ. ಈ ವಿಚಾರವಾಗಿ ಬಿಜೆಪಿ ಜನರನ್ನು ದಾರಿ ತಪ್ಪಿಸುತ್ತಿದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಕೆಪಿಸಿಸಿ ಕಚೇರಿಯ ಭಾರತ್ ಜೋಡೊ ಸಭಾಂಗಣದಲ್ಲಿ ಮಂಗಳವಾರ ನಡೆದ ಬಾಬಾ ಸಾಹೇಬ್ ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಚುನಾವಣೆ ನಂತರ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಒಳ ಮೀಸಲಾತಿ ಜಾರಿ ಬಗ್ಗೆ ತೀರ್ಮಾನಿಸಲಾಗುವುದು. ಸಚಿವ ಪರಮೇಶ್ವರ ಅವರ ನೇತೃತ್ವದಲ್ಲಿ ಚಿತ್ರದುರ್ಗ ಸಮಾವೇಶದಲ್ಲಿ ತೆಗೆದುಕೊಂಡ ನಿರ್ಣಯದಂತೆ ತೀರ್ಮಾನ ತೆಗೆದುಕೊಳ್ಳಲಾಗುವುದು' ಎಂದು ಭರವಸೆ ನೀಡಿದರು.

'ದಲಿತ ಎಡ, ಬಲ ಸಮುದಾಯ ಸೇರಿದಂತೆ ಎಲ್ಲ ಶೋಷಿತರಿಗೆ ರಕ್ಷಣೆ ನೀಡಲು ಕಾಂಗ್ರೆಸ್‌ನಿಂದ ಮಾತ್ರ ಸಾಧ್ಯ. ಶೋಷಿತ ಜನಾಂಗಗಳ ಪರವಾಗಿ ಚಿಂತನೆ ಮಾಡುವ ಏಕೈಕ ಪಕ್ಷ ಕಾಂಗ್ರೆಸ್' ಎಂದೂ ಬಣ್ಣಿಸಿದರು.

'ಸದಾಶಿವ ಆಯೋಗ ನೀಡಿದ್ದ ವರದಿ ಜಾರಿಗೆ ಬಾರದೇ ಇರಬಹುದು. ಮತ್ತೆ ನಾಗಮೋಹನ್ ದಾಸ್ ಆಯೋಗ ರಚಿಸಿ ಪ್ರತಿ ಮನೆಯ ಸಮೀಕ್ಷೆ ನಡೆಸಲಾಗಿದೆ. ಶೇ 1, ಅರ್ಧ ಶೇಕಡಾ ಮೀಸಲಾತಿಗಾಗಿ ಜಗಳ ಮಾಡುವ ಅವಶ್ಯವಿಲ್ಲ. ನಿಮ್ಮ ನಿಮ್ಮಲ್ಲೇ ಜಗಳ ಮಾಡಿಕೊಂಡಿರಿ ಎಂದು ಅಂಬೇಡ್ಕರ್ ಹೇಳಿದ್ದಾರೆಯೇ' ಎಂದು ದಲಿತ ಸಮುದಾಯವನ್ನು ಶಿವಕುಮಾರ್ ಪ್ರಶ್ನಿಸಿದರು. 'ಅಂಬೇಡ್ಕರ್ ಅವರ ಮುಂದಾಳತ್ವದಲ್ಲಿ ರಚನೆಯಾದ ಸಂವಿಧಾನವೇ ನಮ್ಮ ದೇಶದ ಭಗವದ್ಗೀತೆ, ಕುರಾನ್, ಬೈಬಲ್ ಎಂದು ನಾವು ಪೂಜಿಸುತ್ತಿದ್ದೇವೆ' ಎಂದೂ ಹೇಳಿದರು.



ಎಷ್ಟೇ ಪುಂಗಿ ಊದಿದರೂ ಕಾಂಗ್ರೆಸ್ ಗೆಲ್ಲಲ್ಲ: ವಿಜಯೇಂದ್ರ

ಬೆಂಗಳೂರು: 'ಕಾಂಗ್ರೆಸ್‌ನವರು ಮತ್ತು ಸಿದ್ದರಾಮಯ್ಯ ಎಷ್ಟೇ ಪುಂಗಿ ಊದಿದರೂ ಉಪ ಚುನಾವಣೆ ನಡೆದ ಎರಡೂ ಕ್ಷೇತ್ರಗಳಲ್ಲಿ ಅವರ ಗೆಲುವು ಸಾಧ್ಯವಿಲ್ಲ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ಕ್ಷೇತ್ರಗಳಲ್ಲಿ ಬಿಜೆಪಿ ಗೆದ್ದೇ ಗೆಲ್ಲಲಿದೆ' ಎಂದು ಪ್ರತಿಪಾದಿಸಿದರು.

'ಅಲ್ಪಸಂಖ್ಯಾತರನ್ನು ಓಲೈಕೆ ಮಾಡುವ ಕಾಂಗ್ರೆಸ್ ಸರ್ಕಾರ ಹಿಂದೂಗಳ ಅಪಮಾನ ಮಾಡುವ ಕೆಲಸ ಮಾಡುತ್ತಿದೆ. ಇವೆಲ್ಲದರ ಪರಿಣಾಮವಾಗಿ ಈ ಎರಡೂ ಕ್ಷೇತ್ರಗಳಲ್ಲಿ ಜನರು ಬಿಜೆಪಿಗೆ ಆಶೀರ್ವಾದ ಮಾಡಲಿದ್ದಾರೆ' ಎಂದು ಹೇಳಿದರು.

'ರಾಜ್ಯದಲ್ಲಿ ಬಿಜೆಪಿ ಸರ್ಕಾರ ಇದ್ದಾಗ ಮತ್ತು ಯಡಿಯೂರಪ್ಪ ಮುಖ್ಯಮಂತ್ರಿ ಆಗಿದ್ದಾಗ ಶಿವಮೊಗ್ಗ ಜಿಲ್ಲೆಯಲ್ಲಿ ಆದ ಅಭಿವೃದ್ಧಿ ಕೆಲಸಗಳು ಹಾಗೂ ಸಿದ್ದರಾಮಯ್ಯ ಅವರು ಮೈಸೂರು ಜಿಲ್ಲೆಗೆ ಏನೇನು ಕೆಲಸ ಮಾಡಿದ್ದಾರೆ ಎಂಬ ಕುರಿತು ಬಹಿರಂಗ ಚರ್ಚೆಗೆ ಬರಲಿ' ಎಂದು ವಿಜಯೇಂದ್ರ ಸವಾಲು ಹಾಕಿದರು.

ಭಾವಚಿತ್ರ ವಿವಾದ: ಅಂಬೇಡ್ಕರ್ ಜಯಂತಿ ರದ್ದು

ಪಾಂಡವಪುರದಲ್ಲಿ ಪ್ರತಿಭಟನೆ, ಚಿಕ್ಕಬಳ್ಳಾಪುರದಲ್ಲಿ ಶಾಸಕನಿಗೆ ಧಿಕ್ಕಾರ, ಬೇಲೂರಿನಲ್ಲೂ ಬಹಿಷ್ಕಾರ

ಪ್ರಜಾವಾಣಿ ವಾರ್ತೆ

ಪಾಂಡವಪುರ (ಮಂಡ್ಯ ಜಿಲ್ಲೆ): ಬಿ.ಆರ್. ಅಂಬೇಡ್ಕರ್ ಭಾವಚಿತ್ರದೊಂದಿಗೆ ಬಾಬು ಜಗಜೀವನರಾಂ ಅವರ ಭಾವಚಿತ್ರ ಇರಿಸಿದ್ದನ್ನು ಆಕ್ಷೇಪಿಸಿ ಬಲಗೈ ಸಮುದಾಯದ ಮುಖಂಡರು ಪ್ರತಿಭಟಿಸಿದ್ದರಿಂದ, ಪಟ್ಟಣದಲ್ಲಿ ತಾಲ್ಲೂಕು ಆಡಳಿತ ಹಾಗೂ ಸಮಾಜ ಕಲ್ಯಾಣ ಇಲಾಖೆಯು ಮಂಗಳವಾರ ಏರ್ಪಡಿಸಿದ್ದ ಅಂಬೇಡ್ಕರ್ ಅವರ 135ನೇ ಜಯಂತಿ ರದ್ದಾಯಿತು.

ತಾಲ್ಲೂಕು ಪಂಚಾಯಿತಿ ಆವರಣದಲ್ಲಿ ಕಾರ್ಯಕ್ರಮಕ್ಕೂ ಮುನ್ನ ಮಾತನಾಡಿದ ಮುಖಂಡರು, 'ಏ.5ರಂದು ಜಗಜೀವನರಾಂ ಭಾವಚಿತ್ರವಿಟ್ಟು ಅವರ ಜಯಂತಿ ಆಚರಿಸಲಾಗಿದೆ. ಈಗ ಮತ್ತೆ ಅವರ ಭಾವಚಿತ್ರವಿಡುವ ಅಗತ್ಯವೇನು' ಎಂದು ಪ್ರಶ್ನಿಸಿದರು.

'ಜಗಜೀವನರಾಂ ಭಾವಚಿತ್ರ ಇಟ್ಟಿರುವುದು ಗಮನಕ್ಕೆ ಬಂದಿಲ್ಲ' ಎಂದು ತಹಶೀಲ್ದಾರ್ ಬಸವರಡ್ಡೆಪ್ಪ ರೋಣದ ತಿಳಿಸಿದರು.

ಪಾಂಡವಪುರದಲ್ಲಿ ಮಂಗಳವಾರ ಬಿ.ಆರ್‌. ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಬಾಬು ಜಗಜೀವನರಾಂ ಭಾವಚಿತ್ರ ಇಟ್ಟಿರುವುದಕ್ಕೆ ಬಲಗೈ ಮುಖಂಡರು ಆಕ್ಷೇಪ ವ್ಯಕ್ತಪಡಿಸಿದರು. ತಹಶೀಲ್ದಾರ್ ಬಸವರಡ್ಡೆಪ್ಪ ರೋಣದ, ತಾಲ್ಲೂಕು ಪಂಚಾಯಿತಿ ಇಒ ವೀಣಾ ಪಾಲ್ಗೊಂಡಿದ್ದರು

'ಜಗಜೀವನರಾಂ ಭಾವಚಿತ್ರ ಇಡಬೇಕೆಂದು ಮಾದಾರ ಮಹಾಸಭಾದ ಮುಖಂಡರು ಒತ್ತಾಯಿಸಿದ್ದರು' ಎಂದು ಅಧಿಕಾರಿ ತಿಳಿಸಿದರು.

ಈ ವೇಳೆ ಅಧಿಕಾರಿಗಳು ಮತ್ತು ಮುಖಂಡರ ನಡುವೆ ವಾಗ್ವಾದ ನಡೆಯಿತು. ಬಲಗೈ ಮುಖಂಡರು ಕಾರ್ಯಕ್ರಮ ಬಹಿಷ್ಕರಿಸಿ, ರಸ್ತೆಗಿಳಿದು ಪ್ರತಿಭಟಿಸಿದರು. ಪೊಲೀಸರು ಪ್ರತಿಭಟನಕಾರರ ಮನವೊಲಿಸಲು ಪ್ರಯತ್ನಿಸಿದರು. ಬಳಿಕ ದೂರವಾಣಿಯಲ್ಲಿ ಮಾತನಾಡಿದ ಜಿಲ್ಲಾಧಿಕಾರಿ ಕುಮಾರ, 'ಏ.17ರ ಬಳಿಕ ಪಟ್ಟಣಕ್ಕೆ ಬಂದು ಸಭೆ ನಡೆಸಿ ಅಂಬೇಡ್ಕರ್ ಜಯಂತಿ ಆಚರಿಸಲಾಗುವುದು' ಎಂದು ಭರವಸೆ ನೀಡಿದರು.

ತಹಶೀಲ್ದಾರ್ ಅಮಾನತಿಗೆ ಪಟ್ಟು

ಬೇಲೂರು (ಹಾಸನ): 'ಅಂಬೇಡ್ಕರ್ ಪ್ರತಿಮೆಗೆ ವ್ಯವಸ್ಥಿತವಾಗಿ ಅಲಂಕಾರ ಮಾಡಿಸಿಲ್ಲ' ಎಂದು ಆರೋಪಿಸಿ ಶಾಸಕ ಎಚ್.ಕೆ.ಸುರೇಶ್ ಹಾಗೂ ದಲಿತ ಸಂಘಟನೆಗಳ ಪ್ರಮುಖರು ಅಂಬೇಡ್ಕರ್ ಜಯಂತಿಯನ್ನು ಬಹಿಷ್ಕರಿಸಿ, ಪ್ರತಿಭಟಿಸಿದರು.

ಇಲ್ಲಿನ ತಾಲ್ಲೂಕು ಕಚೇರಿ ಮುಂಭಾಗ ಅಂಬೇಡ್ಕರ್ ಪ್ರತಿಮೆಗೆ ಶಾಸಕರು ಮಾಲಾರ್ಪಣೆ ಮಾಡಲು ಮುಂದಾದಾಗ ಮುಖಂಡರು ತಡೆದರು. 'ಪ್ರತಿಮೆಗೆ ಬೇಕಾಬಿಟ್ಟಿ ಅಲಂಕಾರ ಮಾಡಿದ್ದಾರೆ. ಸ್ವಚ್ಛಗೊಳಿಸಿಲ್ಲ' ಎಂದು ದೂರಿದರು. 'ತಹಶೀಲ್ದಾರ್ ಶ್ರೀಧರ್ ಕಂಕಣವಾಡಿ ಅವರನ್ನು ಅಮಾನತು ಮಾಡಬೇಕು' ಎಂದು ಪಟ್ಟುಹಿಡಿದರು. ಅದರಿಂದ ಶಾಸಕರೂ ಕೂಡ ಮುಖಂಡರೊಂದಿಗೆ ಪ್ರತಿಭಟನೆಗೆ ಕುಳಿತರು.

ಶಾಸಕ ಗೈರು– ಸಭಿಕರಿಂದ ಧಿಕ್ಕಾರ

ಚಿಕ್ಕಬಳ್ಳಾಪುರ: ನಗರದ ಕನ್ನಡ ಭವನದಲ್ಲಿ ಮಂಗಳವಾರ ನಡೆದ ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಸಚಿವ ಡಾ.ಎಂ.ಸಿ. ಸುಧಾಕರ್ ಸಮ್ಮುಖದಲ್ಲಿಯೇ ಶಾಸಕ ಪ್ರದೀಪ್ ಈಶ್ವರ್ ವಿರುದ್ಧ ದಲಿತ ಮುಖಂಡರು ಧಿಕ್ಕಾರದ ಘೋಷಣೆ ಕೂಗಿದರು.

'ಅಂಬೇಡ್ಕರ್ ಜಯಂತಿಗೆ ಶಾಸಕರು ಏಕೆ ಬರಲಿಲ್ಲ' ಎಂದು ಪ್ರಶ್ನಿಸಿದ ಸಭಿಕರು ಧಿಕ್ಕಾರ ಕೂಗಿದರು.

'₹6.62 ಕೋಟಿ ದುರ್ಬಳಕೆ'

ಶಹಾಪುರ (ಯಾದಗಿರಿ ಜಿಲ್ಲೆ): ನಗರದ ಹೇಮರೆಡ್ಡಿ ಮಲ್ಲಮ್ಮ ಸೌಹಾರ್ದ ಸಹಕಾರ ಸಂಘದ (ಬ್ಯಾಂಕ್) ಅಧ್ಯಕ್ಷರ ಸಹಿ ನಕಲು ಮಾಡಿ ₹6.62 ಕೋಟಿ ದುರ್ಬಳಕೆ ಮಾಡಿಕೊಂಡ ಆರೋಪದಡಿ ಬ್ಯಾಂಕ್ ಸಿಇಒ ಸೇರಿ ಮೂವರ ವಿರುದ್ಧ ಶಹಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಧ್ಯಕ್ಷ ಬಸನಗೌಡ ಮಾಲಿ ಪಾಟೀಲ ನೀಡಿದ ದೂರಿನ ಅನ್ವಯ ಬ್ಯಾಂಕ್ ಸಿಇಒ ರವಿಕಿರಣರೆಡ್ಡಿ, ಸಹಾಯಕ ವ್ಯವಸ್ಥಾಪಕ ವೆಂಕಟರೆಡ್ಡಿ ಹಾಗೂ ಪಿಗ್ಮಿ ಏಜೆಂಟ್ ಸಂಗಣ್ಣ ಬಸಲಿಂಗಪ್ಪ ಅವರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಆರೋಪಿಗಳು 2023ರಿಂದ 2025ರ ನಡುವೆ ಸಾಲದ 222 ಅರ್ಜಿಗಳಿಗೆ ಅಧ್ಯಕ್ಷರ ಸಹಿ ನಕಲು ಮಾಡಿ, ₹6.62 ಕೋಟಿ ದುರ್ಬಳಕೆ ಮಾಡಿಕೊಂಡಿದ್ದಾರೆ. ಸಾಲಕ್ಕಾಗಿ ಮಂಜೂರು ಮಾಡಿದ ಹಣವನ್ನು ಆನ್‌ಲೈನ್ ಮೂಲಕ ಸಂಗಣ್ಣ ಅವರ ಖಾತೆಗೆ ವರ್ಗಾಯಿಸಿ ವಂಚನೆ ಎಸಗಿದ್ದಾರೆ' ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಸಚಿವ ಸ್ಥಾನ ಆಕಾಂಕ್ಷಿಗಳಿಂದ ಅಯೋಧ್ಯೆ ಯಾತ್ರೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಸಚಿವ ಸ್ಥಾನ ಆಕಾಂಕ್ಷಿ ಶಾಸಕರು ಅಯೋಧ್ಯೆಗೆ ಬುಧವಾರ ಪ್ರವಾಸ ಕೈಗೊಳ್ಳಲಿದ್ದಾರೆ.

ಶಾಸಕರಾದ ಟಿ.ಬಿ.ಜಯಚಂದ್ರ, ಅಶೋಕ ಪಟ್ಟಣ, ಷಡಕ್ಷರಿ, ಬೇಳೂರು ಗೋಪಾಲಕೃಷ್ಣ, ರಾಘವೇಂದ್ರ ಹಿಟ್ನಾಳ, ಹಂಪನಗೌಡ ಬಾದರ್ಲಿ ಸೇರಿದಂತೆ 12 ಶಾಸಕರು ಬುಧವಾರ ಬೆಳಿಗ್ಗೆ ಅಯೋಧ್ಯೆಗೆ ತೆರಳಿ ಸಂಜೆ ವಾಪಸಾಗಲಿದ್ದಾರೆ.

ಸಚಿವ ಸಂಪುಟ ಪುನರ್ ರಚನೆಗೆ ಕಾಂಗ್ರೆಸ್ ಹೈಕಮಾಂಡ್ ಮೇಲೆ ಮತ್ತಷ್ಟು ಒತ್ತಡ ಹೇರಲು ಆಕಾಂಕ್ಷಿಗಳು ಮಂಗಳವಾರ ಮತ್ತೊಂದು ಸುತ್ತಿನ ಸಭೆ ನಡೆಸಿ ಸಮಾಲೋಚನೆ ನಡೆಸಿದರು. ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಹಾಗೂ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನು ಭೇಟಿ ಮಾಡಿ ಸಂಪುಟ ಪುನರ್ ರಚನೆಗೆ ಆಕಾಂಕ್ಷಿಗಳು ಒತ್ತಡ ಹೇರಲಿದ್ದಾರೆ. ಚುನಾವಣಾ ಪ್ರಚಾರದಲ್ಲಿ ಭಾಗಿಯಾಗಿರುವ ಉಭಯ ನಾಯಕರು ಬುಧವಾರ ಸಂಜೆ ದೆಹಲಿಗೆ ಬರಲಿದ್ದಾರೆ. ಸಚಿವ ಸ್ಥಾನ ಆಕಾಂಕ್ಷಿಗಳು ಉಭಯ ನಾಯಕರನ್ನು ಬುಧವಾರ ರಾತ್ರಿ ಅಥವಾ ಗುರುವಾರ ಬೆಳಿಗ್ಗೆ ಭೇಟಿ ಮಾಡಲು ಯೋಜಿಸಿದ್ದಾರೆ.

ಬೇಳೂರು ಗೋಪಾಲಕೃಷ್ಣ ಸುದ್ದಿಗಾರರೊಂದಿಗೆ ಮಾತನಾಡಿ, 'ಸಚಿವರ ಕಾರ್ಯವೈಖರಿ ಬಗ್ಗೆ ನಾವು ಯಾರೂ ಆಕ್ಷೇಪ ವ್ಯಕ್ತಪಡಿಸಿಲ್ಲ. ಸಂಪುಟ ಪುನರ್ ರಚನೆಗೆ ಒತ್ತಾಯ ಮಾಡಿದ್ದೇವೆ. ಕೆ.ಸಿ.ವೇಣುಗೋಪಾಲ್ ಹಾಗೂ ಸುರ್ಜೇವಾಲಾ ಅವರನ್ನು ಬುಧವಾರ ಭೇಟಿ ಮಾಡಿ ಮನವಿ ಸಲ್ಲಿಸುತ್ತೇವೆ. ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಭೇಟಿಗೆ ಕಾಲಾವಕಾಶ ಕೇಳಿದ್ದೇವೆ' ಎಂದು ತಿಳಿಸಿದರು.

ನಿಧನ ವಾರ್ತೆ

ರಾಮಚಂದರ್ ಬೈಕಂಪಾಡಿ

ಮಂಗಳೂರು: ಬಿಜೆಪಿ ಮುಖಂಡ ರಾಮಚಂದರ್ ಬೈಕಂಪಾಡಿ (75) ಅವರು ಮಂಗಳವಾರ ನಿಧನರಾದರು.

ಬಿಜೆಪಿಯಲ್ಲಿ ವಿವಿಧ ಹುದ್ದೆಗಳನ್ನು ನಿಭಾಯಿಸಿದ್ದ ಅವರು, ಪಕ್ಷದ ರಾಜ್ಯ ಕಾರ್ಯಕಾರಿಣಿಯ ಮಾಜಿ ಸದಸ್ಯರು ಕೂಡ. ವಿದ್ಯಾರ್ಥಿ ದೆಸೆಯಲ್ಲೇ ರಾಷ್ಟ್ರೀಯ ಸ್ವಯಂ ಸೇವಕ ಸಂಘದಲ್ಲಿ ತೊಡಗಿಸಿಕೊಂಡಿದ್ದರು. ಮೊಗವೀರ ಸಮುದಾಯದ ಮುಖಂಡರಾಗಿದ್ದ ಅವರು ಮೀನುಗಾರರ ಪರ ಹೋರಾಟಗಳಲ್ಲಿ ಹಾಗೂ ಎಂಆರ್‌ಪಿಎಲ್ ನಿರ್ವಸಿತರ ಪರ ಹೋರಾಟಗಳಲ್ಲಿ ಸಕ್ರಿಯರಾಗಿದ್ದರು.

ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು. 1979ರಲ್ಲಿ ಸುರತ್ಕಲ್ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. ಬಿ.ಎಸ್. ಯಡಿಯೂರಪ್ಪ ಅವರ ನಿಕಟವರ್ತಿ ಆಗಿದ್ದ ಅವರು ಕೆಜೆಪಿ ಸೇರಿ, ಸುರತ್ಕಲ್ ಕ್ಷೇತ್ರದಿಂದ 2013ರ ವಿಧಾನ ಸಭಾ ಚುನಾವಣೆಗೆ ಸ್ಪರ್ಧಿಸಿದ್ದರು. ಬಳಿಕ ಬಿಜೆಪಿಗೆ ಮರಳಿದ್ದರು. ರಂಗಭೂಮಿ ಸಾಹಿತ್ಯ ಹಾಗೂ ಸಿನಿಮಾ ಕಲಾವಿದರೂ ಆಗಿದ್ದ ಅವರು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು. ಅವರ 'ಎನ್ನ ಮೋಕೆದಾ' ನಾಟಕ ಜನಪ್ರಿಯವಾಗಿತ್ತು. ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯಲ್ಲಿ ಎರಡು ಅವಧಿಗೆ ಅವರು ಸದಸ್ಯರಾಗಿ ಕಾರ್ಯ ನಿರ್ವಹಿಸಿದ್ದರು. ಅಕಾಡೆಮಿಯ ವಾರ್ಷಿಕ ಗೌರವ ಪ್ರಶಸ್ತಿ ಪುರಸ್ಕೃತರಾಗಿದ್ದರು. ಅವರು ಅವಿವಾಹಿತರಾಗಿದ್ದರು.

ರಾಮಚಂದರ್ ಬೈಕಂಪಾಡಿ

ಆಟೊ ಚಾಲಕರಿಗೆ ಹಣ ಹಂಚಿದ ಉದ್ಯಮಿ

ಪ್ರಜಾವಾಣಿ ವಾರ್ತೆ

ಮೈಸೂರು: ಎಲ್‌ಪಿಜಿ ಬೆಲೆ ಏರಿಕೆಯಿಂದ ಸಂಕಷ್ಟಕ್ಕೆ ಸಿಲುಕಿರುವ ಆಟೊ ಚಾಲಕರಿಗೆ ನೆರವಾಗುವ ಸಲುವಾಗಿ ಉದ್ಯಮಿ ಕಿರಣ್ ರಾಜ್ ಅವರು ಮಂಗಳವಾರ ತಲಾ ₹200 ಹಂಚಿದರು.

ನಗರದ ಧನ್ವಂತರಿ ರಸ್ತೆಯ ಬಂಕ್ ಒಂದರ ಬಳಿ ಎಲ್‌ಪಿಜಿ ಅನಿಲಕ್ಕಾಗಿ ಸಾಲಿನಲ್ಲಿ ನಿಂತಿದ್ದವರಿಗೆ ಅವರು ಹಣ ನೀಡಿದರು.

'30 ವರ್ಷದಿಂದ ಆಟೊ ಫೈನಾನ್ಸ್ ಉದ್ಯಮದಲ್ಲಿ ತೊಡಗಿದ್ದೇವೆ. ಅನಿಲ ಬೆಲೆ ಏರಿಕೆಯಿಂದ ಚಾಲಕರು ಕಷ್ಟ ಅನುಭವಿಸುತ್ತಿದ್ದಾರೆ. ಅವರಿಗೆ ಅಲ್ಪ ಪ್ರಮಾಣದ ನೆರವು ನೀಡುತ್ತಿದ್ದೇವೆ. ನಗರದ ಮೂರು ಕಡೆ ಒಟ್ಟು ₹5 ಲಕ್ಷ ಹಂಚಿದ್ದೇವೆ' ಎಂದು ಕಿರಣ್ ರಾಜ್ ತಿಳಿಸಿದರು.

ಬಿಹಾರ: ಸಾಮ್ರಾಟ್ ಚೌಧರಿ ನೂತನ ಸಿ.ಎಂ

ಲೋಕಭವನದಲ್ಲಿ ಪ್ರಮಾಣವಚನ ಸ್ವೀಕಾರ ಇಂದು; ಮೊದಲ ಬಾರಿಗೆ ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ

ಪ್ರಜಾವಾಣಿ ವಾರ್ತೆ

ಪಟ್ನಾ: ಬಿಹಾರದ ಬಿಜೆಪಿ ಶಾಸಕಾಂಗ ಪಕ್ಷದ ನಾಯಕರಾಗಿ ಉಪ ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ಮಂಗಳವಾರ ಆಯ್ಕೆಯಾಗಿದ್ದಾರೆ. ಈ ಮೂಲಕ ಅವರು ರಾಜ್ಯದ ನೂತನ ಮುಖ್ಯಮಂತ್ರಿಯಾಗಲಿದ್ದಾರೆ.

ರಾಜ್ಯಸಭೆಗೆ ಆಯ್ಕೆಯಾಗಿರುವ ಜೆಡಿಯು ವರಿಷ್ಠ ನಿತೀಶ್ ಕುಮಾರ್ ಅವರು ರಾಜ್ಯಪಾಲರನ್ನು ಭೇಟಿ ಮಾಡಿ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ. ಇದರೊಂದಿಗೆ ಬಿಹಾರದಲ್ಲಿ ಮೊಟ್ಟಮೊದಲ ಬಾರಿಗೆ ಬಿಜೆಪಿ ನೇತೃತ್ವದ ಸರ್ಕಾರ ಅಸ್ತಿತ್ವಕ್ಕೆ ಬರಲಿದೆ.

ಲೋಕಭವನದಲ್ಲಿ ಏಪ್ರಿಲ್ 15ರಂದು ಬೆಳಿಗ್ಗೆ 11ಕ್ಕೆ ಚೌಧರಿ ಅವರು ನೂತನ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸುವರು. ಜೊತೆಗೆ, ಚಿಕ್ಕ ಸಂಪುಟವೂ ರಚನೆಯಾಗಲಿದ್ದು, ಕೆಲ ಸಚಿವರು ಕೂಡ ಪ್ರತಿಜ್ಞಾವಿಧಿ ಸ್ವೀಕರಿಸುವರು.

ಇದಕ್ಕೂ ಮುನ್ನ ನಡೆದ ಪಕ್ಷದ ಶಾಸಕಾಂಗ ಪಕ್ಷದ ಸಭೆಯಲ್ಲಿ, ನಿರ್ಗಮಿತ ಉಪ ಮುಖ್ಯಮಂತ್ರಿ ವಿಜಯ ಸಿನ್ಹಾ ಅವರು ಶಾಸಕಾಂಗ ಪಕ್ಷದ ನಾಯಕ ಸ್ಥಾನಕ್ಕೆ ಚೌಧರಿ ಅವರ ಹೆಸರನ್ನು ಸೂಚಿಸಿದರು. ಸಭೆಯಲ್ಲಿದ್ದ ಎಲ್ಲ ಶಾಸಕರು ಇದನ್ನು ಅನುಮೋದಿಸಿದರು. ವೀಕ್ಷಕರಾಗಿ ಕೇಂದ್ರ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಪಾಲ್ಗೊಂಡಿದ್ದರು.

ಬಳಿಕ, ಸಂಜೆ ವೇಳೆಗೆ ಲೋಕಭವನಕ್ಕೆ ತೆರಳಿ ರಾಜ್ಯಪಾಲ ಲೆಫ್ಟಿನೆಂಟ್ ಜನರಲ್ (ನಿವೃತ್ತ) ಸಯ್ಯದ್ ಅತಾ ಹಸನೈನ್ ಅವರನ್ನು ಭೇಟಿ ಮಾಡಿದ ಸಾಮ್ರಾಟ್ ಚೌಧರಿ, ಸರ್ಕಾರ ರಚಿಸುವುದಕ್ಕೆ ಹಕ್ಕು ಮಂಡಿಸಿದರು.

ಎಲ್ಲ ಪಕ್ಷಗಳಿಗೂ ಸಲ್ಲುವರು: ಸಾಮ್ರಾಟ್ ಅವರ ಬಗ್ಗೆ ಸದ್ಯದ ಮಟ್ಟಿಗೆ ಯಾವ ಪಕ್ಷವೂ ದೂರುವುದಿಲ್ಲ. ಕಾರಣ ಇಷ್ಟೆ; ಅವರು ಬಹುತೇಕ ಎಲ್ಲ ಪಕ್ಷಗಳಲ್ಲಿ ವಿವಿಧ ಹುದ್ದೆ ಅಲಂಕರಿಸಿ, ಈಗ ಬಿಜೆಪಿ ತೆಕ್ಕೆಗೆ ಬಂದ ಮೇಲೆ ಮುಖ್ಯಮಂತ್ರಿಯಾಗುತ್ತಿದ್ದಾರೆ.

ಅವರು ಆರ್‌ಜೆಡಿ ಸೇರುವ ಮೂಲಕ ತಮ್ಮ ರಾಜಕೀಯ ಜೀವನ ಆರಂಭಿಸಿದರು. ಬಳಿಕ ಜೆಡಿಯು ಸೇರಿ ನಿತೀಶ್ ಕುಮಾರ್ ಅವರಿಗೆ ನಿಷ್ಠರಾದರು. ನಂತರ ಕೇಂದ್ರ ಸಚಿವರೂ ಆಗಿರುವ ಮಾಜಿ ಮುಖ್ಯಮಂತ್ರಿ ಜಿತನ್ ರಾಮ್ ಮಾಂಝಿ ನೇತೃತ್ವದ ಹಿಂದೂಸ್ತಾನ ಅವಾಮ್ ಮೋರ್ಚಾ(ಎಚ್‌ಎಎಂ) ಸೇರಿದರು. ಮಾಂಝಿ ನೇತೃತ್ವದ ಸರ್ಕಾರದಲ್ಲಿ ಅವರು ನಗರಾಭಿವೃದ್ಧಿ ಸಚಿವರಾಗಿದ್ದರು ಎಂಬುದು ಬಹುತೇಕರಿಗೆ ಈಗ ನೆನಪು ಕೂಡ ಇರಲಿಕ್ಕಿಲ್ಲ.

2018ರಲ್ಲಿ ಬಿಜೆಪಿ ಸೇರಿದ ಅವರು, 2023ರಲ್ಲಿ ಬಿಹಾರ ಘಟಕದ ಅಧ್ಯಕ್ಷರಾದರು. 2024ರಲ್ಲಿ ಉಪ ಮುಖ್ಯಮಂತ್ರಿ ಹುದ್ದೆಗೇರಿದರು.

1999ರಲ್ಲಿ ಮುಖ್ಯಮಂತ್ರಿ ರಾಬ್ಡಿ ದೇವಿ ಅವರ ಸಂಪುಟದಲ್ಲಿ ಸಾಮ್ರಾಟ್ ಸಚಿವರಾಗಿದ್ದರು. ಅರ್ಹ ವಯಸ್ಸು ಇಲ್ಲ ಎಂಬ ಆರೋಪ ಕೇಳಿ ಬಂದ ಕಾರಣ ಅವರನ್ನು ತೆಗೆದು ಹಾಕಲಾಗಿತ್ತು.



ಪಟ್ನಾದಲ್ಲಿ ನಡೆದ ಎನ್‌ಡಿಎ ಶಾಸಕರ ಸಭೆಯಲ್ಲಿ ಜೆಡಿಯು ಅಧ್ಯಕ್ಷ ನಿತೀಶ್ ಕುಮಾರ್ ಅವರು ಸಾಮ್ರಾಟ್ ಚೌಧರಿ ಅವರನ್ನು ಮಂಗಳವಾರ ಅಭಿನಂದಿಸಿದರು
ಪಿಟಿಐ ಚಿತ್ರ

ಅಪಸ್ವರಕ್ಕೆ ಮದ್ದರೆದ ನಿತೀಶ್

ಮುಖ್ಯಮಂತ್ರಿ ಹುದ್ದೆಗೇರಲು ಸಾಮ್ರಾಟ್ ಚೌಧರಿ ಅವರಿಗೆ ಅವಕಾಶ ನೀಡುವುದಕ್ಕೆ ಬಿಜೆಪಿ ಪಾಳಯದಲ್ಲಿ ಕೆಲವರ ವಿರೋಧ ಇತ್ತು. ಆದರೆ, ಸಂಪುಟದ ಕೊನೆಯ ಸಭೆಗೆ ತೆರಳುವ ವೇಳೆ ತಮ್ಮ ಕಾರಿನಲ್ಲಿ ಸಾಮ್ರಾಟ್ ಅವರನ್ನು ನಿತೀಶ್ ಕುಮಾರ್ ಕರೆದುಕೊಂಡು ಹೋಗುವ ಮೂಲಕ, ಮುಂದಿನ ಮುಖ್ಯಮಂತ್ರಿ ಯಾರಾಗಲಿದ್ದಾರೆ ಎಂಬ ಊಹಾಪೋಹಗಳಿಗೆ ತೆರೆ ಎಳೆದರು.

'ನಿತೀಶ್ ಅವರು ಬೆಳಿಗ್ಗೆ 11ಕ್ಕೆ ರಾಜೀನಾಮೆ ನೀಡುವುದು ನಿಗದಿ ಆಗಿತ್ತು. ಆದರೆ, ಸಾಮ್ರಾಟ್ ಚೌಧರಿ ಮುಖ್ಯಮಂತ್ರಿಯಾಗುವುದಕ್ಕೆ ಕೆಲವರು ಅಪಸ್ವರ ಎತ್ತಿದ್ದಾರೆ ಎಂಬುದು ಗೊತ್ತಾದ ಬಳಿಕ, ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವುದನ್ನು ನಿತೀಶ್ ವಿಳಂಬ ಮಾಡಿದರು' ಎಂದು ಮೂಲಗಳು ಹೇಳಿವೆ.

ಸಾಮ್ರಾಟ್ ಚೌಧರಿ ಅವರನ್ನೆ ತನ್ನ ಉತ್ತರಾಧಿಕಾರಿಯಾಗಿ ಆಯ್ಕೆ ಮಾಡುವುದಾಗಿ ಬಿಜೆಪಿ ಉನ್ನತ ನಾಯಕರಿಗೆ ನಿತೀಶ್ ಅವರು ಕಳೆದ ತಿಂಗಳಷ್ಟೆ ಹೇಳಿದ್ದರು. ಕಳೆದ ಎರಡು ವರ್ಷಗಳ ಅವಧಿಯಲ್ಲಿ ಸಾಮ್ರಾಟ್ ಅವರು, ಮೋದಿ ಹಾಗೂ ಶಾ ಅವರಲ್ಲದೇ, ನಿತೀಶ್ ವಿಶ್ವಾಸ ಗಳಿಸಿದ್ದರು. ಈ ಎಲ್ಲ ಅಂಶಗಳು ಅವರ ಆಯ್ಕೆಯಲ್ಲಿ ನೆರವಾದವು ಎಂದು ವಿಶ್ಲೇಷಿಸಲಾಗುತ್ತಿದೆ.

ಸಾಮ್ರಾಟ್ ಅವರು ನಿತೀಶ್ ಅವರ ವಿಶ್ವಾಸ ಗಳಿಸಿರುವುದಕ್ಕೆ ಎರಡು ಪ್ರಮುಖ ಕಾರಣಗಳಿವೆ. ಮೊದಲನೆಯದಾಗಿ ಅವರ ಆಡಳಿತ ನಡೆಸುವ ಸಾಮರ್ಥ್ಯ. ಇನ್ನು ಎರಡನೆಯದಾಗಿ ಕೊಯೆರಿ ಸಮುದಾಯಕ್ಕೆ ಸೇರಿರುವುದು. ನಿತೀಶ್ ಅವರ ಕುಮ್ರಿ ಜನರಂತೆ ಕೊಯೆರಿ ಸಮುದಾಯದವರು ಕೃಷಿಕರಾಗಿದ್ದಾರೆ.

ಆಸ್ಟ್ರೇಲಿಯಾದ ಸಿಡ್ನಿಯಲ್ಲಿ ಜೋಯಾಲುಕ್ಕಾಸ್ ಮಳಿಗೆ ಆರಂಭ

ಬಾಲಿವುಡ್ ಖ್ಯಾತ ನಟಿ ಮತ್ತು ಬ್ರ್ಯಾಂಡ್‌ನ ರಾಯಭಾರಿ ಕಾಜೋಲ್ ದೇವಗನ್ ಜೋಯಾಲುಕ್ಕಾಸ್‌ನ ಸಿಡ್ನಿ ಶಾಖೆಯ ಮಳಿಗೆಯನ್ನು ಉದ್ಘಾಟಿಸಿದರು. ಆ ಮೂಲಕ ಆಸ್ಟ್ರೇಲಿಯಾದಲ್ಲಿ ಜೋಯಾಲುಕ್ಕಾಸ್‌ನ ಬ್ರ್ಯಾಂಡ್ ಅಧಿಕೃತ ಪ್ರವೇಶ ಮಾಡಿದಂತಾಗಿದೆ. ಈ ಸಂದರ್ಭದಲ್ಲಿ ಕ್ಯಾಬಿನೆಟ್ ಕಾರ್ಯದರ್ಶಿ, ವಿಜ್ಞಾನ, ತಂತ್ರಜ್ಞಾನ ಮತ್ತು ಡಿಜಿಟಲ್ ಆರ್ಥಿಕತೆಯ ಸಹಾಯಕ ಸಚಿವರಾದ ಗೌರವಾನ್ವಿತ ಸಂಸದ ಡಾ.ಆಂಡ್ರ್ಯೂ ಚಾರ್ಲ್ಟನ್, ಕೌನ್ಸಿಲರ್ ಸಮೀರ್ ಪಾಂಡೆ, ಜೋಯಾಲುಕ್ಕಾಸ್ ಜ್ಯುವೆಲ್ಲರಿಯ ಸಿಇಒ ಜಾನ್ ಪಾಲ್ ಆಲುಕ್ಕಾಸ್, ಅಂತರರಾಷ್ಟ್ರೀಯ ಕಾರ್ಯಾಚರಣೆಗಳ ನಿರ್ದೇಶಕಿ ಸೋನಿಯಾ ಆಲುಕ್ಕಾಸ್ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.
ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ಜುಲೈಗೆ ಕಾಲಿಡುವ 'ಎಲ್ ನಿನೋ', ಕಲ್ಯಾಣ ಕರ್ನಾಟಕದಲ್ಲಿ ಬಿಸಿ ಗಾಳಿ ಸಾಧ್ಯತೆ

ಮುಂಗಾರು ಮುನಿಸು: ತಪ್ಪದ ಬಿಸಿಲ ಬೇಗೆ

• ಎಸ್.ರವಿಪ್ರಕಾಶ್

ಬೆಂಗಳೂರು: ಮುಂಗಾರು ಪೂರ್ವ ಮಳೆ ವಾಡಿಕೆಗಿಂತ ಕಡಿಮೆಯಾಗುವ ಸಾಧ್ಯತೆ ಇದ್ದು, ಬೇಸಿಗೆ ಬೇಗೆ ಇನ್ನಷ್ಟು ಬಿರುಸುಗೊಳ್ಳಲಿದೆ.

ಕಳೆದ ಎರಡು– ಮೂರು ದಿನಗಳಲ್ಲಿ ರಾಜ್ಯದಲ್ಲಿ ತಾಪಮಾನ ವಾಡಿಕೆಗಿಂತ 0.5 ಡಿಗ್ರಿ ಸೆಲ್ಸಿಯಸ್‌ನಿಂದ 3 ಡಿಗ್ರಿ ಸೆಲ್ಸಿಯಸ್‌ನಷ್ಟು ಹೆಚ್ಚಾಗಿದೆ. ಇದರ ಜತೆ ಹವೆಯಲ್ಲಿ ಶೇ 60ರಿಂದ ಶೇ 70ರಷ್ಟು ತೇವಾಂಶವೂ ಸೇರಿರುವ ಕಾರಣ, ತಾಪಮಾನ ಅಧಿಕ ಎಂಬಂತೆ ಭಾಸವಾಗುತ್ತಿದೆ. ವಾಸ್ತವದಲ್ಲಿ 38 ಡಿಗ್ರಿ ಸೆಲ್ಸಿಯಸ್ ಇದ್ದರೆ, 40 ಡಿಗ್ರಿ ಸೆಲ್ಸಿಯಸ್ ಎಂಬಂತೆ ಭಾಸವಾಗುತ್ತದೆ ಎನ್ನುತ್ತಾರೆ ಹವಾಮಾನ ತಜ್ಞರು.

ಮುಂದಿನ 6–7 ದಿನಗಳಲ್ಲಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ಬಿಸಿ ಗಾಳಿ ಬೀಸುವ ಸಾಧ್ಯತೆ ಇದೆ. ಇದೇ ವೇಳೆಯಲ್ಲಿ ಮುಂಗಾರು ಪೂರ್ವ ಮಳೆ ವಾಡಿಕೆಯಷ್ಟು ಆಗಬೇಕು. ಈಗಾಗಲೇ ಹಲವು ಕಡೆಗಳಲ್ಲಿ ಮಳೆಯಾಗಿದೆ. ಮೇ ತಿಂಗಳಲ್ಲಿ ವಾಡಿಕೆ ಮಳೆಯಾದರೆ ಕುಡಿಯುವ ನೀರಿನ ಸಮಸ್ಯೆ ಆಗುವುದಿಲ್ಲ. ಕಳೆದ ವರ್ಷ ಮುಂಗಾರು ಪೂರ್ವ ಮಳೆ ಯಥೇಚ್ಛವಾಗಿ ಆದ ಕಾರಣ, ಜಲಾಶಯಗಳಲ್ಲಿ ನೀರಿನ ಸಂಗ್ರಹವಿದೆ. ಹೀಗಾಗಿ ಈ ಬೇಸಿಗೆಯಲ್ಲಿ ಕುಡಿಯುವ ಮತ್ತು ಕೃಷಿ ಉದ್ದೇಶಕ್ಕೆ ಯಾವುದೇ ಸಮಸ್ಯೆ ಆಗುವುದಿಲ್ಲ ಎನ್ನುತ್ತಾರೆ ಕರ್ನಾಟಕ ರಾಜ್ಯ ನಿಸರ್ಗ ವಿಕೋಪ ಉಸ್ತುವಾರಿ ಕೇಂದ್ರದ ಮಾಜಿ ನಿರ್ದೇಶಕ ಶ್ರೀನಿವಾಸರೆಡ್ಡಿ.

ಮುಂಬರುವ ಜುಲೈನಲ್ಲಿ 'ಎಲ್ ನಿನೋ' ಕಾಲಿಡಲಿದೆ. ಈಗ 'ಲಾ ನಿನಾ' ಮುಗಿದು ತಟಸ್ಥ ಸ್ಥಿತಿ (ನ್ಯೂಟ್ರಲ್) ನಿರ್ಮಾಣವಾಗಿದೆ. 'ಎಲ್ ನಿನೋ' ಕಾಲಿಟ್ಟರೆ ಮಳೆಯ ಕೊರತೆ ಆಗಬಹುದು. ಈ ಅವಧಿಯಲ್ಲಿ ಮಳೆ ಬೀಳುವ ಸರಾಸರಿ ಪ್ರಮಾಣ ಶೇ 92 ಆಗುವ ಸಾಧ್ಯತೆ ಇದೆ ಎಂದು ಹವಾಮಾನ ಮುನ್ಸೂಚನೆಗಳು ತಿಳಿಸಿವೆ. ಇದರ ಅರ್ಥ ವಾಡಿಕೆಗಿಂತ ಕಡಿಮೆ ಮಳೆ ಆಗುತ್ತದೆ. ಸರಾಸರಿ ಪ್ರಮಾಣ ಶೇ 90ಕ್ಕಿಂತ ಕಡಿಮೆ ಇದ್ದರೆ ಮಳೆ ಕೊರತೆ ಆಗುತ್ತದೆ. ಶೇ 90ರಿಂದ ಶೇ 95ರಷ್ಟು ಇದ್ದರೆ ವಾಡಿಕೆಗಿಂತ ಕಡಿಮೆ, ಶೇ 96ರಿಂದ ಶೇ 104 ಇದ್ದರೆ ವಾಡಿಕೆಯಷ್ಟು, ಶೇ 104ರಿಂದ ಶೇ 110ರಷ್ಟು ಇದ್ದರೆ ವಾಡಿಕೆಗಿಂತ ಹೆಚ್ಚು. ಶೇ 110ಕ್ಕೂ ಹೆಚ್ಚು ಇದ್ದರೆ ಅಧಿಕ ಮಳೆ ಆಗುತ್ತದೆ.

'ಈ ವರ್ಷ ಶೇ 92ರಷ್ಟು ನಿರೀಕ್ಷೆ ಇರುವುದರಿಂದ ಇದರಲ್ಲಿ ಶೇ 5ರಷ್ಟು ಹೆಚ್ಚು ಅಥವಾ ಕಡಿಮೆಯಾದರೆ ಒಂದಷ್ಟು ಪರಿಣಾಮ ಬೀರುತ್ತದೆ. ಶೇ 5ರಷ್ಟು ಹೆಚ್ಚು ಆದರೆ ನೆಮ್ಮದಿಯ ಉಸಿರು ಬಿಡಬಹುದು. ಶೇ 5ರಷ್ಟು ಕಡಿಮೆ ಆದರೆ ಮಳೆಯ ಕೊರತೆ ಕಾಡುತ್ತದೆ. ಕುಡಿಯುವ ನೀರಿಗೆ ಮತ್ತು ಕೃಷಿಗೆ ತೊಂದರೆ ಆಗುವ ಸಾಧ್ಯತೆ ಇದೆ. ಸದ್ಯಕ್ಕೆ ಮುಂಗಾರು ಪೂರ್ವ ಮಳೆ ಚೆನ್ನಾಗಿ ಆಗುವ ಹವಾಮಾನ ಮುನ್ಸೂಚನೆ ಇದೆ' ಎಂದು ಶ್ರೀನಿವಾಸರೆಡ್ಡಿ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಕಳೆದ ವರ್ಷ ಮೇ ತಿಂಗಳಲ್ಲಿ ಅತ್ಯಧಿಕ ಮಳೆಯಾಗಿ ಕೆಆರ್‌ಎಸ್ ಸೇರಿ ಹಲವು ಅಣೆಕಟ್ಟುಗಳು ತುಂಬಿ ಹೋಗಿದ್ದವು. ಹೀಗಾಗಿ ಈ ವರ್ಷ ಕಾವೇರಿ ಕಣಿವೆಯ ಜಲಾಶಯಗಳಲ್ಲಿ ನೀರಿನ ಸಂಗ್ರಹ ಇದೆ. ಇನ್ನೂ ಒಂದೂವರೆ ತಿಂಗಳಿಗೆ ಈ ನೀರನ್ನು ಎಚ್ಚರಿಕೆಯಿಂದ ಬಳಸಿಕೊಳ್ಳಬೇಕು. ಕಳೆದ ವರ್ಷದ ಮಾದರಿಯಲ್ಲಿ ಭಾರಿ ಮಳೆ ಆಗುವ ಸಾಧ್ಯತೆ ಕಡಿಮೆ. ವಾಡಿಕೆಯಷ್ಟು ಆದರೂ ಪ್ರಾಥಮಿಕ ಕೃಷಿ ಚಟುವಟಿಕೆ ಆರಂಭಿಸಲು ಸಾಧ್ಯ. ವಾಡಿಕೆಯಷ್ಟು ನೀರಿನ ಒಳಹರಿವು ಬಂದರೆ, ಅಚ್ಚುಕಟ್ಟು ಪ್ರದೇಶದ ಸ್ಥಿತಿ ಕೊಂಚ ಉತ್ತಮವಾಗುತ್ತದೆ. ಎಲ್ ನಿನೋ ಪ್ರಭಾವವನ್ನೂ ತಗ್ಗಿಸಬಲ್ಲದು' ಎನ್ನುತ್ತಾರೆ ಅವರು.

ಆಶಾದಾಯಕ 2 ಮುನ್ಸೂಚನೆ

'ಎಲ್ ನಿನೋ'ದಿಂದ ಸಂಕಷ್ಟದ ಸಾಧ್ಯತೆ ಇದ್ದರೂ 'ಪಾಸಿಟಿವ್ ಇಂಡಿಯನ್ ಓಷನ್ ಡೈಪೋಲ್' (ಪಿಐಒಡಿ) ಮತ್ತು ಧ್ರುವ ಪ್ರದೇಶಗಳಲ್ಲಿ ಹಿಮ ಕರಗುವಿಕೆ ವರದಿಗಳ ಪ್ರಕಾರ ಭಾರತದಲ್ಲಿ ಉತ್ತಮ ಮಳೆ ಆಗಬಹುದು ಎಂಬ ಮಾಹಿತಿ ಇದೆ.

ಪಿಐಒಡಿ ವಿದ್ಯಮಾನದಿಂದ ಹಿಂದೂ ಮಹಾಸಾಗರದ ಮೇಲ್ಮೈಯಲ್ಲಿ ಬಿಸಿ ನೀರು ಪೂರ್ವದತ್ತ ಸಾಗುತ್ತದೆ. ಇದರಿಂದ ಎಲ್ ನಿನೋ ಪ್ರಭಾವ ಇದ್ದರೂ ಅದನ್ನು ಎದುರಿಸಿ ಉತ್ತಮ ಮಳೆಯಾಗುತ್ತದೆ. ಧ್ರುವ ಪ್ರದೇಶಗಳಲ್ಲಿ ಅಪಾರ ಪ್ರಮಾಣದ ಹಿಮ ಕರಗುವಿಕೆಯೂ ಭಾರತದಲ್ಲಿ ಉತ್ತಮ ಮಳೆ ತರುತ್ತದೆ.

'ಎಲ್ ನಿನೋ ಪ್ರಭಾವವನ್ನು ಈ ಎರಡೂ ವಿದ್ಯಮಾನಗಳು ಮೆಟ್ಟಿ ನಿಲ್ಲಬಲ್ಲವೇ ಎಂಬುದನ್ನು ಕಾದು ನೋಡಬೇಕು. ಒಂದು ವೇಳೆ ಮುಂಗಾರು ಮಳೆ ಕೈಕೊಟ್ಟರೆ ಮುಂದಿನ ಬೇಸಿಗೆ ಕಷ್ಟವಾಗಬಹುದು' ಎಂದು ಶ್ರೀನಿವಾಸ್ ರೆಡ್ಡಿ ತಿಳಿಸಿದರು.

ಭಾರತೀಯ ಹವಾಮಾನ ಇಲಾಖೆ ನೀಡಿರುವ ಮುನ್ಸೂಚನೆ ಮೇವರೆಗಿನದು. ಮೇ ಕೊನೆಯಲ್ಲಿ ಸಮಗ್ರ ವರದಿಯನ್ನು ಇಲಾಖೆ ಬಿಡುಗಡೆ ಮಾಡಲಿದ್ದು, ಆಗ ಮುಂಗಾರಿನ ಸ್ಪಷ್ಟ ಚಿತ್ರಣ ಸಿಗಲಿದೆ ಎಂದು ಅವರು ವಿವರಿಸಿದರು.

prajavani.net prajavani

ಬುಧವಾರ, ಏಪ್ರಿಲ್ 15, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 104 | ಪುಟ 16

www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಸ್ಯಾಮ್ಸನ್‌ಗೆ ಗೌರವ
ಭಾರತದ ಆರಂಭಿಕ ಬ್ಯಾಟರ್ ಸಂಜು ಸ್ಯಾಮ್ಸನ್ ಅವರು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ಪ್ರಕಟಿಸಿದ 'ಮಾರ್ಚ್ ತಿಂಗಳ ಆಟಗಾರ' ಗೌರವಕ್ಕೆ ಪಾತ್ರರಾಗಿದ್ದಾರೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ

ಸ್ಕ್ಯಾನ್ ಮಾಡಿ

ಮಹಿಳಾ ಮೀಸಲಿಗೆ ಮುಂದಡಿ

ಶೇ 33ರ ಮೀಸಲಾತಿಗಾಗಿ ಲೋಕಸಭೆ ಕ್ಷೇತ್ರಗಳ ಸಂಖ್ಯೆ 850ರವರೆಗೆ ಏರಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಹಿಳೆಯರಿಗೆ ಮೂರನೇ ಒಂದಂಶದಷ್ಟು ಸ್ಥಾನಗಳನ್ನು ಮೀಸಲಾತಿ ಕಲ್ಪಿಸುವ ಭಾಗವಾಗಿ ಲೋಕಸಭಾ ಮತ್ತು ವಿಧಾನಸಭಾ ಕ್ಷೇತ್ರಗಳ ಮರುವಿಂಗಡಣೆಗೆ 'ಸಂವಿಧಾನ (131ನೇ ತಿದ್ದುಪಡಿ) ಮಸೂದೆ-2026' ಅನ್ನು ಗುರುವಾರ ಮಂಡಿಸಲು ಕೇಂದ್ರ ಸರ್ಕಾರ ಸಿದ್ಧತೆ ಮಾಡಿಕೊಂಡಿದೆ. ಮಹಿಳೆಯರಿಗೆ ಮೀಸಲಾತಿ ಒದಗಿಸುವ ಪ್ರಕ್ರಿಯೆಯನ್ನು ಕ್ಷೇತ್ರ ಪುನರ್‌ವಿಂಗಡಣೆ ಜೊತೆ ಜೋಡಣೆ ಮಾಡಿರುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿರುವ ವಿರೋಧಪಕ್ಷಗಳು ಪ್ರತಿ ಹೋರಾಟಕ್ಕೆ ಸಜ್ಜಾಗಿವೆ.

ಮರುವಿಂಗಡಣೆ ಪ್ರಸ್ತಾವದ ಪ್ರಕಾರ ಲೋಕಸಭೆ ಮತ್ತು ವಿಧಾನಸಭಾ ಕ್ಷೇತ್ರಗಳ ಸಂಖ್ಯೆಯನ್ನು ಶೇ 50ರವರೆಗೆ ಹೆಚ್ಚಿಸಲು ಅವಕಾಶ ಸಿಗಲಿದೆ. ಲೋಕಸಭೆಯ ಸದಸ್ಯರ ಸಂಖ್ಯೆ ಪ್ರಸ್ತುತ 543 ಇದ್ದು, ಗರಿಷ್ಠ 850 ಸ್ಥಾನ ಮೀರುವಂತಿಲ್ಲ ಎಂಬ ಪ್ರಸ್ತಾಪವಿದೆ. ಈ ಏರಿಕೆಯಲ್ಲಿ ರಾಜ್ಯಗಳ ಪಾಲು 815 ಸ್ಥಾನಗಳಾದರೆ, ಉಳಿದ 35 ಸ್ಥಾನಗಳು ಕೇಂದ್ರಾಡಳಿತ ಪ್ರದೇಶಗಳಿಗೆ ದೊರೆಯಲಿವೆ ಎಂಬ ಲೆಕ್ಕಾಚಾರ ಹಾಕಲಾಗಿದೆ.

ರಾಜ್ಯ ವಿಧಾನಸಭೆಗಳಿಗೂ ಶೇ 50ರಷ್ಟು ಸ್ಥಾನಗಳ ಹೆಚ್ಚಳಕ್ಕೆ ಪ್ರಸ್ತಾವ ಹೊಂದಿದ್ದರೂ ಪ್ರತಿ ವಿಧಾನಸಭೆಗೆ 500 ಸ್ಥಾನಗಳ ಗರಿಷ್ಠ ಮಿತಿಯಲ್ಲಿ ಯಾವುದೇ ಬದಲಾವಣೆಯನ್ನು ಮಾಡಲಾಗಿಲ್ಲ. ಉತ್ತರ ಪ್ರದೇಶ ವಿಧಾನಸಭೆ ಮಾತ್ರ 403ರಷ್ಟು ದೊಡ್ಡ ಸಂಖ್ಯೆಯ ಸ್ಥಾನಗಳನ್ನು ಹೊಂದಿದ್ದು, ಅಲ್ಲಿ ಶೇ 50ರಷ್ಟು ಸ್ಥಾನಗಳ ಹೆಚ್ಚಳಕ್ಕೆ ಅವಕಾಶ ಇಲ್ಲ. ಮಸೂದೆ ಪ್ರಕಾರ, ಕ್ಷೇತ್ರ ಪುನರ್‌ವಿಂಗಡಣೆಗೂ ಮುನ್ನ ಬಂದ ಜನಗಣತಿ ವರದಿಯ ಆಧಾರದ ಮೇಲೆ ಪ್ರಕ್ರಿಯೆ ನಡೆಯಲಿದ್ದು, ಮಹಿಳೆಯರಿಗೆ ಮೂರನೇ ಒಂದರಷ್ಟು ಪ್ರಾತಿನಿಧ್ಯ ಒದಗಿಸಲು ಅನುವು ಮಾಡಿಕೊಡಲಿದೆ.

ಕೇಂದ್ರವು 'ಲೋಕಸಭೆ ಮತ್ತು ವಿಧಾನ ಸಭೆಗಳಲ್ಲಿ ಸ್ಥಾನಗಳ ಹೆಚ್ಚಳ ಕುರಿತ ಸಂವಿಧಾನ (131 ನೇ ತಿದ್ದುಪಡಿ) ಮಸೂದೆ- 2026' ಮತ್ತು 'ಕೇಂದ್ರಾಡಳಿತ ಪ್ರದೇಶಗಳ ಕಾನೂನುಗಳು (ತಿದ್ದುಪಡಿ) ಮಸೂದೆ- 2026'ರ ಪ್ರತಿಗಳನ್ನು ಸಂಸದರಿಗೆ ವಿತರಿಸಿದೆ.

▸5

ಆಯೋಗಕ್ಕೆ ನ್ಯಾಯಮೂರ್ತಿ ನೇತೃತ್ವ

ಮಸೂದೆಗೆ ಒಪ್ಪಿಗೆ ಸಿಕ್ಕ ಬಳಿಕ ಕ್ಷೇತ್ರ ಪುನರ್ ವಿಂಗಡಣೆ ಆಯೋಗ ರಚನೆ ಆಗಲಿದೆ. ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿ ಅಥವಾ ನಿವೃತ್ತ ನ್ಯಾಯಮೂರ್ತಿ ಆಯೋಗದ ಅಧ್ಯಕ್ಷರಾಗಿರುವರು. ಮುಖ್ಯ ಚುನಾವಣಾ ಆಯುಕ್ತರು (ಅಥವಾ ನಾಮನಿರ್ದೇಶಿತ ಚುನಾವಣಾ ಆಯುಕ್ತರು) ಮತ್ತು ಸಂಬಂಧಪಟ್ಟ ರಾಜ್ಯದ ರಾಜ್ಯ ಚುನಾವಣಾ ಆಯುಕ್ತರು ಪದನಿಮಿತ್ತ ಸದಸ್ಯರಾಗಿರುತ್ತಾರೆ. ಪ್ರತಿ ರಾಜ್ಯದಲ್ಲಿ ಆಯೋಗದ ಕಾರ್ಯನಿರ್ವಹಣೆಗೆ ಸಹಾಯ ಮಾಡಲು 10 ಸಹ ಸದಸ್ಯರನ್ನು ನೇಮಿಸಲಾಗುತ್ತದೆ. ಇದರಲ್ಲಿ ಐವರು ಸಂಸದರು ಮತ್ತು ವಿಧಾನಸಭಾಧ್ಯಕ್ಷರು ನಾಮನಿರ್ದೇಶನ ಮಾಡಿದ ಐವರು ಶಾಸಕರು ಇರಲಿದ್ದಾರೆ. ಆದಾಗ್ಯೂ, ಈ ಸಹ ಸದಸ್ಯರು ಆಯೋಗದ ನಿರ್ಧಾರಗಳಿಗೆ ಸಹಿ ಹಾಕುವ ಮತದಾನದ ಹಕ್ಕು ಅಥವಾ ಅಧಿಕಾರ ಹೊಂದಿರುವುದಿಲ್ಲ.

ಕ್ಷೇತ್ರ ಮರುವಿಂಗಡಣೆಯ ಹಾದಿ

- ಮಸೂದೆಗಳು ಅಂಗೀಕಾರವಾದ ನಂತರ, ಕ್ಷೇತ್ರ ಮರುವಿಂಗಡಣೆ ಆಯೋಗ ರಚಿಸಲಾಗುತ್ತದೆ
- ಲೋಕಸಭೆ ಮತ್ತು ವಿಧಾನಸಭೆಗಳಲ್ಲಿನ ಸ್ಥಾನಗಳ ಸಂಖ್ಯೆಯನ್ನು ಆಯೋಗ ನಿರ್ಧರಿಸುತ್ತದೆ
- ಸಂವಿಧಾನ ತಿದ್ದುಪಡಿ ಮಸೂದೆಯನ್ನು ಅಂಗೀಕರಿಸಲು ಕೇಂದ್ರ ಸರ್ಕಾರಕ್ಕೆ ವಿರೋಧ ಪಕ್ಷದ ಬೆಂಬಲ ಬೇಕಾಗುತ್ತದೆ
- ಲೋಕಸಭೆಯಲ್ಲಿ ಎನ್‌ಡಿಎ 293 ಸಂಸದರನ್ನು ಹೊಂದಿದೆ. ಇಂಡಿಯಾ ಮೈತ್ರಿಕೂಟದ 234 ಸಂಸದರು ಇದ್ದಾರೆ. ಇತರರು 13 ಸಂಸದರು ಇದ್ದಾರೆ
- ಎಲ್ಲ 540 ಸಂಸದರು (ಮೂರು ಖಾಲಿ ಹುದ್ದೆಗಳು) ಹಾಜರಿದ್ದರೆ, ಮಸೂದೆ ಅಂಗೀಕರಿಸಲು ಸರ್ಕಾರಕ್ಕೆ 360 ಮತಗಳು ಬೇಕಾಗುತ್ತವೆ
- ಏಪ್ರಿಲ್ 16, 17ರಂದು ಲೋಕಸಭೆಯಲ್ಲಿ ಮತ್ತು ಏಪ್ರಿಲ್ 18 ರಂದು ರಾಜ್ಯಸಭೆಯಲ್ಲಿ ಮಸೂದೆ ಬಗ್ಗೆ ಚರ್ಚಿಸಲಾಗುತ್ತದೆ

ಕರ್ನಾಟಕ; ಶಾಸಕರ ಸಂಖ್ಯೆ 336ಕ್ಕೆ ಏರಿಕೆ?

ಒಂದು ವೇಳೆ, ಕ್ಷೇತ್ರಗಳ ಸಂಖ್ಯೆಯನ್ನು ಆಯೋಗವು ಶೇ 50ರಷ್ಟು ಹೆಚ್ಚಿಸಿದರೆ ಕರ್ನಾಟಕದಲ್ಲಿ ಲೋಕಸಭಾ ಕ್ಷೇತ್ರಗಳ ಸಂಖ್ಯೆ 28ರಿಂದ 42ಕ್ಕೆ ಹಾಗೂ ವಿಧಾನಸಭಾ ಕ್ಷೇತ್ರಗಳ ಸಂಖ್ಯೆ 224ರಿಂದ 336ಕ್ಕೆ ಏರಿಕೆ ಆಗಲಿದೆ.

ಪಾಕಿಸ್ತಾನಕ್ಕೆ ಹೋಗಲು ಅಮೆರಿಕ ಉತ್ಸುಕ– ಟ್ರಂಪ್

ಮತ್ತೆ ಮಾತುಕತೆಗೆ ಯತ್ನ

ವಾಷಿಂಗ್ಟನ್/ ಇಸ್ಲಾಮಾಬಾದ್ (ಎಪಿ/ ಎಎಫ್‌ಪಿ/ಪಿಟಿಐ): 'ಪಶ್ಚಿಮ ಏಷ್ಯಾ ಸಂಘರ್ಷವನ್ನು ಕೊನೆಗೊಳಿಸಲು ಅಮೆರಿಕ ಮತ್ತು ಇರಾನ್ ನಡುವೆ ಮತ್ತೊಂದು ಸುತ್ತಿನ ಮಾತುಕತೆ ಮುಂದಿನ ಎರಡು ದಿನಗಳಲ್ಲಿ ನಡೆಯಬಹುದು' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು 'ನ್ಯೂಯಾರ್ಕ್ ಟೈಮ್ಸ್'ಗೆ ತಿಳಿಸಿದ್ದಾರೆ.

'ಎರಡು ದಿನಗಳಲ್ಲಿ ಏನೂ ಬೇಕಾದರೂ ಸಂಭವಿಸಬಹುದು. ನಾವು ಅಲ್ಲಿಗೆ ಹೋಗಲು (ಪಾಕಿಸ್ತಾನ) ಹೆಚ್ಚು ಉತ್ಸುಕರಾಗಿದ್ದೇವೆ' ಎಂದು ಅವರು ಹೇಳಿದ್ದಾರೆ.

ಎರಡು ವಾರಗಳ ತಾತ್ಕಾಲಿಕ ಕದನ ವಿರಾಮ ಏಪ್ರಿಲ್ 22ರಂದು ಕೊನೆಗೊಳ್ಳಲಿದೆ.

ಪ್ರಧಾನಿ ಶೆಹಬಾಜ್ ಶರೀಫ್, ಉಪ ಪ್ರಧಾನಿ ಇಶಾಕ್ ದಾರ್ ಮತ್ತು ಸೇನೆಯ ಮುಖ್ಯಸ್ಥ ಆಸಿಮ್ ಮುನೀರ್ ಅವರು ಎರಡನೇ ಸುತ್ತಿನ ಮಾತುಕತೆಯನ್ನು ಖಚಿತಪಡಿಸಿಕೊಳ್ಳಲು ತೀವ್ರ ಪ್ರಯತ್ನ ನಡೆಸಿರುವ ಬೆನ್ನಲ್ಲೇ, ಟ್ರಂಪ್ ಹೇಳಿಕೆ ಬಂದಿದೆ.

ಅಮೆರಿಕದ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಅವರು ಇರಾನ್ ಜತೆಗಿನ ಮಾತುಕತೆ 'ಪ್ರಗತಿಯನ್ನು ಸಾಧಿಸಿದೆ' ಎಂದು ಹೇಳಿರುವುದು ಕೂಡಾ ಎರಡನೇ ಸುತ್ತಿನ ಮಾತುಕತೆ ನಡೆಯುವ ಸೂಚನೆ ನೀಡಿದೆ. 'ಮತ್ತೊಮ್ಮೆ ಮಾತುಕತೆಗೆ ಸಿದ್ಧವಿರುವುದಾಗಿ ಆ ಕಡೆಯವರು (ಇರಾನ್) ಹೇಳಿದ್ದಾರೆ. ಅವರು ಒಪ್ಪಂದ ಮಾಡಿಕೊಳ್ಳಲು ಬಯಸಿದ್ದಾರೆ' ಎಂದು ಡೊನಾಲ್ಡ್ ಟ್ರಂಪ್ ಸೋಮವಾರ ಹೇಳಿದ್ದರು.

▸8

ಮೋದಿಗೆ ಕರೆ ಮಾಡಿದ ಟ್ರಂಪ್

ನವದೆಹಲಿ (ಪಿಟಿಐ): ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ದೂರವಾಣಿ ಮೂಲಕ ಮಂಗಳವಾರ ಸಂಭಾಷಣೆ ನಡೆಸಿದ್ದಾರೆ.

'ನನ್ನ ಸ್ನೇಹಿತ, ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಕರೆ ಮಾಡಿ ಮಾತನಾಡಿದ್ದಾರೆ. ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ದ್ವಿಪಕ್ಷೀಯ ಸಹಕಾರದಲ್ಲಿ ಸಾಧಿಸಿರುವ ಗಣನೀಯ ಪ್ರಗತಿಯ ಬಗ್ಗೆ ಚರ್ಚಿಸಿದೆವು' ಎಂದು ಮೋದಿ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಎಲ್ಲ ಕ್ಷೇತ್ರಗಳಲ್ಲೂ ಸಮಗ್ರ ಜಾಗತಿಕ ಕಾರ್ಯತಂತ್ರದ ಪಾಲುದಾರಿಕೆಯನ್ನು ಮತ್ತಷ್ಟು ಬಲಪಡಿಸಲು ನಾವು ಬದ್ಧರಾಗಿದ್ದೇವೆ' ಎಂದಿದ್ದಾರೆ.

▸8

16 ಯುದ್ಧನೌಕೆ ನಿಯೋಜನೆ

ಇರಾನ್‌ನ ಬಂದರುಗಳ ಮೇಲೆ ದಿಗ್ಬಂಧನ ವಿಧಿಸಲಿಕ್ಕಾಗಿ ಅಮೆರಿಕವು ಪಶ್ಚಿಮ ಏಷ್ಯಾ ಸಮುದ್ರದಲ್ಲಿ 16 ಯುದ್ಧನೌಕೆಗಳನ್ನು ನಿಯೋಜಿಸಿದೆ ಎಂದು ಸೇನೆಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಯುದ್ಧವಿಮಾನ ವಾಹಕ ನೌಕೆ ಯುಎಸ್‌ಎಸ್ ಅಬ್ರಹಾಂ ಲಿಂಕನ್ ಅಲ್ಲದೆ 11 ಯುದ್ಧನೌಕೆಗಳು, ಭೂಸೇನೆಗೆ ನೆರವು ನೀಡುವ ಮೂರು ನೌಕೆಗಳು ಸಮುದ್ರ ತೀರದ ಸನಿಹ ಸಂಚರಿಸಬಲ್ಲ ಒಂದು ನೌಕೆ ಇದರಲ್ಲಿ ಒಳಗೊಂಡಿದೆ ಎಂದಿದ್ದಾರೆ.

▸8

ಚಿನಕುರುಳಿ ಪ್ರಕಾಶ್ ಶೆಟ್ಟಿ

ಆದಿಚುಂಚನಗಿರಿಗೆ ಇಂದು ಪ್ರಧಾನಿ

ನಾಗಮಂಗಲ (ಮಂಡ್ಯ ಜಿಲ್ಲೆ): ತಾಲ್ಲೂಕಿನ ಪ್ರಸಿದ್ಧ ಶ್ರೀ ಕ್ಷೇತ್ರ ಆದಿಚುಂಚನಗಿರಿ ಮಹಾಸಂಸ್ಥಾನ ಮಠದಲ್ಲಿ 'ಶ್ರೀಗುರು ಭೈರವೈಕ್ಯ ಮಂದಿರ'ವನ್ನು ಏ.15ರಂದು ಪ್ರಧಾನಿ ನರೇಂದ್ರ ಮೋದಿ ಲೋಕಾರ್ಪಣೆ ಮಾಡಲಿದ್ದಾರೆ.

ಬೆಳಿಗ್ಗೆ 10ಕ್ಕೆ ಬೆಂಗಳೂರಿನಿಂದ ಹೆಲಿಕಾಪ್ಟರ್ ಮೂಲಕ ಕ್ಷೇತ್ರಕ್ಕೆ ಬರಲಿದ್ದು, ಗುರು ಗೋರಖನಾಥರು ತಪಸ್ಸು ಮಾಡಿದ್ದ ಜ್ವಾಲಾಪೀಠ (ಉರಿಗದ್ದುಗೆ) ದರ್ಶನ ಮಾಡಿ, ಕ್ಷೇತ್ರಪಾಲಕ ಕಾಲಭೈರವನಿಗೆ ಮಂಗಳಾರತಿ ಸಲ್ಲಿಸುವರು. ಗುರು ಭೈರವೈಕ್ಯ ಮೂಲ-ಮಂದಿರದಲ್ಲಿ ಪೂಜೆ ಸಲ್ಲಿಸಿ ದೇವಾಲಯ ಉದ್ಘಾಟಿಸುವರು. ನಂತರ ವೇದಿಕೆ ಕಾರ್ಯಕ್ರಮ ನಡೆಯಲಿದೆ.

ಮೋದಿ ಮುಡಿಯೇರಲಿರುವ ಮೈಸೂರು ಪೇಟ

ಕ್ಷೇತ್ರವು ಮಯೂರವನ ಎಂದೇ ಪ್ರಸಿದ್ಧವಾಗಿರುವುದರಿಂದ, ನವಿಲಿಗೆ ಸಂಬಂಧಿಸಿದ ಕಾಣಿಕೆ ನೀಡಲು ಮಠ ಸಜ್ಜಾಗಿದೆ. ಮೈಸೂರು ಒಡೆಯರು ಧರಿಸುತ್ತಿದ್ದ ಮಾದರಿಯ ಕೆಂಪು ಪೇಟವನ್ನೂ ಇದೇ ಸಂದರ್ಭದಲ್ಲಿ ನೀಡಲಾಗುವುದು.

ರಾಜಕೀಯ ಕಾರ್ಯದರ್ಶಿ ನಸೀರ್ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಮುಸ್ಲಿಂ ಸಮುದಾಯಕ್ಕೆ ಟಿಕೆಟ್ ನೀಡಿಲ್ಲವೆಂಬ ಅಸಮಾಧಾನದಿಂದ ಕಾಂಗ್ರೆಸ್ ಅಭ್ಯರ್ಥಿ ಪರ ಪ್ರಚಾರದಿಂದ ದೂರ ಉಳಿದಿದ್ದ ವಿಧಾನ ಪರಿಷತ್ ಸದಸ್ಯರೂ ಆಗಿರುವ ನಸೀರ್ ಅಹಮದ್ ಅವರನ್ನು ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ಸ್ಥಾನದಿಂದ ವಜಾ ಮಾಡಲಾಗಿದೆ.

ನಸೀರ್ ಅಹಮದ್

'ನಸೀರ್ ಅಹಮದ್ ಅವರನ್ನು ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿಯಾಗಿ ನೇಮಿಸಿರುವುದನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆಯಲಾಗಿದೆ' ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ತನ್ನ ಆದೇಶದಲ್ಲಿ ಹೇಳಿದೆ. ನಸೀರ್ ಅವರನ್ನು 2023ರ ಜೂನ್ 1ರಂದು ಮುಖ್ಯಮಂತ್ರಿಯ ರಾಜಕೀಯ ಕಾರ್ಯದರ್ಶಿಯಾಗಿ ನೇಮಿಸಲಾಗಿತ್ತು.

ಕೆಪಿಸಿಸಿ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷರೂ ಆಗಿದ್ದ ವಿಧಾನ ಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್ ಕೂಡಾ ಚುನಾವಣಾ ಪ್ರಚಾರದಿಂದ ದೂರ ಉಳಿದಿದ್ದರು. ಸಚಿವ ಜಮೀರ್ ಅಹಮದ್ ಖಾನ್ ಅವರೂ ಸಕ್ರಿಯವಾಗಿ ತೊಡಗಿಸಿಕೊಂಡಿರಲಿಲ್ಲ. ನಂತರ ನಡೆದ ರಾಜಕೀಯ ಬೆಳವಣಿಗೆಯಲ್ಲಿ ಕೆಪಿಸಿಸಿ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಸ್ಥಾನಕ್ಕೆ ಜಬ್ಬಾರ್ ರಾಜೀನಾಮೆ ನೀಡಿದ್ದರು. ನಸೀರ್ ಅವರೂ ರಾಜೀನಾಮೆ ನೀಡಬೇಕೆಂದು ಹೈಕಮಾಂಡ್ ತಾಕೀತು ಮಾಡಿತ್ತು.

▸8

ಕೆ. ಗೋವಿಂದರಾಜ್ ಬಳಿಕ ಇನ್ನೊಬ್ಬ ಕಾರ್ಯದರ್ಶಿಗೆ ಕೊಕ್

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್ ವಜಾಗೊಳ್ಳುವುದರೊಂದಿಗೆ, ಈ ಸ್ಥಾನದಲ್ಲಿದ್ದ ಇಬ್ಬರೂ ಪದಚ್ಯುತರಾದಂತಾಗಿದೆ.

ಆರ್‌ಸಿಬಿ ವಿಜಯೋತ್ಸವದ ವೇಳೆ ನಡೆದ ಕಾಲ್ತುಳಿತದಲ್ಲಿ 11 ಅಮಾಯಕರ ಪ್ರಾಣ ಹೋಗಿತ್ತು. ವಿಜಯೋತ್ಸವ ಆಚರಿಸಲು ಅಂದು ರಾಜಕೀಯ ಕಾರ್ಯದರ್ಶಿಯಾಗಿದ್ದ, ವಿಧಾನಪರಿಷತ್ ಸದಸ್ಯ ಕೆ. ಗೋವಿಂದರಾಜ್ ಕಾರಣ ಎಂಬ ಆರೋಪಗಳು ಎದುರಾಗಿದ್ದವು. ಈ ದುರ್ಘಟನೆಯ ಬಳಿಕ ಗೋವಿಂದರಾಜ್ ಅವರನ್ನು ಸ್ಥಾನದಿಂದ ವಜಾಗೊಳಿಸಲಾಗಿತ್ತು.

ನಸೀರ್ ವಜಾ ಬಳಿಕ ಇಬ್ಬರು ರಾಜಕೀಯ ಕಾರ್ಯದರ್ಶಿಗಳ ಸ್ಥಾನವೂ ಖಾಲಿಯಾದಂತಾಗಿದೆ.

ಡೀಸೆಲ್ ಮಾರಾಟ: ₹35 ನಷ್ಟ

ನವದೆಹಲಿ (ಪಿಟಿಐ): ಕಚ್ಚಾ ತೈಲದ ಬೆಲೆಯು ತೀವ್ರ ಏರಿಕೆ ಕಂಡಿದ್ದರೂ ಸರ್ಕಾರಿ ಸ್ವಾಮ್ಯದ ತೈಲೋತ್ಪನ್ನಗಳ ಮಾರಾಟ ಕಂಪನಿಗಳು ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಹೆಚ್ಚಿಸದೆ ಇರುವ ಪರಿಣಾಮವಾಗಿ ಲೀಟರ್ ಪೆಟ್ರೋಲ್‌ಗೆ ₹18ರಷ್ಟು, ಡೀಸೆಲ್‌ಗೆ ₹35ರಷ್ಟು ನಷ್ಟ ಅನುಭವಿಸುತ್ತಿವೆ ಎಂದು ಮೂಲಗಳು ತಿಳಿಸಿವೆ. ಕಚ್ಚಾ ತೈಲದ ಬೆಲೆಯು ಕಳೆದ ತಿಂಗಳು ತೀರಾ ದುಬಾರಿ ಆಗಿದ್ದಾಗ ಈ ಮೂರು ಕಂಪನಿಗಳು ದಿನಕ್ಕೆ ಒಟ್ಟು ₹2,400 ಕೋಟಿಯಷ್ಟು ನಷ್ಟ ಅನುಭವಿಸುತ್ತಿದ್ದವು.

ವಿವರ ▸8



॥ ಜೈ ಶ್ರೀ ಗುರುದೇವ್ ॥
ಶ್ರೀ ಕ್ಷೇತ್ರ ಆದಿಚುಂಚನಗಿರಿ ಮಹಾಸಂಸ್ಥಾನ ಮಠದಲ್ಲಿ
ಭೈರವೈಕ್ಯ ಪರಮಪೂಜ್ಯ ಜಗದ್ಗುರುಗಳಾದ
ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮೀಜಿ ಅವರ
ಶ್ರೀಗುರು ಭೈರವೈಕ್ಯ
ಮಂದಿರದ
ಉದ್ಘಾಟನೆಗೆ ಆಗಮಿಸುತ್ತಿರುವ ಪ್ರಧಾನಮಂತ್ರಿ
ಶ್ರೀ ನರೇಂದ್ರ ಮೋದಿ
ಅವರಿಗೆ
ಆದರದ ಸುಸ್ವಾಗತ
ದಿವ್ಯಸಾನಿಧ್ಯ
ಶ್ರೀ ಮನ್ನಿರಂಜನ ಪ್ರಣವ ಸ್ವರೂಪಿ ಪರಮಪೂಜ್ಯ ಜಗದ್ಗುರು
ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದನಾಥ
ಮಹಾಸ್ವಾಮೀಜಿ ಅವರು
ಪೀಠಾಧ್ಯಕ್ಷರು, ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ
ದಿನಾಂಕ: 15 ಏಪ್ರಿಲ್ 2026, ಬುಧವಾರ
ಸಮಯ: ಬೆಳಿಗ್ಗೆ 10:00 ಗಂಟೆಗೆ
ಸ್ಥಳ: ಶ್ರೀ ಕ್ಷೇತ್ರ ಆದಿಚುಂಚನಗಿರಿ
ಹೃತ್ಪೂರ್ವಕ ಸುಸ್ವಾಗತ ಬಯಸುವವರು
ಧೀರಜ್ ಮುನಿರಾಜ್
ಶಾಸಕರು - ದೊಡ್ಡಬಳ್ಳಾಪುರ ವಿಧಾನಸಭಾ ಕ್ಷೇತ್ರ
ಅಧ್ಯಕ್ಷರು - ಭಾರತೀಯ ಜನತಾ ಪಾರ್ಟಿ ಯುವ ಮೋರ್ಚಾ, ಕರ್ನಾಟಕ

ಬಾಲಕ ಸೇರಿ ಐವರ ಬಂಧನ

ಮನೆ ಬೀಗ ಮುರಿದು ಚಿನ್ನ, ನಗದು ಕಳವು
115 ಗ್ರಾಂ ಚಿನ್ನಾಭರಣ, ಆಟೊ ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಯ ಬಾಗಿಲ ಬೀಗ ಮುರಿದು ಕೊಠಡಿಯಲ್ಲಿಟ್ಟಿದ್ದ ಚಿನ್ನಾಭರಣ ಹಾಗೂ ನಗದು ದೋಚಿ ಪರಾರಿಯಾಗಿದ್ದ ಪ್ರಕರಣಕ್ಕೆ ಸಂಬಂಧಿಸಿ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕ ಸೇರಿ ಐವರನ್ನು ಬಸವೇಶ್ವರ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ನಂದೀಶ್, ಸೋಮಶೇಖರ್, ಮಧುಗೌಡ, ಭೀಮಾ ಮತ್ತು ಬಾಲಕನನ್ನು ಬಂಧಿಸಲಾಗಿದೆ. ಆರೋಪಿಗಳಿಂದ 115 ಗ್ರಾಂ ಚಿನ್ನಾಭರಣ, ಕೃತ್ಯಕ್ಕೆ ಬಳಸಿದ್ದ ಆಟೊ ಮತ್ತು ₹13,400 ನಗದು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಠಾಣಾ ವ್ಯಾಪ್ತಿಯ 1ನೇ ಹಂತದ ಬಿಇಎಂಎಲ್ ಲೇಔಟ್‌ನಲ್ಲಿ ವಾಸವಾಗಿರುವ ವ್ಯಕ್ತಿಯೊಬ್ಬರು ಮನೆಯ ಬೀಗ ಹಾಕಿಕೊಂಡು ಯೋಗ ತರಬೇತಿಗೆ ಹೋಗಿದ್ದ ವೇಳೆ ಚಿನ್ನ ಹಾಗೂ ನಗದು ಕಳ್ಳತನ ಮಾಡಲಾಗಿತ್ತು.

ನಂದೀಶ್

ಭೀಮಾ

ಮಧುಗೌಡ

ಸೋಮಶೇಖರ್

ಪ್ರಕರಣ ದಾಖಲಿಸಿಕೊಂಡ ಪೊಲೀಸರು, ವಿವಿಧ ಆಯಾಮಗಳಲ್ಲಿ ತನಿಖೆ ಕೈಗೊಂಡರು. ಅಗ್ರಹಾರ ದಾಸರಹಳ್ಳಿಯ ಬಳಿ ₹8,100 ನಗದು ಮತ್ತು ಕೃತ್ಯಕ್ಕೆ ಬಳಸಿದ ಆಟೊ ಸಮೇತ ಇಬ್ಬರು ವ್ಯಕ್ತಿಗಳನ್ನು ವಶಕ್ಕೆ ಪಡೆಯಲಾಯಿತು. ಬಳಿಕ ಅವರು ನೀಡಿದ ಮಾಹಿತಿ ಆಧರಿಸಿ ಉತ್ತರ ಕನ್ನಡ ಜಿಲ್ಲೆಯ ಗೋವಾ ರಸ್ತೆಯಲ್ಲಿರುವ ಅನ್ಮೋಡ್ ವಿಲ್ಲೇಜ್ ಚೆಕ್‌ಪೋಸ್ಟ್ ಬಳಿ ಬಾಲಕನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ, ಕಳವು ಮಾಡಿರುವುದಾಗಿ ತಪ್ಪೊಪ್ಪಿಕೊಂಡ ಎಂದು ಹೇಳಿದರು.

ಆರೋಪಿಗಳನ್ನು ಕಸ್ಟಡಿಗೆ ಪಡೆದು ಹೆಚ್ಚಿನ ವಿಚಾರಣೆಗೆ ಒಳಪಡಿಸಿದಾಗ, ಕಳವು ಮಾಡಿದ್ದ ಆಭರಣಗಳ ಪೈಕಿ ಸ್ವಲ್ಪ ಮನೆಯಲ್ಲಿಟ್ಟಿರುವುದಾಗಿ ಹಾಗೂ ಪರಿಚಯಸ್ಥನಿಗೆ ನೀಡಿರುವುದಾಗಿ ಮತ್ತು ಕೆಲವು ಆಭರಣ ಅಂಗಡಿಗಳಿಗೆ ಮಾರಾಟ ಮಾಡಿರುವುದಾಗಿ ಹೇಳಿದರು.

ಬಳಿಕ ಆರೋಪಿಗಳ ಮನೆಯಿಂದ 45 ಗ್ರಾಂ ಚಿನ್ನಾಭರಣ, ₹5,300 ನಗದು, ಪರಿಚಯಸ್ಥನಿಂದ 23 ಗ್ರಾಂ ಚಿನ್ನಾಭರಣ ಹಾಗೂ ಆಭರಣ ಅಂಗಡಿಯಿಂದ 15 ಗ್ರಾಂ ವಶಪಡಿಸಿಕೊಳ್ಳಲಾಗಿದೆ. ಒಟ್ಟಾರೆ ಆರೋಪಿಗಳಿಂದ ₹17 ಲಕ್ಷ ಮೌಲ್ಯದ ಸ್ವತ್ತು ವಶಪಡಿಸಿಕೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

ಯುವತಿ, ಯುವಕರ ಮೇಲೆ ಹಲ್ಲೆ

ಬೆಂಗಳೂರು: ಆರ್.ಟಿ.ನಗರ ವ್ಯಾಪ್ತಿಯ ಕನಕನಗರ ಬಳಿ ಏಳೆಂಟು ಮಂದಿ ಯುವಕರ ಗುಂಪು, ಯುವತಿ ಮತ್ತು ಮೂವರು ಯುವಕರ ಮೇಲೆ ಸಾರ್ವಜನಿಕವಾಗಿ ಹಲ್ಲೆ ನಡೆಸಿದ ಘಟನೆಗೆ ಸಂಬಂಧಿಸಿ ದೇವರ ಜೀವನಹಳ್ಳಿ (ಡಿ.ಜೆ.ಹಳ್ಳಿ) ಠಾಣೆ ಪೊಲೀಸರು ಸ್ವಯಂ ಪ್ರೇರಿತ ದೂರು ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ.

3-4 ದಿನಗಳ ಹಿಂದೆ ಈ ಘಟನೆ ನಡೆದಿರುವ ಸಾಧ್ಯತೆಯಿದ್ದು, ಹಲ್ಲೆ ನಡೆಸಿದ ವಿಡಿಯೊ ಜಾಲತಾಣದಲ್ಲಿ ಹರಿದಾಡುತ್ತಿದೆ.

ಪ್ರತ್ಯಕ್ಷದರ್ಶಿಗಳ ಪ್ರಕಾರ, ಪುಂಡರ ಗುಂಪು ಯುವತಿ ಮತ್ತು ಯುವಕರ ಮೇಲೆ ಹಲ್ಲೆ ನಡೆಸಿದ್ದು, ಘಟನೆಯಲ್ಲಿ ಯುವತಿಯ ಬಾಯಿ ಮತ್ತು ಕೈ ಭಾಗದಲ್ಲಿ ರಕ್ತಸ್ರಾವ ಆಗಿತ್ತು. ಆಕೆಯ ಮೊಬೈಲ್ ಕೂಡ ಒಡೆದುಹೋಗಿದೆ ಎಂದು ಹೇಳಲಾಗಿದೆ.

ಧೂಮಪಾನ ಮಾಡುತ್ತಿದ್ದ ಕಾರಣ ವಾಗ್ವಾದ ನಡೆದು, ಬಳಿಕ ಪರಸ್ಪರ ಹೊಡೆದಾಡಿಕೊಂಡಿದ್ದಾರೆ ಎನ್ನಲಾಗಿದೆ. ಹಲ್ಲೆಗೊಳಗಾದವರು ಹಾಗೂ ಹಲ್ಲೆ ನಡೆಸಿದ ವ್ಯಕ್ತಿಗಳಿಗಾಗಿ ಶೋಧ ಕಾರ್ಯ ನಡೆಯುತ್ತಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

75 ಗ್ರಾಂ ಚಿನ್ನಾಭರಣ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಾಭರಣ ಕಳ್ಳತನ ಮಾಡುತ್ತಿದ್ದ ಆರೋಪಿ ಹಾಗೂ ಕದ್ದ ಮಾಲು ಸ್ವೀಕರಿಸುತ್ತಿದ್ದ ಮಹಿಳೆಯನ್ನು ಆರ್.ಟಿ.ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮೊಹಮ್ಮದ್ ಮುದಾಸಿರ್ (18) ಹಾಗೂ ತಬಸ್ಸುಂ (35) ಎಂಬುವವರನ್ನು ಬಂಧಿಸಿ, ₹ 10.55 ಲಕ್ಷ ಮೌಲ್ಯದ 75 ಗ್ರಾಂ ಚಿನ್ನಾಭರಣ ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಠಾಣಾ ವ್ಯಾಪ್ತಿಯ ಸುಲ್ತಾನಪಾಳ್ಯ ನಿವಾಸಿಯೊಬ್ಬರ ಮನೆಯ ಬೀಗ ಮುರಿದು ಕೊಠಡಿಯಲ್ಲಿಟ್ಟಿದ್ದ 80 ಗ್ರಾಂ ಚಿನ್ನಾಭರಣ ಕಳವು ಮಾಡಲಾಗಿತ್ತು. ಈ ಕುರಿತು ಪ್ರಕರಣ ದಾಖಲಿಸಿಕೊಂಡ ಪೊಲೀಸರು ತನಿಖೆ ಕೈಗೊಂಡರು.

ಬಾತ್ಮೀದಾರರ ಖಚಿತ ಮಾಹಿತಿ ಹಾಗೂ ವಿವಿಧ ಆಯಾಮಗಳಲ್ಲಿ ತನಿಖೆ ನಡೆಸಿದ ಪೊಲೀಸರು, ತಿಮ್ಮಯ್ಯ ಗಾರ್ಡನ್ ಬಳಿ ಮೊಹಮ್ಮದ್ ಮುದಾಸಿರ್ ಎಂಬಾತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ, ಕಳವು ಮಾಡಿರುವುದಾಗಿ ತಪ್ಪೊಪ್ಪಿಕೊಂಡ. ಕಳವು ಮಾಡಿರುವ ಆಭರಣಗಳನ್ನು ಮಹಿಳೆಗೆ ಮಾರಾಟ ಮಾಡಿದ್ದಾಗಿಯೂ ಹೇಳಿದ ಎಂದು ಪೊಲೀಸರು ತಿಳಿಸಿದ್ದಾರೆ.

ಮಹಿಳೆಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿ, ಆಕೆಯ ಮನೆಯಿಂದ 75.39 ಗ್ರಾಂ ಚಿನ್ನಾಭರಣವನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಹೇಳಿದರು.

ಅಪರಾಧ ಸುದ್ದಿ

ಕದ್ದ ಚಿನ್ನಾಭರಣಗಳನ್ನು ಖರೀದಿಸುತ್ತಿದ್ದ ತಬಸ್ಸುಂ, ಅದೇ ಮಾದರಿಯಲ್ಲಿ ನಕಲಿ ಚಿನ್ನಾಭರಣ ಮಾಡಿಸುತ್ತಿದ್ದರು. ಕಳ್ಳತನದ ಮಾಲನ್ನು ಸ್ವಂತಕ್ಕೆ ಬಳಸಿಕೊಳ್ಳುತ್ತಿದ್ದರು. ಕಳ್ಳರು ಪತ್ತೆಯಾದ ಬಳಿಕ ಪೊಲೀಸರು ಚಿನ್ನಾಭರಣ ವಶಕ್ಕೆ ಪಡೆಯಲು ಬಂದಾಗ, ನಕಲಿ ಮಾಲನ್ನೇ ಅಸಲಿಯೆಂದು ವಾದಿಸುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಚಿನ್ನ ಪಡೆದು ವಂಚನೆ: ಇಬ್ಬರ ಸೆರೆ

ಸ್ನಾಪ್ ಚಾಟ್ ಮೂಲಕ ಗೃಹಿಣಿಯನ್ನು ಪರಿಚಯಿಸಿಕೊಂಡು ಬಳಿಕ ಸ್ನೇಹ ಬೆಳೆಸಿ ಹಂತ-ಹಂತವಾಗಿ ಕೋಟ್ಯಂತರ ರೂಪಾಯಿ ಮೌಲ್ಯದ ಚಿನ್ನಾಭರಣ ಪಡೆದು ವಂಚಿಸಿದ್ದ ಇಬ್ಬರು ಅಂತರರಾಜ್ಯ ವಂಚಕರನ್ನು ಕೆ.ಆರ್.ಪುರ ಪೊಲೀಸರು ಬಂಧಿಸಿದ್ದಾರೆ.

38 ವರ್ಷದ ಗೃಹಿಣಿ ನೀಡಿದ ದೂರಿನ ಮೇರೆಗೆ ಆಂಧ್ರಪ್ರದೇಶದ ಮಹೇಶ್ ಹಾಗೂ ಸ್ವಾಮಿ ಎಂಬವವರನ್ನು ಬಂಧಿಸಿ, ಚಿನ್ನಾಭರಣ ವಶಕ್ಕೆ ಪಡೆದುಕೊಳ್ಳಲಾಗಿದೆ.

ಗೃಹಿಣಿಯ ಪತಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿದ್ದು, ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ಸಾಮಾಜಿಕ ಜಾಲತಾಣ ಸ್ನಾಪ್ ಚಾಟ್‌ನಲ್ಲಿ ವರ್ಷದ ಹಿಂದೆ ಆರೋಪಿಯು ಗೃಹಿಣಿಯನ್ನು ಪರಿಚಯಿಸಿಕೊಂಡಿದ್ದ. ಬಳಿಕ ಇಬ್ಬರೂ ಮೊಬೈಲ್ ನಂಬರ್ ವಿನಿಮಯ ಮಾಡಿಕೊಂಡಿದ್ದರು. ಕ್ರಮೇಣ ಸಲುಗೆ ಬೆಳೆದಿದೆ.

ಈ ಸಲುಗೆಯನ್ನು ದುರ್ಬಳಕೆ ಮಾಡಿಕೊಂಡ ಮಹೇಶ್, ಬ್ಯುಸಿನೆಸ್ ಮಾಡಲು ಹಣದ ಅಗತ್ಯವಿದೆ ಎಂದು ಸುಳ್ಳು ಹೇಳಿ ಮಹಿಳೆಯಿಂದ ಚಿನ್ನ ಪಡೆದಿದ್ದ. ಇದಕ್ಕೆ ಪ್ರತಿಯಾಗಿ ಹಣ ನೀಡುವುದಾಗಿ ಭರವಸೆ ನೀಡಿದ್ದ. ಮನೆಯಲ್ಲಿ ಚಿನ್ನವಿಲ್ಲದಿರುವುದನ್ನು ಅನುಮಾನಗೊಂಡು ಪತಿ ಪ್ರಶ್ನಿಸಿದಾಗ ವಂಚನೆ ವಿಚಾರ ಗೊತ್ತಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ವಶಕ್ಕೆ ಪಡೆಯಲು ಪೊಲೀಸರು ಬಂದಾಗ ಆಕೆ ಪಡೆದಿದ್ದ ಚಿನ್ನಾಭರಣವನ್ನು ಮಾರಾಟ ಮಾಡಿ, ನಕಲಿ ಚಿನ್ನಾಭರಣ ಇಟ್ಟುಕೊಂಡಿರುವುದು ಪತ್ತೆಯಾಗಿತ್ತು. ಸದ್ಯ ಇಬ್ಬರನ್ನೂ ಬಂಧಿಸಿ ಜೈಲಿಗೆ ಕಳುಹಿಸಿದ್ದಾರೆ.

ಶಾಂತಕುಮಾರಿಗೆ ‘ಗಣ್ಯಲೇಖಕಿ ಪ್ರಶಸ್ತಿ’

ಬೆಂಗಳೂರು: ಬಿ.ಎಂ.ಶ್ರೀ ಪ್ರತಿಷ್ಠಾನ ನೀಡುವ ‘ಡಾ.ವಿಜಯಾ ಸುಬ್ಬರಾಜ್ ಗಣ್ಯಲೇಖಕಿ ಪ್ರಶಸ್ತಿ’ಗೆ ಲೇಖಕಿ ಎಲ್.ವಿ. ಶಾಂತಕುಮಾರಿ ಆಯ್ಕೆಯಾಗಿದ್ದಾರೆ. ಈ ಪ್ರಶಸ್ತಿಯು ₹10 ಸಾವಿರ ನಗದು ಒಳಗೊಂಡಿದೆ. ಇದೇ 28ರಂದು ಬಿ.ಎಂ.ಶ್ರೀ ಕಲಾಭವನದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಐಪಿಎಲ್ ಪಂದ್ಯ: ಸಂಚಾರ ಮಾರ್ಪಾಡು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಲಖನೌ ಸೂಪರ್ ಜೈಂಟ್ಸ್ ತಂಡಗಳ ನಡುವೆ ಬುಧವಾರ ಐಪಿಎಲ್ ಪಂದ್ಯ ನಡೆಯಲಿರುವ ಹಿನ್ನೆಲೆಯಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣದ ಸುತ್ತಮುತ್ತ ಸಂಚಾರ ವ್ಯವಸ್ಥೆಯಲ್ಲಿ ಕೆಲ ಮಾರ್ಪಾಡುಗಳನ್ನು ಮಾಡಲಾಗಿದೆ.

ವಾಹನಗಳ ನಿಲುಗಡೆ ನಿಷೇಧ ರಸ್ತೆ:

ಕ್ವೀನ್ಸ್ ರಸ್ತೆ: ಬಾಳೇಕುಂದ್ರಿ ವೃತ್ತದಿಂದ ಕ್ವೀನ್ಸ್ ವೃತ್ತದವರೆಗೆ ಮತ್ತು ಕ್ವೀನ್ಸ್ ವೃತ್ತದಿಂದ ಸಿಟಿಓ ಜಂಕ್ಷನ್‌ವರೆಗೆ ರಸ್ತೆಯ ಎರಡೂ ಕಡೆ

ಎಂ.ಜಿ ರಸ್ತೆ : ಅನಿಲ್ ಕುಂಬ್ಳೆ ವೃತ್ತದಿಂದ ಕ್ವೀನ್ಸ್ ವೃತ್ತದವರೆಗೆ ಮತ್ತು ಕ್ವೀನ್ಸ್ ರಸ್ತೆಯಿಂದ ಅನಿಲ್ ಕುಂಬ್ಳೆ ಜಂಕ್ಷನ್‌ವರೆಗೆ ರಸ್ತೆಯ ಎರಡೂ ಕಡೆ.

ಲಿಂಕ್ ರಸ್ತೆ : ಎಂ.ಜಿ ರಸ್ತೆಯಿಂದ ಕಬ್ಬನ್ ರಸ್ತೆವರೆಗೆ. ರಾಜಭವನ ರಸ್ತೆ, ಟಿ.ಚೌಡಯ್ಯ ರಸ್ತೆ ಮತ್ತು ರೇಸ್ ಕೋರ್ಸ್ ರಸ್ತೆ, ಸೆಂಟ್ರಲ್ ಸ್ಟ್ರೀಟ್ ರಸ್ತೆ.

ಕಬ್ಬನ್ ರಸ್ತೆ: ಸಿಟಿಓ ವೃತ್ತದಿಂದ ಡಿಕನ್ಸನ್ ರಸ್ತೆ ಎರಡೂ ಬದಿ. ಕಾಮರಾಜ್ ರಸ್ತೆ ಜಂಕ್ಷನ್‌ನಿಂದ ಡಿಕನ್ಸನ್ ರಸ್ತೆ ಜಂಕ್ಷನ್ ವರೆಗೆ ಬಿಎಂಟಿಸಿ ಬಸ್‌ಗಳನ್ನು ಹೊರತುಪಡಿಸಿ ಇತರೆ ವಾಹನಗಳ ನಿಲುಗಡೆಗೆ ನಿಷೇಧ.

ಸೇಂಟ್ ಮಾರ್ಕ್ಸ್ ರಸ್ತೆ: ಕ್ಯಾಶ್ ಫಾರ್ಮಸಿ ಜಂಕ್ಷನ್‌ನಿಂದ ಅನಿಲ್ ಕುಂಬ್ಳೆ ವೃತ್ತದವರೆಗೆ.

ಮ್ಯೂಸಿಯಂ ರಸ್ತೆ : ಎಂ.ಜಿ. ರಸ್ತೆಯಿಂದ ಸೇಂಟ್ ಮಾರ್ಕ್ಸ್ ರಸ್ತೆವರೆಗೆ ಹಾಗೂ ಆಶೀರ್ವಾದಂ ವೃತ್ತದವರೆಗೆ.

ಕಸ್ತೂರಬಾ ರಸ್ತೆ ಹಾಗೂ ಮಲ್ಯ ಆಸ್ಪತ್ರೆ ರಸ್ತೆ: ಕ್ವೀನ್ಸ್ ವೃತ್ತದಿಂದ ಹಡ್ಸನ್ ವೃತ್ತದವರೆಗೆ, ಸಿದ್ದಲಿಂಗಯ್ಯ ವೃತ್ತದಿಂದ ಆರ್‌ಆರ್‌ಎಂಆರ್ ವೃತ್ತದವರೆಗೆ.

ಕಬ್ಬನ್ ಪಾರ್ಕ್ ಒಳಭಾಗ: ಕಿಂಗ್ ರಸ್ತೆ, ಪ್ರೆಸ್ ಕ್ಲಬ್ ಮುಂಭಾಗ, ಬಾಲಭವನ ಮುಂಭಾಗ, ಫೌಂಟೇನ್ ರಸ್ತೆಗಳಲ್ಲಿ ವಾಹನಗಳ ಪಾರ್ಕಿಂಗ್ ಕಡ್ಡಾಯವಾಗಿ ನಿಷೇಧಿಸಲಾಗಿದೆ.

ಲ್ಯಾವೆಲ್ಲೆ ರಸ್ತೆ: ಕ್ವೀನ್ಸ್ ವೃತ್ತದಿಂದ ವಿಠಲ್ ಮಲ್ಯ ರಸ್ತೆ ಜಂಕ್ಷನ್‌ವರೆಗೆ.

ವಿಠಲ್ ಮಲ್ಯ ರಸ್ತೆ: ಸಿದ್ದಲಿಂಗಯ್ಯ ವೃತ್ತದಿಂದ ಸೇಂಟ್ ಮಾರ್ಕ್ಸ್ ರಸ್ತೆಯ ಬಿಷಪ್ ಕಾಟನ್ ಬಾಲಕಿಯರ ಶಾಲೆಯವರೆಗೆ.

ಚಿನ್ನಸ್ವಾಮಿ ಸ್ಟೇಡಿಯಂ ಪ್ರವೇಶ-ನಿರ್ಗಮನ ದಾರಿ:

ಕಬ್ಬನ್ ರಸ್ತೆ: ಸಾರ್ವಜನಿಕರು ಗೇಟ್ ನಂ: ಇ-1ರಿಂದ ಇ-3 ಮತ್ತು ಗೇಟ್ ನಂ: ಇ-18, ಇ-19, ಇ-22 ಹಾಗೂ ಇ-23 ಮುಖಾಂತರ ಪ್ರವೇಶ.

ಲಿಂಕ್ ರಸ್ತೆ: ಗೇಟ್ ನಂ: ಇ-11 ರಿಂದ ಇ-17ರ ವರೆಗೆ. ಅನಿಲ್ ಕುಂಬ್ಳೆ ವೃತ್ತ ಮತ್ತು ಬಿ.ಆರ್.ವಿ. ವೃತ್ತದ ಕಡೆಯಿಂದ ಪ್ರವೇಶ.

ಕ್ವೀನ್ಸ್ ರಸ್ತೆ : ಗೇಟ್ ನಂ: ಇ-05 ಮತ್ತು ಇ-08ರಲ್ಲಿ ಪ್ರವೇಶವಿದ್ದು, ಗೇಟ್ ನಂ: ಇ-09 ಮತ್ತು ಇ-9ಎ ನಲ್ಲಿ ನಿರ್ಗಮಿಸಲು ಮಾತ್ರ ಅವಕಾಶವಿದೆ.

ವಿಐಪಿ ಪ್ರವೇಶ: ಕ್ವೀನ್ಸ್ ರಸ್ತೆಯ ಗೇಟ್ ನಂ: ಇ-10ರಲ್ಲಿ ಆಟಗಾರರು, ಅಧಿಕಾರಿಗಳು ಹಾಗೂ ವಿಐಪಿಗಳ ಪ್ರವೇಶಕ್ಕೆ ಅವಕಾಶವಿದೆ.

ಓಲಾ, ಉಬರ್ ಮತ್ತು ಆಟೊ ಪಿಕ್-ಅಪ್ ಹಾಗೂ ಡ್ರಾಪ್ ಸ್ಥಳಗಳು: ಬಿಆರ್‌ವಿ ಮೈದಾನ ಹಾಗೂ ಮಾಣೆಕ್ ಶಾ ಪರೇಡ್ ಮೈದಾನ

ಪಂದ್ಯ ವೀಕ್ಷಣೆಗೆ ಬರುವ ಪ್ರೇಕ್ಷಕರು ಸಾಧ್ಯವಾದಷ್ಟು ಸಾರ್ವಜನಿಕ ಸಾರಿಗೆ ಹಾಗೂ ಮೆಟ್ರೊ ಸೇವೆ ಬಳಸುವಂತೆ ಪೊಲೀಸರು ಮನವಿ ಮಾಡಿದ್ದಾರೆ.

ವಾಹನ ನಿಲುಗಡೆಗೆ ಸ್ಥಳಗಳು

ಸೇಂಟ್ ಜೋಸೆಫ್ ಇಂಡಿಯನ್ ಹೈಸ್ಕೂಲ್ ಮೈದಾನ, ಸಿದ್ದಲಿಂಗಯ್ಯ ವೃತ್ತ, ಸೇಂಟ್ ಜೋಸೆಫ್ ಯುರೋಪಿಯನ್ ಸ್ಕೂಲ್ ಮೈದಾನ, ಮ್ಯೂಸಿಯಂ ರಸ್ತೆ, ಫ್ರೀಡಂ ಪಾರ್ಕ್ ಎಂ.ಎಲ್.ಸಿ.ಪಿ ಪಾರ್ಕಿಂಗ್ ಸ್ಥಳ, ಗರುಡಾ ಮಾಲ್ ಪಾರ್ಕಿಂಗ್ ಸ್ಥಳ, ಶಿವಾಜಿನಗರ ಬಸ್ ನಿಲ್ದಾಣದ 1ನೇ ಮಹಡಿ, ಯು.ಬಿ. ಸಿಟಿ ನಿಲುಗಡೆ ಸ್ಥಳ, ಕಂಠೀರವ ಕ್ರೀಡಾಂಗಣ.

ಹವಾಮಾನ ಮುನ್ಸೂಚನೆ: ನಗರದಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಇರಲಿದೆ

ಕೇಂಬ್ರಿಡ್ಜ್ ಕಾಲೇಜು ವಿದ್ಯಾರ್ಥಿಗಳ ಸಾಧನೆ

ಬೆಂಗಳೂರು: ಈ ಬಾರಿಯ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಕೇಂಬ್ರಿಡ್ಜ್ ಪಿಯು ಕಾಲೇಜಿನ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದು, ಕಾಲೇಜಿನ ಒಟ್ಟಾರೆ ಫಲಿತಾಂಶ ಶೇ 99ರಷ್ಟಿದೆ.

ವಿಜ್ಞಾನ ವಿಭಾಗದಲ್ಲಿ ಭಾವನಾ ಆರ್. ಅವರು 594 (ಶೇ 99) ಅಂಕಗಳೊಂದಿಗೆ ರಾಜ್ಯಕ್ಕೆ 6ನೇ ಸ್ಥಾನ ಪಡೆದಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ತನಿಷ್ಕಾ ಎಂ., ತನುಷಾ ಎಸ್. ಮತ್ತು ತನುಶ್ರೀ ಜೆ. ಅವರು ತಲಾ 593 (ಶೇ 98.83) ಅಂಕಗಳಿಸಿದ್ದು, ರಾಜ್ಯಕ್ಕೆ 8ನೇ ಸ್ಥಾನ ಪಡೆದಿದ್ದಾರೆ.

‘ನಿರಂತರ ಪ್ರಯತ್ನ, ಶಿಸ್ತು ಮತ್ತು ಸೂಕ್ತ ಮಾರ್ಗದರ್ಶನದಿಂದ ಉತ್ತಮ ಫಲಿತಾಂಶ ಸಾಧ್ಯವಾಗಿದೆ. ವಿದ್ಯಾರ್ಥಿಗಳ ಈ ಸಾಧನೆ ನಮಗೆ ಅಪಾರ ಹೆಮ್ಮೆಯನ್ನುಂಟು ಮಾಡಿದೆ. ಅಧ್ಯಾಪಕರ ಸಮರ್ಪಣೆ, ಮಾರ್ಗದರ್ಶನ ಮತ್ತು ದಣಿವರಿಯದ ಪ್ರಯತ್ನಗಳೂ ಈ ಸಾಧನೆಯ ಹಿಂದಿದೆ’ ಎಂದು ಕಾಲೇಜಿನ ಪ್ರಕಟಣೆ ತಿಳಿಸಿದೆ.

ಭಾವನಾ ಆರ್.

ತನಿಷ್ಕಾ ಎಂ.

ತನುಷಾ ಎಸ್.

ತನುಶ್ರೀ ಜೆ.

ವೈದ್ಯರ ವಿರುದ್ಧ ಎಫ್‌ಐಆರ್

ಬೆಂಗಳೂರು: ಮಹಿಳಾ ಉದ್ಯೋಗಿಯ ಜತೆ ಅಸಭ್ಯವಾಗಿ ವರ್ತಿಸಿದ ಆರೋಪದ ಮೇಲೆ ವೈದ್ಯರೊಬ್ಬರ ವಿರುದ್ಧ ಎಚ್‌ಎಸ್‌ಆರ್ ಲೇಔಟ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಆಸ್ಪತ್ರೆಯಲ್ಲಿ ಅಕೌಂಟೆಂಟ್ ಆಗಿ ಕೆಲಸ ಮಾಡುತ್ತಿದ್ದ ಮಹಿಳೆ ನೀಡಿದ ದೂರಿನ ಮೇಲೆ ಎಚ್‌ಎಸ್‌ಆರ್ ಲೇಔಟ್ 7ನೇ ಸೆಕ್ಟರ್‌ನ ಗಣಪ ಆರ್ಕೇಡ್‌ನಲ್ಲಿರುವ ಡಾ.ಹೀಲ್ ಆಸ್ಪತ್ರೆ ಮುಖ್ಯಸ್ಥ ಡಾ.ರಾಕೇಶ್ ಜಯಪ್ರಕಾಶ್ ಅವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ದೂರಿನನ್ವಯ ಆರೋಪಿಗೆ ನೋಟಿಸ್ ನೀಡಲಾಗಿದೆ. ಆದರೆ, ತರಬೇತಿ ನಿಮಿತ್ತ ಬೇರೆ ಕಡೆ ಹೋಗಿದ್ದಾರೆ ಎಂಬ ಮಾಹಿತಿ ಇದೆ. ನಗರಕ್ಕೆ ಬಂದ ತಕ್ಷಣ ವಿಚಾರಣೆ ನಡೆಸಲಾಗುವುದು ಎಂದು ಪೊಲೀಸರು ಹೇಳಿದ್ದಾರೆ.

ಕೆಲಸದ ಸಂದರ್ಭದಲ್ಲಿ ಮಹಿಳೆ ಧರಿಸಿದ್ದ ಸಮವಸ್ತ್ರದ ಬಗ್ಗೆ ಆರೋಪಿ ಅಸಭ್ಯವಾಗಿ ಮಾತನಾಡಿದ್ದಾರೆ. ಈ ರೀತಿ ಮಾತನಾಡದಂತೆ ಮಹಿಳೆ ಹಲವು ಬಾರಿ ಹೇಳಿದ್ದರು. ಅಲ್ಲದೇ ಆಕೆಗೆ ಕರೆ ಮಾಡಿ ಅನುಚಿತವಾಗಿ ಮಾತನಾಡಿದ್ದಾರೆ ಹಾಗೂ ವಾಟ್ಸ್‌ಆ್ಯಪ್ ಮೂಲಕ ‘ಮಿಸ್ ಯೂ’ ಎಂಬ ಸಂದೇಶ ಕಳುಹಿಸಿದ್ದಾರೆ. ಈ ವಿಚಾರ ಗೊತ್ತಾಗಿ ದಂಪತಿ ನಡುವೆ ಜಗಳವಾಗಿದೆ ಎಂದು ಪೊಲೀಸರು ತಿಳಿಸಿದರು. ಆರೋಪಿ ಕಿರುಕುಳಕ್ಕೆ ಬೇಸತ್ತ ಮಹಿಳೆ ಕೆಲಸಕ್ಕೆ ರಾಜೀನಾಮೆ ನೀಡಿದ್ದಾರೆ. ಅಸಭ್ಯವಾಗಿ ವರ್ತಿಸಿ, ಹೆಣ್ಣಿನ ಗೌರವಕ್ಕೆ ಧಕ್ಕೆ ತರುವ ರೀತಿಯಲ್ಲಿ ನಡೆದುಕೊಂಡಿರುವ ವೈದ್ಯರ ವಿರುದ್ಧ ಕ್ರಮ ಕೈಗೊಳ್ಳುವಂತೆ ದೂರಿನಲ್ಲಿ ಮಹಿಳೆ ಮನವಿ ಮಾಡಿರುವುದಾಗಿ ಪೊಲೀಸರು ಹೇಳಿದ್ದಾರೆ.

ಮಗಳ ಕೊಂದು ತಾಯಿ ಆತ್ಮಹತ್ಯೆ

ಪತಿಗೆ ಹೃದಯ ಸಮಸ್ಯೆ: ಖಿನ್ನತೆಗೆ ಒಳಗಾಗಿದ್ದ ಪತ್ನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಗಳನ್ನು ಉಸಿರುಗಟ್ಟಿಸಿ ಕೊಂದ ತಾಯಿ, ಬಳಿಕ ತಾನು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ವೈಟ್‌ಫೀಲ್ಡ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮಂಗಳವಾರ ನಡೆದಿದೆ.

ಇಮ್ಮಡಿಹಳ್ಳಿ ನಿವಾಸಿ ತಾರುಣ್ಯ (13) ಕೊಲೆಯಾಗಿದ್ದು, ಕೃತ್ಯ ಎಸಗಿದ ತಾಯಿ ಸುವರ್ಣಾ (45) ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಈ ಸಂಬಂಧ ಸುವರ್ಣಾ ಪತಿ ಚಂದ್ರಶೇಖರ್ ದೂರಿನ ಮೇರೆಗೆ ಸುವರ್ಣಾ ವಿರುದ್ಧ ಕೊಲೆ ಪ್ರಕರಣ ದಾಖಲಾಗಿದೆ. ಹಾಗೆಯೇ ಸುವರ್ಣಾ ಸಹೋದರ ಮಂಜುನಾಥ್ ದೂರಿನ ಮೇರೆಗೆ ಅನುಮಾನಾಸ್ಪದ ಸಾವು ಪ್ರಕರಣ ದಾಖಲಾಗಿದೆ. ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗಾಗಿ ಸಮೀಪದ ಆಸ್ಪತ್ರೆಗೆ ರವಾನಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸುವರ್ಣಾ

ತಾರುಣ್ಯ

ಖಾಸಗಿ ಆಸ್ಪತ್ರೆಯಲ್ಲಿ ಕಂಪ್ಯೂಟರ್ ಆಪರೇಟರ್ ಆಗಿರುವ ಚಂದ್ರಶೇಖರ್, ಪತ್ನಿ ಸುವರ್ಣಾ ಹಾಗೂ ಇಬ್ಬರು ಮಕ್ಕಳ ಜತೆ ಇಮ್ಮಡಿಹಳ್ಳಿಯಲ್ಲಿ ವಾಸವಾಗಿದ್ದಾರೆ. ದಂಪತಿಯ ಹಿರಿಯ ಪುತ್ರ ಎಸ್ಸೆಸ್ಸೆಲ್ಸಿ ಓದುತ್ತಿದ್ದು, ಹಾಸ್ಟೆಲ್‌ನಲ್ಲಿದ್ದಾನೆ. ಮಗಳು ಖಾಸಗಿ ಶಾಲೆಯಲ್ಲಿ 7ನೇ ತರಗತಿ ಓದುತ್ತಿದ್ದಳು. ಪತ್ನಿ ಸುವರ್ಣಾ ಮನೆಯಲ್ಲಿದ್ದರು.

ಚಂದ್ರಶೇಖರ್‌ಗೆ ಹೃದಯ ಸಮಸ್ಯೆಯಿದ್ದು, ಅವರಿಗೆ ಬರುತ್ತಿದ್ದ ವೇತನ ಜೀವನ ನಿರ್ವಹಣೆಗೆ ಸಾಧ್ಯವಾಗುತ್ತಿರಲಿಲ್ಲ. ಭವಿಷ್ಯದ ಬಗ್ಗೆ ಚಿಂತಿತರಾಗಿ ಕೆಲ ತಿಂಗಳಿಂದ ಸುವರ್ಣಾ ಮಾನಸಿಕ ಖಿನ್ನತೆಗೆ ಒಳಗಾಗಿದ್ದರು ಎನ್ನಲಾಗಿದೆ.

ಆತಂಕದಿಂದ ಪುತ್ರಿಯನ್ನು ಕೊಂದು ಬಳಿಕ ತಾನು ಆತ್ಮಹತ್ಯೆ ಮಾಡಿಕೊಂಡಿರುವುದು ಮೇಲ್ನೋಟಕ್ಕೆ ತಿಳಿದು ಬಂದಿದ್ದು, ತನಿಖೆ ಪೂರ್ಣಗೊಂಡ ಬಳಿಕ ಸತ್ಯಾಂಶ ತಿಳಿಯಲಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸೋಮವಾರ ರಾತ್ರಿ ಐಪಿಎಲ್ ಪಂದ್ಯ ನೋಡಿ ದಂಪತಿ ಒಟ್ಟಿಗೆ ಊಟ ಮಾಡಿ ಮಲಗಿದ್ದರು. ಮಲಗುವ ಮುನ್ನ ಸುವರ್ಣಾ, ತನಗೆ ತಲೆನೋವು ಹಾಗೂ ಸುಸ್ತು ಇದ್ದು, ಬೆಳಿಗ್ಗೆ ತಿಂಡಿ ಮಾಡಲು ಸಾಧ್ಯವಾಗುವುದಿಲ್ಲ ಎಂದು ಹೇಳಿದ್ದರು.

ಪ್ರತ್ಯೇಕ ಕೊಠಡಿಯಲ್ಲಿ ಮಲಗಿದ್ದ ಚಂದ್ರಶೇಖರ್, ಬೆಳಿಗ್ಗೆ ಪತ್ನಿಯೊಂದಿಗೆ ಮಾತನಾಡದೆ ಎಂದಿನಂತೆ ಕೆಲಸಕ್ಕೆ ಹೋಗಿದ್ದಾರೆ. 10 ಗಂಟೆ ಸುಮಾರಿಗೆ ಪತ್ನಿಗೆ ಹಲವು ಬಾರಿ ಕರೆ ಮಾಡಿದರೂ ಸ್ವೀಕರಿಸಲಿಲ್ಲ. ಅನುಮಾನಗೊಂಡು ಸಹೋದರ ವಿನೋದ್‌ಗೆ ಮನೆಗೆ ಹೋಗಿ ನೋಡುವಂತೆ ಸೂಚಿಸಿದ್ದರು. ಸಹೋದರ ಮನೆಗೆ ಹೋಗಿ ಬಾಗಿಲು ಬಡಿದರೂ ಪ್ರತಿಕ್ರಿಯೆ ನೀಡಿಲ್ಲ.

ಬಳಿಕ ಬಾಗಿಲು ಒಡೆದು ಒಳ ಹೋದಾಗ ಘಟನೆ ಬೆಳಕಿಗೆ ಬಂದಿದೆ. ಕೂಡಲೇ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ವೈಟ್‌ಫೀಲ್ಡ್ ಪೊಲೀಸರು ಹಾಗೂ ‘ಸುಕೋ’ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಕೊಠಡಿಯ ಮಂಚದ ಮೇಲೆ ತಾರುಣ್ಯ ಶವ ಪತ್ತೆಯಾದರೆ, ಸುವರ್ಣಾ ಅವರು ಫ್ಯಾನಿಗೆ ನೇಣು ಹಾಕಿಕೊಂಡಿರುವುದು ಕಂಡು ಬಂದಿದೆ. ಸ್ಥಳದಲ್ಲಿ ಮರಣ ಪತ್ರ ಪತ್ತೆಯಾಗಿಲ್ಲ ಎಂದು ಪೊಲೀಸರು ಹೇಳಿದರು.

ಬಿಸಿಲ ಧಗೆ...

ಪ್ರಜಾವಾಣಿ ಚಿತ್ರ: ರಂಜು ಪಿ

ನಗರದಲ್ಲಿ ಬಿಸಿ ಗಾಳಿ ಹಾಗೂ ತಾಪಮಾನ ಏರಿಕೆಯಿಂದ ಜನರು ಹೈರಾಣರಾಗುತ್ತಿದ್ದಾರೆ. ನಗರಕ್ಕೆ ಭೇಟಿ ನೀಡಿದ್ದ ವಿದೇಶಿಯರು ಬಿಸಿಲಿನ ತಾಪದಿಂದ ರಕ್ಷಿಸಿಕೊಳ್ಳಲು ಛತ್ರಿ ಹಿಡಿದು ವಿಧಾನಸೌಧದ ಮುಂಭಾಗ ಸಾಗಿದ ದೃಶ್ಯ ಮಂಗಳವಾರ ಕಂಡುಬಂತು

ಆರ್. ಗುಂಡೂರಾವ್ ಪುತ್ಥಳಿ ಧ್ವಂಸಕ್ಕೆ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದ್ಯದ ಅಮಲಿನಲ್ಲಿ ಮಾಜಿ ಮುಖ್ಯಮಂತ್ರಿ ದಿವಂಗತ ಆರ್. ಗುಂಡೂರಾವ್ ಅವರ ಪುತ್ಥಳಿಯನ್ನು ಧ್ವಂಸಗೊಳಿಸಲು ಮುಂದಾಗಿದ್ದ ವ್ಯಕ್ತಿಯೊಬ್ಬನನ್ನು ಕಾಟನ್‌ಪೇಟೆ ಪೊಲೀಸರು ಬಂಧಿಸಿದ್ದಾರೆ.

ಬಳ್ಳಾರಿ ಜಿಲ್ಲೆಯ ವೀರಭದ್ರಪ್ಪ (35) ಬಂಧಿತ ಆರೋಪಿ.

ಶಾಂತಲಾ ವೃತ್ತದ ಬಳಿಯಿರುವ ಗುಂಡೂರಾವ್ ಪುತ್ಥಳಿಯನ್ನು ಏಪ್ರಿಲ್ 13ರ ಬೆಳಿಗ್ಗೆ 11.30ರ ಸುಮಾರಿಗೆ ಪಿಕಾಸಿಯಿಂದ ಧ್ವಂಸಗೊಳಿಸಲು ಮುಂದಾಗಿದ್ದ. ಸ್ಥಳೀಯರು ಕರ್ತವ್ಯದಲ್ಲಿದ್ದ ಹೊಯ್ಸಳ ಪೊಲೀಸ್ ಸಿಬ್ಬಂದಿಗೆ ಮಾಹಿತಿ ನೀಡಿದರು.

ಸ್ಥಳಕ್ಕೆ ಪೊಲೀಸರು ಬಂದರೂ ವ್ಯಕ್ತಿ ಹುಚ್ಚಾಟ ಮುಂದುವರಿಸಿದ್ದ. ಕಾಟನ್‌ಪೇಟೆ ಸಹಾಯಕ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ವೆಂಕಟಸ್ವಾಮಿ, ವ್ಯಕ್ತಿಯನ್ನು ಕೆಳಗೆ ಇಳಿಯುವಂತೆ ಸೂಚಿಸಿದರು. ಆದರೆ ಆತ ಪಿಕಾಸಿಯಿಂದ ಅವರ ಮೇಲೆ ಹಲ್ಲೆಗೆ ಯತ್ನಿಸಿದ್ದು, ಅವರ ಕೈ ಬೆರಳಿಗೆ ಗಾಯವಾಗಿದೆ. ಸಾರ್ವಜನಿಕರಿಗೆ ಮತ್ತು ಪೊಲೀಸ್ ಸಿಬ್ಬಂದಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ.

ಅಷ್ಟರಲ್ಲಿ ಸ್ಥಳೀಯರು ಜಮಾವಣೆಗೊಂಡು ಕಟ್ಟಿಗೆ, ಹಗ್ಗದ ಸಹಾಯದಿಂದ ಆರೋಪಿಯನ್ನು ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ.

ಪಿಕಾಸಿಯಿಂದ ನಡೆಸಿದ ಹಲ್ಲೆಯಿಂದ ಗಾಯಗೊಂಡಿದ್ದ ವೆಂಕಟಸ್ವಾಮಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಾರೆ. ನಂತರ ಠಾಣೆಗೆ ಬಂದು, ಕರ್ತವ್ಯಕ್ಕೆ ಅಡ್ಡಿ ಹಾಗೂ ಪುತ್ಥಳಿಗೆ ಹಾನಿಯುಂಟು ಮಾಡಲು ಯತ್ನ ಆರೋಪದ ಮೇಲೆ ದೂರು ನೀಡಿದ್ದಾರೆ. ದೂರಿನ್ವಯ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ನಿಂತಿದ್ದ ಕ್ಯಾಂಟರ್‌ಗೆ ಗುದ್ದಿದ ಬಸ್: ಇಬ್ಬರು ಸಾವು

ಶಿರಾ: ರಾಷ್ಟ್ರೀಯ ಹೆದ್ದಾರಿ- 48ರ ದ್ವಾರಾಳು ಬಳಿಯ ಸೇತುವೆ ಮೇಲೆ ಮಂಗಳವಾರ ಟೈರ್ ಬ್ಲಾಸ್ಟ್ ಆಗಿ ನಿಂತಿದ್ದ ಕ್ಯಾಂಟರ್‌ಗೆ ಕೆಎಸ್‌ಆರ್‌ಟಿಸಿ ಬಸ್ ಹಿಂದಿನಿಂದ ಬಂದು ಡಿಕ್ಕಿ ಹೊಡೆದ ಪರಿಣಾಮ ಬಸ್ ಚಾಲಕ ಸೇರಿ ಇಬ್ಬರು ಮೃತಪಟ್ಟಿದ್ದು, 33 ಮಂದಿ ಗಾಯಗೊಂಡಿದ್ದಾರೆ.

ಚಾಲಕ, ಶಿಡ್ಲಘಟ್ಟ ತಾಲ್ಲೂಕಿನ ಜರುಗನಹಳ್ಳಿ ದಿಬ್ಬನಹಳ್ಳಿಯ ಶ್ರೀಕಾಂತ್ (31), ಹಿರಿಯೂರಿನ ರೇಣುಕಮ್ಮ (59) ಮೃತರು. ಗಾಯಾಳುಗಳಿಗೆ ತಾಲ್ಲೂಕು ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ 23 ಮಂದಿಯನ್ನು ಜಿಲ್ಲಾ ಆಸ್ಪತ್ರೆಗೆ, ಮೂವರನ್ನು ಚಿತ್ರದುರ್ಗಕ್ಕೆ ಕಳುಹಿಸಿಕೊಡಲಾಗಿದೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

FACULTIES REQUIRED
SV PUBLIC SCHOOL KOTTIGEPALYA BANGALORE-91
SCIENCE (PCB) For 6TH TO 10TH STANDARD
MATHEMATICS For 8TH TO 10TH STANDARD
Contact: 8088891111 8904978005

ADITYA COLLEGE OF ENGINEERING & TECHNOLOGY
Approved by AICTE, New Delhi; Affiliated to VTU, Belagavi; Recognized by the Govt. of Karnataka
WE ARE HIRING
Join Our Academic Excellence Team
FACULTY POSITIONS
Professor / Associate Professor / Assistant Professor
Departments:
- Computer Science & Engineering (CSE)
- CSE (AI & ML) / AIML / CSE (AI) / Artificial Intelligence & Data Science (AI & DS)
- Data Science (DS)
- Electronics & Communication Engineering (ECE) / Electronics & Computer Science (ECS)
Qualifications: As per AICTE Norms
Laboratory Instructors / Foreman / Programmer (CSE / ECE)
Qualification: Diploma / B.E / B.Tech
Skills: Hands-on lab experience, technical expertise, Good Communication skills
Hostel Wardens (Male / Female)
Qualification: Any Degree
Skills: Student management, Hostel administration, Good Communication Skill
SALARY: As per AICTE / State Government / Institutional Norms
APPLY NOW
Email: principal@acetedu.net Last Date: 20 April 2026
Chairman Principal

POORNAPRAJNA EDUCATION CENTRE, INDIRANAGAR
(Promoted & Managed by Udupi Shree Adamaru Matha Education Council)
CA Site No. 48, New Thippasandra, HAL 3rd Stage, Bengaluru -75
CBSE Affiliated school, Affiliation No.831617
An English Medium School affiliated to CBSE Board invites applications for the following posts:
HINDI TEACHER
BA/ MA in Hindi with B.Ed/ M.Ed- Min 3 years experience
KANNADA TEACHER
BA/ MA in Kannada with B.Ed/ M.Ed- Min 3 years experience
SANSKRIT TEACHER
BA/ MA in Sanskrit with B.Ed/ M.Ed- Min 2 years experience
MATHS TEACHER
B.Sc/ M.Sc (Maths) with B.Ed/ M.Ed- Min 3 years of experience
SCIENCE TEACHER
B.Sc (CBZ)/ MSc with B.Ed/ M.Ed- Min 3 years experience
SCIENCE LAB DEMONSTRATOR
B.Sc/ M.Sc with Min 3 years experience
SUPW /CRAFT TEACHER
Degree/ Diploma with expertise in Craft, Glass Painting, Tailoring, Embroidery, Cookery, etc
PRIMARY ASSISTANT TEACHER
Any Degree with Min 1 year experience
PRE-PRIMARY MAIN TEACHER
Any Degree with D.Ed/ NTT
PRE-PRIMARY ASSISTANT TEACHER
PUC with D.Ed/ NTT (Preference to Graduates)
OFFICE EXECUTIVE
Any Degree with Computer Knowledge
Apply immediately to Hon. Secretary
Email: contact.indiranagar@ppec.edu.in
last date 22nd April 2026, Wednesday

SSB INTERNATIONAL SCHOOL
Indiranagar, Bangalore - 38
REQUIRES
TRAINED LADY TEACHERS for ICSE Primary School (Class I - V)
SANSKRIT TEACHERS with M.A in Sanskrit
HISTORY & CIVICS TEACHERS for High School Section
TRAINED LADY MONTESSORI TEACHERS with Good Experience
ALL APPLICANTS SHOULD POSSESS RELEVANT QUALIFICATION
GOOD KNOWLEDGE & FLUENCY IN ENGLISH
Apply immediately ssbinternationalschool@gmail.com
The Director, SSB Education Society, No.5/A, HAL II-Stage, Indiranagar, B'lore-38.
Ph: 080 25280104

SSB ENGLISH HIGH SCHOOL
Indiranagar, Bangalore - 38
REQUIRES
HEAD MISTRESS with 10 yrs+ Exp.
LADY TGT TEACHERS for Primary Section
SOCIAL STUDIES TEACHERS for High School Section
TRAINED KINDERGARTEN TEACHERS with Good Experience
ALL APPLICANTS SHOULD POSSESS RELEVANT QUALIFICATION
GOOD KNOWLEDGE & FLUENCY IN ENGLISH
Apply immediately ssbinternationalschool@gmail.com
The Director, SSB Education Society, No.5/A, HAL II-Stage, Indiranagar, B'lore-38.
Ph: 080 25280104

HAVNUR COLLEGE OF LAW
2nd Main Road, Hoysala Nagar, Ramamurthy Nagar, Bengaluru, Karnataka-560016
(Approved by BCI & Affiliated KSLU)
WE ARE HIRING
PRINCIPAL
ASSISTANT PROFESSORS
LIBRARIAN
COMPUTER OPERATOR
- Qualification: As per BCI / UGC Norms
- Experience: Preferred in the relevant field
Qualified and Experienced candidates send your resume to Mail ID: havnurcollege@yahoo.com
Call: 7204079899

WANTED TEACHERS Nursery, Primary, High School Classes all Subjects. St. Meera's School Bangalore-08 Ph.9880528475

NEW HOLY SAINT ENGLISH SCHOOL RPC Layout Invites Applications for the Teachers: 1. Primary & High School All Subjects & Computer Science, 2. NTT/ Montessori Trained Teachers, 3. Computer Operator, 4.Receptionist Freshers may also apply. Contact details: 8722423478/ 7892461960

SRS PRAJNA VIDYA SCHOOL (KA 409)
• Coordinator
• Educators for
English | Physics | Chemistry | Biology | Mathematics | Computer Science | Home Science | Physical Education
WE'RE HIRING for PUC-ISC
JOIN US!
WHO CAN APPLY?
Minimum 2 years of experience in teaching PUC-ISC classes. Candidates with NEET- CET- JEE expertise will be given preference.
Remuneration: Best as per corpoate standards-negotiable for deserving candidates
7483926303 9448301389 srsprajna2016@gmail.com
Shankar Mutt Road, K.R. Puram, Hassan, Karnataka - 573201

ANTONY SCHOOL Mathikere Bangalore Wanted Teachers BSc B.Ed, BA B.Ed (Females Only) Contact 8073655343/ 9900705969

SREE VENKATESHWARA ENGLISH SCHOOL #1, V.S Layout Krishnarajapura Bengaluru-560036 WANTED TEACHERS Primary Teachers-B.A B.Ed (Social & English) Hindi Teacher Attractive salary Attend with Original certificate. Contact: 080-25611873, 7411135627. Email- svs.krp.bangalore@gmail.com

VARSHA TEACHING SOLUTIONS, KUNIGAL Phone:7619199441/ www.varshateachingsolutions.com Requires dedicated & Passionate Professional TEACHERS: NURSERY/ PRIMARY/ MIDDLE, HIGH SCHOOL(ICSE/ CBSE/ STATE)Send updated resume: varshajobs2026@gmail.com

GURUKULA INTERNATIONAL SCHOOL, Requires English, Science, Kannada and Computer Teachers for Primary and for High School Maths and Kannada Teacher. Near Magadi Road Metro Station, Bangalore-23. 7829338292

ADITYA GROUP OF INSTITUTIONS
Yelahanka, Bengaluru
Hiring for the Following Positions
Site Engineers:
Qualification: BE/ B. Tech /Diploma (Civil)
Experience: 2–5 years
Skills: Site execution, Drawings, Estimation, BOQ, Coordination
HR Manager:
Qualification: MBA/PGDM (HR)
Experience: Minimum 5 yrs. (preferably in education sector)
Skills: Recruitment, Payroll & statutory compliance
Tele Callers
Qualification: Any Graduate
Experience: Fresher/Experienced
Skills: Communication, Basic Computer knowledge, Follow-ups
Lab Attenders, Cook, Drivers etc.
Apply with resume & photo: hrdept.aditya@gmail.com

ADITYA GROUP OF INSTITUTIONS
Yelahanka, Bengaluru
ADITYA BANGALORE INSTITUTE OF PHARMACY EDUCATION AND RESEARCH
NAAC Accredited, Approved by PCI, RGUHS & GOK
Invites applications for the following posts
Dept. of Quality Assurance:
Professor - 1 | Assoc. Prof. - 1
Dept. of Pharmaceutical Analysis:
Professor 1 | Assoc. Prof. 1
Dept. of Industrial Pharmacy, Pharmaceutics, Pharmaceutical Chemistry, Regulatory Affairs:
Assoc. Prof.: 1 each.
Eligibility: M. Pharm, preference for candidate with Ph.D having requisite teaching experience as per PCI norms
Interested candidates may send their resumes with photograph to: hrdept.aditya@gmail.com

WANTED LECTURERS in English, Economics, Biology, Physics, Kannada for Vidyavana PU College, Thirumalashettyhalli, Whitefield, Bengaluru. 9663389388, E-mail: vidyavanahr@gmail.com

MODERN PUBLIC ENGLISH SCHOOL, RT.Nagar Bangalore-32, TEACHERS FOR MATHS, ENGLISH,HINDI, KINDERGARTEN and LIBRARIAN. CV:9739981605

HARWARD PRE UNIVERSITY COLLEGE Dasanapura, Tumkur Road, Bengaluru North 562162, Required PRINCIPAL (Science Background) also TEACHERS REQUIRED for Biology, Chemistry, English, Hindi and Kannada, Computer Operator, PRO. email: infoharwardints@gmail.com Contact: 9880112833, 9945230285

WANTED BE / Diploma in Electrical, Electronics, Mechanical, Computer Science, English, Microbiology to take part-time/full-time Diploma Day Evening & Paramedical classes. Contact personally with resume, original documents. Nadgir Institute Near Modi Hospital, Rajajinagar, Bangalore – 560010. Ph: 23387333, 8867065525, 9731721446.

WANTED TEACHERS ICSE Curriculum ENGLISH BA MA, MATHS, CHEMISTRY, ARTS & PE Contact: OXFORD PUBLIC SCHOOL. Srikantapura Anchepalya Near Jindal Public School, Tumkur Road Bangalore. Mobile No: 9001111030, 9620075574

WANTED ENGLISH MEDIUM TRAINED B.Ed/ D.Ed LADY TEACHERS for Primary and High School to teach Maths & Science/ English/ Hindi/ Computer Faculty/ NTT Trained. Salary with PF and ESI Facilities. Contact in Person- 10 am- 3 pm on all working days - Secretary, Deccan Educational Society®, Near Sampige Theater, Malleswaram, Mob: 9353382686

General

URGENTLY REQUIRED TELE CALLER & FIELD EXECUTIVE for Banking Collection Recovery Process, Experience/Fresher, Salary+Attractive Incentives. Call: 7892141632, 8660268963, 080-41510120

ADVERTISING COMPANY Requires BUSINESS EXECUTIVES [Male], TELECALLERS, CUSTOMER CARE EXECUTIVES [Female] Graduates Basaveswarnagar Bangalore 9845411113

JUPITER HOSPITALS Nelamangala Required Front Office Executives & Admin. Computer, Good English. Contact: 9845024211/ 9341220446

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE SELLING

Flat

Sahakarnagar

NEW FULL APARTMENT BUILDING SALE 7.5 CR. 13,000 Sqft
9 Apt's (2 & 4 BHK's). Built-up on 2400 sft site, Ideal for Rental Income, Service Apartments Corporate Guest House. 1.5 km from. Hebbal Flyover near SAHAKARNAGAR. OWNER- 98800-53505

PERSONAL

Change of Name

CHANGE OF NAME
I, ANNAPURNA MUNAGA, residing at Flat No. A-304,Comfort Heights Apartments, Kuvempunagar, Bikasapura, Doddakallasandra, Bengaluru- 560062, have changed my name to ANNAPURNA RACHUMALLU vide affidavit dated 13-04-2026 sworn before notary K.V. Mani, Bengaluru. Henceforth I shall be called as ANNAPURNA RACHUMALLU only.

I SHANKAR SA GL Age-47, R/A 44, 3rdCross, East LinkRoad, Malleshwaram, Bengaluru. Have Changed My name from SHANKAR SA GL To SHANKAR G L vide Affidavit before Notary MS Satish Bengaluru.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

DH DECCAN HERALD Classifieds
More value, more impact
EDUCATION
Book your Educational Related Ads in DH All Karnataka + Prajavani Bengaluru City
www.dhclassifieds.com
BOOK NOW
ಪ್ರಜಾವಾಣಿ
For more details contact:
+91 9731810277 | +91 9886213331
+91 9845114560 | +91 9900428036
080- 45557163 / 164
*Conditions apply

'ಬಿ'ನಿಂದ 'ಎ' ಖಾತಾಗೆ ತಾಂತ್ರಿಕ ತಡೆ

ನಗರ ಪಾಲಿಕೆಗಳ ಅಧಿಕಾರಿಗಳಿಂದ ಪೂರ್ಣಗೊಳ್ಳದ ಕಾರ್ಯ

• ಆರ್.ಮಂಜುನಾಥ್

ಬೆಂಗಳೂರು: 'ಬಿ' ಖಾತಾದಿಂದ 'ಎ' ಖಾತೆಗೆ ಪರಿವರ್ತನೆ ಮಾಡುವ ಯೋಜನೆ ಜಾರಿಗೆ ಬಂದು ಐದು ತಿಂಗಳಾದರೂ, ನಿರೀಕ್ಷಿತ ಮಟ್ಟದಲ್ಲಿ ಅರ್ಜಿಗಳು ಸಲ್ಲಿಕೆಯಾಗಿಲ್ಲ. ಅಲ್ಲದೆ, ಅರ್ಜಿ ಸಲ್ಲಿಸಿದವರಿಗೂ 'ಎ' ಖಾತಾ ದೊರಕುತ್ತಿಲ್ಲ.

2025ರ ನವೆಂಬರ್ 1ರಂದು ಯೋಜನೆ ಆರಂಭವಾಗಿದ್ದು ಆಗಿನಿಂದಲೂ ಸಮಸ್ಯೆಗಳು ಎದುರಾಗುತ್ತಲೇ ಇವೆ. ಪ್ರಾರಂಭಿಕ ದಿನಗಳಲ್ಲಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವುದೇ ಕಷ್ಟವಾಗಿತ್ತು. ಅದಾದ ಮೇಲೆ ಅರ್ಜಿ ಸಲ್ಲಿಸಿದರೂ ಅದು ಮುಂದಿನ ಹಂತಕ್ಕೆ ಹೋಗುತ್ತಿರಲಿಲ್ಲ. ಈ ಸಮಸ್ಯೆಗಳು ಮುಂದುವರಿದಿದ್ದು, ಇದೀಗ ಎಲ್ಲ ಮಂಜೂರಾತಿ ಸಿಕ್ಕರೂ ಕೊನೆಗೆ ನಾಗರಿಕರು ಶುಲ್ಕ ಪಾವತಿಸುವ ಲಿಂಕ್ ಕೆಲಸ ಮಾಡುತ್ತಿಲ್ಲ.

ಬಿ– ಖಾತಾ ಹೊಂದಿರುವ ಮಾಲೀಕರು, ಏಕ ನಿವೇಶನ ಯೋಜನೆಯಂತೆ ಅದಕ್ಕೆ ನಕ್ಷೆ ಸಿದ್ಧಪಡಿಸಿ, ಅರ್ಜಿ ಸಲ್ಲಿಸಬೇಕು. ಕಂದಾಯ ಇಲಾಖೆ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ವರದಿ ಸಲ್ಲಿಸುತ್ತಾರೆ. ಕಂದಾಯ ಇಲಾಖೆಯ ಕಿರಿಯ ಅಧಿಕಾರಿಗಳಿಂದ ಹಿಡಿದು, ನಗರ ಪಾಲಿಕೆಗಳ ಜಂಟಿ ಆಯುಕ್ತರು ಪರಿಶೀಲನೆ ನಡೆಸಿ, ಅರ್ಜಿಗೆ ಅನುಮೋದನೆ ನೀಡಬೇಕು. ಈ ಎಲ್ಲ ಪ್ರಕ್ರಿಯೆಯನ್ನು ಕನಿಷ್ಠ 45 ರಿಂದ 60 ದಿನಗಳಲ್ಲಿ ಪೂರ್ಣಗೊಳಿಸಲಾಗುತ್ತದೆ ಎಂದು ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಅಧಿಕಾರಿಗಳು ಹೇಳಿದ್ದರು. ಆದರೆ, 2025ರ ಡಿಸೆಂಬರ್‌ನಲ್ಲಿ ಸಲ್ಲಿಸಿದ್ದ ಅರ್ಜಿ ಇನ್ನೂ ಪೂರ್ಣಗೊಂಡಿಲ್ಲ.

ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಆಸ್ತಿ ಮಾಲೀಕರೊಬ್ಬರು (ಇಪಿಐಡಿ- 3582480121) ಏಕ ನಿವೇಶನ- ಖಾತಾಗಾಗಿ 2025ರ ಡಿಸೆಂಬರ್‌ನಲ್ಲಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ್ದರು. ಆದಾದ ಎರಡು ತಿಂಗಳು ಅರ್ಜಿ ಮುಂದಕ್ಕೆ ಹೋಗಿಲ್ಲ. 2026ರ ಮಾರ್ಚ್ 6ರಂದು ಕಂದಾಯ ನಿರೀಕ್ಷಕರು ಅರ್ಜಿ ಪರಿಶೀಲಿಸಿದ್ದಾರೆ. ಮಾರ್ಚ್ 25ರಂದು 'ಕ್ಲಿಯರ್' ಆಗಿದೆ. 26ರಂದು ಜಂಟಿ ಆಯುಕ್ತರು ಅನುಮೋದನೆ ನೀಡಿದ್ದಾರೆ. ಇದಾದ ನಂತರ ಮಾಲೀಕರು ಅಗತ್ಯ ಶುಲ್ಕವನ್ನು ಪಾವತಿಸಬೇಕು. ಈ ಶುಲ್ಕ ಪಾವತಿಸುವ ಲಿಂಕ್ ತೆರೆದುಕೊಳ್ಳುತ್ತಿಲ್ಲ. 'ತಾಂತ್ರಿಕ ಸಮಸ್ಯೆ ಇದೆ, ಸಹಾಯವಾಣಿಯನ್ನು ಸಂಪರ್ಕಿಸಿ' ಎಂಬ ಸಂದೇಶ ತೋರುತ್ತಿದೆ. ಸಹಾಯವಾಣಿಯನ್ನು ಸಂಪರ್ಕಿಸಿದಾಗ, 'ಬಿ ನಿಂದ 'ಎ' ಖಾತಾ ಪರಿವರ್ತನೆಯಲ್ಲಿ ತಾಂತ್ರಿಕ ಸಮಸ್ಯೆ ಇದೆ. ಕೆಲವು ದಿನಗಳವರೆಗೆ ಕಾಯಿರಿ. ತಾಂತ್ರಿಕ ಸಮಸ್ಯೆ ಪರಿಹಾರವಾದ ಮೇಲೆ ಶುಲ್ಕ ಪಾವತಿಸಿ' ಎಂಬ ಮಾಹಿತಿ ನೀಡಿದ್ದಾರೆ.

'ಇದು ಒಬ್ಬರ ಸಮಸ್ಯೆ ಅಲ್ಲ. ಹೊಸದಾಗಿ ಎ ಖಾತೆಗೆ ಅರ್ಜಿ ಸಲ್ಲಿಸಿದ ಬಹುತೇಕರ ಸಮಸ್ಯೆ ಇದೇ ರೀತಿ ಇದೆ. ಸಾಕಷ್ಟು ದೂರುಗಳು ಬರುತ್ತಿವೆ. ಆದರೆ, ತಾಂತ್ರಿಕ ಸಮಸ್ಯೆ ಇರುವುದರಿಂದ ನಾವು ಯಾವುದೇ ರೀತಿ ಸಹಾಯ ಮಾಡಲು ಸಾಧ್ಯವಾಗುತ್ತಿಲ್ಲ. ಸಮಸ್ಯೆ ಪರಿಹರಿಸಲು ಐ.ಟಿ ವಿಭಾಗ ಕಾರ್ಯನಿರ್ವಹಿಸುತ್ತಿದೆ' ಎಂದು ನಗರ ಪಾಲಿಕೆ ಅಧಿಕಾರಿಗಳು ತಿಳಿಸಿದರು.

ಜಂಟಿ ಆಯುಕ್ತರು ಹಾಗೂ ಇತರೆ ಅಧಿಕಾರಿಗಳು ತಮ್ಮ ಜವಾಬ್ದಾರಿಗಳನ್ನು ಪೂರ್ಣಗೊಳಿಸದಿರುವುದರಿಂದ ಖಾತಾ ವಿತರಣೆಯಲ್ಲಿ ವಿಳಂಬವಾಗುತ್ತಿದೆ ಎನ್ನಲಾಗಿದೆ.

'ಬಿ' ಖಾತಾದಿಂದ 'ಎ' ಖಾತೆಗೆ ಪರಿವರ್ತನೆಗೆ, 30x40 ಅಡಿ ನಿವೇಶನಕ್ಕೆ ಸುಮಾರು ₹3.5 ಲಕ್ಷ ಶುಲ್ಕವನ್ನಾಗಿ ಮಾಲೀಕರು ಪಾವತಿಸಬೇಕಾಗುತ್ತದೆ. ಇದರ ಆಧಾರದಲ್ಲೇ ನಗರ ಪಾಲಿಕೆಗಳು ನೂರಾರು ಕೋಟಿಯನ್ನು ನಿರೀಕ್ಷಿಸಿವೆ. ಆದರೆ, ಮೂಲದಲ್ಲೇ ಸಮಸ್ಯೆ ಇದ್ದು, ಐದು ತಿಂಗಳಲ್ಲಿ ಈ ಸಮಸ್ಯೆ ಪರಿಹರಿಸದಿರುವುದರಿಂದ ಹೊಸ ಅರ್ಜಿಗಳ ಬರುವ ಸಂಖ್ಯೆಯೂ ಕಡಿಮೆಯಾಗಿದೆ ಎನ್ನಲಾಗಿದೆ. ಸುಮಾರು 12 ಲಕ್ಷ ಆಸ್ತಿಗಳು ಈ ಯೋಜನೆ ವ್ಯಾಪ್ತಿಗೆ ಬರಲಿವೆ ಎಂದು ಅಂದಾಜಿಸಲಾಗಿದ್ದರೂ ಈವರೆಗೆ, ಐದು ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಅರ್ಜಿಗಳ ಸಂಖ್ಯೆ 10 ಸಾವಿರ ಮೀರಿಲ್ಲ.

ಮುಖ್ಯಾಂಶಗಳು

- '100 ದಿನಗಳ ಅಭಿಯಾನ' ಎಂಬ ಘೋಷಣೆಯೊಂದಿಗೆ ಆರಂಭ
- ಐದು ತಿಂಗಳಾದರೂ ನಿರೀಕ್ಷಿತ ಸ್ಪಂದನ ಇಲ್ಲ
- ಅಧಿಕಾರಿಗಳಿಂದ ವಿಳಂಬ ಧೋರಣೆ

ಜಂಟಿ ಆಯುಕ್ತರು ಆಸ್ತಿಯ ಮಾರ್ಗಸೂಚಿ ದರ ನಮೂದಿಸಬೇಕು. ಇಲ್ಲದಿದ್ದರೆ, ಶುಲ್ಕ ಪಾವತಿ ಸಾಧ್ಯವಾಗುವುದಿಲ್ಲ. ಈ ಬಗ್ಗೆ ಸೂಚನೆಗಳನ್ನು ನೀಡಲಾಗುವುದು

ಮುನೀಶ್ ಮೌದ್ಗಿಲ್, ಕಂದಾಯ ವಿಭಾಗದ ವಿಶೇಷ ಆಯುಕ್ತ, ಜಿಬಿಎ

ಪಾಲಿಕೆಗಳಿಂದ 1,693 ಕೋಟಿ ನಿರೀಕ್ಷೆ

ನಿವೇಶನಗಳನ್ನು 'ಬಿ' ಖಾತಾದಿಂದ 'ಎ' ಖಾತಾಗೆ ಪರಿವರ್ತಿಸುವುದರಿಂದ ₹1,693 ಕೋಟಿ ಆದಾಯ ನಿರೀಕ್ಷಿಸಿ, ಐದು ನಗರ ಪಾಲಿಕೆಗಳು 2026–27ನೇ ಸಾಲಿನ ಬಜೆಟ್ ಮಂಡಿಸಿವೆ. ಆದರೆ, ಈ ನಿರೀಕ್ಷೆಗೆ ತಕ್ಕಂತೆ ನಾಗರಿಕರು ಸ್ಪಂದಿಸಿಲ್ಲ. ಅಲ್ಲದೆ, ಅರ್ಜಿ ಸಲ್ಲಿಸಿದವರಿಗೂ ಮಂಜೂರಾತಿ ಸಿಕ್ಕಿಲ್ಲ.

ಪೂರ್ವ ಹಾಗೂ ದಕ್ಷಿಣ ನಗರ ಪಾಲಿಕೆಗಳು ತಲಾ ₹225 ಕೋಟಿಯನ್ನು 'ಬಿ' ಖಾತಾದಿಂದ 'ಎ' ಖಾತಾ ಪ್ರಕ್ರಿಯೆ ಶುಲ್ಕದಿಂದ ಆದಾಯವಾಗಿ ಬರುತ್ತದೆ ಎಂದು ನಿರೀಕ್ಷಿಸಿವೆ. ಪಶ್ಚಿಮ ನಗರ ಪಾಲಿಕೆ ₹563 ಕೋಟಿ ಹಾಗೂ ಉತ್ತರ ನಗರ ಪಾಲಿಕೆ ₹680 ಕೋಟಿಯನ್ನು ಈ ಬಾಬ್ತಿನಲ್ಲಿ ನಿರೀಕ್ಷಿಸಿ ಬೃಹತ್ ಬಜೆಟ್ ಮಂಡಿಸಿವೆ.

ಸುಪ್ರೀಂಕೋರ್ಟ್‌ಗೆ ಪ್ರಮಾಣಪತ್ರ

ಪಾಲಿಕೆ ಚುನಾವಣೆ

ಬೆಂಗಳೂರು: ಐದು ನಗರ ಪಾಲಿಕೆಗಳ ಚುನಾವಣೆಗೆ ಸಂಬಂಧಿಸಿದಂತೆ ವಾರ್ಡ್‌ವಾರು ಮೀಸಲಾತಿಯನ್ನು ಅಂತಿಮಗೊಳಿಸಿ ಅಧಿಸೂಚಿಸಲಾಗಿದೆ ಎಂದು ರಾಜ್ಯ ಸರ್ಕಾರ, ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿದೆ.

'ಆಡಳಿತಾತ್ಮಕ ಕಾರಣಗಳಿಂದಾಗಿ, ವಾರ್ಡ್‌ವಾರು ಮೀಸಲಾತಿಯ ಅಂತಿಮ ಅಧಿಸೂಚನೆ ಹೊರಡಿಸುವುದರಲ್ಲಿ 15 ದಿನ ವಿಳಂಬವಾಗಿದೆ' ಎಂದು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್ ಪ್ರಮಾಣಪತ್ರದಲ್ಲಿ ತಿಳಿಸಿದ್ದಾರೆ.

'ಮತದಾರರ ಅಂತಿಮ ಪಟ್ಟಿಯನ್ನು ಪ್ರಕಟಿಸಲು ಅಗತ್ಯವಾದ ಕ್ರಮ ಕೈಗೊಳ್ಳಲು ರಾಜ್ಯ ಚುನಾವಣಾ ಆಯೋಗಕ್ಕೆ ವಾರ್ಡ್‌ವಾರು ಮೀಸಲಾತಿಯ ಅಧಿಸೂಚನೆ, ರಾಜ್ಯ ಚುನಾವಣಾ ಆಯೋಗ ಮಾರ್ಚ್ 16ರೊಳಗೆ ವಾರ್ಡ್‌ವಾರು ಮತದಾರರ ಪಟ್ಟಿ ಪ್ರಕಟಿಸಬೇಕಾಗಿತ್ತು' ಎಂದು ಪ್ರಮಾಣ ಪತ್ರದಲ್ಲಿ ತಿಳಿಸಲಾಗಿದೆ.

'ಚುನಾವಣೆ ಪ್ರಕ್ರಿಯೆಗೆ ತಡೆಯಾಗದಂತೆ ವಾರ್ಡ್ ಮೀಸಲಾತಿ ಸೇರಿದಂತೆ ಎಲ್ಲ ಜವಾಬ್ದಾರಿಯನ್ನು ರಾಜ್ಯ ಸರ್ಕಾರ ಪೂರ್ಣಗೊಳಿಸಿದೆ' ಎಂದೂ ಹೇಳಲಾಗಿದೆ.

ರಾಜ್ಯ ಚುನಾವಣಾ ಆಯೋಗ, ಮತದಾರರ ಕರಡು ಪಟ್ಟಿಯನ್ನು, ಮತದಾರರ ಪಟ್ಟಿಯನ್ನು, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯ ಐದು ನಗರ ಪಾಲಿಕೆಗಳ ವಾರ್ಡ್‌ವಾರು ಮತದಾರರ ಪರಿಷ್ಕೃತ ಕರಡು ಪಟ್ಟಿಗೆ ದೂರು, ಆಕ್ಷೇಪಣೆ ಸಲ್ಲಿಸಲು ಅವಧಿಯನ್ನು ಮಾರ್ಚ್ 30ರವರೆಗೆ ವಿಸ್ತರಿಸಿದೆ.

ಮಾರ್ಚ್ 9ರಂದು ಮತದಾರರ ಪರಿಷ್ಕೃತ ಕರಡು ಪಟ್ಟಿಯನ್ನು ಪ್ರಕಟಿಸಿ, ಮಾರ್ಚ್ 30ರವರೆಗೆ ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡಿತ್ತು. ಏಪ್ರಿಲ್ 16ರಂದು ಮತದಾರರ ಅಂತಿಮ ಪಟ್ಟಿ ಪ್ರಕಟಿಸುವ ವೇಳಾಪಟ್ಟಿ ಇದೆ.

ಸುಪ್ರೀಂ ಕೋರ್ಟ್ ಆದೇಶದಂತೆ ಜೂನ್ ಅಂತ್ಯದೊಳಗೆ ಪಾಲಿಕೆಗಳ ಚುನಾವಣೆ ಪ್ರಕ್ರಿಯೆ ಮುಗಿಯಬೇಕಿದೆ. ಮತದಾರರ ಅಂತಿಮ ಪಟ್ಟಿ ಪ್ರಕಟಿಸಿದ ಸಮಯದಿಂದಲೇ ವಾರ್ಡ್ ಮೀಸಲಾತಿಯೂ ಲಭ್ಯವಿದ್ದರೆ, ಅಂದಿನಿಂದ ಆರು ವಾರದಲ್ಲಿ ಚುನಾವಣೆ ಪ್ರಕ್ರಿಯೆ ಮುಗಿಸಬಹುದು ಎಂದು ರಾಜ್ಯ ಚುನಾವಣಾ ಆಯೋಗದ ಅಧಿಕಾರಿಗಳು ಈ ಹಿಂದೆ ತಿಳಿಸಿದ್ದರು.

ನಗರಾಭಿವೃದ್ಧಿ ಇಲಾಖೆ ಪ್ರಮಾಣ ಪತ್ರ ಸಲ್ಲಿಸಿರುವುದರಿಂದ, ರಾಜ್ಯ ಚುನಾವಣಾ ಆಯೋಗವು ಸುಪ್ರೀಂ ಕೋರ್ಟ್‌ಗೆ ಪ್ರಮಾಣ ಪತ್ರ ಸಲ್ಲಿಸಬೇಕು ಎಂದು ಆಯೋಗದ ಅಧಿಕಾರಿಗಳು ತಿಳಿಸಿದರು. ಈ ಬಗ್ಗೆ ಪ್ರತಿಕ್ರಿಯೆಗೆ ರಾಜ್ಯ ಚುನಾವಣಾ ಆಯೋಗದ ಆಯುಕ್ತ ಜಿ.ಎಸ್.ಸಂಗ್ರೇಶಿ ಲಭ್ಯವಾಗಲಿಲ್ಲ.

'ಟೆರೆಯಾ ಬೈ ವಂಡರ್‌ಲಾ' ಅನಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹೊರವಲಯದಲ್ಲಿರುವ ವಂಡರ್‌ಲಾ ಅಮ್ಯೂಸ್‌ಮೆಂಟ್ ಪಾರ್ಕ್ ಪಕ್ಕದಲ್ಲೇ 'ಟೆರೆಯಾ ಬೈ ವಂಡರ್‌ಲಾ' ಎಂಬ ಹೊಸ ರೆಸಾರ್ಟ್ ಅನಾವರಣಗೊಂಡಿದೆ.

ವಂಡರ್‌ಲಾ ಹಾಲಿಡೇಸ್ ಲಿಮಿಟೆಡ್ ತನ್ನ ಹಳೆಯ ವಂಡರ್‌ಲಾ ರೆಸಾರ್ಟ್ ಅನ್ನು ಸಂಪೂರ್ಣವಾಗಿ ನವೀಕರಿಸಿ, 'ಟೆರೆಯಾ ಬೈ ವಂಡರ್‌ಲಾ'ವನ್ನು ನಿರ್ಮಿಸಿದ್ದು, ಪ್ರಕೃತಿ ಮತ್ತು ಭೂಮಿಯಿಂದ ಪ್ರೇರಿತವಾದ ವಿನ್ಯಾಸವನ್ನು ಹೊಂದಿರುವ ಅತ್ಯಾಧುನಿಕ ಅರ್ಬನ್ ರೆಸಾರ್ಟ್ ಇದಾಗಿದೆ.

ಬೊಟಿಕ್ ಚಿಕ್, ಅರ್ಬನ್ ಪಾಪ್, ಮತ್ತು ಕೋಸ್ಟಲ್ ಮಾಡರ್ನ್ ಎಂಬ ಮೂರು ವಿಭಿನ್ನ ವಿನ್ಯಾಸಗಳಲ್ಲಿ 84 ಕೊಠಡಿಗಳನ್ನು ಮರುವಿನ್ಯಾಸಗೊಳಿಸಲಾಗಿದೆ. ನವೀಕೃತಗೊಂಡ ಮಲ್ಟಿ-ಕ್ಯುಸಿನ್ ರೆಸ್ಟೋರೆಂಟ್ 'ವುಡ್', ಮೆಡಿಟರೇನಿಯನ್ ಶೈಲಿಯ ಕಮಾನುಗಳು, ಲೈವ್ ಕಿಚನ್ ಕೌಂಟರ್, ಯುರೋಪಿಯನ್ ಪೀಠೋಪಕರಣಗಳು ಮತ್ತು ಬಿದಿರಿನ ಮೂಲಕ ಆಕರ್ಷಕ ಬೆಳಕಿನ ವ್ಯವಸ್ಥೆಯನ್ನು ಹೊಂದಿದೆ.

ಮದುವೆ ಸಮಾರಂಭಗಳು, ಕಾರ್ಪೊರೇಟ್ ಕಾರ್ಯಕ್ರಮಗಳು, ಬೃಹತ್ ಸಮಾವೇಶಗಳು ಮತ್ತು ಸಾಮಾಜಿಕ ಸಮಾರಂಭಗಳಿಗಾಗಿ ಬಹುಉಪಯೋಗಿ ಬ್ಯಾಂಕ್ವೆಟ್ ಸಭಾಂಗಣವಿದೆ. ಇದಕ್ಕೆ ಅಗತ್ಯವಿರುವ ಮೂಲಸೌಕರ್ಯಗಳ ವ್ಯವಸ್ಥೆ ಮಾಡಲಾಗಿದೆ.

ಈ ಸಂದರ್ಭದಲ್ಲಿ ಮಾತನಾಡಿದ ವಂಡರ್‌ಲಾ ಹಾಲಿಡೇಸ್ ಲಿಮಿಟೆಡ್‌ನ ಕಾರ್ಯನಿರ್ವಾಹಕ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಅರುಣ್ ಕೆ. ಚಿಟ್ಟಿಲಪ್ಪಿಳ್ಳಿ, 'ಒಂದು ಪರಿಪೂರ್ಣ ಸಮಗ್ರ ಮನರಂಜನಾ ತಾಣ ಹೇಗಿರುತ್ತದೆ ಎಂಬುದಕ್ಕೆ ಇದು ಉದಾಹರಣೆ. ಭಾರತದಲ್ಲಿ ಇಂತಹ ಹೊಸ ಮಾದರಿಯನ್ನು ಪರಿಚಯಿಸುವಲ್ಲಿ ವಂಡರ್‌ಲಾ ಮುಂಚೂಣಿಯಲ್ಲಿರುವುದಕ್ಕೆ ನಮಗೆ ಹೆಮ್ಮೆಯಿದೆ' ಎಂದು ಹೇಳಿದರು.

ಚಿತ್ರಾವಳಿ

ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್ ನಗರದ ಚಾಮರಾಜಪೇಟೆಯ ಕೋಟೆ ಪ್ರೌಢಶಾಲೆ ಆವರಣದಲ್ಲಿ ಹಮ್ಮಿಕೊಂಡಿರುವ 88ನೇ ಶ್ರೀರಾಮನವಮಿ ಸಂಗೀತೋತ್ಸವದಲ್ಲಿ ಗಾಯಕ ವೆಂಕಟೇಶ್ ಕುಮಾರ್, ಹಾರ್ಮೋನಿಯಂ ವಾದಕ ಸತೀಶ್ ಕೊಲ್ಲಿ ಹಾಗೂ ತಬಲಾ ವಾದಕ ಕೇಶವ ಜೋಶಿ ಅವರು ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಕಛೇರಿಯನ್ನು ಮಂಗಳವಾರ ಪ್ರಸ್ತುತಪಡಿಸಿದರು –ಪ್ರಜಾವಾಣಿ ಚಿತ್ರ

ಅಂಜನಾ ನಗರದಲ್ಲಿರುವ ಸ್ಫೂರ್ತಿಧಾಮ ಆಯೋಜಿಸಿದ್ದ ಅಂಬೇಡ್ಕರ್ ಹಬ್ಬ ಕಾರ್ಯಕ್ರಮದಲ್ಲಿ ತಮಿಳುನಾಡಿನ ಹೋರಾಟಗಾರ ಕೆ.ವೀರಮಣಿ ಅವರಿಗೆ ಬೋಧಿವೃಕ್ಷ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಲೇಖಕರಾದ ಇಂದೂಧರ ಹೊನ್ನಾಪುರ, ಕುಂ.ವೀರಭದ್ರಪ್ಪ, ಸ್ಫೂರ್ತಿಧಾಮದ ಅಧ್ಯಕ್ಷ ಎಸ್.ಮರಿಸ್ವಾಮಿ, ನಟ ಅಶೋಕ್ ಉಪಸ್ಥಿತರಿದ್ದರು

ಬಿ.ಆರ್. ಅಂಬೇಡ್ಕರ್ ಅವರ 135ನೇ ಜನ್ಮದಿನಾಚರಣೆಯ ಪ್ರಯುಕ್ತ ಪಂಚಾಮೃತ ಸುಗಮ ಸಂಗೀತ ಅಕಾಡೆಮಿಯು ಶಂಕರಪುರದಲ್ಲಿರುವ ಶಂಕರ ಕ್ಯಾನ್ಸರ್ ಆಸ್ಪತ್ರೆಯಲ್ಲಿ ರಕ್ತದಾನ ಶಿಬಿರವನ್ನು ಮಂಗಳವಾರ ನಡೆಸಿತು

ಪ್ರೆಸಿಡೆನ್ಸಿ ವಿ.ವಿಯಲ್ಲಿ ಸಾಂಸ್ಕೃತಿಕ ಉತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರೆಸಿಡೆನ್ಸಿ ವಿಶ್ವವಿದ್ಯಾಲಯದಲ್ಲಿ ಎರಡು ದಿನ ನಡೆದ ಸಾಂಸ್ಕೃತಿಕ ಉತ್ಸವದಲ್ಲಿ 30 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಬೆಂಗಳೂರು ಮತ್ತು ರಾಜ್ಯದಾದ್ಯಂತ 100ಕ್ಕೂ ಹೆಚ್ಚು ಕಾಲೇಜುಗಳಿಂದ ನಾಲ್ಕು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು, ಸಂಗೀತ, ನೃತ್ಯ, ರಂಗಭೂಮಿ, ಫ್ಯಾಷನ್, ಸಾಹಿತ್ಯ ಮತ್ತು ಗೇಮಿಂಗ್ ಸೇರಿದಂತೆ ಹಲವು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು.

ಗಾಯಕ ಜಾವೇದ್ ಅಲಿ ಮೊದಲ ದಿನದಂದು ಭಾವಪೂರ್ಣ ಪ್ರದರ್ಶನದೊಂದಿಗೆ ಪ್ರೇಕ್ಷಕರನ್ನು ಮಂತ್ರಮುಗ್ಧಗೊಳಿಸಿದರು. ಎರಡನೇ ದಿನ, ರ‍್ಯಾಪ್ ಸೆನ್ಸೇಶನ್ 'ಧುರಂದರ್' ಖ್ಯಾತಿಯ ರೆಬಲ್ ತಮ್ಮ ಉತ್ಸಾಹಭರಿತ ನಟನೆಯಿಂದ ಪ್ರೇಕ್ಷಕರನ್ನು ರಂಜಿಸಿದರು.

ನಟಿ ಶ್ರೀಲೀಲಾ ಮುಖ್ಯ ಅತಿಥಿಯಾಗಿ ಉತ್ಸವದಲ್ಲಿ ಭಾಗವಹಿಸಿ, ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು. ಪ್ರೆಸಿಡೆನ್ಸಿ ಗ್ರೂಪ್‌ನ 50 ವರ್ಷಗಳ ಲೋಗೊವನ್ನು ಅನಾವರಣಗೊಳಿಸಿದರು. ಪ್ರೆಸಿಡೆನ್ಸಿ ವಿಶ್ವವಿದ್ಯಾಲಯದ ವ್ಯವಸ್ಥಾಪಕ ಟ್ರಸ್ಟಿ ಕೌಸರ್ ನಿಸಾರ್ ಮತ್ತು ಉಪಾಧ್ಯಕ್ಷ ಸಲ್ಮಾನ್ ನಿಸಾರ್ ಅಹ್ಮದ್ ಅವರ ಮಾರ್ಗದರ್ಶನದಲ್ಲಿ ಉತ್ಸವ ನಡೆಯಿತು.

ಸಹ ಕುಲಪತಿ ಡಾ.ವಿದ್ಯಾ ಶಂಕರ್ ಶೆಟ್ಟಿ, ಡೀನ್ ಡಾ.ಅನು ಸುಖದೇವ್ ಅವರ ಮಾರ್ಗದರ್ಶನದಲ್ಲಿ ಸ್ಪರ್ಧೆಗಳು ನಡೆದವು.

ಆಟೊ ಎಲ್‌ಪಿಜಿ: ಚಾಲಕರಿಗೆ ಆರ್ಥಿಕ ಹೊಡೆತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಆಟೊರಿಕ್ಷಾ ಎಲ್‌ಪಿಜಿ ಅನಿಲದ ಸರಬರಾಜು ಪ್ರಮಾಣ ಹೆಚ್ಚಿದ್ದರೂ ಸಮಸ್ಯೆ ಇನ್ನೂ ಸಂಪೂರ್ಣ ಬಗೆಹರಿದಿಲ್ಲ. ದರ ಹೆಚ್ಚಳದಿಂದಾಗಿ ಚಾಲಕರಿಗೆ ಆರ್ಥಿಕ ಹೊಡೆತ ಬಿದ್ದಿದೆ.

ಜಾಗತಿಕವಾಗಿ ನಡೆಯುತ್ತಿರುವ ಸಂಘರ್ಷದಿಂದಾಗಿ ಪೂರೈಕೆ ನಿಧಾನಗೊಂಡಿರುವುದರಿಂದ ಅನಿಲ ದರ ಏರಿಕೆಯಾಗಿದೆ. ಐಒಸಿಎಲ್, ಎಚ್‌ಪಿಸಿಎಲ್, ಬಿಪಿಸಿಎಲ್ ಮುಂತಾದ ಸರ್ಕಾರಿ ಸ್ವಾಮ್ಯದ ಬಂಕ್‌ಗಳಲ್ಲಿ ಯುದ್ಧ ಶುರುವಾಗುವ ಮೊದಲು ಎಲ್‌ಪಿಜಿಗೆ ಲೀಟರ್‌ಗೆ ₹69 ಇದ್ದಿದ್ದು, ಈಗ ₹ 90ರ ಆಸುಪಾಸಿನಲ್ಲಿದೆ. ಖಾಸಗಿ ಪೆಟ್ರೋಲ್ ಬಂಕ್‌ಗಳು ಎಲ್‌ಪಿಜಿ ಅನಿಲಕ್ಕೆ ಲೀಟರ್‌ಗೆ ₹ 120ರಿಂದ ₹ 130ರವರೆಗೆ ಹೆಚ್ಚಿಸಿವೆ.

ನಾಯಂಡಹಳ್ಳಿ ಸಹಿತ ಹಲವು ಕಡೆ ಈಗಲೂ ಬಂಕ್‌ಗಳಲ್ಲಿ ದಾಸ್ತಾನು ಇಲ್ಲ ಎನ್ನುವ ಫಲಕಗಳನ್ನು ಅಳವಡಿಸಲಾಗಿದೆ.

'ಎಲ್‌ಪಿಜಿ ಅನಿಲ ಕೊರತೆ ನಂತರ ದರದಲ್ಲೂ ಗಣನೀಯ ಏರಿಕೆ ಕಂಡು ಬಂದಿದೆ. ಇರಾನ್ ಹಾಗೂ ಇಸ್ರೇಲ್ ನಡುವೆ ಕದನ ವಿರಾಮ ಘೋಷಣೆಯಾಗಿದ್ದರೂ ಮತ್ತೆ ಯಾವ ಕ್ಷಣದಲ್ಲಾದರೂ ಯುದ್ಧದ ಸನ್ನಿವೇಶ ಎದುರಾಗಬಹುದು. ಇದರಿಂದ ಎಲ್‌ಪಿಜಿ ಸಮಸ್ಯೆ ಮತ್ತಷ್ಟು ಹೆಚ್ಚಬಹುದು' ಎಂದು ಆಟೊ ಚಾಲಕರು ಆತಂಕ ವ್ಯಕ್ತಪಡಿಸಿದರು.

'ಮೂರ್ನಾಲ್ಕು ವಾರದಿಂದ ಸಮಸ್ಯೆ ಎದುರಿಸುತ್ತಿದ್ದೇವೆ. ಕೆಲವು ದಿನಗಳಿಂದ ಸರಬರಾಜು ಪ್ರಮಾಣ ಹೆಚ್ಚಿದ್ದರೂ ಎಲ್ಲರಿಗೂ ಅನಿಲ ಸಿಗುತ್ತಿಲ್ಲ. ಹೀಗಾಗಿ ಹಲವು ಆಟೊ ಚಾಲಕರು ಕೆಲಸ ನಿಲ್ಲಿಸಿದ್ದಾರೆ. ಅನಿಲವಿಲ್ಲದ ಕಾರಣ ನಿತ್ಯ ಬರುತ್ತಿದ್ದ ₹400– ₹500 ಆದಾಯಕ್ಕೂ ಕುತ್ತು ಬಂದಿದೆ. ಇದರಿಂದಾಗಿ ಬಾಡಿಗೆ ಕೊಡಲು ಆಗದೇ ಸಂಕಷ್ಟಕ್ಕೆ ಸಿಲುಕಿದ್ದಾರೆ' ಎಂದು ಸಾರಥಿ ಆಟೊ ಚಾಲಕರ ಸಂಘದ ಅಧ್ಯಕ್ಷ ರಾಮೇಗೌಡ ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ಐ–ಲೀಗ್: ಎಸ್‌ಸಿಬಿ ತಂಡಕ್ಕೆ ಮೊದಲ ಜಯ

ಎಸ್. ದೇವದತ್ತ

ಬೆಂಗಳೂರು: ಸ್ಪೋರ್ಟಿಂಗ್ ಕ್ಲಬ್ ಬೆಂಗಳೂರು (ಎಸ್‌ಸಿಬಿ) ತಂಡವು ಎರಡನೇ ಆವೃತ್ತಿಯ ಐ–ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಮಂಗಳವಾರ 2–0ಯಿಂದ ಯುನೈಟೆಡ್ ಸ್ಪೋರ್ಟ್ಸ್ ಕ್ಲಬ್ ತಂಡವನ್ನು ಸೋಲಿಸಿತು. ಅದರೊಂದಿಗೆ, ಟೂರ್ನಿಯಲ್ಲಿ ಗೆಲುವಿನ ಖಾತೆ ತೆರೆಯಿತು.

ದ್ರಾವಿಡ್– ಪಡುಕೋಣೆ ಶ್ರೇಷ್ಠತಾ ಕೇಂದ್ರದ ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಎಸ್‌ಸಿಬಿ ತಂಡದ ಸಮಾನಂದ ಸಿಂಗ್ (29ನೇ ನಿ.) ಹಾಗೂ ಎಸ್. ದೇವದತ್ತ (40ನೇ ನಿ.) ಗೋಲು ಗಳಿಸಿ, ಗೆಲುವಿನ ರೂವಾರಿಯಾದರು.

ಕೋಲ್ಕತ್ತದ ಯುನೈಟೆಡ್ ತಂಡವು ಈ ಸೋಲಿನ ನಂತರವೂ 7 ಅಂಕಗಳೊಂದಿಗೆ (4 ಪಂದ್ಯಗಳಿಂದ) ಅಗ್ರಸ್ಥಾನದಲ್ಲಿ ಮುಂದುವರಿಯಿತು. 2023–24ನೇ ಸಾಲಿನ ಚಾಂಪಿಯನ್ ಎಸ್‌ಸಿಬಿ ತಂಡವು (5 ಅಂಕ; 3 ಪಂದ್ಯಗಳಿಂದ) ಅಂಕಪಟ್ಟಿಯಲ್ಲಿ ನಾಲ್ಕನೇ ಸ್ಥಾನಕ್ಕೇರಿತು.

ಬೆಂಗಳೂರಿನ ಎಫ್‌ಸಿಬಿಯು ತಂಡವು ಬುಧವಾರ ನಡೆವ ಪಂದ್ಯದಲ್ಲಿ ಮಣಿಪುರದ ನೆರೊಕಾ ಎಫ್‌ಸಿ ತಂಡವನ್ನು ಎದುರಿಸಲಿದೆ.

ಸುಧಾರಣಾ ವೆಚ್ಚ, ಪಾಲಿಕೆಗೆ ನಷ್ಟ: ಪ್ರತಿಭಟನೆ

ಕೆ.ಆರ್.ಪುರ: 'ಕಂದಾಯ ಅಧಿಕಾರಿಗಳು ಸರ್ಕಾರಕ್ಕೆ ಕಟ್ಟಬೇಕಾದ ಸುಧಾರಣಾ ವೆಚ್ಚ ಕಟ್ಟಿಸಿಕೊಳ್ಳದೇ ನಿಯಮಬಾಹಿರವಾಗಿ ಸರ್ಕಾರಕ್ಕೆ ನಷ್ಟ ಉಂಟು ಮಾಡುತ್ತಿದ್ದಾರೆ. ಅಂತಹವರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಸಮತಾ ಸೈನಿಕ ದಳದ ಪದಾಧಿಕಾರಿಗಳು ಪೂರ್ವ ನಗರ ಪಾಲಿಕೆ ಮುಂದೆ ಮುಂದೆ ಪ್ರತಿಭಟನೆ ನಡೆಸಿದರು.

'ಮಹದೇವಪುರದ ವೈಟ್‌ಫೀಲ್ಡ್ ಉಪ ವಿಭಾಗದಲ್ಲಿ ಖಾತೆ ಮಾಡುವ ವಿಚಾರದಲ್ಲಿ ನಿಯಮಗಳನ್ನು ಉಲ್ಲಂಘಿಸಲಾಗುತ್ತಿದೆ' ಎಂದು ಸಮತಾ ಸೈನಿಕ ದಳದ ಯುವ ಘಟಕದ ಅಧ್ಯಕ್ಷ ದಲಿತ ಚಳವಳಿ ನಾಗೇಶ್ ದೂರಿದರು.

'ಹಗದೂರು ಹಾಗೂ ಕಾಡುಗುಡಿ ವಾರ್ಡ್‌ನಲ್ಲಿ ಸುಧಾರಣಾ ವೆಚ್ಚ ಭರಿಸದೆ ಪಾಲಿಕೆಗೆ ಕೋಟ್ಯಂತರ ರೂಪಾಯಿ ನಷ್ಟ ಉಂಟು ಮಾಡಲಾಗಿದೆ. ಭೂಮಾಲೀಕರ ವಿರುದ್ಧವೂ ಕ್ರಿಮಿನಲ್ ಮೊಕದ್ದಮೆ ಹೂಡಿ ಎಲ್ಲಾ ಖಾತೆಗಳನ್ನು ರದ್ದುಪಡಿಸಬೇಕು' ಎಂದರು.

ಸಮತಾ ಸೈನಿಕ ದಳದ ರಾಜ್ಯಾಧ್ಯಕ್ಷ ಜಿ.ಸಿ. ವೆಂಕಟರಮಣಪ್ಪ, ಮಹಿಳಾ ಘಟಕದ ಅಧ್ಯಕ್ಷೆ ಕಮಲಮ್ಮ, ಪ್ರಧಾನ ಕಾರ್ಯದರ್ಶಿ ಅರ್ಜುನ್ ಗೋಪಾಲಯ್ಯ, ಎಸ್. ಕೆಂಚಯ್ಯ, ಜಿ.ಕೆ.ಗೋಪಾಲ್, ಮುನಿರಾಜು, ಮಂಜು, ಕೃಷ್ಣ, ಪ್ರಸಾದ್ ಉಪಸ್ಥಿತರಿದ್ದರು.

ನಗರದಲ್ಲಿ ಇಂದು

'ಕನ್ನಡ ಸಾಮರಸ್ಯ ನೆಲೆಗಳು' 41 ಪುಸ್ತಕಗಳ ಬಿಡುಗಡೆ: ಸಿದ್ದರಾಮಯ್ಯ, ಅತಿಥಿಗಳು: ಡಿ.ಕೆ. ಶಿವಕುಮಾರ್, ಪಿ.ಸಿ.ಮೋಹನ್, ಶಿವರಾಜ ತಂಗಡಗಿ, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಯೋಜನೆ ಬಗ್ಗೆ ವಿವರ: ಪುರುಷೋತ್ತಮ ಬಿಳಿಮಲೆ, ಉಪಸ್ಥಿತಿ: ಜೆ. ಮಂಜುನಾಥ್, ಬೊಳುವಾರು ಮಹಮದ್ ಕುಂಞಿ, ಸಂತೋಷ ಹಾನಗಲ್ಲ, ಆಯೋಜನೆ: ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಬೆಳಿಗ್ಗೆ 10

ವಿಶ್ವ ಕಲಾ ದಿನದ ಪ್ರಯುಕ್ತ ಕಲಾವಿದರ ಕಾರ್ಯಾಗಾರ ಹಾಗೂ ಕಲಾಕೃತಿಗಳ ಮಾರಾಟ: ಮುಖ್ಯ ಅತಿಥಿ: ಗೀತಾ ರಾಮಾನುಜಂ, ಅಧ್ಯಕ್ಷತೆ: ಸಿ.ಎಸ್. ಕೃಷ್ಣ ಸೆಟ್ಟಿ, ಆಯೋಜನೆ: ದಾವಣಗೆರೆ ಕಲಾ ಶಾಲೆ ಹಳೆ ವಿದ್ಯಾರ್ಥಿಗಳ ಸಂಘ (ದಾಕಹವಿಸ), ಸ್ಥಳ: ವೆಂಕಟಪ್ಪ ಕಲಾ ಶಾಲೆ, ಕಸ್ತೂರಬಾ ರಸ್ತೆ, ಬೆಳಿಗ್ಗೆ 10ರಿಂದ

ಮುಖವೀಣೆ ಕಲಾ ಪ್ರದರ್ಶನ: ಮುಖವೀಣೆ ಅಂಜಿನಪ್ಪ, ಅಧ್ಯಕ್ಷತೆ: ಟೈಟಸ್ ಆಂಟೊ, ಆಯೋಜನೆ ಹಾಗೂ ಸ್ಥಳ: ಕನ್ನಡ ವಿಭಾಗ, ಸೇಂಟ್ ಫ್ರಾನ್ಸಿಸ್ ಕಾಲೇಜು, ಕೋರಮಂಗಲ, ಬೆಳಿಗ್ಗೆ 11.45

ಬಿ.ಆರ್.ಅಂಬೇಡ್ಕರ್ ಜಯಂತಿ: ಉಪನ್ಯಾಸ: ಎ.ಆರ್. ಗೋವಿಂದಸ್ವಾಮಿ, ಆಯೋಜನೆ ಹಾಗೂ ಸ್ಥಳ: ಅಲಯನ್ಸ್ ವಿಶ್ವವಿದ್ಯಾಲಯ, ಮಧ್ಯಾಹ್ನ 2



ಎಸ್.ಜಿ. ಸಿದ್ಧರಾಮಯ್ಯ

ಎಸ್.ಜಿ. ಸಿದ್ಧರಾಮಯ್ಯ ಅವರ 'ಮಹಾಮನೆ' ಪುಸ್ತಕ ಬಿಡುಗಡೆ: ಶಿವರಾಮಯ್ಯ, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಪುಸ್ತಕದ ಬಗ್ಗೆ: ಬೇಲೂರು ರಘುನಂದನ್, ಅತಿಥಿಗಳು: ಎಂ. ಪ್ರಕಾಶಮೂರ್ತಿ, ಜಿ.ಎನ್. ಮೋಹನ್, ಉಪಸ್ಥಿತಿ: ರಾಧಾಕೃಷ್ಣ ಹೆಗಡೆ, ಬಿ.ಎಸ್. ವಿದ್ಯಾರಣ್ಯ, ರಂಗಗೌರವ: ಎಚ್.ಎಲ್. ಪುಷ್ಪ, ಪದ್ಮಾ ಟಿ. ಚಿನ್ಮಯಿ, ವಡವಾಟಿ ಶಾರದಾ ಭರತ್, ಕಾವೇರಿ ಶ್ರೀಧರ್, ಭಾಸ್ಕರ್ ಕುಪ್ಪೂರು, ಆಯೋಜನೆ: ರಂಗಚಂದಿರ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ.ರಸ್ತೆ, ಸಂಜೆ 5

88ನೇ ಶ್ರೀರಾಮನವಮಿ ಸಂಗೀತೋತ್ಸವ: ಸಂಗೀತ ಕಛೇರಿ: ಜೆ.ಎ. ಜಯಂತ್, ಎಚ್.ಎನ್. ಭಾಸ್ಕರ್, ಕೆ.ಯು. ಜಯಚಂದ್ರ ರಾವ್, ಗಿರಿಧರ್ ಉಡುಪ, ಆಯೋಜನೆ: ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಆವರಣ, ಚಾಮರಾಜಪೇಟೆ, ಸಂಜೆ 5 ರಿಂದ

ಟಿ.ಎಂ.ಕೃಷ್ಣ

33ನೇ ಶ್ರೀರಾಮನವಮಿ ಸಂಗೀತೋತ್ಸವ: ಗಾಯನ: ಟಿ.ಎಂ. ಕೃಷ್ಣ, ಪಿಟೀಲು: ಎಚ್.ಕೆ.ವೆಂಕಟರಾಮ್, ಮೃದಂಗ: ಅರುಣಪ್ರಕಾಶ್ ಕೃಷ್ಣನ್, ಖಂಜಿರ: ಅನಿರುದ್ಧ ಆತ್ರೇಯ, ಆಯೋಜನೆ ಮತ್ತು ಸ್ಥಳ: ಶ್ರೀವಾಣಿ ಕಲಾ ಕೇಂದ್ರ, ಬಸವೇಶ್ವರನಗರ, ಸಂಜೆ 6.30ರಿಂದ

'ಸೇವಂತಿ ಪ್ರಸಂಗ' ನಾಟಕ ಪ್ರದರ್ಶನ: ನಿರ್ದೇಶನ: ರಾಮಕೃಷ್ಣ ಬೆಳ್ತೂರು, ಅತಿಥಿಗಳು: ಮಹೇಶ್ ಬಾಬು, ಕೃಷ್ಣಮೂರ್ತಿ ಕವತ್ತಾರ್, ಚಂದನ ಅನಂತಕೃಷ್ಣ, ಆಯೋಜನೆ: ನವರಸ ನಟನ ಅಕಾಡೆಮಿ, ಸ್ಥಳ: ಸೇವಾಸದನ, ಮಲ್ಲೇಶ್ವರ, ಸಂಜೆ 6

26ನೇ ವರ್ಷದ ಪ್ರವಚನ ವಾಹಿನಿ: ಭಾಗವತದ ಸಂದೇಶ: ಅಶೋಕಾಚಾರ್ಯ ಜೋಶಿ, ಆಯೋಜನೆ ಹಾಗೂ ಸ್ಥಳ: ಸಾಂಸ್ಕೃತಿಕ ಮಂದಿರ, ರಾಗೀಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

'ಸಮಗ್ರ ಮಹಾಭಾರತ' ಪ್ರವಚನ: ವ್ಯಾಸನಕೆರೆ ಪ್ರಭಂಜನಾಚಾರ್ಯ, ಆಯೋಜನೆ ಹಾಗೂ ಸ್ಥಳ: ಪೂರ್ಣಪ್ರಜ್ಞ ವಿದ್ಯಾಪೀಠ, ಕತ್ರಿಗುಪ್ಪೆ ಮುಖ್ಯರಸ್ತೆ, ಸಂಜೆ 6.30

'ಕಂತು' ನಾಟಕ ಪ್ರದರ್ಶನ: ನಿರ್ದೇಶನ: ಮಂಜುನಾಥ್ ಎಲ್. ಬಡಿಗೇರ್, ತಂಡ: ಸಮಷ್ಟಿ, ಸ್ಥಳ: ರಂಗಶಂಕರ, ಜೆ.ಪಿ.ನಗರ, ಸಂಜೆ 7.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.. nagaradalli_indu@prajavani.co.in

ನೈಋತ್ಯ ರೈಲ್ವೆ

ಇ–ಟೆಂಡರು ಸೂಚನೆ ಸಂ.: SG-SWR-PROJ-UBL-MYS_LIDR ದಿನಾಂಕ: 10.04.2026

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ನೈಋತ್ಯ ರೈಲ್ವೆಯ ಮೈಸೂರು ವಿಭಾಗದಲ್ಲಿ ಕವಚ್ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಮಾನವರಹಿತ ಏರಿಯಲ್ ವೆಹಿಕಲ್ (ಯುಎವಿ–ಡ್ರೋನ್) ಮೂಲಕ ಏರಿಯಲ್ ವಿಡಿಯೊ ಗ್ರಾಫಿ / ಲಿಡಾರ್ ಸರ್ವೆ ಕಾಮಗಾರಿಗಳು.	ರೂ. 14,10,5000.00

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 07.05.2026, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಸಿಗ್ನಲ್ & ದೂರಸಂಪರ್ಕ ಇಂಜಿನಿಯರ್/ ಯೋಜನೆಗಳು/ಹುಬ್ಬಳ್ಳಿ

PUB/31/AAMO/PRB/SWR/2026-27

RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ. **RailOne** ಭಾರತೀಯ ರೈಲ್ವೆಯ ಆಲ್–ಇನ್–ಒನ್ ರೈಲ್ವೆ ಅಪ್ಲಿಕೇಶನ್ ಆಗಿದೆ. ಪ್ರಯಾಣಿಕರು ಕಾಯ್ದಿರಿಸಿದ ಟಿಕೆಟ್‌ಗಳು, ಕಾಯ್ದಿರಿಸದ ಟಿಕೆಟ್‌ಗಳು, ಪ್ಲಾಟ್ ಫಾರ್ಮ್ ಟಿಕೆಟ್‌ಗಳು ಮತ್ತು ಸೀಸನ್ ಪಾಸ್‌ಗಳನ್ನು ಬುಕ್ ಮಾಡಬಹುದು, **PNR** ಸ್ಥಿತಿಯನ್ನು ಪರಿಶೀಲಿಸಬಹುದು, ಆಹಾರವನ್ನು ಆರ್ಡರ್ ಮಾಡಬಹುದು ಮತ್ತು ತಮ್ಮ ಬೆರಳ ತುದಿಯಲ್ಲಿ ಇನ್ನೂ ಅನೇಕ ಸೇವೆಗಳನ್ನು ಪ್ರವೇಶಿಸಬಹುದು. **RailOne** ಅಪ್ಲಿಕೇಶನ್ ಮೂಲಕ ಕಾಯ್ದಿರಿಸದ ಟಿಕೆಟ್‌ಗಳನ್ನು ಬುಕ್ ಮಾಡಲು ಡಿಜಿಟಲ್ ಪಾವತಿಗಳನ್ನು ಬಳಸಿ ಹಾಗೂ 3% ವರೆಗೆ ರಿಯಾಯಿತಿಯನ್ನು ಆನಂದಿಸಿ.

South Western Railway - SWR | SWRRLY | SWRAILWAYHQ | sw_railways

ನೈಋತ್ಯ ರೈಲ್ವೆ

ಪ್ರೊಫಾರ್ಮಾ 10–01

ಭಾರತೀಯ ರೈಲ್ವೆ

ಸಾರ್ವಜನಿಕ ಪ್ರಕಟಣೆ

ನೈಋತ್ಯ ರೈಲ್ವೆ ಅಡಿಯಲ್ಲಿ ಪೂರ್ಣಗೊಂಡ ಈ ಕೆಳಗೆ ತಿಳಿಸಿರುವ ವಿಭಾಗದಲ್ಲಿ, ರೈಲ್ವೆ ಮಾರ್ಗಗಳು ಮತ್ತು ಆವರಣದ ಬಳಕೆದಾರರಿಗೆ ಈ ಮೂಲಕ ತಿಳಿಸುವುದೇನೆಂದರೆ, 25000 ವೋಲ್ಟ್‌ಗಳು, 50 ಎಚ್‌ಜಡ್ ಎಸಿ, ಓವರ್‌ಹೆಡ್ ಟ್ರ್ಯಾಕ್ಷನ್ ವೈರ್‌ಗಳನ್ನು ಕೆಳಗೆ ತಿಳಿಸಿರುವ ದಿನಾಂಕ ಅಥವಾ ತದನಂತರ ಶಕ್ತಿಯುತಗೊಳಿಸಲಾಗುತ್ತದೆ. ಅದೇ ದಿನಾಂಕದಂದು ಮತ್ತು ತದನಂತರ ಓವರ್ ಹೆಡ್ ಟ್ರ್ಯಾಕ್ಷನ್ ವೈರ್‌ಗಳನ್ನು ಎಲ್ಲಾ ಸಮಯದಲ್ಲೂ **ಲೈವ್** ಎಂದು ಪರಿಗಣಿಸಲಾಗುತ್ತದೆ ಮತ್ತು **ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ನಡುವಿನ ವಿಭಾಗದಲ್ಲಿ** ಯಾವುದೇ ಅನಧಿಕೃತ ವ್ಯಕ್ತಿಗಳು ಆ ಓವರ್‌ಹೆಡ್ ವೈರ್‌ಗಳ ಸಮೀಪದಲ್ಲಿ ಕೆಲಸ ಮಾಡಬಾರದು ಅಥವಾ ಸಂಪರ್ಕಕ್ಕೆ ಬರಬಾರದೆಂದು ಸೂಚಿಸಲಾಗಿದೆ.

ಕ್ರ. ಸಂ.	ವಿಭಾಗ	ಚೈನೇಜ್ (ಕಿಮೀ.) ಇಂದ	ಚೈನೇಜ್ (ಕಿಮೀ.) ವರೆಗೆ	ಶಕ್ತಿಯುತಗೊಳಿಸಲು ಪ್ರಸ್ತಾಪಿಸಿದ ದಿನಾಂಕ
1.	ಎಸ್‌ಎಂವಿಟಿ ಪಿಟ್ ಲೈನ್–4	832.50	2029.50	30.04.2026

ಸ್ಥಳ: ಬೆಂಗಳೂರು

ದಿನಾಂಕ: 09.04.2026

ಸಹಿ/–

ಉಪ ಮುಖ್ಯ ಎಲೆಕ್ಟ್ರಿಕಲ್ ಇಂಜಿನಿಯರ್, ಟ್ರ್ಯಾಕ್ಷನ್ ಡಿಸ್ಟ್ರಿಬ್ಯೂಷನ್, ನಿರ್ಮಾಣ, ನೈಋತ್ಯ ರೈಲ್ವೆ, ಬೆಂಗಳೂರು ದಂಡು – 560 046.

PUB/28/AAMO/PRB/SWR/2026-27

RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ. **RailOne** ಭಾರತೀಯ ರೈಲ್ವೆಯ ಆಲ್–ಇನ್–ಒನ್ ರೈಲ್ವೆ ಅಪ್ಲಿಕೇಶನ್ ಆಗಿದೆ. ಪ್ರಯಾಣಿಕರು ಕಾಯ್ದಿರಿಸಿದ ಟಿಕೆಟ್‌ಗಳು, ಕಾಯ್ದಿರಿಸದ ಟಿಕೆಟ್‌ಗಳು, ಪ್ಲಾಟ್ ಫಾರ್ಮ್ ಟಿಕೆಟ್‌ಗಳು ಮತ್ತು ಸೀಸನ್ ಪಾಸ್‌ಗಳನ್ನು ಬುಕ್ ಮಾಡಬಹುದು, **PNR** ಸ್ಥಿತಿಯನ್ನು ಪರಿಶೀಲಿಸಬಹುದು, ಆಹಾರವನ್ನು ಆರ್ಡರ್ ಮಾಡಬಹುದು ಮತ್ತು ತಮ್ಮ ಬೆರಳ ತುದಿಯಲ್ಲಿ ಇನ್ನೂ ಅನೇಕ ಸೇವೆಗಳನ್ನು ಪ್ರವೇಶಿಸಬಹುದು. **RailOne** ಅಪ್ಲಿಕೇಶನ್ ಮೂಲಕ ಕಾಯ್ದಿರಿಸದ ಟಿಕೆಟ್‌ಗಳನ್ನು ಬುಕ್ ಮಾಡಲು ಡಿಜಿಟಲ್ ಪಾವತಿಗಳನ್ನು ಬಳಸಿ ಹಾಗೂ 3% ವರೆಗೆ ರಿಯಾಯಿತಿಯನ್ನು ಆನಂದಿಸಿ.

South Western Railway - SWR | SWRRLY | SWRAILWAYHQ | sw_railways

ಸಾರ್ವಜನಿಕ ನೋಟೀಸು – ಇ–ಹರಾಜು

ರಿಲಯಬಲ್ ಕ್ಯಾಶ್ಯೂ ಕಂಪನಿ ಪ್ರೈವೇಟ್ ಲಿಮಿಟೆಡ್ (RCCPL) (ಸಮಾಪನ ಪ್ರಕ್ರಿಯೆಯಲ್ಲಿ–in Liquidation) ಭಾರತೀಯ ದಿವಾಳಿತನ ಮತ್ತು ಬ್ಯಾಂಕ್ರಪ್ಟ್ಸಿ ಸಂಹಿತೆ 2016 ರ ಅಡಿಯಲ್ಲಿ

ಇ–ಹರಾಜು

ಭಾರತೀಯ ದಿವಾಳಿತನ ಮತ್ತು ಬ್ಯಾಂಕ್ರಪ್ಟ್ಸಿ ಸಂಹಿತೆ 2016 ರ ಅಡಿಯಲ್ಲಿ ಆಸ್ತಿಗಳ ಮಾರಾಟ

ಇ–ಹರಾಜಿನ ದಿನಗಳು: 06.05.2026 ಮತ್ತು 07.05.2026

ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಾಲಯ, ಚೆನ್ನೈ (NCLT, Chennai) ಇದರ 09/08/2024 ರ ಆದೇಶದ ಅನುಸಾರ ಮತ್ತು ಕಲಂ 35 (f) ರ IBC, 2016ರ ಅನುಸಾರವಾಗಿ ಕಂಪನಿಯ ಆಸ್ತಿಗಳನ್ನು ಬಿಡಿ ಬಿಡಿಯಾಗಿ ಮಾರಾಟ ಮಾಡಲು ಬಿಡ್ಡುಗಳನ್ನು ಆಹ್ವಾನಿಸಲಾಗಿದೆ. ಈ ಮಾರಾಟವು 'ಯಾವುದು ಹೇಗಿದೆಯೋ, ಎಲ್ಲಿದೆಯೋ ಮತ್ತು ಎಷ್ಟಿದೆಯೋ' ಮತ್ತು ಮರು ಪಡೆಯುವಿಕೆ ಇಲ್ಲದ **("AS IS WHERE IS ", "AS IS WHAT IS", "WHATEVER THERE IS BASIS" and "NO RECOURSE BASIS")** ಮಾರಾಟ ಮಾಡಲಾಗುವುದು.

ಸದರಿ ಮಾರಾಟವನ್ನು ಇ–ಹರಾಜು ವೇದಿಕೆಯ ಮೂಲಕ https://ibbi.baanknet.com/eauction-ibbi/home ನಲ್ಲಿ ಮಾಡಲಾಗುವುದು. ಮಾರಾಟದ ಸಂಕ್ಷಿಪ್ತ ವಿವರಗಳು ಈ ಕೆಳಕಂಡಂತಿವೆ:

ಆಸ್ತಿಗಳ ಪಟ್ಟಿ	ಆಸ್ತಿಗಳು	ಮೀಸಲು ಬೆಲೆ (ರೂ.ಗಳಲ್ಲಿ)	ಇಎಂಡಿ ಮೊತ್ತ (ರೂ.ಗಳಲ್ಲಿ)
'ಎ' ವರ್ಗ: ದೈನಂದಿನ ಕಾರ್ಯಾಚರಣೆಗಳಿಗೆ ಅತ್ಯವಶ್ಯವಲ್ಲದ ಆಸ್ತಿಗಳ (ಭೂಭಾಗಗಳು ಮಾತ್ರ) ಇ–ಹರಾಜಿನ ದಿನ ಮತ್ತು ಸಮಯ: 06.05.2026ರಂದು ಸಂಜೆ 05.00ರಿಂದ 06.00 ಗಂಟೆಯವರೆಗೆ			
ಆಸ್ತಿ ಪಟ್ಟಿ 1	ಮಂಗಳೂರು ಉಪ–ಜಿಲ್ಲೆಯ ನೋಂದಣಿ, ಕರ್ನಾಟಕ, ಇದಕ್ಕೆ ಒಳಪಟ್ಟು ಮಂಗಳೂರು ನಗರ ಕಾರ್ಪೊರೇಷನ್‌ಗೆ ಸೇರಿದ ಮರಕಡ ಗ್ರಾಮ, ಮಂಗಳೂರು ತಾಲ್ಲೂಕು, ಇಲ್ಲಿ ಸರ್ವೆ ನಂ. 37–1ರಲ್ಲಿರುವ 65.50 ಸೆಂಟ್ ವಿಸ್ತೀರ್ಣದ, ಒಂದು ವಾಣಿಜ್ಯ ನಿವೇಶನ – ಇದರ ಸಂಪೂರ್ಣ ಸ್ವತ್ತು	78.00 ಲಕ್ಷ	7.80 ಲಕ್ಷ
ಆಸ್ತಿ ಪಟ್ಟಿ 2	ಉಡುಪಿ ಜಿಲ್ಲೆಯ ಬ್ರಹ್ಮಾವರದ ಆರ್.ಎಸ್. ನಂ. 110/3, 1ರಲ್ಲಿರುವ 3.17 ಎಕರೆ ವಿಸ್ತೀರ್ಣದ, ಇಂದು ವಾಣಿಜ್ಯ ನಿವೇಶನ – ಇದರ ಸಂಪೂರ್ಣ ಸ್ವತ್ತು	2.25 ಕೋಟಿ	0.225 ಕೋಟಿ
'ಬಿ' ವರ್ಗ: ಭೋಗ್ಯದಲ್ಲಿರುವ ಆವರಣದಲ್ಲಿರುವ ಚರಾಸ್ತಿಗಳ ಮಾರಾಟ ಇ–ಹರಾಜಿನ ದಿನ ಮತ್ತು ಸಮಯ: 07.05.2026ರಂದು ಬೆಳಿಗ್ಗೆ 11.00ರಿಂದ ಮಧ್ಯಾಹ್ನ 12.00 ಗಂಟೆಯವರೆಗೆ			
ಆಸ್ತಿ ಪಟ್ಟಿ 3	ಡಿ. ನಂ. 12/92 ಮತ್ತು 12/93, ಪಡವು ಪೋಸ್ಟ್, ಶಕ್ತಿನಗರ, ಕುಲಶೇಖರ, ಮಂಗಳೂರು, ಕರ್ನಾಟಕ, ಇಲ್ಲಿರುವ ಯಂತ್ರೋಪಕರಣ ಮತ್ತು ಒಂದು ವಾಹನ	32.00 ಲಕ್ಷ	3.20 ಲಕ್ಷ
'ಸಿ' ವರ್ಗ: ಆಸ್ತಿಗಳ ಪ್ರತ್ಯೇಕ ಯೂನಿಟ್‌ಗಳ ಮಾರಾಟ (ಚರ ಮತ್ತು ಸ್ಥಿರ ಆಸ್ತಿಗಳು) ಇ–ಹರಾಜಿನ ದಿನ ಮತ್ತು ಸಮಯ: 07.05.2026ರಂದು ಮಧ್ಯಾಹ್ನ 01.00ರಿಂದ 02.00 ಗಂಟೆಯವರೆಗೆ			
ಆಸ್ತಿ ಪಟ್ಟಿ 4	**ಕೈಗಾರಿಕಾ ಸ್ವತ್ತು** (ಸ್ಥಿರ ಮತ್ತು ಚರ ಆಸ್ತಿಗಳು) ಸರ್ವೆ ನಂ. 291/9ಪಿ1, ಕೊಳಲಗಿರಿ, ಉಪ್ಪೂರು ಗ್ರಾಮ, ಉಡುಪಿ ತಾಲ್ಲೂಕು, ಕರ್ನಾಟಕ ಇಲ್ಲಿನ 100 ಸೆಂಟ್ ವಿಸ್ತೀರ್ಣದ ಸಮಸ್ತ ಭೂಮಿ – ಕಟ್ಟಡ, ಯಂತ್ರೋಪಕರಣಗಳು ಮತ್ತು ಪೀಠೋಪಕರಣಗಳು, ವಾಹನಗಳು	1.69 ಕೋಟಿ	0.169 ಕೋಟಿ
'ಡಿ' ವರ್ಗ: ಚರಾಸ್ತಿಗಳ ಮಾರಾಟ (ಒಂದೊಮ್ಮೆ ಅಸೆಟ್ ಸೆಟ್ 4 ಅಡಿಯಲ್ಲಿ ಹರಾಜಿಗೆ ಯಾವುದೇ ಬಿಡ್ ಗಳು ಬರದಿದ್ದರೆ) ಇ–ಹರಾಜಿನ ದಿನ ಮತ್ತು ಸಮಯ: 07.05.2026ರಂದು ಮಧ್ಯಾಹ್ನ 03.00ರಿಂದ 04.00 ಗಂಟೆಯವರೆಗೆ			
ಆಸ್ತಿ ಪಟ್ಟಿ 5	**ಯಂತ್ರೋಪಕರಣಗಳು ಮತ್ತು ಚರಾಸ್ತಿಗಳು** ಸರ್ವೆ ನಂ. 291/9ಪಿ1, ಕೊಳಲಗಿರಿ, ಉಪ್ಪೂರು ಗ್ರಾಮ, ಉಡುಪಿ ತಾಲ್ಲೂಕು, ಕರ್ನಾಟಕ ಇಲ್ಲಿರುವ ಎಲ್ಲಾ ಚರಾಸ್ತಿಗಳು ಮತ್ತು ವಾಹನಗಳು	21.00 ಲಕ್ಷ	2.10 ಲಕ್ಷ
'ಇ' ವರ್ಗ: ಸ್ಥಿರಾಸ್ತಿಗಳ ಮಾರಾಟ (ಒಂದೊಮ್ಮೆ ಹರಾಜು ಯಶಸ್ವಿಯಾಗಿ ಅಸೆಟ್ ಸೆಟ್ 5 ಅಡಿಯಲ್ಲಿ ಹರಾಜಿಗೆ ಬಿಡ್ ಗಳು ಬಂದಿದ್ದರೆ, ಇ–ಹರಾಜು ಮೂಲಕ ಮಾತ್ರ) ಇ–ಹರಾಜಿನ ದಿನ ಮತ್ತು ಸಮಯ 07.05.2026ರಂದು ಸಂಜೆ 05.00 ರಿಂದ 06.00 ರವರೆಗೆ			
ಆಸ್ತಿ ಪಟ್ಟಿ 6	**ಸ್ಥಿರಾಸ್ತಿ (ಭೂಮಿ ಮತ್ತು ಕಟ್ಟಡ)** ಸರ್ವೆ ನಂ. 291/9ಪಿ1, ಕೊಳಲಗಿರಿ, ಉಪ್ಪೂರು ಗ್ರಾಮ, ಉಡುಪಿ ತಾಲ್ಲೂಕು, ಕರ್ನಾಟಕ ಇಲ್ಲಿರುವ 100 ಸೆಂಟ್ ವಿಸ್ತೀರ್ಣದ ಭೂಮಿ – ಕಟ್ಟಡದ ಸಹಿತವಾಗಿ.	1.48 ಕೋಟಿ	0.148 ಕೋಟಿ

1. ಈ ಮಾರಾಟದ ನೋಟೀಸನ್ನು ಆಸ್ತಿಗಳ ವಿವರಗಳು ಅರ್ಹತೆ ಇ–ಹರಾಜು ಬಿಡ್ ಪ್ರಪತ್ರ ಇತ್ಯಾದಿಗಳನ್ನು ಒಳಗೊಂಡ ಸಂಪೂರ್ಣ 'ಇ–ಹರಾಜು ಪ್ರಕ್ರಿಯೆಯ ಮಾಹಿತಿ' (ಪ್ರಕ್ರಿಯೆ ದಾಖಲೆ)ಯ ಜೊತೆಯಲ್ಲಿ ಓದಿಕೊಳ್ಳತಕ್ಕದ್ದು. ಇದು https://ibbi.baanknet.com/eauction-ibbi/home ನಲ್ಲಿ ದೊರೆಯುತ್ತದೆ, ಅಥವಾ ಹೆಚ್ಚಿನ ವಿವರಗಳಿಗೆ ಲಿಕ್ವಿಡೇಟರ್‌ರನ್ನು ಸಂಪರ್ಕಿಸಬಹುದು.
2. ಆಯಾ ವರ್ಗದ ಮತ್ತು/ಅಥವಾ ಆಸ್ತಿ(ಗಳ) ಸಲುವಾಗಿ ಆಸಕ್ತ ಬಿಡ್‌ದಾರರು ಅರ್ಹತಾ ದಾಖಲೆಗಳನ್ನು ಇಎಂಡಿ ಜೊತೆಯಲ್ಲಿ, ಪ್ರಕ್ರಿಯಾ ದಾಖಲೆಯಲ್ಲಿ ತಿಳಿಸಿರುವ ಪ್ರಕಾರ, **04.05.2026**ರಂದು ಇಲ್ಲವೆ ಅದಕ್ಕೆ ಮುನ್ನ ಎಲೆಕ್ಟ್ರಾನಿಕ್ ವಿಧಾನದ ಮೂಲಕ ಮಾತ್ರ ಸಲ್ಲಿಸಬೇಕು.
3. ಇ–ಹರಾಜಿನಲ್ಲಿ ಮಾರಾಟ ಮಾಡಲಾಗುತ್ತಿರುವ ಯಾವುದೇ ಅಥವಾ ಎಲ್ಲಾ ವರ್ಗದ(ಗಳ) ಮತ್ತು/ಅಥವಾ ಯಾವುದೇ ಅಥವಾ ಎಲ್ಲಾ ಆಸ್ತಿಗಳ ಮಾರಾಟ ಪ್ರಕ್ರಿಯೆಯ ಟೈಮ್‌ಲೈನ್‌ಗಳೂ (ಸೂಚಿತ ಸಮಯಗಳು) ಸೇರಿದಂತೆ ಮುಖ್ಯ ಷರತ್ತುಗಳನ್ನು ಮಾರ್ಪಡಿಸುವ ಅಧಿಕಾರ ಲಿಕ್ವಿಡೇಟರ್ ಅವರಿಗೆ ಇರುತ್ತದೆ – ಸಂಬಂಧಿತ ಕಾನೂನು ಮತ್ತು ನಿಬಂಧನೆಗಳ ಅನ್ವಯ ಇರುವ ಮಿತಿಗಳ ಒಳಗೆ ಯಾವುದೇ ಅಥವಾ ಎಲ್ಲಾ ವರ್ಗದ(ಗಳ) ಮತ್ತು/ಅಥವಾ ಯಾವುದೇ ಅಥವಾ ಎಲ್ಲಾ ಆಸ್ತಿಗಳ ಮಾರಾಟ ಪ್ರಕ್ರಿಯೆಯ ಟೈಮ್‌ಲೈನ್‌ಗಳ ಬದಲಾವಣೆಗಳ/ ವಿಸ್ತರಣೆಗಳ ಕುರಿತಾದ ಎಲ್ಲಾ ಮಾಹಿತಿಯು ಇ–ಹರಾಜು ವೆಬ್‌ಸೈಟಿನಲ್ಲಿ ಲಭ್ಯವಿರುತ್ತದೆ, ಮತ್ತು ಅರ್ಹ/ಅರ್ಹತೆ ಗಳಿಸಿದ/ ಯಶಸ್ವೀ ಬಿಡ್‌ದಾರರಿಗೆ ತಿಳಿಯಪಡಿಸಲಾಗುವುದು.
4. ಸಂಭಾವ್ಯ ಬಿಡ್ಡುದಾರರು ಮುಂಗಡ ಹಣ ಪಾವತಿಯನ್ನು ಬ್ಯಾಂಕ್‌ನೆಟ್ ಹರಾಜು ವೇದಿಕೆಯ ಮೂಲಕ ಮಾತ್ರ ಮಾಡಬೇಕು. ಬಿಡ್ಡುದಾರರು ಅನರ್ಹರೆಂದು ಕಂಡುಬಂದರೆ, ಇಎಂಡಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ.

ಈ ಪ್ರಕಟಣೆಯಲ್ಲಿ ತಿಳಿಸಿರುವ ಯಾವುದೇ ಆಸ್ತಿ ಮಾರಾಟ / ಸಕ್ರಿಯ ಸಂಸ್ಥೆಯಂತೆ ಪರಿಗಣಿತ ಮಾರಾಟ ಪ್ರಸ್ತಾಪವನ್ನು ಬದ್ಧ ಕರಾರು ಎಂದು ಪರಿಗಣಿಸಬಾರದು.

ಸಂಕ್ಷಿಪ್ತ ವಿವರಗಳಿಗಾಗಿ ದಯವಿಟ್ಟು ಕೆಳಗಿನ QR ಕೋಡ್‌ಅನ್ನು ಸ್ಕ್ಯಾನ್ ಮಾಡಿರಿ.

ದಿನಾಂಕ: 14.04.2026

ಸ್ಥಳ: ಕಾನ್‌ಸ್ಟಾನ್ಸ್, ಜರ್ಮನಿ

ಸಹಿ/–

ರವೀಂದ್ರ ಬೆಳೆಯೂರ್

ಲಿಕ್ವಿಡೇಟರ್

ರಿಲಯಬಲ್ ಕ್ಯಾಶ್ಯೂ ಕಂಪನಿ ಪ್ರೈವೇಟ್ ಲಿಮಿಟೆಡ್ ಇನ್ ಲಿಕ್ವಿಡೇಶನ್, 428, 19ನೇ ಬಿ ಕ್ರಾಸ್, 3ನೇ ಬ್ಲಾಕ್, ಜಯನಗರ, ಬೆಂಗಳೂರು 11

ಈಮೇಲ್: Reliable_Cashew_CIRP@beleyur.com

ಫೋನ್: 080 26540193 ಮೊಬೈಲ್: +91 94481 46963

‘ಅಂಬೇಡ್ಕರ್ ಕಾಲಾತೀತ ನಾಯಕ’

ಮಲ್ಲೇಶ್ವರ ಬಿಜೆಪಿ ಕಾರ್ಯಾಲಯದಲ್ಲಿ ಬಸವರಾಜ ಬೊಮ್ಮಾಯಿ ಅಭಿಮತ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಬುದ್ಧನ ಪ್ರೇರಣೆ, ಬಸವಣ್ಣನ ಸಮಾನತೆ ಪಡೆದ ಅಂಬೇಡ್ಕರ್
- ಸಮಾನತೆ, ಪ್ರಜಾಪ್ರಭುತ್ವ, ವ್ಯಕ್ತಿ ಸ್ವಾತಂತ್ರ್ಯ ನೀಡಿದ ಶ್ರೇಷ್ಠ ವ್ಯಕ್ತಿ
- ಬೊಮ್ಮಾಯಿ ಬಣ್ಣನೆ

ಬೆಂಗಳೂರು: ಸಂವಿಧಾನ ತಜ್ಞ, ಸಂವಿಧಾನದ ಮೂಲಕ ಸಮಾನತೆಯ ಶಕ್ತಿ ತುಂಬಿದ ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತಿಯನ್ನು ನಗರದ ವಿವಿಧೆಡೆ ಮಂಗಳವಾರ ಆಚರಿಸಲಾಯಿತು.

ರಾಜಕೀಯ ಪಕ್ಷಗಳ ಕಚೇರಿ, ವಿಶ್ವವಿದ್ಯಾಲಯ, ವಿವಿಧ ಸಂಘ ಸಂಸ್ಥೆಗಳ ಸಹಯೋಗದಲ್ಲಿ ನಡೆದ ಜಯಂತಿಯಲ್ಲಿ ಅಂಬೇಡ್ಕರ್ ಅವರ ವಿಚಾರ, ಸಮಾಜದ ಸದ್ಯದ ಸನ್ನಿವೇಶದ ಕುರಿತು ಚರ್ಚೆಗಳು ನಡೆದವು.

‘ಕೆಲವರು ಕಾಲಕ್ಕೆ ಸೀಮಿತವಾದ ನಾಯಕರಾದರೆ ಅಂಬೇಡ್ಕರ್ ಅವರು ಕಾಲಾತೀತ ನಾಯಕ’ ಎಂದು ಸಂಸದ ಬಸವರಾಜ ಬೊಮ್ಮಾಯಿ ಅವರು ಅಭಿಪ್ರಾಯಪಟ್ಟರು.

ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಬುದ್ಧನ ಪ್ರೇರಣೆ, ಬಸವಣ್ಣನ ಸಮಾನತೆ ಇವೆರಡನ್ನೂ ಪಡೆದ ಅಂಬೇಡ್ಕರ್ ಭಾರತಕ್ಕೆ ಸಮಾನತೆ, ಪ್ರಜಾಪ್ರಭುತ್ವ ಮತ್ತು ವ್ಯಕ್ತಿ ಸ್ವಾತಂತ್ರ್ಯವನ್ನು ಕೊಟ್ಟಿರುವ ಶ್ರೇಷ್ಠ ವ್ಯಕ್ತಿ’ ಎಂದರು.

ಸಂಸದ ಗೋವಿಂದ ಕಾರಜೋಳ, ವಿಧಾನ ಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಮುಖ್ಯ ಸಚೇತಕ ಎನ್.ರವಿಕುಮಾರ್, ಶಾಸಕ ಸಿಮೆಂಟ್ ಮಂಜುನಾಥ್ ಉಪಸ್ಥಿತರಿದ್ದರು.

ಬಿಜೆಪಿ ಕಚೇರಿಯಲ್ಲಿ ನಡೆದ ಅಂಬೇಡ್ಕರ್ ಜಯಂತಿ ಸಮಾರಂಭದಲ್ಲಿ ಸಂಸದರಾದ ಬಸವರಾಜ ಬೊಮ್ಮಾಯಿ, ಗೋವಿಂದ ಕಾರಜೋಳ, ವಿಧಾನ ಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಪಾಲ್ಗೊಂಡಿದ್ದರು

ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಆಯೋಜಿಸಿದ್ದ ಅಂಬೇಡ್ಕರ್ ಜಯಂತಿಗೆ ಸಾಹಿತಿ ಮೂಡ್ನಾಕೂಡು ಚಿನ್ನಸ್ವಾಮಿ ಚಾಲನೆ ನೀಡಿದರು.

‘ವಿಶ್ವವಿದ್ಯಾಲಯಗಳಲ್ಲಿ ಪಠ್ಯವಾಗಬೇಕು’

‘21ನೇ ಶತಮಾನದಲ್ಲೂ ಭಾರತದಲ್ಲಿ ಜಾತಿ ಕ್ರೌರ್ಯ, ಮೇಲು-ಕೀಳು, ಭೇದ-ಭಾವ ಹಾಸು ಹೊಕ್ಕಾಗಿದೆ. ಜಾತಿ ವಿನಾಶದ ಕುರಿತು ಎಲ್ಲ ವಿಶ್ವವಿದ್ಯಾಲಯಗಳಲ್ಲಿ ಪಠ್ಯವಾಗಬೇಕು’ ಎಂದು ಸಾಹಿತಿ ಮೂಡ್ನಾಕೂಡು ಚಿನ್ನಸ್ವಾಮಿ ಅಭಿಪ್ರಾಯಪಟ್ಟರು.

ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿ ನಡೆದ ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಕೆ.ವಿದ್ಯಾಕುಮಾರಿ, ಬಿ.ರಮೇಶ್, ನವೀನ್ ಜೋಸೆಫ್ ಮೊದಲಾದವರು ಭಾಗವಹಿಸಿದ್ದರು

ಜ್ಞಾನಭಾರತಿ ಆವರಣದಲ್ಲಿ ಅಂಬೇಡ್ಕರ್ ಅವರ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿ, ‘ಆಳುವ ಸರ್ಕಾರಗಳು ಕಣ್ಣು ಮುಚ್ಚಿ ಕೂತಿವೆ. ದೇಶದಲ್ಲಿ ಅಲಿಖಿತ ಸಂವಿಧಾನ ಜಾರಿಯಲ್ಲಿದೆ’ ಎಂದು ಬೇಸರ ವ್ಯಕ್ತಪಡಿಸಿದರು.

ಚಿಂತಕ ಬಂಜಗೆರೆ ಜಯಪ್ರಕಾಶ್, ಕುಲಪತಿ ಡಾ.ಎಸ್.ಎಂ.ಜಯಕರ, ಕುಲಸಚಿವರಾದ ಕೆ.ಟಿ.ಶಾಂತಲಾ, ಸಿ.ಎಸ್.ಕರಿಗಾರ್ ಉಪಸ್ಥಿತರಿದ್ದರು.

‘ಅಧ್ಯಯನ ಮಾಡಬೇಕು’

‘ಅಂಬೇಡ್ಕರ್ ಅವರ ಬಹುಶಿಸ್ತೀಯ ಚಿಂತನಶೀಲ ಬರವಣಿಗೆಗಳ ಕುರಿತು ವಿದ್ಯಾರ್ಥಿಗಳು ಗಂಭೀರ ಅಧ್ಯಯನ ಮಾಡಬೇಕು’ ಎಂದು ಸಮಗ್ರ ಶಿಕ್ಷಣ ಕರ್ನಾಟಕದ ರಾಜ್ಯ ಯೋಜನಾ ನಿರ್ದೇಶಕಿ ಕೆ.ವಿದ್ಯಾಕುಮಾರಿ ತಿಳಿಸಿದರು.

ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಅಂಬೇಡ್ಕರ್ ಅಧ್ಯಯನ ಕೇಂದ್ರ ಆಯೋಜಿಸಿದ್ದ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಬಂದಿದ್ದ ಹರಿಕಥಾ ವಿದ್ವಾನ್ ಲಕ್ಷ್ಮಣದಾಸ್ ಅವರು ಅಂಬೇಡ್ಕರ್ ಅವರ ಜೀವನ ವೃತ್ತಾಂತ ಕುರಿತ ಜನಕಥಾ ಕೀರ್ತನೆ ಪ್ರಸ್ತುತಪಡಿಸಿದರು. ಕುಲಪತಿ ಬಿ.ರಮೇಶ್, ಕುಲಸಚಿವರಾದ ಎ.ನವೀನ್ ಜೋಸೆಫ್, ರಮೇಶ.ಬಿ.ಕುಡೇನಟ್ಟಿ, ಅಂಬೇಡ್ಕರ್ ಅಧ್ಯಯನ ಕೇಂದ್ರದ ನಿರ್ದೇಶಕರಾದ ಪ್ರೊ. ಕೆ.ಆರ್. ಜಲಜಾ ಉಪಸ್ಥಿತರಿದ್ದರು.

ಸುದ್ದಿ 2 ನಿಮಿಷ

ನನ್ನ ವೈಭವೀಕರಣ ಬೇಡ: ಎಚ್.ಡಿ. ಕುಮಾರಸ್ವಾಮಿ

ಬೆಂಗಳೂರು: ‘ಮುಂದಿನ ಮುಖ್ಯಮಂತ್ರಿ ಕುಮಾರಸ್ವಾಮಿ ಆಗಲಿ ಎಂದು ನೀವು ಕೂಗುವ ಸಮಯ ಇದಲ್ಲ. ನನ್ನ ವೈಭವೀಕರಣ ಬೇಡ’ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಜೆಡಿಎಸ್ ಪಕ್ಷದ ಕಾರ್ಯಕರ್ತರಿಗೆ ಕಿವಿಮಾತು ಹೇಳಿದರು.

ಜೆಡಿಎಸ್ ಪಕ್ಷದ ಕಚೇರಿಯಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಕೋರ್ ಕಮಿಟಿ ಅಧ್ಯಕ್ಷ ಎಂ. ಕೃಷ್ಣಾರೆಡ್ಡಿ, ಮಾಜಿ ಸಚಿವ ವೆಂಕಟರಾವ್ ನಾಡಗೌಡ ಹಾಗೂ ಮಾಜಿ ಶಾಸಕ ಅನ್ನದಾನಿ ಅವರೆಲ್ಲರೂ ಕುಮಾರಣ್ಣನೇ ಮುಖ್ಯಮಂತ್ರಿ ಆಗಬೇಕು ಎಂದು ಹೇಳಿದ್ದಾರೆ. ಅಂಬೇಡ್ಕರ್ ಅವರಿಗೆ ನಮನ ಸಲ್ಲಿಸುವ ಈ ವೇದಿಕೆಯಲ್ಲಿ ಮುಖ್ಯಮಂತ್ರಿ ವಿಷಯದ ಬಗ್ಗೆ ಚರ್ಚಿಸುವುದು ಸರಿಯಲ್ಲ. ನಾವು ಬಾಬಾ ಸಾಹೇಬರ ಆದರ್ಶ ಮತ್ತು ತತ್ವಗಳನ್ನು ಅಳವಡಿಸಿಕೊಂಡು ಪಕ್ಷವನ್ನು ಬಲಿಷ್ಠವಾಗಿ ಕಟ್ಟಬೇಕು’ ಎಂದರು.

‘ದೇವರ ದಯೆಯಿಂದ, ಎರಡು ಬಾರಿ ಈ ರಾಜ್ಯಕ್ಕೆ ಮುಖ್ಯಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ಪೂರ್ಣಪ್ರಮಾಣದ ಬಹುಮತ ಇಲ್ಲದಿದ್ದರೂ ಸಾಧ್ಯವಾದಷ್ಟು ಒಳ್ಳೆಯ ಕೆಲಸಗಳನ್ನು ಮಾಡಿದ್ದೇನೆ. ಸಮಾಜದ ಎಲ್ಲಾ ವರ್ಗದ ಜನರನ್ನು ಸಮಾನ ದೃಷ್ಟಿಯಲ್ಲಿ ನೋಡಿದ್ದೇನೆ. ನೀವು ಮುಂದಿನ ಮುಖ್ಯಮಂತ್ರಿ ಆಗಬೇಕು ಎಂದು ಶುಭ ಹಾರೈಸುವುದು, ನನ್ನ ಮೇಲೆ ಇಟ್ಟಿರುವ ಪ್ರೀತಿ ಮತ್ತು ನಂಬಿಕೆಯನ್ನು ಸೂಚಿಸುತ್ತದೆ. ಇಂತಹ ವೇದಿಕೆಯಲ್ಲಿ ರಾಜಕೀಯ ಮಾತನಾಡುವುದು ಬೇಡ’ ಎಂದು ಅವರು ಮುಖಂಡರು ಮತ್ತು ಕಾರ್ಯಕರ್ತರಿಗೆ ಸೂಚಿಸಿದರು.

ಕೋರ್ ಕಮಿಟಿ ಅಧ್ಯಕ್ಷ ಎಂ. ಕೃಷ್ಣಾರೆಡ್ಡಿ, ಪಕ್ಷದ ಪರಿಶಿಷ್ಟ ಜಾತಿ ವಿಭಾಗದ ರಾಜ್ಯಾಧ್ಯಕ್ಷ ಕೆ. ಅನ್ನದಾನಿ, ಮಾಜಿ ಸಚಿವ ವೆಂಕಟರಾವ್ ನಾಡಗೌಡ, ಶಾಸಕರಾದ ಟಿ.ಎ. ಶರವಣ, ಟಿ. ಜವರಾಯಿಗೌಡ, ಗ್ರೇಟರ್ ಬೆಂಗಳೂರು ಜೆಡಿಎಸ್ ಅಧ್ಯಕ್ಷ ಎಚ್.ಎಂ. ರಮೇಶ್ ಗೌಡ, ಮಾಜಿ ಶಾಸಕ ಕೆ.ಎ. ತಿಪ್ಪೇಸ್ವಾಮಿ ಪಾಲ್ಗೊಂಡಿದ್ದರು.

ಜಿಬಿಎ ವ್ಯಾಪ್ತಿಯಲ್ಲಿ ನಾಳೆಯಿಂದ ಜನಗಣತಿ

ಬೆಂಗಳೂರು: ಜನಗಣತಿ ಕಾರ್ಯವನ್ನು ಯಾವುದೇ ಅಡಚಣೆಗಳಿಲ್ಲದೆ ಸಮರ್ಪಕವಾಗಿ ನಡೆಸಲು ಅಗತ್ಯ ಸಿದ್ಧತೆ ಕೈಗೊಂಡು, ಎಲ್ಲ ತಂಡಗಳ ನಡುವೆ ಸಮನ್ವಯ ಕಾಪಾಡಿಕೊಳ್ಳುವಂತೆ ನಗರ ಪಾಲಿಕೆ ಆಯುಕ್ತರು ಅಧಿಕಾರಿಗಳಿಗೆ ಸೂಚಿಸಿದರು.

ಜನಗಣತಿ-2027ರ ಕಾರ್ಯ ನಿರ್ವಹಿಸಲು ಉಸ್ತುವಾರಿಗಾಗಿ ನೇಮಿಸಿರುವ ಚಾರ್ಜ್ ಅಧಿಕಾರಿಗಳು, ಸಹಾಯಕ ಚಾರ್ಜ್ ಅಧಿಕಾರಿಗಳು, ತಾಂತ್ರಿಕ ಸಹಾಯಕರು, ಕಂದಾಯ ಅಧಿಕಾರಿಗಳು, ಸಹಾಯಕ ಕಂದಾಯ ಅಧಿಕಾರಿಗಳೊಂದಿಗೆ ಆಯುಕ್ತರು ಸಭೆ ನಡೆಸಿ ಅಗತ್ಯ ಸೂಚನೆಗಳನ್ನು ನೀಡಿದರು.

ಏಪ್ರಿಲ್ 16ರಿಂದ ಮನೆಗಳಿಗೆ ಗಣತಿದಾರರು ಭೇಟಿ ನೀಡಿ ಮಾಹಿತಿ ಸಂಗ್ರಹಿಸಲಿದ್ದಾರೆ. ಈ ಹಿನ್ನೆಲೆಯಲ್ಲಿ ಜನಗಣತಿ ಸಿಬ್ಬಂದಿಯೊಂದಿಗೆ ಸಂವಾದ ನಡೆಸಿದ ಉತ್ತರ ನಗರ ಪಾಲಿಕೆಯ ಆಯುಕ್ತ ಪೊಮ್ಮಲ ಸುನೀಲ್‌ಕುಮಾರ್ ಅವರು, ಕ್ಷೇತ್ರ ಮಟ್ಟದಲ್ಲಿ ನಡೆಯುತ್ತಿರುವ ಕಾರ್ಯಗಳ ಬಗ್ಗೆ ಮಾಹಿತಿ ಪಡೆದರು. ಅಂಕಿ-ಅಂಶಗಳ ನಿಖರ ಸಂಗ್ರಹಣೆಗಾಗಿ ಕ್ಷೇತ್ರಮಟ್ಟದಲ್ಲಿ ಹೆಚ್ಚಿನ ಗಮನಹರಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

‘ರಾಷ್ಟ್ರೀಯ ಮಹತ್ವದ ಜನಗಣತಿ ಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಣೆ ಮಾಡಲು, ಸ್ಥಳೀಯ ನಿವಾಸಿ ಕ್ಷೇಮಾಭಿವೃದ್ಧಿ ಸಂಘದವರು, ಹಿರಿಯ ನಾಗರಿಕರ ಕಲ್ಯಾಣ ಸಂಘದವರೊಂದಿಗೆ ಸಭೆ ನಡೆಸಿ ಜನಗಣತಿ ಕಾರ್ಯಕ್ಕೆ ಸಹಕರಿಸುವಂತೆ ಕೋರಬೇಕು’ ಎಂದು ಅಧಿಕಾರಿಗಳಿಗೆ ಬೆಂಗಳೂರು ಕೇಂದ್ರ ನಗರ ಪಾಲಿಕೆ ಆಯುಕ್ತ ರಾಜೇಂದ್ರ ಚೋಳನ್ ತಿಳಿಸಿದರು.

ಅಂಬೇಡ್ಕರ್ ಜಯಂತಿ ಸಂಭ್ರಮ

ನೆಲಮಂಗಲದಲ್ಲಿ ಅಂಬೇಡ್ಕರ್, ಬಾಬು ಜಗಜೀವನ್ ರಾಂ ಅವರ ಭಾವಚಿತ್ರ ಹಾಗೂ ಸಂವಿಧಾನ ಪುಸ್ತಕ ಹಿಡಿದ ಅಂಬೇಡ್ಕರ್ ಅವರ ಛದ್ಮ ವೇಷ ಧರಿಸಿದ್ದ ಬಾಲಕನನ್ನು ಜಾನಪದ ಕಲಾ ಪ್ರದರ್ಶನಗಳೊಂದಿಗೆ ತಾಲ್ಲೂಕು ಕಚೇರಿವರೆಗೆ ಮೆರವಣಿಗೆ ನಡೆಸಲಾಯಿತು

ಕೆ.ಆರ್‌ಪುರ ಸಮೀಪದ ಕಾಡುಗೋಡಿಯಲ್ಲಿ ಕರ್ನಾಟಕ ದಲಿತ ಕ್ರಿಯ ವೇದಿಕೆ ವತಿಯಿಂದ ಅಂಬೇಡ್ಕರ್ ಜಯಂತಿಯನ್ನು ಪೌರಕಾರ್ಮಿಕರೊಂದಿಗೆ ಆಚರಿಸಲಾಯಿತು

ಅಂಬೇಡ್ಕರ್ ಹಾಗೂ ಬಾಬು ಜಗಜೀವನ್‌ರಾಂ ಜಯಂತ್ಯುತ್ಸವದ ಪ್ರಯುಕ್ತ ಯಲಹಂಕ ತಾಲ್ಲೂಕು ಆಡಳಿತ, ದಲಿತ ಸಂಘರ್ಷ ಸಮಿತಿ (ಕೆಂಪುಸೇನೆ) ಸೇರಿದಂತೆ ವಿವಿಧ ದಲಿತ ಸಂಘಟನೆಗಳ ವತಿಯಿಂದ ಬೃಹತ್ ಪಾದಯಾತ್ರೆ ನಡೆಯಿತು

ಮಲ್ಲತ್ತಹಳ್ಳಿಯ ಎಐಟಿ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಅಂಬೇಡ್ಕರ್ ಜಯಂತಿ ಹಾಗೂ 10ನೇ ರಾಷ್ಟ್ರೀಯ ತಾಂತ್ರಿಕ ಪ್ರದರ್ಶನದಲ್ಲಿ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಹಾಗೂ ನಗದು ಬಹುಮಾನ ನೀಡಲಾಯಿತು. ನ್ಯಾಯಮೂರ್ತಿ ಗೋಪಾಲ್ ಎಸ್. ಶೆಟ್ಟಿ, ಡಾ.ಎಂ. ಮಹದೇವ್, ಟ್ರಸ್ಟಿಗಳಾದ ಬಿ. ಎನ್. ಉಮೇಶ್, ಎಸ್. ಶಿವಮಲ್ಲು ಉಪಸ್ಥಿತರಿದ್ದರು

ಕರುಮಾರಿಯಮ್ಮ ಬಡಾವಣೆಯಲ್ಲಿ ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಬಿಜೆಪಿ ನಾಯಕ ಎನ್.ಸಿ.ಕುಮಾರ್ ಅವರು ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಮುಖಂಡರಾದ ಸಿ.ವೇಲು, ತಮ್ಮಯ್ಯಣ್ಣ, ವಿಜಯಲಕ್ಷ್ಮಿ, ಸುಗಂಧಿ ಉಪಸ್ಥಿತರಿದ್ದರು

‘ಭಿನ್ನ ನೆಲೆಯಲ್ಲಿ ಅಂಬೇಡ್ಕರ್ ನೋಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘70 ವರ್ಷದಿಂದಲೂ ಅಂಬೇಡ್ಕರ್ ಅವರ ಚಿಂತನೆಗಳು, ವ್ಯಕ್ತಿತ್ವದ ಕುರಿತು ಒಂದೇ ರೀತಿ ಕಥೆ ಹೇಳುತ್ತಾ ಬಂದಿದ್ದೇವೆ. ಈಗ ಅವರನ್ನು ಬೇರೊಂದು ರೀತಿಯಲ್ಲಿ ನೋಡುವ ಜತೆಗೆ ಮುಂದಿನ ಪೀಳಿಗೆಯನ್ನು ಸಶಕ್ತಗೊಳಿಸುವತ್ತ ಯೋಚಿಸಬೇಕು’ ಎಂದು ಸಾಹಿತಿ ಕೋಟಿಗಾನಹಳ್ಳಿ ರಾಮಯ್ಯ ಸಲಹೆ ನೀಡಿದರು.

ಸಮತಾ ಸೈನಿಕ ದಳವು ನಗರದಲ್ಲಿ ಮಂಗಳವಾರ ಆಯೋಜಿಸಿದ್ದ ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಭೀಮರತ್ನ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಅವರು, ‘ಅಂಬೇಡ್ಕರ್ ಅವರನ್ನು ಮುತ್ತಿನ, ಬೆಳ್ಳಿರಥದಲ್ಲಿ ಕೂರಿಸಿ ಮೆರವಣಿಗೆ ಮಾಡುವುದಕ್ಕಿಂತ ಅವರ ವಿಚಾರವನ್ನು ತಿಂಗಳಿಗೆ ಒಂದು ದಿನ ಮಕ್ಕಳು ಗಂಭೀರವಾಗಿ ಓದುವಂತೆ ಪೋಷಕರು ಪ್ರೇರೇಪಿಸಬೇಕು’ ಎಂದರು.

‘ಅಂಬೇಡ್ಕರ್ ಅವರ ನಿರಂತರ ಹೋರಾಟದ ಫಲವಾಗಿ ಈಗ ಶೋಷಿತ ಸಮುದಾಯಗಳಲ್ಲಿ ಜಾಗೃತಿ ಬಂದಿದ್ದರೂ ಸಾಕಷ್ಟು ಸವಾಲುಗಳು ನಮ್ಮ ಮುಂದೆ ಇವೆ. ಈಗ ಬಂಡವಾಳಶಾಹಿಗಳ ಪ್ರಭಾವದ ಜತೆಗೆ ಹಿಂದುತ್ವದ ತಾರತಮ್ಯಗಳೂ ಇವೆ. ಇದರಿಂದ ಮಕ್ಕಳು, ಯುವಕರಿಗೆ ಸಮರ್ಥ ಶಿಕ್ಷಣ ನೀಡಿ ಪ್ರಮುಖ ಸಂಸ್ಥೆಗಳಲ್ಲಿ ಅವಕಾಶ ಪಡೆಯುವಂತೆ ನೋಡಿಕೊಳ್ಳಬೇಕಿದೆ’ ಎಂದು ಹೇಳಿದರು.

ಚಾಮರಾಜನಗರದಲ್ಲಿರುವ ಬೌದ್ಧ ನಳಂದ ವಿಶ್ವವಿದ್ಯಾಲಯದ ಭೋಧಿದತ್ತ ಬಂತೇಜಿ ಮಾತನಾಡಿ, ‘ಸಮಾನತೆಗೆ ಪ್ರಯತ್ನಿಸಿದ ಬುದ್ಧ ಹಾಗೂ ಅಂಬೇಡ್ಕರ್ ಅವರ ಚಿಂತನೆಗಳ ಅರಿವು ಮೂಡಿಸುವುದು ಅವಶ್ಯ. ಕೋಟಿಗಾನಹಳ್ಳಿ ರಾಮಯ್ಯ ಅವರು ಈ ವಿಚಾರದಲ್ಲಿ ಶೈಕ್ಷಣಿಕ ಕಾರ್ಯಕ್ರಮ ರೂಪಿಸುವುದಾದರೆ ಚಾಮರಾಜನಗರದಲ್ಲಿ ಭೂಮಿ ನೀಡಲು ಸಿದ್ಧ’ ಎಂದರು.

ಸಮತಾ ಸೈನಿಕ ದಳದ ರಾಷ್ಟ್ರೀಯ ಅಧ್ಯಕ್ಷ ಎಂ.ವೆಂಕಟಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಬುದ್ದಿಸ್ಟ್ ಸೊಸೈಟಿಯ ಸಿದ್ದರಾಜು, ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಮಾಜಿ ಅಧ್ಯಕ್ಷ ವೈ.ಮರಿಸ್ವಾಮಿ, ಬೀದರ್‌ನ ಮಿಳಿಂದ್ ಗುರೂಜಿ, ಪ್ರಶಾಂತ್, ಚಂದ್ರಶೇಖರ್, ಜಯಕಾಂತ್ ಉಪಸ್ಥಿತರಿದ್ದರು.

ಸಮತಾ ಸೈನಿಕ ದಳ ನಗರದಲ್ಲಿ ಆಯೋಜಿಸಿದ್ದ ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಕೋಟಿಗಾನಹಳ್ಳಿ ರಾಮಯ್ಯ ಅವರಿಗೆ ‘ಭೀಮ ರತ್ನ ಪ್ರಶಸ್ತಿ’ ಪ್ರದಾನ ಮಾಡಲಾಯಿತು. ಭೋಧಿದತ್ತ ಭಂತೇಜಿ, ಎಂ.ವೆಂಕಟಸ್ವಾಮಿ, ಮಿಳಿಂದ್ ಗುರೂಜಿ, ವೈ.ಮರಿಸ್ವಾಮಿ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಕೋಡೈತಿರುನಾಳ್ ಉತ್ಸವ ವೈಭವ

ಪ್ರಜಾವಾಣಿ ವಾರ್ತೆ

ಮೇಲುಕೋಟೆ (ಮಂಡ್ಯ ಜಿಲ್ಲೆ): ಇಲ್ಲಿನ ಶ್ರೀ ಚೆಲುವನಾರಾಯಣಸ್ವಾಮಿ ದೇವಾಲಯದಲ್ಲಿ ಕೋಡೈತಿರುನಾಳ್ ಉತ್ಸವದ ವೈಭವ ಮನೆಮಾಡಿದ್ದು, ಪ್ರತಿ ರಾತ್ರಿ ವಿಶೇಷ ಅಲಂಕಾರದ ಪೂಜೆಗಳು ನಡೆದಿವೆ.

ವೈರಮುಡಿ ಬ್ರಹ್ಮೋತ್ಸವ ಮುಗಿಯುತ್ತಿದ್ದಂತೆ ಆರಂಭವಾಗುವ ಕೋಡೈತಿರುನಾಳ್ ಮಹೋತ್ಸವ ಹದಿನೈದು ದಿನ ನಡೆಯುತ್ತದೆ. ಪ್ರತಿ ರಾತ್ರಿ ದೇವಾಲಯದ ಒಳಭಾಗದ ಪ್ರಾಕಾರದಲ್ಲಿ ನಡೆಯುತ್ತಿದೆ.

ಅಮ್ಮನವರ ಸನ್ನಿಧಿಯ ಬಳಿ ಮಂತ್ರಪಾರಾಯಣ, ರಾಮಾಯಣ, ವಿಶೇಷ ಪಾರಂಪರಿಕ ಸಂಸ್ಕೃತ ಕವನಗಳ ಬಹುಪರಾಕು ನಡೆಯುತ್ತದೆ. ಸಣ್ಣ ಹಿಮ್ಮೇಳದ ಸುತ್ತಿನಲ್ಲಿ ಚೆಲುವನಾರಾಯಣಸ್ವಾಮಿಯನ್ನು ಆರಾಧಿಸಲಾಗುತ್ತದೆ. ಪ್ರತಿದಿನವೂ ದಾನಿ ಭಕ್ತರು ಸೇವೆಯ ಹೊಣೆ ಹೊರುತ್ತಾರೆ. ಕೊಸಂಬರಿ, ಪಾನಕ, ಪ್ರಸಾದ ನೀಡಲಾಗುತ್ತಿದೆ.

17ರಂದು ವೈಮಾಳಿಗೆ ಕೋಡೈತಿರುನಾಳ್ ವೈಭವ: 17ರ ಅಮಾವಾಸ್ಯೆಯಂದು ಕೊಡೈತಿರುನಾಳ್ ನಡೆಯಲಿದ್ದು, ಚಿನ್ನದ ಆದಿಶೇಷನೊಂದಿಗೆ ಕಾಲು ಚಾಚಿಕೊಂಡು ಕುಳಿತ ಶೈಲಿಯಲ್ಲಿ ಅಲಂಕೃತಗೊಳ್ಳುವ ಚೆಲುವನಾರಾಯಣ ಮೂರ್ತಿ ವಿಶೇಷ ಗಮನ ಸೆಳೆಯುತ್ತದೆ.

ಇಡೀ ಉತ್ಸವ ಮಹಡಿಯ ಮೇಲೆ ನಡೆದು, ಕೊನೆಯಲ್ಲಿ ಉತ್ಸವ ಸರ್ಪನಡಿಗೆಯಲ್ಲೇ ಸಾಗುವುದು ವಿಶೇಷ. ದೇವಾಲಯದ ಮಹಡಿ ಪ್ರವೇಶಿಸಲು ಮತ್ತು ಚೆಲ್ವತಿರುನಾರಾಯಣಸ್ವಾಮಿಯ ವಿಮಾನಗೋಪುರ, ಗಂಡಭೇರುಂಡ ಸ್ವರೂಪಿ ರಾಜಗೋಪುರ ಪ್ರದಕ್ಷಿಣೆ ಮಾಡಲು ವರ್ಷಕ್ಕೊಮ್ಮೆ ಮಾತ್ರ ಭಕ್ತರಿಗೆ ಅವಕಾಶವಿರುತ್ತದೆ.

ರಾತ್ರಿ ದೇವಾಲಯವು ಎರಡು ಸಾಂಪ್ರದಾಯಿಕ ವಿಶೇಷಗಳಿಗೆ ಸಾಕ್ಷಿಯಾಗಲಿದೆ.

ಮೇಲುಕೋಟೆಯಲ್ಲಿ ಕೋಡೈತಿರುನಾಳ್ ಉತ್ಸವ ನೆರವೇರಿತು

ಗುಂಡು ಹಾರಿಸಿ ರಿಯಲ್ ಎಸ್ಟೇಟ್ ಉದ್ಯಮಿ ಹತ್ಯೆ

ವಿಜಯಪುರ: ಇಲ್ಲಿನ ಕೈಗಾರಿಕಾ ಪ್ರದೇಶದಲ್ಲಿ ಮಂಗಳ ವಾರ ವಾಹನಕ್ಕೆ ಟಿಪ್ಪರ್ ಲಾರಿಯಿಂದ ಡಿಕ್ಕಿ ಹೊಡೆಸಿ, ಗುಂಡುಗಳನ್ನು ಹಾರಿಸಿ, ರಿಯಲ್ ಎಸ್ಟೇಟ್ ಉದ್ಯಮಿ ರಾಜು ಬಾಪು ಖರೆ (48) ಹತ್ಯೆ ಮಾಡಲಾಗಿದೆ.

ರಾಜು ಬಾಪು

‘ಅಲಿಯಬಾದ್ ಗ್ರಾಮ ಪಂಚಾಯಿತಿ ಮಾಜಿ ಸದಸ್ಯರೂ ಆಗಿದ್ದ ಗೊಡಂದಡ್ಡಿ ಗ್ರಾಮದ ನಿವಾಸಿ ರಾಜು ಅವರ ಕೊಲೆಗೆ ನಿಖರ ಕಾರಣ ತಿಳಿದಿಲ್ಲ. ಆಸ್ತಿ ವಿವಾದದಿಂದ ಕೃತ್ಯ ನಡೆದಿರಬಹುದು ಎಂಬುದು ಪ್ರಾಥಮಿಕ ತನಿಖೆಯಲ್ಲಿ ಗೊತ್ತಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಸಚಿವ ಜಮೀರ್ ಅಹಮದ್ ಅವರು ಚಾಮರಾಜಪೇಟೆ ಚೆಲುವಾದಿಪಾಳ್ಯದಲ್ಲಿ ಆಯೋಜಿಸಿದ್ದ ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು. ಗೋವಿಂದರಾಜ್, ಎನ್. ಪ್ರಸಾದ್ ಸೇರಿದಂತೆ ಸ್ಥಳೀಯ ಮುಖಂಡರು ಉಪಸ್ಥಿತರಿದ್ದರು

ಹರಿಹರದ ಪಂಚಮಸಾಲಿ ಗುರುಪೀಠದ ವಚನಾನಂದ ಶ್ರೀಗಳ ವಿರುದ್ಧ ಟ್ರಸ್ಟಿ ಆರೋಪ

‘ಶ್ರೀಗಳಿಂದ ಮಸಾಜ್‌ಗೆ ವಿದ್ಯಾರ್ಥಿಗಳ ಬಳಕೆ’

ಪ್ರಜಾವಾಣಿ ವಾರ್ತೆ

ದಾವಣಗೆರೆ: ‘ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಗುರುಪೀಠದಿಂದ ಉಚ್ಚಾಟಿತರಾಗಿರುವ ವಚನಾನಂದ ಶ್ರೀಗಳು ಮಠದ ವಸತಿ ನಿಲಯದ ವಿದ್ಯಾರ್ಥಿಗಳಿಂದ ಬಲವಂತವಾಗಿ ಮಸಾಜ್ ಮಾಡಿಸಿಕೊಳ್ಳುತ್ತಿದ್ದರು’ ಎಂದು ಗುರುಪೀಠದ ಟ್ರಸ್ಟ್‌ನ ಸದಸ್ಯ ಚಂದ್ರಶೇಖರ್ ಪೂಜಾರ್ ಆರೋಪ ಮಾಡಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಅವರು, ‘ಸ್ವಾಮೀಜಿ ನಿತ್ಯ ನಾಲ್ಕೈದು ವಿದ್ಯಾರ್ಥಿಗಳಿಂದ ಮಸಾಜ್ ಮಾಡಿಸಿಕೊಳ್ಳುತ್ತಿದ್ದರು. ಈ ವಿಕೃತ ಭಾವ ಸಹಿಸಿಕೊಳ್ಳಲಾಗದೇ 60 ವಿದ್ಯಾರ್ಥಿಗಳ ಪೈಕಿ ಅನೇಕ ವಿದ್ಯಾರ್ಥಿಗಳು ವಸತಿ ನಿಲಯ ತೊರೆದಿದ್ದಾರೆ. ಈಗ ಐವರು ಮಾತ್ರ ಇದ್ದಾರೆ’ ಎಂದು ತಿಳಿಸಿದರು.

ವಿದ್ಯಾರ್ಥಿಗಳು, ಅವರ ಪಾಲಕರು ಪೊಲೀಸರಿಗೆ ದೂರು ನೀಡಲು ಮುಂದಾಗಿದ್ದರು. ದೂರು ನೀಡಿದ್ದರೆ ಪೋಕ್ಸೊ ಪ್ರಕರಣ ದಾಖಲಾಗಿ ಶ್ರೀಗಳ ಬಂಧನವಾಗುತ್ತಿತ್ತು. ಸಮುದಾಯದ ಹಿತದೃಷ್ಟಿಯಿಂದ ದೂರು ನೀಡದಂತೆ ಟ್ರಸ್ಟ್‌ನವರೇ ಪಾಲಕರನ್ನು ಸಮಾಧಾನ ಪಡಿಸಿದ್ದೇವೆ’ ಎಂದು ಸ್ಪಷ್ಟಪಡಿಸಿದರು.

‘ಶ್ರೀಗಳು ವಿದ್ಯಾರ್ಥಿಗಳಿಂದ ಮಸಾಜ್ ಮಾಡಿಸಿಕೊಳ್ಳುತ್ತಿದ್ದುದು 2 ತಿಂಗಳ ಹಿಂದೆ ಟ್ರಸ್ಟಿಗಳ ಗಮನಕ್ಕೆ ಬಂದಿದೆ. ಈ ಬಗ್ಗೆ ಸ್ವಾಮೀಜಿಗೆ ಬುದ್ಧಿ ಹೇಳಿ ತಿದ್ದಲು ಮುಂದಾದಾಗ, ಅವರು ಟ್ರಸ್ಟ್ ವಿರುದ್ಧವೇ ತಿರುಗಿಬಿದ್ದರು. ತಮ್ಮನ್ನು ತಾವು ರಕ್ಷಿಸಿಕೊಳ್ಳಲು ‘ಲೆಕ್ಕ ಕೊಡಿ’ ಹೋರಾಟ ಶುರು ಮಾಡಿಸಿದ್ದಾರೆ’ ಎಂದು ಆರೋಪಿಸಿದರು.

‘ಮಸಾಜ್’ ಸ್ವಾಮೀಜಿಗೆ ನೈತಿಕತೆ ಇದ್ದರೆ ಕೂಡಲೇ ಮಠ ಬಿಟ್ಟು ಹೊರಹೋಗಲಿ. ಹೋಗದಿದ್ದರೆ ಹೇಗೆ ಕಳಿಸಬೇಕು ಎಂಬುದು ಟ್ರಸ್ಟಿಗಳಿಗೆ ಗೊತ್ತಿದೆ’ ಎಂದು ಅವರು ಸವಾಲೆಸೆದರು.

‘ಮಠದ ವಿಚಾರದಲ್ಲಿ ಮಾಜಿ ಶಾಸಕ ಎಚ್.ಎಸ್. ಶಿವಶಂಕರ್ ಅವರು ರಾಜಕೀಯ ಮಾಡುತ್ತಿರುವುದು ಸರಿಯಲ್ಲ. ರಾಜಕೀಯ ಏನಿದ್ದರೂ ಕ್ಷೇತ್ರದ ಜನರ ಮುಂದೆ ಮಾಡಲಿ. ಸಮುದಾಯದ ಪೀಠವನ್ನು ಅಡ್ಡವಾಗಿಟ್ಟುಕೊಂಡು ರಾಜಕೀಯ ಮಾಡುವುದನ್ನು ನಿಲ್ಲಿಸಲಿ’ ಎಂದು ಹೇಳಿದರು.

‘ದಿವಂಗತ ಶಾಮನೂರು ಶಿವಶಂಕರಪ್ಪ ಅವರೊಂದಿಗೆ ಟ್ರಸ್ಟಿ ಬಿ.ಸಿ. ಉಮಾಪತಿ ಅವರು ಉತ್ತಮ ಒಡನಾಟ ಹೊಂದಿದ್ದರು. ಸಿರಿಗೆರೆ ಶ್ರೀಗಳೊಂದಿಗೂ ಅವರಿಗೆ ಉತ್ತಮ ಬಾಂಧವ್ಯ ಇದೆ. ಕೆಲವೇ ವರ್ಷಗಳ ಹಿಂದೆ ಜಿಲ್ಲೆಗೆ ಬಂದಿರುವ ಸ್ವಾಮೀಜಿಯು, ಇವರ ಒಡನಾಟದ ಬಗ್ಗೆ ಇಲ್ಲಸಲ್ಲದ ಆರೋಪ ಮಾಡುವುದು ಸರಿಯಲ್ಲ’ ಎಂದು ಹೇಳಿದರು.

ವಿಡಿಯೊ ಪ್ರದರ್ಶನ: ವಚನಾನಂದ ಶ್ರೀ ಅವರು ಪೀಠದ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳನ್ನು ಅವಾಚ್ಯ ಪದಗಳಿಂದ ನಿಂದಿಸಿದ್ದಾರೆ ಎನ್ನಲಾದ ವಿಡಿಯೊವನ್ನು ಚಂದ್ರಶೇಖರ್ ಪೂಜಾರ್ ಪ್ರದರ್ಶಿಸಿದರು.

‘ಮಸಾಜ್ ಮಾಡಿಸಿಕೊಳ್ಳುವುದು, ಬಟ್ಟೆ ತೊಳೆಸಿಕೊಳ್ಳುವುದು ಸೇರಿ ವೈಯಕ್ತಿಕ ಕೆಲಸಗಳಿಗೆ ವಚನಾನಂದ ಶ್ರೀಗಳು ನಮ್ಮನ್ನು ಬಳಸಿಕೊಳ್ಳುತ್ತಿದ್ದರು’ ಎಂದು ವಿದ್ಯಾರ್ಥಿಗಳು ಆರೋಪಿಸಿರುವುದು ವಿಡಿಯೊದಲ್ಲಿದೆ.

‘ಸೂಕ್ತ ಸಮಯದಲ್ಲಿ ಸೂಕ್ತ ಉತ್ತರ’

‘ಟ್ರಸ್ಟ್‌ನವರ ಆರೋಪಗಳಿಗೆ ಸೂಕ್ತ ಸಮಯದಲ್ಲಿ ಸೂಕ್ತ ಉತ್ತರ ನೀಡುವೆ’ ಎಂದು ಹರಿಹರದ ಪಂಚಮಸಾಲಿ ಗುರುಪೀಠದಿಂದ ಉಚ್ಚಾಟಿತರಾಗಿರುವ ವಚನಾನಂದ ಸ್ವಾಮೀಜಿ ಸಂಜೆ ಹರಿಹರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ವಚನಾನಂದ ಸ್ವಾಮೀಜಿ

‘ಸಮುದಾಯ ಹಾಗೂ ಪೀಠದ ಘನತೆ ಹೆಚ್ಚಿಸುವುದೇ ನಮ್ಮ ಆದ್ಯತೆ. ಭಕ್ತರು ತನು, ಮನ, ಧನದ ಮೂಲಕ ಸೇವೆ ಸಲ್ಲಿಸಿದ್ದರಿಂದ ಪೀಠವು ಇಂದು ಭವ್ಯವಾಗಿ ಕಂಗೊಳಿಸುತ್ತಿದೆ. ನಾನು ಮಠದಲ್ಲಿ ಇದ್ದೇನೆ, ಪೀಠದಲ್ಲೇ ಮುಂದುವರಿಯುವೆ. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಬರಬೇಕು. ಭಕ್ತರಿಗಾಗಿಯೇ ತ್ರಿವಿಧ ದಾಸೋಹ ನಡೆಯುತ್ತಿದೆ. ಪಂಚದಾಸೋಹ ಪೀಠ ಆಗಬೇಕು ಎಂಬುದು ನಮ್ಮ ಉದ್ದೇಶವಾಗಿದೆ’ ಎಂದರು.

‘ನಿಂದನೆಗಳಿವೆ. ಮಾಡಬೇಕಾದ ಕೆಲಸ ಸಾಕಷ್ಟಿದೆ. ಅದರಲ್ಲಿ ತೊಡಗಿಸಿಕೊಳ್ಳೋಣ. ಶ್ವಾಸಗುರು ನಾನು ವರ್ತಮಾನದಲ್ಲಿ ಇರಬೇಕು ಎಂಬ ಉದ್ದೇಶವಿದೆ. ಬುದ್ಧ, ಬಸವ ಆಗುವುದು ಸುಲಭವಲ್ಲ. ಸನ್ಯಾಸವು ಬೆಂಕಿ ಬೆಳಕಿನ ದಾರಿಯಾಗಿದೆ’ ಎಂದು ಹೇಳಿದರು.

ಸೋಂಕು: ನೀರಾನೆ ‘ಹಂಸಿಣಿ’ ಸಾವು

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಇಲ್ಲಿನ ತ್ಯಾವರೆಕೊಪ್ಪ ಹುಲಿ ಸಿಂಹ ಧಾಮದಲ್ಲಿ ತರಬೇತಿ ನಿರತ ಪಶು ವೈದ್ಯೆ ಡಾ. ಸಮೀಕ್ಷಾ ರೆಡ್ಡಿ ಸಾವಿಗೆ ಕಾರಣವಾಗಿದ್ದ ನೀರಾನೆ ‘ಹಂಸಿಣಿ’ ಮಂಗಳವಾರ ಗರ್ಭಾಶಯದ ಸೋಂಕಿನಿಂದ ಮೃತಪಟ್ಟಿದೆ.

ನೀರಾನೆಯು ಗರ್ಭ ಧರಿಸಿ ಮಾರ್ಚ್‌ಗೆ ಎಂಟು ತಿಂಗಳು ಕಳೆದಿದ್ದರೂ ಪ್ರಸವದ ಲಕ್ಷಣಗಳು ಕಂಡುಬಂದಿರಲಿಲ್ಲ. ಭ್ರೂಣ ಗರ್ಭದಲ್ಲೇ ಮೃತಪಟ್ಟಿತ್ತು. ಈಚೆಗೆ ಆಹಾರ ಸೇವನೆ ಕಡಿಮೆ ಮಾಡಿ ಮಂದವಾಗಿತ್ತು. ಏ. 10ರಿಂದ ಮೈಸೂರಿನ ಕರ್ನಾಟಕ ಮೃಗಾಲಯ ಪ್ರಾಧಿಕಾರದ ವನ್ಯಜೀವಿ ಪಶುವೈದ್ಯರ ತಂಡ ನಿಗಾ ವಹಿಸಿ ಅದರ ಆರೋಗ್ಯ ತಪಾಸಣೆಯಲ್ಲಿ ತೊಡಗಿತ್ತು ಎಂದು ಹುಲಿ ಸಿಂಹಧಾಮದ ಸಿಇಒ ಕೆ.ವಿ.ಅಮರಾಕ್ಷರ ತಿಳಿಸಿದ್ದಾರೆ.

ಭ್ರೂಣ ಮೃತಪಟ್ಟಿದ್ದರಿಂದ ಗರ್ಭಾಶಯದಲ್ಲಿ ಸೋಂಕು ಇರುವುದು ಪತ್ತೆಯಾಗಿತ್ತು. ಈ ಸೋಂಕಿನಿಂದ ಬಹು ಅಂಗಾಂಗಗಳ ವೈಫಲ್ಯವಾಗಿ ಮೃತಪಟ್ಟಿದೆ.

ನೀರಾನೆ ಹಂಸಿಣಿ

ಹಂಸಿಣಿ ಆಹಾರ ಸೇವಿಸುತ್ತಿಲ್ಲವಾದ್ದರಿಂದ ಮಾರ್ಚ್ 19ರ ರಾತ್ರಿ ಡಾ.ಸಮೀಕ್ಷಾ ಅದರ ಆರೋಗ್ಯ ತಪಾಸಣೆಗೆ ಮುಂದಾಗಿದ್ದರು. ಆಗ ನೀರಾನೆ ದಾಳಿ ನಡೆಸಿ ಗಾಯಗೊಂಡಿದ್ದ ವೈದ್ಯೆ ಮರುದಿನ ಮೃತಪಟ್ಟಿದ್ದರು.

ವಿಷ್ಣು ಈಗ ಒಬ್ಬಂಟಿ: ತ್ಯಾವರೆಕೊಪ್ಪ ಸಿಂಹ ಧಾಮಕ್ಕೆ 2022ರ ಜನವರಿಯಲ್ಲಿ ಮೈಸೂರು ಮೃಗಾಲಯದಿಂದ ನೀರಾನೆಗಳಾದ ವಿಷ್ಣು, ಹಂಸಿಣಿ ಜೋಡಿ ಕರೆತರಲಾಗಿತ್ತು. ಈ ಹಿಂದೆ ಎರಡು ಬಾರಿ ‘ಹಂಸಿಣಿ’ ಮರಿಗಳಿಗೆ ಜನ್ಮ ನೀಡಿದ್ದು, ಅವು ಬದುಕಿರಲಿಲ್ಲ. ‘ಹಂಸಿಣಿ’ ಸಾವಿನೊಂದಿಗೆ ‘ವಿಷ್ಣು’ ಈಗ ಒಬ್ಬಂಟಿಯಾಗಿದಾನೆ.

‘ಕೈ’ ಶಿಸ್ತುಕ್ರಮ ಮುಸ್ಲಿಮರ ಮೇಲಷ್ಟೇ’

ಉಪ ಚುನಾವಣೆ ಫಲಿತಾಂಶದಿಂದ ರಾಜಕೀಯ ಸ್ಥಿತ್ಯಂತರ: ಎಸ್‌ಡಿಪಿಐ

ಪ್ರಜಾವಾಣಿ ವಾರ್ತೆ

ಮಂಗಳೂರು: ‘ಕಾಂಗ್ರೆಸ್‌ನಲ್ಲಿ ಶಿಸ್ತುಕ್ರಮ ಏನಿದ್ದರೂ ಅಲ್ಪಸಂಖ್ಯಾತರ ವಿರುದ್ಧ ಮಾತ್ರ’ ಎಂದು ಸೋಷಿಯಲ್ ಡೆಮಾಕ್ರೆಟಿಕ್ ಪಾರ್ಟಿ ಆಫ್ ಇಂಡಿಯಾ (ಎಸ್‌ಡಿಪಿಐ) ರಾಜ್ಯ ಘಟಕದ ಅಧ್ಯಕ್ಷ ಅಬ್ದುಲ್ ಮಜೀದ್ ಇಲ್ಲಿ ಹೇಳಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಮುಖ್ಯಮಂತ್ರಿ ಸಿದ್ದಾರಾಮಯ್ಯ ಅವರ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್ ಸೇರಿದಂತೆ ಹಲವರ ವಿರುದ್ಧ ಶಿಸ್ತು ಕ್ರಮಕ್ಕೆ ಕಾಂಗ್ರೆಸ್‌ನಲ್ಲಿ ತಯಾರಿ ನಡೆದಿದೆ. ಈ ತಾರತಮ್ಯವನ್ನು ಕಾಂಗ್ರೆಸ್‌ನ ಅಲ್ಪಸಂಖ್ಯಾತ ನಾಯಕರು ಪ್ರಶ್ನಿಸಬೇಕು’ ಎಂದರು.

‘ರಾಜ್ಯದಲ್ಲಿ ಹಿಂದಿನ ಚುನಾವಣೆಗಳಲ್ಲಿ ಪಕ್ಷ ವಿರೋಧಿ ಚಟುವಟಿಕೆ ನಡೆಸಿದ್ದ ಬಲಾಢ್ಯ ಸಮುದಾಯಗಳ ನಾಯಕರ ವಿರುದ್ಧ ಶಿಸ್ತು ಕ್ರಮ ಕೈಗೊಂಡಿಲ್ಲ. ಆದರೆ, ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಪಕ್ಷ ವಿರೋಧಿ ಚಟುವಟಿಕೆ ಆರೋಪದ ಮೇಲೆ ಅಲ್ಪಸಂಖ್ಯಾತ ಮುಖಂಡರ ವಿರುದ್ಧ ಶಿಸ್ತುಕ್ರಮಕ್ಕೆ ಮುಂದಾಗಿದೆ’ ಎಂದರು.

‘ಈ ಉಪಚುನಾವಣೆ ಫಲಿತಾಂಶ ರಾಜಕೀಯ ಸ್ಥಿತ್ಯಂತರಕ್ಕೆ ಕಾರಣವಾಗಲಿದೆ. ಜಿಬಿಎ ಚುನಾವಣೆ ಯಲ್ಲಿ ಹಾಗೂ 2028ರ ವಿಧಾನಸಭಾ ಚುನಾವಣೆಯಲ್ಲಿ ಜನ ಕಾಂಗ್ರೆಸ್‌ಗೆ ತಕ್ಕ ಪಾಠ ಕಲಿಸಲಿದ್ದಾರೆ’ ಎಂದರು. ಅಲ್ಪಸಂಖ್ಯಾತರ ಅಭಿವೃದ್ಧಿ ಸಚಿವ ಬಿ. ಜೆಡ್ ಜಮೀರ್ ಅಹಮದ್ ಖಾನ್ ಈ ಉಪಚುನಾವಣೆಯಲ್ಲಿ ಎಸ್‌ಡಿಪಿಐ ಅಭ್ಯರ್ಥಿಗೆ ಹಣಕಾಸಿನ ನೆರವು ನೀಡಿದ್ದಾರೆ ಎಂಬ ಆರೋಪವನ್ನು ಅವರು ಅಲ್ಲಗಳೆದರು.

‘ಹೈಕಮಾಂಡ್‌ಗೆ ಬೇಸರವಾಗಿದೆ’

ಚಿಕ್ಕಬಳ್ಳಾಪುರ: ದಾವಣಗೆರೆ ದಕ್ಷಿಣ ಕ್ಷೇತ್ರದ ಉಪ ಚುನಾವಣೆ ಸಂದರ್ಭದ ಬೆಳವಣಿಗೆಗಳಿಂದ ಹೈಕಮಾಂಡ್‌ಗೆ ಬೇಸರವಾಗಿದೆ. ಹೈಕಮಾಂಡ್ ಸೂಚನೆಯಂತೆ ನಸೀರ್ ಅಹ್ಮದ್ ವಜಾ ಆಗಿದೆ’ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ‘ಹೈಕಮಾಂಡ್ ನಿರ್ಧಾರವನ್ನು ನಾವು ಪ್ರಶ್ನಿಸಲಾಗದು’ ಎಂದರು. ಸಚಿವ ಸ್ಥಾನ ಕುರಿತು ಹೈಕಮಾಂಡ್, ಮುಖ್ಯಮಂತ್ರಿ ನಿರ್ಧಾರಕ್ಕೆ ಬದ್ಧ ಎಂದು ಸ್ಪಷ್ಟಪಡಿಸಿದರು.

ಟಿಕೆಟ್ ಸಂಘರ್ಷದಿಂದ ಪಕ್ಷಕ್ಕೆ ನಷ್ಟ: ತನ್ವೀರ್‌ಸೇಠ್

ಮೈಸೂರು: ‘ಶಾಮನೂರು ಕುಟುಂಬದೊಂದಿಗೆ ಮುಸ್ಲಿಂ ಸಮುದಾಯದ ಬಾಂಧವ್ಯವನ್ನು ಕೆಡಿಸುವ ಪ್ರಯತ್ನದಿಂದಾಗಿ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯ ಗೆಲುವಿನ ಅಂತರ ಕಡಿಮೆಯಾಗಲಿದೆ’ ಎಂದು ಶಾಸಕ ತನ್ವೀರ್‌ಸೇಠ್ ಪ್ರತಿಪಾದಿಸಿದರು.

ಮಂಗಳವಾರ ಪತ್ರಕರ್ತರಿಗೆ ಪ್ರತಿಕ್ರಿಯಿಸಿ, ‘ಪಕ್ಷದ ಸೂಚನೆಯನ್ನು ಕೆಲವರು ಪಾಲಿಸದೆ, ಟಿಕೆಟ್ ಸಂಘರ್ಷವನ್ನು ವೈಯಕ್ತಿಕವಾಗಿ ಪರಿಗಣಿಸಿ ಮತದಾರರಲ್ಲಿ ಗೊಂದಲ ಸೃಷ್ಟಿಸಿದರು. ಇದರಿಂದ ಬಹಳಷ್ಟು ಜನ ಮತ ಹಾಕಲು ಬರಲಿಲ್ಲ’ ಎಂದರು.

‘ಉಪ ಚುನಾವಣೆಯಲ್ಲಿನ ಬೆಳವಣಿಗೆಯು ನಮ್ಮ ಕಣ್ಣು ತೆರೆಸಬೇಕು. ಪ್ರತ್ಯೇಕ ಜಾತಿಗಾಗಿ ಅಲ್ಲ, ಸಿದ್ಧಾಂತಕ್ಕಾಗಿ ಪಕ್ಷ ಎಂಬುದನ್ನು ಮನವರಿಕೆ ಮಾಡಿಕೊಳ್ಳಬೇಕು. ಮುಸ್ಲಿಮರು ಟಿಕೆಟ್ ಕೇಳಿದ್ದು ತಪ್ಪಲ್ಲ. ಅದರಲ್ಲಿ ವೈರತ್ವ ಸಾಧಿಸಬಾರದು’ ಎಂದರು.

‘ಉಪ ಚುನಾವಣೆಯಲ್ಲಿ ಅನುಕಂಪವಿದ್ದ ಕಡೆ ಟಿಕೆಟ್ ಕೊಡುತ್ತಾರೆ. ನನಗೂ ಹಾಗೇ ಸಿಕ್ಕಿತ್ತು. ಯು.ಟಿ. ಖಾದರ್, ಕೃಷ್ಣ ಭೈರೇಗೌಡರಿಗೂ ಹಾಗೇ ಸಿಕ್ಕಿದೆ. ಇಂತಹ ಬೆಳವಣಿಗೆಗಳನ್ನು ರೆಬೆಲ್ ನಾಯಕರು ಗಂಭೀರವಾಗಿ ಪರಿಗಣಿಸಬಾರದು’ ಎಂದು ಸಲಹೆ ನೀಡಿದರು.

ಸಂಪುಟಕ್ಕೆ ಸರ್ಜರಿ ಖಚಿತ: ‘15–20 ಶಾಸಕರು ದೆಹಲಿಗೆ ಹೋಗಿದ್ದಾರೆ. ಹೀಗೆ ಹೋಗುವವರ ಪಟ್ಟಿಯಲ್ಲಿ ನನ್ನ ಹೆಸರೂ ಇತ್ತು. ಆದರೆ ನನಗೆ ನನ್ನದೇ ಆದ ತೂಕವಿದೆ. ಕಾಡಿ–ಬೇಡಿ ಸಚಿವ ಸ್ಥಾನ ಪಡೆಯುವ ಅಗತ್ಯವಿಲ್ಲ’ ಎಂದರು.

> ಪಕ್ಷಕ್ಕಿಂತ ಯಾರೂ ಮುಖ್ಯರಲ್ಲ. ಸಿಎಂ ಮತ್ತು ಪಕ್ಷದ ಹೈಕಮಾಂಡ್‌ಗೆ ಮಾಹಿತಿ ಇರುತ್ತದೆ. ನಾನು ತಪ್ಪು ಮಾಡಿದರೂ ಶಿಸ್ತು ಕ್ರಮ ಆಗುತ್ತದೆ.
> **ಎಂ.ಬಿ.ಪಾಟೀಲ,** ಸಚಿವ

‘ಅಲ್ಪಸಂಖ್ಯಾತರ ಘಟಕಕ್ಕೆ ಶೀಘ್ರ ನೇಮಕ’

ಬೆಳಗಾವಿ: ‘ಕೆಪಿಸಿಸಿ ಅಲ್ಪಸಂಖ್ಯಾತ ವಿಭಾಗದ ಅಧ್ಯಕ್ಷ ಸ್ಥಾನಕ್ಕೆ ಅಬ್ದುಲ್ ಜಬ್ಬಾರ್ ರಾಜೀನಾಮೆ ನೀಡಿದ್ದು, ಆ ಸ್ಥಾನಕ್ಕೆ ಮತ್ತೊಬ್ಬ ಮುಸ್ಲಿಂ ಮುಖಂಡನ ನೇಮಕವಾಗಲಿದೆ. ಪಕ್ಷ ವಿರೋಧಿ ಚಟುವಟಿಕೆಗಳಿಗಾಗಿ ಯಾರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ ಎಂಬುದು ಗೊತ್ತಿಲ್ಲ’ ಎಂದು ಸಚಿವ ಸತೀಶ ಜಾರಕಿಹೊಳಿ ತಿಳಿಸಿದರು.

‘ಸಚಿವ ಸ್ಥಾನದ ಆಕಾಂಕ್ಷಿಗಳು ಹೈಕಮಾಂಡ್ ಜತೆಗೆ ಸಭೆ ನಡೆಸಿದ್ದಾರೆ. ಮೂರು ಬಾರಿ ಆಯ್ಕೆಯಾದ ಶಾಸಕರು ಸಂಪುಟ ಸ್ಥಾನಕ್ಕೆ ಹಕ್ಕು ಮಂಡಿಸಿದ್ದಾರೆ. ಆದರೆ, ಅದನ್ನು ಹೈಕಮಾಂಡ್ ನಿರ್ಧರಿಸಲಿದೆ’ ಎಂದು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

ಶಾಸಕ ಆಸಿಫ್ ಸೇಠ್ ಅವರು, ‘ನಾನೂ ಸಚಿವ ಸ್ಥಾನದ ಆಕಾಂಕ್ಷಿ. ಆದರೆ, ಹೈಕಮಾಂಡ್ ಭೇಟಿ ಆಗಿಲ್ಲ. ಸಚಿವ ಜಾರಕಿಹೊಳಿ ಅವರ ಸೂಚನೆಗಳನ್ನು ಪಾಲಿಸುವೆ’ ಎಂದರು.

‘ನಟನ – 2025’ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ಚಿತ್ರ

ಮೈಸೂರಿನಲ್ಲಿ ನಟನ ರಂಗಸಂಸ್ಥೆಯು ಮಂಗಳವಾರದಿಂದ ಆಯೋಜಿಸಿರುವ ‘ರಜಾಮಜಾ’ ಮಕ್ಕಳ ಬೇಸಿಗೆ ಶಿಬಿರದಲ್ಲಿ ಚಲನಚಿತ್ರ ನಿರ್ದೇಶಕ ತರುಣ್ ಸುಧೀರ್ ಅವರು ಹಿರಿಯ ಕಲಾವಿದೆ ರಾಮೇಶ್ವರಿ ವರ್ಮ ಅವರಿಗೆ ‘ನಟನ – 2025’ ಪ್ರಶಸ್ತಿ ಪ್ರದಾನ ಮಾಡಿದರು. ಸಂಸ್ಥಾಪಕ ಕಾರ್ಯದರ್ಶಿ ಮಂಡ್ಯ ರಮೇಶ್, ನಟಿ ನಯನಾ, ನಟನ ಅಧ್ಯಕ್ಷ ಕೆ.ಎಸ್. ಆನಂದ ಬಾಬು, ಶಿಕ್ಷಣೋದ್ಯಮಿ ವಾಸುದೇವ ಭಟ್ ಹಾಗೂ ಮಂಡ್ಯ ರಮೇಶ್ ಪತ್ನಿ ಸರೋಜಾ ಹೆಗಡೆ ಜೊತೆಯಾದರು

ಸಮಾಲೋಚನಾ ಸಭೆ ಇದೇ 17ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾನಸಿಕ ಆರೋಗ್ಯ ವೃದ್ಧಿಗಾಗಿ ಡಿಜಿಟಲ್ ತಂತ್ರಜ್ಞಾನದ ನಿರ್ವಹಣೆ ಬಗ್ಗೆ ನೀತಿ ರೂಪಿಸಲು ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆಯು (ನಿಮ್ಹಾನ್ಸ್) ಇದೇ 17ಕ್ಕೆ ಸಮಾಲೋಚನಾ ಸಭೆ ಹಮ್ಮಿಕೊಂಡಿದೆ.

ಈ ಸಭೆಯು ನಿಮ್ಹಾನ್ಸ್–ಐಸಿಎಂಆರ್ ಸೆಂಟರ್ ಫಾರ್ ಅಡ್ವಾನ್ಸ್ಡ್ ರಿಸರ್ಚ್ ಮತ್ತು ‘ಸರ್ವೀಸ್ ಫಾರ್ ಹೆಲ್ದಿ ಯೂಸ್ ಆಫ್ ಟೆಕ್ನಾಲಜಿ ಕ್ಲಿನಿಕ್’ (ಶಟ್) ಸಹಯೋಗದಲ್ಲಿ ನಡೆಯಲಿದೆ. ‘ತಂತ್ರಜ್ಞಾನ ವ್ಯಸನ ನಿರ್ವಹಣೆ’ ಬಗ್ಗೆ ಸಭೆಯಲ್ಲಿ ತಜ್ಞರು ಚರ್ಚಿಸಲಿದ್ದಾರೆ.

ಡಿಜಿಟಲ್ ಸಾಧನಗಳ ಸುರಕ್ಷಿತ ಬಳಕೆಯ ಕುರಿತು ರಾಷ್ಟ್ರೀಯ ಮಟ್ಟದಲ್ಲಿ ಮಾರ್ಗಸೂಚಿ ರೂಪಿಸುವ ಜತೆಗೆ, ಅಗತ್ಯ ಶಿಫಾರಸುಗಳನ್ನು ಕೇಂದ್ರಕ್ಕೆ ಸಲ್ಲಿಸಲು ನಿಮ್ಹಾನ್ಸ್ ನಿರ್ಧರಿಸಿದೆ.

‘ದೇಶದಲ್ಲಿ ಡಿಜಿಟಲ್ ತಂತ್ರಜ್ಞಾನ ಬಳಕೆಗೆ ಅನುಗುಣವಾಗಿ ಮಾನಸಿಕ ಆರೋಗ್ಯ ರಕ್ಷಣೆಗೆ ಉತ್ತೇಜಿಸಬೇಕಿದೆ. ಡಿಜಿಟಲ್ ತಂತ್ರಜ್ಞಾನದ ಸುರಕ್ಷಿತ ಮತ್ತು ಜವಾಬ್ದಾರಿಯುತ ಬಳಕೆಗಾಗಿ ಜಾರಿಗೆ ತರಬಹುದಾದ ಮಾರ್ಗಸೂಚಿ, ಶಿಫಾರಸುಗಳನ್ನು ಸಿದ್ಧಪಡಿಸುವುದು ಈ ಸಭೆಯ ಉದ್ದೇಶ. ಮಾನಸಿಕ ಆರೋಗ್ಯ ತಜ್ಞರು, ವಿವಿಧ ಖಾಸಗಿ ಹಾಗೂ ಸರ್ಕಾರಿ ವೈದ್ಯಕೀಯ ಸಂಸ್ಥೆಗಳ ಪ್ರತಿನಿಧಿಗಳು, ಆರೋಗ್ಯ ಸಚಿವಾಲಯದ ಪ್ರತಿನಿಧಿಗಳು ಸೇರಿದಂತೆ ತಜ್ಞರು ಸಭೆಯಲ್ಲಿ ಭಾಗವಹಿಸಲಿದ್ದಾರೆ’ ಎಂದು ನಿಮ್ಹಾನ್ಸ್ ತಿಳಿಸಿದೆ.

ಚಟಿಕೆ ಸುದ್ದಿ

ಬಾಲಕ ಸಜೀವ ದಹನ

ಗದಗ: ತಾಲ್ಲೂಕಿನ ಹೊಂಬಳ ಗ್ರಾಮದಲ್ಲಿ ಸೋಮವಾರ ರಾತ್ರಿ ಕ್ರೂಸರ್ ವಾಹನದಲ್ಲಿ ಸೊಳ್ಳೆ ಬತ್ತಿ ಹಚ್ಚಿಕೊಂಡು ಮಲಗಿದ್ದ ಸದಾನಂದ ಉಪ್ಪಾರ (14) ಎಂಬ ಬಾಲಕ ಸಜೀವ ದಹನ ಆಗಿದ್ದಾನೆ.

‘ಹುಬ್ಬಳ್ಳಿ ತಾಲ್ಲೂಕಿನ ತಾರಿಹಾಳ ಗ್ರಾಮದ ಸದಾನಂದ ಉಪ್ಪಾರ, ಹೊಂಬಳದಲ್ಲಿ ಇರುವ ಅಜ್ಜಿ ಮನೆಯಲ್ಲಿ ಉಳಿದುಕೊಂಡು ಓದುತ್ತಿದ್ದ. ಬೇಸಿಗೆ ಕಾರಣಕ್ಕೆ ಆತ ಮನೆ ಎದುರಿದ್ದ ಕ್ರೂಸರ್ ವಾಹನದಲ್ಲಿ ಸೊಳ್ಳೆ ಬತ್ತಿ ಹಚ್ಚಿಕೊಂಡು ಮಲಗಿದ್ದ. ಸೊಳ್ಳೆ ಬತ್ತಿಯ ಕಿಡಿಯು ವಾಹನದ ಸೀಟಿಗೆ ತಗುಲಿ, ಬೆಂಕಿ ಎಲ್ಲೆಡೆ ವ್ಯಾಪಿಸಿತು.

‘ಆತ ವಾಹನದಿಂದ ಹೊರಬರಲು ಆಗದೇ, ಸಜೀವ ದಹನವಾದ. ಆತನ ಅಣ್ಣ ಮೈಲಾರಿ ಉಪ್ಪಾರ (16) ಬೆಂಕಿ ಕಾಣಿಸಿಕೊಂಡ ಕೂಡಲೇ ಜಿಗಿದು, ಪಾರಾದ’ ಎಂದು ಗದಗ ಗ್ರಾಮೀಣ ಠಾಣೆ ಪೊಲೀಸರು ತಿಳಿಸಿದ್ದಾರೆ.

ಉರುಳಾದ ಜೋಕಾಲಿ: ಬಾಲಕಿ ಸಾವು

ಚಿಕ್ಕಮಗಳೂರು: ಜೋಕಾಲಿಗೆ ಹಾಕಿದ್ದ ಸೀರೆಯೇ ಉರುಳಾಗಿ ಸುತ್ತಿಕೊಂಡು ತಾಲ್ಲೂಕಿನ ಹೆಬ್ಬಳ್ಳಿ ಗ್ರಾಮದಲ್ಲಿ ಬಾಲಕಿಯೊಬ್ಬಳು ಮೃತಪಟ್ಟಿದ್ದಾಳೆ.

ಗ್ರಾಮದ ಲೋಕೇಶ್ ಮತ್ತು ಲತಾ ಅವರ ಪುತ್ರಿ ಲೇಖನ (10) ಮೃತಪಟ್ಟ ಬಾಲಕಿ. ಸೋಮವಾರ ಮನೆಯಲ್ಲಿ ಯಾರೂ ಇಲ್ಲದ ವೇಳೆ ಬಾಲಕಿ ಜೋಕಾಲಿಯಲ್ಲಿ ಕುಳಿತುಕೊಂಡು ಆಟವಾಡಿದ್ದಾಳೆ. ಜೋಕಾಲಿಯ ಸೀರೆ ಸುರುಳಿಯಂತೆ ಸುತ್ತಿಕೊಂಡು ಉರುಳಾಗಿದ್ದು, ಬಾಲಕಿ ಸ್ಥಳದಲ್ಲೇ ಮೃತಪಟ್ಟಿದ್ದಾಳೆ.

ಪೋಷಕರು ಮನೆಗೆ ಬಂದಾಗ ಬಾಲಕಿ ಮೃತಪಟ್ಟಿರುವುದು ಗೊತ್ತಾಗಿದೆ. ಗ್ರಾಮಾಂತರ ಠಾಣೆ ಪೊಲೀಸರು ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದ ಬಳಿಕ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಜಿಲ್ಲಾಸ್ಪತ್ರೆಯಲ್ಲಿ ಪ್ರಾಣಿ ರಕ್ತ ಪರೀಕ್ಷೆ: ನೌಕರನ ತಲೆದಂಡ

ಕೋಲಾರ: ನಗರದ ಎಸ್‌ಎನ್‌ಆರ್ ಜಿಲ್ಲಾ ಆಸ್ಪತ್ರೆಯಲ್ಲಿ ಪ್ರಾಣಿಗಳ ರಕ್ತ ಪರೀಕ್ಷೆ ನಡೆಸಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ‘ಪ್ರಜಾವಾಣಿ’ ವರದಿ ಬೆನ್ನಲೇ ನೌಕರನ ತಲೆದಂಡವಾಗಿದೆ.

ಎನ್‌ಪಿಸಿಡಿಸಿಎಸ್ ಕಾರ್ಯಕ್ರಮದಡಿ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಪ್ರಯೋಗಾಲಯ ಶಾಖೆಯ ತಂತ್ರಜ್ಞ ಬಿ.ರಾಘವೇಂದ್ರ ಎಂಬುವರನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ಕರ್ತವ್ಯದಿಂದ ಬಿಡುಗಡೆಗೊಳಿಸಲಾಗಿದೆ. ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ.ಎಂ. ಜಗದೀಶ್ ಮಂಗಳವಾರ ಈ ಆದೇಶ ಹೊರಡಿಸಿದ್ದಾರೆ.

‘ಪ್ರಜಾವಾಣಿ’ಯಲ್ಲಿ ಮಂಗಳವಾರ ಪ್ರಕಟವಾಗಿದ್ದ ‘ಜಿಲ್ಲಾ ಆಸ್ಪತ್ರೆಯಲ್ಲಿ ಪ್ರಾಣಿಗಳ ರಕ್ತ ಪರೀಕ್ಷೆ’ ವರದಿ ಗಮನಿಸಿದ ಜಿಲ್ಲಾಧಿಕಾರಿ ಎಂ.ಆರ್. ರವಿ, ಈ ಸಂಬಂಧ ತಕ್ಷಣ ಕ್ರಮ ವಹಿಸುವಂತೆ ಸೂಚನೆ ನೀಡಿದ್ದರು. ಅಲ್ಲದೇ, ಪ್ರಕರಣ ನಡೆದು ಮೂರು ತಿಂಗಳಾಗಿದ್ದರೂ ಕ್ರಮ ವಹಿಸದ ಬಗ್ಗೆ ತರಾಟೆಗೆ ತೆಗೆದುಕೊಂಡಿದ್ದಾರೆ. ಜಿಲ್ಲಾ ಪಂಚಾಯಿತಿ ಸಿಇಒ ಡಾ.ಪ್ರವೀಣ್ ಪಿ.ಬಾಗೇವಾಡಿ ನೇತೃತ್ವದಲ್ಲಿ ಸಭೆ ಕೂಡ ನಡೆದಿದೆ. ಈ ಸಭೆಯಲ್ಲಿ ಡಾ.ಎಂ.ಜಗದೀಶ್ ಹಾಗೂ ಜಿಲ್ಲಾ ಆರೋಗ್ಯಾಧಿಕಾರಿ ಡಾ. ಜಿ.ಶ್ರೀನಿವಾಸ್ ಪಾಲ್ಗೊಂಡು ಪ್ರಕರಣದ ಬಗ್ಗೆ ಚರ್ಚಿಸಿದ್ದಾರೆ. ಸಭೆಯ ಬಳಿಕ ತಲೆದಂಡದ ಆದೇಶ ಹೊರಬಿದ್ದಿದೆ.

‘ಬುದ್ಧ, ಬಸವ, ಅಂಬೇಡ್ಕರ್ ಯೋಜನೆ’ ಪ್ರಾಯೋಗಿಕ ಜಾರಿ

ಪರಿಶಿಷ್ಟ ಫಲಾನುಭವಿಗಳಿಗೆ ನಿವೇಶನ

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಬುದ್ಧ, ಬಸವ, ಅಂಬೇಡ್ಕರ್ ಯೋಜನೆ’ಯನ್ನು ಲೋಕೋಪಯೋಗಿ ಇಲಾಖೆಯಿಂದ ಪ್ರಾಯೋಗಿಕವಾಗಿ ಜಾರಿಗೆ ತರಲಾಗಿದೆ. ಅದರಂತೆ ಪರಿಶಿಷ್ಟ ಜಾತಿ ಮತ್ತು ಪಂಗಡದ ಫಲಾನುಭವಿಗಳಿಗೆ ನಿವೇಶನ ಹಂಚಿಕೆ ಮಾಡಲಾಗುತ್ತಿದೆ’ ಎಂದು ಸಚಿವ ಸತೀಶ ಜಾರಕಿಹೊಳಿ ಹೇಳಿದರು.

‘ರಾಜ್ಯದಾದ್ಯಂತ ಪರಿಶಿಷ್ಟ ಸಮುದಾಯಗಳ ಫಲಾನುಭವಿಗಳಿಗೆ ಸರ್ಕಾರ ನಿವೇಶನಗಳನ್ನು ಹಂಚಿಕೆ ಮಾಡಿದೆ. ಆದರೆ, ಪಟ್ಟಣಗಳು ಮತ್ತು ಹಳ್ಳಿಗಳ ಹೊರವಲಯದಲ್ಲಿನ ನಿವೇಶನಗಳು ಅಭಿವೃದ್ಧಿಯಾಗದ ಕಾರಣ, ಅವುಗಳಿಂದ ಫಲಾನುಭವಿಗಳು ದೂರವಿದ್ದಾರೆ’ ಎಂದು ಅವರು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

‘ಲೋಕೋಪಯೋಗಿ ಇಲಾಖೆಯು ಖಾಸಗಿ ಬಡಾವಣೆಗಳಂತೆಯೇ ನಿವೇಶನಗಳನ್ನು ಅಭಿವೃದ್ಧಿಪಡಿಸುತ್ತದೆ. ಚರಂಡಿ, ರಸ್ತೆ, ಕುಡಿಯುವ ನೀರು ಸರಬರಾಜು, ಉದ್ಯಾನ ಒದಗಿಸುತ್ತದೆ. ಸಾಧ್ಯವಾದರೆ ಅಂಗನವಾಡಿ ಮತ್ತು ಶಾಲಾ ಕಟ್ಟಡಗಳನ್ನು ನಿರ್ಮಿಸುತ್ತದೆ’ ಎಂದು ಹೇಳಿದರು.

ಮುಖ್ಯಾಂಶಗಳು

- ‘ಖಾಸಗಿ ಬಡಾವಣೆ ಮಾದರಿಯಲ್ಲೇ ನಿವೇಶನಗಳ ಅಭಿವೃದ್ಧಿ’
- ಅಗತ್ಯಕ್ಕೆ ತಕ್ಕಂತೆ ಖಾಸಗಿ ಜಮೀನು ಖರೀದಿ

‘ಎಸ್‌ಸಿಪಿ ಮತ್ತು ಟಿಎಸ್‌ಪಿ ಯೋಜನೆಯಿಂದ ಬರುವ ₹20 ಕೋಟಿಯನ್ನು ಪ್ರಾಯೋಗಿಕವಾಗಿ ನಿವೇಶನಗಳ ಅಭಿವೃದ್ಧಿಗೆ ಬಳಸಲಾಗುವುದು’ ಎಂದರು.

‘ಮೊದಲ ಹಂತದಲ್ಲಿ 42 ಎಕರೆಯಲ್ಲಿ ಬೆಳಗಾವಿ ಜಿಲ್ಲೆಯ ಗುಮಚನಮರಡಿ, ಹುಕ್ಕೇರಿ ತಾಲ್ಲೂಕಿನ ಹರಗಾಪುರ, ಮೂಡಲಗಿ ತಾಲ್ಲೂಕಿನ ಅರಭಾವಿ, ಸವದತ್ತಿ, ಬಳ್ಳಾರಿ ಜಿಲ್ಲೆಯ ಕುರುಗೋಡು ಹಾಗೂ ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ಬೊಕ್ಕಹಳ್ಳಿಯಲ್ಲಿ ಬಡಾವಣೆ ನಿರ್ಮಾಣ ಯೋಜನೆ ಕೈಗೆತ್ತಿಕೊಳ್ಳಲಾಗಿದೆ. ಪ್ರಾಯೋಗಿಕ ಯೋಜನೆಯ ಸಾಧಕ-ಬಾಧಕ ಅಂಶಗಳನ್ನು ಪರಿಶೀಲಿಸಿ, ರಾಜ್ಯದಾದ್ಯಂತ ಒಂದು ಸಾವಿರ ಎಕರೆ ಜಾಗದಲ್ಲಿ ಬಡಾವಣೆ ಅಭಿವೃದ್ಧಿಪಡಿಸಲಾಗುವುದು’ ಎಂದರು.

‘ನಗರಸಭೆ, ಪಟ್ಟಣ ಪಂಚಾಯಿತಿ, ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಯೋಜನೆ ಅನುಷ್ಠಾನಕ್ಕೆ ಕ್ರಮ ವಹಿಸಲಾಗಿದೆ. ಶೀಘ್ರವೇ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಲಾಗುವುದು. ಎರಡನೇ ಹಂತದಲ್ಲಿ ಅಗತ್ಯಕ್ಕೆ ತಕ್ಕಂತೆ ಖಾಸಗಿ ಜಮೀನು ಖರೀದಿಸಿ ಬಡಾವಣೆ ನಿರ್ಮಾಣ ಮಾಡಲಾಗುವುದು’ ಎಂದು ವಿವರಿಸಿದರು.

ಶಾಸಕ ಆಸಿಫ್ ಸೇಠ್, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ರಾಹುಲ್ ಶಿಂಧೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಇದ್ದರು.

> ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಶೇ 15ರಷ್ಟು ಮೀಸಲಾತಿಯೊಳಗೆ ಒಳಮೀಸಲಾತಿ ನೀಡುವ ಬಗ್ಗೆ ಮುಂದಿನ ಸಚಿವ ಸಂಪುಟ ಸಭೆಯಲ್ಲಿ ನಿರ್ಧರಿಸಲಾಗುವುದು
> **ಸತೀಶ ಜಾರಕಿಹೊಳಿ,** ಲೋಕೋಪಯೋಗಿ ಸಚಿವ

‘25 ಸಚಿವರ ತೆಗೆದು ಹೊಸಬರಿಗೆ ನೀಡಲಿ’

ಹೊಸಬರು ಅವಕಾಶ ಕೇಳುವುದರಲ್ಲಿ ತಪ್ಪೇನಿದೆ? –ಬಸವರಾಜ ರಾಯರಡ್ಡಿ

ಪ್ರಜಾವಾಣಿ ವಾರ್ತೆ

ಕುಕನೂರು (ಕೊಪ್ಪಳ ಜಿಲ್ಲೆ): ‘25 ಸಚಿವರನ್ನು ತೆಗೆದು ಹೊಸಬರಿಗೆ ಅವಕಾಶ ಕೊಡಬೇಕು’ ಎಂದು ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ, ಯಲಬುರ್ಗಾ ಕ್ಷೇತ್ರದ ಶಾಸಕ ಬಸವರಾಜ ರಾಯರಡ್ಡಿ ಹೇಳಿದರು.

ಪಟ್ಟಣದಲ್ಲಿ ಮಂಗಳವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಹೊಸಬರಿಗೆ ಅವಕಾಶ ಕೊಟ್ಟರೆ ಅವರಿಗೂ ಅನುಭವವಾಗುತ್ತದೆ. ಇರುವವರೇ ಕಾಯಂ ಆಗಿ ಇರಬೇಕು ಎಂದರೆ ಹೇಗೆ ಸಾಧ್ಯ?’ ಎಂದರು.

‘ಹೊಸಬರು ಅವಕಾಶ ಕೇಳುವುದರಲ್ಲಿ ತಪ್ಪೇನಿದೆ’ ಎಂದು ಪ್ರಶ್ನಿಸಿದರು. ‘ಮೇ 4ರ ಬಳಿಕ ಮುಖ್ಯಮಂತ್ರಿ, ಕೆಪಿಸಿಸಿ ಅಧ್ಯಕ್ಷರು ಹಾಗೂ ಪಕ್ಷದ ವರಿಷ್ಠರು ಸಂಪುಟ ಪುನರ್ ರಚನೆ ಬಗ್ಗೆ ಚರ್ಚೆ ಮಾಡುತ್ತಾರೆ. ಅಗತ್ಯವಿದ್ದರೆ ಬದಲಾವಣೆ ಮಾಡುತ್ತಾರೆ’ ಎಂದು ಹೇಳಿದರು.

‘ಹೆಚ್ಚು ಬಾರಿ ಶಾಸಕನಾಗಿದ್ದರೂ ನನಗೆ ಮಂತ್ರಿ ಸ್ಥಾನ ಕೊಟ್ಟಿಲ್ಲ. ಆರ್ಥಿಕ ಸಲಹೆಗಾರ ಎನ್ನುವ ಹುದ್ದೆ ಕೊಟ್ಟಿದ್ದಾರೆ. ಮುಖ್ಯಮಂತ್ರಿ ಜೊತೆ ಚರ್ಚಿಸಿ ಉತ್ತಮ ಬಜೆಟ್ ಕೊಡಬಹುದೇ ವಿನಃ ಯಾವುದೇ ಅಧಿಕಾರ ಇರುವುದಿಲ್ಲ. ನನ್ನನ್ನು ಸಚಿವನನ್ನಾಗಿ ಮಾಡುವುದು ಹೈಕಮಾಂಡ್‌ಗೆ ಬಿಟ್ಟ ವಿಚಾರ’ ಎಂದು ಹೇಳಿದರು.

> ಕಾಂಗ್ರೆಸ್‌ನ 135 ಶಾಸಕರು ಸಚಿವರಾಗಲು ಅರ್ಹರಿದ್ದಾರೆ. ಅವರು ಸಚಿವ ಸ್ಥಾನ ಕೇಳುವುದರಲ್ಲಿ ತಪ್ಪೇನಿದೆ?
> **ಎಂ.ಬಿ.ಪಾಟೀಲ,** ಸಚಿವ

‘ಮೊದಲ ಬಾರಿ ಗೆದ್ದವರಿಗೆ ನೀಡಲಿ’

ಬಳ್ಳಾರಿ: ‘ಮೊದಲ ಬಾರಿಗೆ ಶಾಸಕರಾದವರು ಸಚಿವ ಸ್ಥಾನ ಕೋರಿ ಪಕ್ಷದ ಹೈಕಮಾಂಡ್‌ಗೆ ಮನವಿ ಸಲ್ಲಿಸಿದ್ದಲ್ಲಿ ತಪ್ಪೇನೂ ಇಲ್ಲ. ಸಕ್ರಿಯ ಶಾಸಕರಿಗೆ ಸಚಿವ ಸ್ಥಾನ ನೀಡಿದಲ್ಲಿ, ಪಕ್ಷಕ್ಕೇ ಅನುಕೂಲ’ ಎಂದು ಶಾಸಕ ನಾರಾ ಭರತ್‌ರೆಡ್ಡಿ ಹೇಳಿದರು.

‘ವೈಯಕ್ತಿಕ ಕೆಲಸದ ನಿಮಿತ್ತ ದೆಹಲಿಗೆ ತೆರಳಿ, ಪಕ್ಷದ ವರಿಷ್ಠರನ್ನು ಭೇಟಿ ಆಗಿರುವೆ. ಸಚಿವ ಸ್ಥಾನದ ಕುರಿತು ಚರ್ಚೆಗಳು ನಡೆದಿಲ್ಲ. ಕ್ಷೇತ್ರದ ಸಮಸ್ಯೆಗಳ ಬಗ್ಗೆ ವರಿಷ್ಠರಿಗೆ ತಿಳಿಸಿರುವೆ’ ಎಂದು ಅವರು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು. ‘ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಕಲ್ಯಾಣ ಕರ್ನಾಟಕದ ಮೇಲೆ ಹೆಚ್ಚು ಆಸಕ್ತಿ. ಕಲ್ಯಾಣ ಕರ್ನಾಟಕದಲ್ಲಿ ಯುವಜನರು ರಾಜಕೀಯಕ್ಕೆ ಬಂದರೆ, ಇನ್ನಷ್ಟು ಅಭಿವೃದ್ಧಿ ಆಗುವುದೆಂದು ಸ್ವತಃ ಖರ್ಗೆ ಸಾಹೇಬರು ಹೇಳಿದ್ದಾರೆ’ ಎಂದರು.

ಕುಗ್ಗಿದ ಡಿ.ಕೆ.ಶಿವಕುಮಾರ್ ವರ್ಚಸ್ಸು: ಆರ್.ಅಶೋಕ

ಮಂಡ್ಯ: ‘ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಬಗ್ಗೆ ಗೌರವವಿದ್ದಿದ್ದರೆ ಶಾಸಕರು ದೆಹಲಿಗೆ ಹೋಗುತ್ತಿರಲಿಲ್ಲ. ಅವರ ಮಾತಿಗೆ ಶಾಸಕರು ಬೆಲೆ ನೀಡುತ್ತಿಲ್ಲ. ಅವರ ವರ್ಚಸ್ಸು ಕುಗ್ಗಿದೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಅಭಿಪ್ರಾಯಪಟ್ಟರು.

ನಾಗಮಂಗಲ ತಾಲ್ಲೂಕಿನ ಆದಿಚುಂಚನಗಿರಿ ಮಠಕ್ಕೆ ಗುರುವಾರ ಭೇಟಿ ನೀಡಿದ್ದ ಅವರು ಸುದ್ದಿಗಾರರ ಜೊತೆ ಮಾತನಾಡುತ್ತಾ, ‘ಮುಖ್ಯಮಂತ್ರಿ ಸ್ಥಾನ ಕುರಿತಂತೆ ಈಗ ಡಿ.ಕೆ. ಶಿವಕುಮಾರ್ ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರ ಮನೆಗೆ ಹೋಗಿ ಗಲಾಟೆ ಮಾಡಿದ್ದಾರೆ. ಆ ಜಗಳದಲ್ಲೇ ಸರ್ಕಾರ ಸತ್ತು ಹೋಗಿದೆ’ ಎಂದು ಪ್ರತಿಪಾದಿಸಿದರು.

‘ಸಿ.ಎಂ ಆಗುವ ಆಸೆಯುಳ್ಳವರು ಕಾಂಗ್ರೆಸ್‌ನಲ್ಲಿ ಜಗಳವಾಡುತ್ತಿದ್ದಾರೆ. ಜನತಾದಳವನ್ನು ಹಿಂದೆ ‘ಜಗಳಗಳ ಪಾರ್ಟಿ’ ಎನ್ನುತ್ತಿದ್ದರು. ಈಗ ಕಾಂಗ್ರೆಸ್ಸೇ ಆ ರೀತಿ ಆಗಿದೆ’ ಎಂದರು.

‘2028ರಲ್ಲಿ ರಾಜ್ಯದಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಬರಲಿದೆ. ಜೆಡಿಎಸ್ ಜತೆಗಿರಲಿದೆ. ಸಿ.ಎಂ ಯಾರು ಎಂದು ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ತೀರ್ಮಾನಿಸಲಿದ್ದಾರೆ. ಪಕ್ಷದ ಆಶೀರ್ವಾದವಿದ್ದರೆ ನಾನೂ ಸಿಎಂ ಆಗಬಹುದು’ ಎಂದರು.

ಕೊಂಡದಲ್ಲಿ ಬಿದ್ದ ಗುಡ್ಡಪ್ಪ: ಇಬ್ಬರಿಗೆ ಗಾಯ

ಪ್ರಜಾವಾಣಿ ವಾರ್ತೆ

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): ಪಟ್ಟಣದಲ್ಲಿ ಮುತ್ತು ಮಾರಮ್ಮ ದೇವಿಯ ಕರಗದ ಪ್ರಯುಕ್ತ ಮಂಗಳವಾರ ನಡೆದ ಕೊಂಡೋತ್ಸವದ ವೇಳೆ ದೇವರ ಗುಡ್ಡಪ್ಪ ಬಿ.ಕುಮಾರ್ ಅವರು ಬೆಂಕಿ ಕೆಂಡದ ಮೇಲೆ ಬಿದ್ದು ಗಾಯಗೊಂಡಿದ್ದು, ಅವರನ್ನು ರಕ್ಷಿಸಲು ಮುಂದಾದ ಅವರ ಸಹೋದರಿಯೂ ಗಾಯಗೊಂಡರು.

ಕರಗ ಹೊತ್ತು ಏಳೆಂಟು ಹೆಜ್ಜೆ ಹಾಕಿದ್ದ ಕುಮಾರ್ ಅವರ ಕಾಲಿಗೆ ಪಂಚೆ ಸಿಕ್ಕಿಕೊಂಡು ಮುಗ್ಗರಿಸಿ ಮಕಾಡೆ ಬಿದ್ದರು. ಕರಗವು ಅವರ ತಲೆಯ ಮೇಲಿಂದ ಕಳಚಿ ಕೆಂಡದ ಮೇಲೆ ಬಿತ್ತು. ಅವರನ್ನು ರಕ್ಷಿಸಲು ಸಹೋದರಿಯೂ ಜಿಗಿದರು. ಪಕ್ಕದಲ್ಲಿದ್ದವರು ತಕ್ಷಣ ಇಬ್ಬರನ್ನೂ ಮೇಲೆತ್ತಿದರು.

ಶ್ರೀರಂಗಪಟ್ಟಣದಲ್ಲಿ ಮುತ್ತು ಮಾರಮ್ಮ ದೇವಿಯ ಕರಗ ಹೊತ್ತಿದ್ದ ಗುಡ್ಡಪ್ಪ ಬಿ. ಕುಮಾರ್ ಮಂಗಳವಾರ ಕೊಂಡ ಹಾಯುವಾಗ ಆಯತಪ್ಪಿ ಕೆಂಡದ ಮೇಲೆ ಬಿದ್ದರು –ಪ್ರಜಾವಾಣಿ ಚಿತ್ರ

ಕುಮಾರ್ ಕೈ ಮತ್ತು ಕಾಲುಗಳು ಹಾಗೂ ರಾಜೇಶ್ವರಿ ಅವರ ಕಾಲುಗಳು ಭಾಗಶಃ ಸುಟ್ಟಿವೆ. ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಾರೆ.

ರಾಜ್ಯ ಹೈಕೋರ್ಟ್‌: ಮೂವರ ಹೆಸರು ಅನುಮೋದನೆ

ನವದೆಹಲಿ (ಪಿಟಿಐ): ಕರ್ನಾಟಕ ಹೈಕೋರ್ಟ್‌ನ ನ್ಯಾಯಮೂರ್ತಿಗಳಾಗಿ ರಾಜೇಶ್ವರಿ ನಾರಾಯಣ ಹೆಗ್ಡೆ, ಕೆದಂಬಾಡಿ ಗಣೇಶ್ ಶಾಂತಿ ಮತ್ತು ಮಹಾದೇವಪ್ಪ ಭೃಂಗೇಶ್ ಅವರ ನೇಮಕಕ್ಕೆ ಸುಪ್ರೀಂ ಕೋರ್ಟ್ ಕೊಲಿಜಿಯಂ ಮಂಗಳವಾರ ಅನುಮೋದನೆ ನೀಡಿದೆ.

ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದಲ್ಲಿ ನಡೆದ ಸಭೆಯಲ್ಲಿ, ಕೇರಳ ಹೈಕೋರ್ಟ್ ನ್ಯಾಯಮೂರ್ತಿ ಹುದ್ದೆಗೆ ವಕೀಲರಾದ ಪ್ರೀತಾ ಅರವಿಂದನ್ ಕೃಷ್ಣಮ್ಮ ಮತ್ತು ಲಿರ್ಝ್ ಮ್ಯಾಥ್ಯೂ ಅವರ ಹೆಸರನ್ನು ಶಿಫಾರಸು ಮಾಡಲಾಗಿದೆ.

ಪೀಣ್ಯದಲ್ಲಿ ನಟ ಡಾ.ರಾಜ್ ಕುಮಾರ್ ಅವರ ಪುಣ್ಯಸ್ಮರಣೆ ಪ್ರಯುಕ್ತ ಕಲಾವಿದರಿಗೆ ಗೌರವ ಸನ್ಮಾನ ಮತ್ತು ಸ್ಮಾರ್ಟ್ ಕ್ವಿಕ್ ಸಂಸ್ಥೆಯ ಯಶಸ್ವಿ ವಿಜಯೋತ್ಸವ ಕಾರ್ಯಕ್ರಮದಲ್ಲಿ ನಂಜಾವಧೂತ ಸ್ವಾಮೀಜಿ ಅವರು ಸ್ಮಾರ್ಟ್ ಕ್ವಿಕ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ದೀಪುಗೌಡ, ಕಲಾವಿದೆ ಅಶ್ವಿನಿಗೌಡ, ಚಲನಚಿತ್ರ ರಂಗದ ಕಲಾವಿದ ಡಿಂಗ್ರಿ ನಾಗರಾಜ್, ಮೈಸೂರು ರಮಾನಂದ್, ಶಂಕರ್ ಭಟ್ ಅವರನ್ನು ಅಭಿನಂದಿಸಿದರು.

ಸನಾತನ ಧರ್ಮ ತಿರಸ್ಕರಿಸುವ ಚಾರಿತ್ರಿಕ ಒತ್ತಡ: ಬಿಳಿಮಲೆ

‘ಧರ್ಮ ಆಧರಿಸಿ ರಾಷ್ಟ್ರೀಯತೆ ಸಲ್ಲದು’

ಮೈಸೂರಿನಲ್ಲಿ ನಡೆದ ಬಿ.ಆರ್.ಅಂಬೇಡ್ಕರ್ ಜಯಂತಿ 135 ವಿಶ್ವ ನಮನ ಕಾರ್ಯಕ್ರಮದಲ್ಲಿ ನಗರ ಘಟಕದ ಅಧ್ಯಕ್ಷ ಆರ್.ಮೂರ್ತಿ, ಪ್ರೊ.ಪುರುಷೋತ್ತಮ ಬಿಳಿಮಲೆ, ಗ್ರಾಮಾಂತರ ಘಟಕದ ಅಧ್ಯಕ್ಷ ಬಿ.ಜೆ.ವಿಜಯಕುಮಾರ್ ಸಂವಿಧಾನ ಪ್ರಸ್ತಾವನೆ ಓದುವ ಮೂಲಕ ಪ್ರಮಾಣ ವಚನ ಸ್ವೀಕರಿಸಿದರು – ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಾರ್ತೆ

ಮೈಸೂರು: ‘ಸನಾತನ ಧರ್ಮ, ಶಾಸ್ತ್ರಗ್ರಂಥಗಳನ್ನು ಪ್ರಶ್ನಿಸುವ ಹಾಗೂ ತಿರಸ್ಕರಿಸುವ ಚಾರಿತ್ರಿಕ ಒತ್ತಡದಲ್ಲಿ ನಾವಿದ್ದೇವೆ’ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪ್ರೊ.ಪುರುಷೋತ್ತಮ ಬಿಳಿಮಲೆ ಅಭಿಪ್ರಾಯಪಟ್ಟರು.

ಮೈಸೂರು ನಗರ ಹಾಗೂ ಜಿಲ್ಲಾ ಕಾಂಗ್ರೆಸ್ ಸಮಿತಿಯು ನಗರದಲ್ಲಿ ಮಂಗಳವಾರ ಏರ್ಪಡಿಸಿದ್ದ ಬಿ.ಆರ್. ಅಂಬೇಡ್ಕರ್ ಜಯಂತಿ ಆಚರಣೆಯಲ್ಲಿ ‘ನಾಗರಿಕ ಹೊಣೆಗಾರಿಕೆ ಹಾಗೂ ಬಾಬಾ ಸಾಹೇಬ್’ ಕುರಿತು ಮಾತನಾಡಿ, ‘ಸನಾತನವೆಂಬ ಕಲ್ಪನೆಯಲ್ಲಿ ಭಾರತದ ವಿವಿಧತೆಗೆ ಸ್ಥಾನವಿಲ್ಲ. ಸನಾತನ ಧರ್ಮವು ಹೇಳುವ ನೀತಿ ಸಂಹಿತೆ, ಜ್ಞಾನವು ಇಡೀ ಭಾರತೀಯ ಜ್ಞಾನ ಸಂಹಿತೆಯ ಸಣ್ಣ ಭಾಗವಷ್ಟೇ. ಅದನ್ನು ಇಡೀ ಭಾರತಕ್ಕೆ ಅನ್ವಯಿಸುವುದು ಸಮಸ್ಯೆ ಸೃಷ್ಟಿಸುತ್ತದೆ’ ಎಂದು ಪ್ರತಿಪಾದಿಸಿದರು.

‘ಮಂಟೇಸ್ವಾಮಿ, ತಿಪ್ಪೇಸ್ವಾಮಿ, ಬೀರಪ್ಪ ಹಾಗೂ ದಕ್ಷಿಣ ಕನ್ನಡದ ದೈವಗಳಿಗೆ ಸನಾತನಿಗಳು ಹೇಳುವ ಗ್ರಂಥಗಳಲ್ಲಿ ಎಲ್ಲಿ ಸ್ಥಾನವಿದೆ? ಶೋಷಿತರ, ಹಿಂದುಳಿದವರ ಅತ್ಯಸಂಸ್ಕಾರ ಕ್ರಿಯೆಗಳ ಬಗ್ಗೆ ಮಾಹಿತಿ ಇದೆಯೇ? ಇದನ್ನೆಲ್ಲಾ ಬದಿಗೆ ಸರಿಸಿ ಸೃಷ್ಟಿಯಾದ ಶಾಸ್ತ್ರವು ಸಂಪೂರ್ಣ ಭಾರತೀಯರನ್ನು ಹೇಗೆ ಒಳಗೊಳ್ಳುತ್ತದೆ’ ಎಂದು ಪ್ರಶ್ನಿಸಿದರು.

‘ಜಗತ್ತಿನ ಯಾವ ರಾಷ್ಟ್ರೀಯತೆಯನ್ನೂ ಮತ, ಧರ್ಮಗಳ ಆಧಾರದಲ್ಲಿ ಕಟ್ಟಬಾರದು. ಜನರ ಆಧಾರಿತವಾಗಿ ಕಟ್ಟಬೇಕು. ಈ ಕಾರಣದಿಂದಲೇ ಅಂಬೇಡ್ಕರ್ ಚಾರಿತ್ರಿಕವಾಗಿ ಮುಖ್ಯವಾಗುತ್ತಾರೆ. ಜನಾಧಾರಿತವಾದ ಸಂವಿಧಾನ, ರಾಷ್ಟ್ರೀಯತೆ ಕಲ್ಪನೆ, ಹೋರಾಟ ರೂಪಿಸುವ ಮೂಲಕ ನಾಗರಿಕರ ಹೊಣೆಗಾರಿಕೆಯನ್ನು ಸ್ಪಷ್ಟಪಡಿಸಿದ್ದಾರೆ’ ಎಂದು ವಿವರಿಸಿದರು.

ಕೇರಳ: ಚಿಕೂನ್‌ಗುನ್ಯ ಪತ್ತೆ–ಹೆಚ್ಚಿನ ನಿಗಾ



ಕೊಚ್ಚಿ (ಪಿಟಿಐ): ಕೇರಳದ ಎರ್ನಾಕುಲಂ ಜಿಲ್ಲೆಯ ಕೆಲವು ಕಡೆಗಳಲ್ಲಿ ಚಿಕೂನ್‌ಗುನ್ಯ ಪ್ರಕರಣಗಳು ಪತ್ತೆಯಾಗಿದ್ದು, ಜಾಗರೂಕತೆಯಿಂದ ಇರುವಂತೆ ಆರೋಗ್ಯ ಅಧಿಕಾರಿಗಳು ಮಂಗಳವಾರ ಮನವಿ ಮಾಡಿದ್ದಾರೆ.

ಈವರೆಗೆ 9 ಪ್ರಕರಣಗಳು ದೃಢಪಟ್ಟಿದ್ದು, 19 ಶಂಕಿತ ಪ್ರಕರಣಗಳನ್ನು ಗುರುತಿಸಲಾಗಿದೆ ಎಂದು ಆರೋಗ್ಯ ಇಲಾಖೆಯು ಪ್ರಕಟಣೆಯಲ್ಲಿ ತಿಳಿಸಿದೆ.

‘ಸೋಂಕು ಹರಡದಂತೆ ತಡೆಯಲು ಹಲವು ಕ್ರಮ ಕೈಗೊಳ್ಳಲಾಗಿದೆ. ಸೋಂಕಿನಿಂದಾಗಿ ತೀವ್ರ ಜ್ವರ, ಮಂಡಿ ನೋವು, ಮಾಂಸಖಂಡಗಳ ಸೆಳೆತ, ತಲೆನೋವು, ಬಳಲಿಕೆ ಕಾಡಬಹುದು. ಕೆಲವು ಪ್ರಕರಣಗಳಲ್ಲಿ ಚರ್ಮದ ಸೋಂಕು ಸಹ ಕಾಣಿಸಬಹುದು. ಇಂಥ ಲಕ್ಷಣಗಳು ಕಂಡು ಬಂದರೆ ಕೂಡಲೇ ಆಸ್ಪತ್ರೆಗೆ ಧಾವಿಸಿ ಚಿಕಿತ್ಸೆ ಪಡೆಯಿರಿ’ ಎಂದು ಸಾರ್ವಜನಿಕರಿಗೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

‘ಲೈಂಗಿಕ ಕಿರುಕುಳ: ಆರೋಪಿಗಳ ಬ್ಯಾಂಕ್ ಖಾತೆ ಪರಿಶೀಲನೆ’

ಪ್ರಜಾವಾಣಿ ವಾರ್ತೆ

ನಾಸಿಕ್ (ಪಿಟಿಐ): ನಾಸಿಕ್‌ನಲ್ಲಿರುವ ಟಿಸಿಎಸ್ ಕಂಪನಿಯ ಎಂಟು ಮಹಿಳಾ ಉದ್ಯೋಗಿಗಳ ಮೇಲಿನ ಲೈಂಗಿಕ ದೌರ್ಜನ್ಯ ಮತ್ತು ಬಲವಂತದ ಮತಾಂತರ ಪ್ರಕರಣಕ್ಕೆ ಸಂಬಂಧಿಸಿದ ಆರೋಪಿಗಳ ಬ್ಯಾಂಕ್ ಖಾತೆಗಳನ್ನು ವಿಶೇಷ ತನಿಖಾ ತಂಡ (ಎಸ್‌ಐಟಿ) ಪರಿಶೀಲಿಸುತ್ತಿದೆ.

ಅಕ್ರಮ ಚಟುವಟಿಕೆಗಳಿಗಾಗಿ ಆರೋಪಿಗಳಿಗೆ ಹಣ ಪೂರೈಕೆಯಾಗುತ್ತಿದೆಯೇ ಎಂಬ ಬಗ್ಗೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಪ್ರಕರಣ ಸಂಬಂಧ ಟಿಸಿಎಸ್‌ನ ನೌಕರರಾಗಿರುವ ಆರು ಪುರುಷರು ಮತ್ತು ಒಬ್ಬ ಮಹಿಳೆಯನ್ನು ಬಂಧಿಸಲಾಗಿದೆ. ಮಹಿಳಾ ನೌಕರರೊಬ್ಬರು ತಲೆಮರೆಸಿಕೊಂಡಿದ್ದಾರೆ ಎನ್ನಲಾಗಿದೆ.

ಸಂಬಂಧಿಕರಿಂದ ಕೃತ್ಯ: ವಿಷಪ್ರಾಶನ, ತರಾತುರಿಯಲ್ಲಿ ಅಂತ್ಯಕ್ರಿಯೆ

ಮರ್ಯಾದೆಗೇಡು ಹತ್ಯೆ: ಮೂವರ ಸೆರೆ

ಪ್ರಜಾವಾಣಿ ವಾರ್ತೆ

ಹುಕ್ಕೇರಿ (ಬೆಳಗಾವಿ ಜಿಲ್ಲೆ): ಕ್ಷತ್ರಿಯ ಜಾತಿಯ ಪ್ರಿಯಕರನ ಜೊತೆ ಸಾಂಗತ್ಯ ಬೆಳೆಸಿದ್ದಕ್ಕೆ ಸಿಟ್ಟಾದ ಕುಟುಂಬಸ್ಥರು, ತಾಲ್ಲೂಕಿನ ನದಿಗುಡಿಕೇತ್ರ ಗ್ರಾಮದ ಹೆಳವರ ಜಾತಿಯ ಮಹಿಳೆಯನ್ನು ಹತ್ಯೆ ಮಾಡಿದ ಘಟನೆ ಮಹಾರಾಷ್ಟ್ರದ ಸಾಂಗ್ಲಿ ಜಿಲ್ಲೆಯ ಅರಗ ಗ್ರಾಮದಲ್ಲಿ ನಡೆದಿದೆ.

‘ಸತ್ಯವ್ವ ಹೆಳವರ ಕೊಲೆಯಾದವರು. ಸತ್ಯವ್ವ ಸಹೋದರ ಶಾನೂರ ಹೆಳವರ, ಚಿಕ್ಕಪ್ಪ ಪ್ರಕಾಶ ಹೆಳವರ ಮತ್ತು ಸೋದರಮಾವ ಕಲ್ಲಪ್ಪ ಹೆಳವಿ ಬಂಧಿತರು. ತರಾತುರಿಯಲ್ಲಿ ಅಂತ್ಯಕ್ರಿಯೆ ನಡೆಸಿದ ಮತ್ತು ತ್ವರಿತವಾಗಿ ಮರಣ ಪ್ರಮಾಣಪತ್ರ ಪಡೆಯಲು ಯತ್ನಿಸಿದ ವೇಳೆ ಸಿಕ್ಕ ಸುಳಿವಿನ ಮೇರೆಗೆ ಕಾರ್ಯಾಚರಣೆ ನಡೆಸಲಾಯಿತು’ ಎಂದು ಪೊಲೀಸರು ತಿಳಿಸಿದ್ದಾರೆ.

‘ಹುಕ್ಕೇರಿ ತಾಲ್ಲೂಕಿನ ನದಿಗುಡಿಕೇತ್ರ ಗ್ರಾಮದ ಸತ್ಯವ್ವ ಸಂತೋಷ ಹೆಳವರ ಮತ್ತು ರಾಯಬಾಗ ತಾಲ್ಲೂಕಿನ ಹಣಬರಟ್ಟಿಯ ಸಂತೋಷ ಹೆಳವರ ನಾಲ್ಕು ವರ್ಷಗಳ ಹಿಂದೆ ವಿವಾಹವಾಗಿದ್ದರು. ಇದಕ್ಕೂ ಮುನ್ನ ನದಿಗುಡಿಯ ಕೃಷ್ಣ ಪಾಟೀಲ ಎಂಬುವರನ್ನು ಸತ್ಯವ್ವ ಪ್ರೀತಿಸುತ್ತಿದ್ದರು. ಪತಿ ಮದ್ಯ ವ್ಯಸನಿಯಾದ ಕಾರಣ, ಸತ್ಯವ್ವ ಬೇಸರಗೊಂಡು ಕೃಷ್ಣ ಜೊತೆ ಬೆಳವಾಡಿ ಗ್ರಾಮದಲ್ಲಿ ವಾಸಿಸುತ್ತಿದ್ದರು. ಇಬ್ಬರೂ ಕಾಣೆಯಾದ ಕುರಿತು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು’ ಎಂದಿದ್ದಾರೆ.

‘ಕೃಷ್ಣ ಜೊತೆಗಿನ ಸಂಬಂಧ ತೊರೆಯುವಂತೆ ಮನವೊಲಿಸಲು ಮತ್ತು ತಮ್ಮ ಸಮುದಾಯದ ಇನ್ನೊಬ್ಬ ವ್ಯಕ್ತಿ ಜೊತೆ ಸತ್ಯವ್ವ ಮದುವೆ ಮಾಡಿಸಲು ಕುಟುಂಬ ಸದಸ್ಯರು ಯತ್ನಿಸಿದರು. ತೀವ್ರ ನಿಗಾ ಇಟ್ಟರು. ಆದರೂ ಸತ್ಯವ್ವ, ಕೃಷ್ಣ ಜೊತೆ ಹೋಗಿರುವುದಕ್ಕೆ ಕುಟುಂಬಕ್ಕೆ ಕಳಂಕ ಬಂದಿದೆ ಎಂದು ಸಿಟ್ಟಿಗೆದ್ದರು. ಮಾರ್ಚ್ 21ರಂದು ಸತ್ಯವ್ವಗೆ ಬಲವಂತದಿಂದ ವಿಷ ಕುಡಿಸಿ ಹತ್ಯೆ ಮಾಡಿದರು. ಅಂದು ರಾತ್ರಿ ಸಾಕ್ಷ್ಯ ನಾಶಪಡಿಸಲು ಹಾಸಿಗೆ ಮತ್ತು ವಿಷದ ಬಾಟಲಿಯೊಂದಿಗೆ ಅಂತ್ಯಕ್ರಿಯೆ ಮಾಡಿದರು’ ಎಂದು ತಿಳಿಸಿದ್ದಾರೆ.

ಸಾಗರದಾಳದಲ್ಲಿ ಡೇಟಾ ಸೆಂಟರ್!

• ರಾಕೇಶ ವಿ. ತಾಳಿಕೋಟಿ

ಆವಿಷ್ಕಾರ ಮತ್ತು ತಂತ್ರಜ್ಞಾನದಲ್ಲಿ ನಮಗಿಂತ ಸದಾ ಒಂದು ಹೆಜ್ಜೆ ಮುಂದಿರುವ ಡ್ರ್ಯಾಗನ್ ದೇಶ ಎನಿಸಿಕೊಂಡಿರುವ ಚೀನಾ ಇದೀಗ ಸಾಗರದಾಳದಲ್ಲಿ ಪವನ ವಿದ್ಯುತ್‌ನಿಂದ ಕಾರ್ಯ ನಿರ್ವಹಿಸುವ ಇಂಟರ್‌ನೆಟ್ ಡೇಟಾ ಸೆಂಟರ್ ಆರಂಭಿಸಿದೆ.

ವಿಶ್ವದ ಅಗ್ರಗಣ್ಯ ತಂತ್ರಜ್ಞಾನ ದೈತ್ಯ ಸಂಸ್ಥೆಗಳು ತಮ್ಮ ಭಾರೀ ಡೇಟಾ ಸೆಂಟರ್‌ಗಳಿಗೆ ಅಗತ್ಯವಿರುವ ಪರ್ಯಾಯ ಶಕ್ತಿಗೆ ತೀವ್ರವಾಗಿ ಹುಡುಕಾಟ, ಸಂಶೋಧನೆ ನಡೆಸಿರುವ ಕಾಲಘಟ್ಟದಲ್ಲಿ, ಚೀನಾದ ಕಂಪನಿಯು ವಿಶ್ವವೇ ಕಣ್ಣರಳಿಸಿ ನೋಡುವಂತಹ ಪರಿಹಾರವನ್ನು ಅನ್ವೇಷಿಸಿದೆ.

ಚೀನಾದ ಹೈಕ್ಲೌಡ್ ಕಂಪನಿಯು ಶಾಂಘೈ ಕರಾವಳಿಯ ಬಳಿ 2.3 ಮೆಗಾವಾಟ್ ಸಾಮರ್ಥ್ಯದ ಡೇಟಾ ಕೇಂದ್ರದ ಮೊದಲ ಹಂತವನ್ನು ಆರಂಭಗೊಳಿಸಿದೆ. ಇದು ವಿಶ್ವದಲ್ಲೇ ಮೊದಲನೆಯದು ಎಂದು ಹೇಳಿಕೊಂಡಿದೆ. 'ನ್ಯೂ ಅಟ್ಲಾಸ್' ಎಂಬ ಚೀನಾ ಮಾಧ್ಯಮದ ವರದಿ ಪ್ರಕಾರ, ಡೇಟಾ ಸೆಂಟರ್‌ಗೆ ಬೇಕಾಗುವ ವಿದ್ಯುಚ್ಛಕ್ತಿಯ ಶೇ 95ರಷ್ಟು ಸಮುದ್ರದ ಹೊರಭಾಗದಲ್ಲಿ ತಯಾರಾಗುವ ಪವನ ವಿದ್ಯುತ್‌ನಿಂದ ಪೂರೈಕೆಯಾಗುತ್ತದೆ. ಅಲ್ಲದೆ, ಈ ವ್ಯವಸ್ಥೆಯನ್ನು ತಂಪಾಗಿ ಇಡಲು ಶೀತಲ ಸಮುದ್ರ ಪ್ರವಾಹವನ್ನು ಬಳಸಲಾಗುತ್ತದೆ.

ಭೂಮಿಯ ಮೇಲಿನ ಡೇಟಾ ಸೆಂಟರ್‌ಗಳೊಂದಿಗೆ ಹೋಲಿಸಿದರೆ, ಇಲ್ಲಿ ಬಳಕೆಯಾಗುವ ಒಟ್ಟು ವಿದ್ಯುತ್‌ನಲ್ಲಿ ಸುಮಾರು ಶೇ 23ರಷ್ಟು ಕಡಿಮೆಗೊಳ್ಳುವ ಸಾಧ್ಯತೆ ಇದೆ ಎಂದು ಅಂದಾಜಿಸಲಾಗಿದೆ.

ಚೀನಾದ ಸಾಗರದಾಳದ ಮೊದಲ ವಾಣಿಜ್ಯ ಡೇಟಾ ಸೆಂಟರ್‌ನ ಒಂದು ಘಟಕ ಪೂರ್ಣಗೊಂಡ ಬಳಿಕ 'ಸೌತ್ ಚೈನಾ ಮಾರ್ನಿಂಗ್ ಪೋಸ್ಟ್' ತನ್ನ ವೆಬ್‌ಸೈಟ್‌ನಲ್ಲಿ ನೀಡಿರುವ ವರದಿ ಪ್ರಕಾರ, ಕರಾವಳಿ ತೀರವಾದ ಹೈನಾನ್‌ನಲ್ಲಿ 114 ಅಡಿ ಆಳದಲ್ಲಿ ಈ ಯೋಜನೆ ಆರಂಭಗೊಂಡಿದೆ. ಇದು ಜಲಾಂತರ್ಗಾಮಿ ಸರ್ವರ್ ರ್‍ಯಾಕ್‌ಗಳ ಸರಣಿಯಾಗಿದೆ. ಪ್ರತಿ ಕ್ಯಾಬಿನ್ ಪಾಡ್‌ನಲ್ಲಿ ಒಂದೇ ಸಮಯದಲ್ಲಿ 400ರಿಂದ 500 ಸರ್ವರ್‌ಗಳನ್ನು ಇರಿಸುವಷ್ಟು ದೈತ್ಯ ಸಾಮರ್ಥ್ಯವನ್ನು ಹೊಂದಿದೆ ಎಂದು ತಿಳಿಸಿದೆ.

ಈ ಕ್ಯಾಬಿನ್‌ಗಳನ್ನು ಸರಪಳಿಯಂತೆ ಜೋಡಿಸಿದರೆ 'ಡೇಟಾ ಸೆಂಟರ್' ರೂಪುಗೊಳ್ಳುತ್ತದೆ. ಇದನ್ನು ಸಮುದ್ರದ ಅಡಿಯ ದೂರಸಂಪರ್ಕ ಕೇಬಲ್ ಮೂಲಕ ಚೀನಾದ ಭೂಭಾಗಕ್ಕೆ ಸಂಪರ್ಕಿಸಲಾಗಿದೆ. ಚೀನಾದ 'ಈಸ್ಟರ್ನ್ ಡೇಟಾ ವೆಸ್ಟರ್ನ್ ಕಂಪ್ಯೂಟಿಂಗ್ ತಂತ್ರಜ್ಞಾನ' ಯೋಜನೆಯಡಿಯಲ್ಲಿ ಸ್ಥಳೀಯ ಸರ್ಕಾರವು ಈ ಡೇಟಾ ಸೆಂಟರ್ ಅನ್ನು ಮತ್ತಷ್ಟು ಕ್ಯಾಬಿನ್‌ಗಳಿಗೆ ವಿಸ್ತರಿಸಲು ಉದ್ದೇಶಿಸಿದೆ.

ಡೇಟಾ ಸೆಂಟರ್‌ಗಳ ಕಾರ್ಯನಿರ್ವಹಣೆ: ಸರ್ವರ್ ಡೇಟಾ ಕೇಂದ್ರಗಳು ಕಾರ್ಯನಿರ್ವಹಿಸಲು ತಂಪಿನ ವಾತಾವರಣದ ಅಗತ್ಯವಿರುತ್ತದೆ. ದೊಡ್ಡ ಕೇಂದ್ರಗಳು ದಿನಕ್ಕೆ ಅಂದಾಜು 5 ಮಿಲಿಯನ್ ಗ್ಯಾಲನ್ ನೀರನ್ನು ಬಳಸುತ್ತವೆ. ಇದು 10,000 ದಿಂದ 50,000 ಜನವಸತಿ ಪ್ರದೇಶದ ದೈನಂದಿನ ಬಳಕೆಯಷ್ಟು ಎಂದು ಅಂದಾಜಿಸಲಾಗಿದೆ. ಅಮೆರಿಕದ ಟೆಕ್ಸಾಸ್‌ನ ಅಬಿಲೀನ್‌ನಲ್ಲಿ ಇರುವ 'ಓಪನ್ ಎ.ಐ' ಮತ್ತು 'ಒರಾಕಲ್' ಸಂಸ್ಥೆಗಳ ಸ್ಟಾರ್‌ಗೇಟ್ ಎ.ಐ. ಡೇಟಾ ಕೇಂದ್ರವು ಈ ನೀರಿನ ಬಳಕೆಯನ್ನು ಕಡಿಮೆ ಮಾಡಲು ಮುಚ್ಚಿದ ಚಕ್ರ (closed loops) ವ್ಯವಸ್ಥೆಯನ್ನು ಬಳಸಲು ಯೋಜಿಸಿದೆ. ಈ ವ್ಯವಸ್ಥೆ ಆರಂಭಿಕವಾಗಿ ಬಳಸಿರುವ ಒಂದು ಮಿಲಿಯನ್ ಗ್ಯಾಲನ್ ನೀರನ್ನು ಮರುಬಳಕೆ ಮಾಡುತ್ತದೆ ಮತ್ತು ವರ್ಷಕ್ಕೆ ಸುಮಾರು 12,000 ಗ್ಯಾಲನ್ ನೀರನ್ನು ಮಾತ್ರ ಹೆಚ್ಚುವರಿಯಾಗಿ ಸೇರಿಸುವ ಅಗತ್ಯವಿರುತ್ತದೆ ಎಂದು ಒರಾಕಲ್‌ನ ಕ್ಲೇ ಮ್ಯಾಗೋಯರ್ಕ್ ಅವರು ಲಾಸ್ ವೇಗಾಸ್‌ನಲ್ಲಿ ನಡೆದ ಕ್ಲೌಡ್ ವರ್ಲ್ಡ್ ಸಮಾರಂಭದಲ್ಲಿ ತಿಳಿಸಿದ್ದಾರೆ.

ಇಷ್ಟೊಂದು ಬೇಡಿಕೆಯಲ್ಲಿರುವ ಡೇಟಾ ಸೆಂಟರ್‌ನ ತಂಪು ವಾತಾವರಣದ ವ್ಯವಸ್ಥೆಗೆ ಚೀನಾದ ಈ ಹೊಸ ತಂತ್ರಜ್ಞಾನ ಡೇಟಾ ಕ್ಷೇತ್ರದಲ್ಲಿಯೇ ಅತಿ ದೊಡ್ಡ ಆವಿಷ್ಕಾರ ಎಂಬಂತಾಗಿದೆ. ಯಾಕೆಂದರೆ ಸಾಮಾನ್ಯವಾಗಿ ವಿಶ್ವದ ಒಟ್ಟು ವಿದ್ಯುತ್ ಬಳಕೆಯ ಶೇ 40 ರಿಂದ 50ರಷ್ಟು ಈ ಡೇಟಾ ಸೆಂಟರ್‌ಗಳಿಗೆ ಪೂರೈಕೆಯಾಗುತ್ತದೆ. ತಂಪಿನ ವಾತಾವರಣ ನೀಡಲು ಸಾಕಷ್ಟು ನೀರು ಬೇಕಾಗುತ್ತದೆ. ಇನ್ನು ಸಹಜ ತಂಪುಗೊಳಿಸುವ ವ್ಯವಸ್ಥೆಯಾಗಿ ಸಮುದ್ರದ ನೀರನ್ನು ಆಳದಲ್ಲಿ ಬಳಸುವುದರಿಂದ 'ಪವರ್ ಯೂಸೇಜ್ ಎಫೆಕ್ಟಿವ್‌ನೆಸ್' ಪ್ರಮಾಣ ನಿರೀಕ್ಷಿತವಾಗಿ ಕಡಿಮೆಯಾಗುತ್ತದೆ. ಈ ಕೇಂದ್ರದ ನಿರ್ಮಾಣದಿಂದ ಕೇವಲ ಡೇಟಾ ಸಂಗ್ರಹ ಮಾತ್ರವಲ್ಲದೆ, ಕೃತಕ ಬುದ್ಧಿಮತ್ತೆ ಕಾರ್ಯಭಾರಗಳು ಮತ್ತು ಉನ್ನತ ಮಾದರಿ ಕಂಪ್ಯೂಟಿಂಗ್ ವ್ಯವಸ್ಥೆಗೂ ಶಕ್ತಿ ಪೂರೈಕೆಯಾಗಲಿದೆ. 5ಜಿ ಜಾಲಗಳು, ಕೈಗಾರಿಕೆಗಳಿಗೆ ಜಾಲಬಲ, ಇ-ಕಾಮರ್ಸ್‌ಗೆ ಗಣಕಯಂತ್ರಗಳ ಮೂಲಸೌಕರ್ಯವನ್ನು ಒದಗಿಸಲಿದೆ.

ಅಂತರರಾಷ್ಟ್ರೀಯ ಡೇಟಾ ಹರಿವಿನಲ್ಲಿ ಇದನ್ನೊಂದು ಮೈಲಿಗಲ್ಲಾಗಿಸುವ ಮಹತ್ತರ ಗುರಿಯನ್ನು ಚೀನಾ ದೇಶವು ಹೊಂದಿದೆ. ಈ ಸಾಗರದಾಳದ ಡೇಟಾ ಕೇಂದ್ರವು ಪರಿಸರಸ್ನೇಹಿ ಹಾಗೂ ಉನ್ನತ ಕಾರ್ಯಕ್ಷಮತೆಯ ಗಣಕ ಕ್ಲಸ್ಟರ್ ಆಗಿಯೂ ಕಾರ್ಯನಿರ್ವಹಿಸುವ ಮುನ್ಸೂಚನೆ ನೀಡಿದೆ. ಇದು ಈ ಯೋಜನೆಯ ಮೊದಲ ಭಾಗವಷ್ಟೆ. ಎರಡನೆಯ ಹಂತದಲ್ಲಿ 24 ಮೆಗಾವಾಟ್ ಸಾಮರ್ಥ್ಯದ ಸಮುದ್ರದಾಳದ ಡೇಟಾ ಸೆಂಟರ್ ನಿರ್ಮಿಸುವ ಚಿಂತನೆ ಸರ್ಕಾರಕ್ಕೆ ಇರುವುದಾಗಿ ಚೀನಾ ಮಾಧ್ಯಮಗಳು ವರದಿ ಮಾಡಿವೆ. ಅದರ ಪ್ರಾರಂಭ ಯಾವಾಗ ಎನ್ನುವುದರ ಬಗ್ಗೆ ಇನ್ನೂ ಯಾವುದೇ ಮಾಹಿತಿ ಪ್ರಕಟವಾಗಿಲ್ಲ.

ಮೈಕ್ರೋಸಾಫ್ಟ್ ಮೊದಲು: ವಿಶ್ವದ ಮೊದಲ ಸಮುದ್ರದಾಳದ ಡೇಟಾ ಸೆಂಟರ್‌ಗಾಗಿ ಪೆಸಿಫಿಕ್ ಸಾಗರದಲ್ಲಿ 2015ರಲ್ಲಿ ಮೈಕ್ರೋಸಾಫ್ಟ್ ಸಂಸ್ಥೆಯು 'ಪ್ರಾಜೆಕ್ಟ್ ನ್ಯಾಟಿಕ್' ಎಂಬ ಎರಡು ಹಂತಗಳ ಪೈಲಟ್ ಯೋಜನೆಯನ್ನು ಕಾರ್ಯಾರಂಭ ಮಾಡಿತ್ತು. ಆದರೆ, ಜೂನ್ 2024ರ ವೇಳೆಗೆ ಈ ಯೋಜನೆಯನ್ನು ಕೈಬಿಡಲಾಗಿದೆ ಎಂದು ಮೈಕ್ರೋಸಾಫ್ಟ್ ಅಧಿಕೃತವಾಗಿ ಘೋಷಿಸಿತ್ತು.

'ನಾವು ಪ್ರಸ್ತುತ ನೀರಿನೊಳಗೆ ಡೇಟಾ ಸೆಂಟರ್‌ಗಳನ್ನು ನಿರ್ಮಿಸುವ ಯೋಜನೆ ಮಾಡುತ್ತಿಲ್ಲ. ಆದರೆ, ಅಲ್ಲಿ ನಿರ್ಮಿಸುವ ಡೇಟಾ ಸೆಂಟರ್‌ಗಳ ವಿಶ್ವಾಸಾರ್ಹತೆ ಮತ್ತು ಸ್ಥಿರತೆಯ ಕುರಿತು ಹೊಸ ಸಂಶೋಧನೆಗಳನ್ನು ಹುಟ್ಟುಹಾಕಿದ್ದೇವೆ. ಉದಾಹರಣೆಗೆ 'ಲಿಕ್ವಿಡ್ ಇಮರ್ಷನ್ ಟೆಕ್ನಾಲಜಿ' ಅನ್ವೇಷಿಸಲು, ಪರೀಕ್ಷಿಸಲು ಮತ್ತು ಮಾನ್ಯಗೊಳಿಸಲು 'ಪ್ರಾಜೆಕ್ಟ್ ನ್ಯಾಟಿಕ್' ಅನ್ನು ಸಂಶೋಧನಾ ವೇದಿಕೆಯಾಗಿಯೇ ಮುಂದುವರಿಸುತ್ತೇವೆ' ಎಂದು ಮೈಕ್ರೋಸಾಫ್ಟ್‌ನ ವಕ್ತಾರರು 'ಡೇಟಾ ಸೆಂಟರ್ ಡೈನಾಮಿಕ್ಸ್' ಎಂಬ ಕೈಗಾರಿಕಾ ಮಾಧ್ಯಮಕ್ಕೆ ತಿಳಿಸಿದ್ದಾರೆ.

ಈ ತಂತ್ರಜ್ಞಾನ ಇನ್ನೂ ಆರಂಭಿಕ ಹಂತದಲ್ಲಿದ್ದು, ಈ ಮಾದರಿಯ ಪ್ರಯೋಗಗಳಿಗೆ ಮೂಲಸೌಲಭ್ಯದಿಂದ ಮೊದಲುಗೊಂಡು ಸಂಪೂರ್ಣ ಪ್ರಮಾಣದ ಕಾರ್ಯಾಚರಣೆಗೆ ಹೋಗಲು ಇನ್ನೂ ಹೆಚ್ಚಿನ ಅಭಿವೃದ್ಧಿ ಮತ್ತು ಸುಧಾರಣೆಯ ಅಗತ್ಯವಿದೆ ಎಂದು ಡೇಟಾ ಎಂಜಿನಿಯರ್‌ಗಳು ಒಪ್ಪಿಕೊಂಡಿದ್ದಾರೆ. ನಿರ್ವಹಣಾ ವೆಚ್ಚಗಳು ಮತ್ತು ಕಾಲಕಾಲಕ್ಕೆ ಸಮುದ್ರ ಪರಿಸರದ ಮೇಲೆ ಬೀರುವ ಪರಿಣಾಮಗಳ ಬಗ್ಗೆಯೂ ಸಂಶೋಧನೆ ನಡೆದಿದೆ.

ಸಾಗರದಡಿ ಡೇಟಾ ಕೇಂದ್ರಗಳ ನಿರ್ಮಾಣ ಇನ್ನೂ ಪ್ರಾರಂಭಿಕ ಹಂತದಲ್ಲಿದೆ ಎಂದು 'ಚೀನಾ ಕಮ್ಯೂನಿಕೇಷನ್ ಕನ್‌ಸ್ಟ್ರಕ್ಷನ್' ಕಂಪನಿಯ ಬಂದರು ಎಂಜಿನಿಯರಿಂಗ್ ವಿಭಾಗದ ಅಧ್ಯಕ್ಷ ವಾಂಗ್ ಶಿಫೆಂಗ್ ಹೇಳಿದ್ದಾರೆ.

ಯೋಜನೆಗಳು ಕಾರ್ಯರೂಪಕ್ಕೆ ಬರಲು ತಂತ್ರಜ್ಞಾನ ಪಕ್ವತೆ ಮತ್ತು ಅದರ ನಿರ್ಮಾಣ, ನಿರ್ವಹಣೆ ವೆಚ್ಚದ ಗುಣಾವಗುಣಗಳನ್ನು ಅವಲೋಕಿಸಬೇಕಿದೆ.

ಒಂದು ವೇಳೆ ಈ ಯೋಜನೆ ಯಶಸ್ವಿಯಾಗಿ ಎಲ್ಲ ಸಾಫ್ಟ್‌ವೇರ್ ದಿಗ್ಗಜ ಕಂಪನಿಗಳೂ ಇದೇ ಮಾದರಿಯನ್ನು ಅನುಸರಿಸಿದರೆ ವಿಶ್ವದ ಒಟ್ಟು ವಿದ್ಯುತ್ ಬಳಕೆಯಲ್ಲಿ ಅಂದಾಜು ಶೇ 22.8ರಷ್ಟು ಕಡಿಮೆ ಮಾಡಬಹುದು. ಜೊತೆಗೆ ಪ್ರತಿ ಬಾರಿಯೂ ಡೇಟಾ ಸೆಂಟರ್‌ಗಳಿಗೆ ಉಪಯೋಗಿಸುವ ತಾಜಾ ನೀರಿನ ಬಳಕೆಯ ಅಗತ್ಯದ ಸವಾಲನ್ನು ಸಂಪೂರ್ಣವಾಗಿ ನಿವಾರಿಸಬಹುದು. ಹಾಗೆಯೇ ಭೂಮಿ ಮೇಲೆ ನಿರ್ಮಾಣವಾಗುವ ಡೇಟಾ ಸೆಂಟರ್‌ಗಳ ಬಳಕೆಯನ್ನು ಶೇ 90ಕ್ಕಿಂತ ಕಡಿಮೆ ಮಾಡಬಹುದಾಗಿದೆ. ಪರಿಸರದ ಮೇಲೆ ಇ-ತ್ಯಾಜ್ಯ ಬೀರುವ ಪ್ರಭಾವವನ್ನು ತಗ್ಗಿಸಬಹುದಾಗಿದೆ.

'ಮೈಕ್ರೋಸಾಫ್ಟ್' ಸಂಸ್ಥೆಯು ಸ್ವಲ್ಪ ಮಟ್ಟಿಗೆ ಪ್ರಯತ್ನಿಸಿ ಹಿಂದೆ ಸರಿದ ಈ ಪ್ರಯೋಗ ಸಂಪೂರ್ಣ ಯಶಸ್ವಿಯಾಗುತ್ತದೆಯೇ ಎಂಬುದೇ ಈಗ ಕುತೂಹಲಕಾರಿ ಪ್ರಶ್ನೆಯಾಗಿದೆ. ❖

ಇಂಗಾಲದ ಡೈ ಆಕ್ಸೈಡ್‌ನಿಂದ ಮಿಥೆನಾಲ್ ಇಂಧನ

• ನೇಸರ ಕಾಡನಕುಪ್ಪೆ

ಪೆಟ್ರೋಲಿಯಂ ಇಂಧನಗಳು ದಿನೇ ದಿನೇ ಕ್ಷೀಣಿಸುತ್ತಿರುವುದು ಹಾಗೂ ಈ ಇಂಧನಗಳ ಲಭ್ಯತೆ, ಯುದ್ಧ ಇತ್ಯಾದಿ ಕಾರಣಗಳಿಂದಾಗಿ ಕಷ್ಟಸಾಧ್ಯವಾಗುತ್ತಿರುವುದು ನಮಗೆ ನಮ್ಮ ದಿನನಿತ್ಯದ ಜೀವನದಲ್ಲಿ ಹಿಂದಿಗಿಂತಲೂ ಈಗ ಬೇಗನೇ ಮನದಟ್ಟಾಗುತ್ತಿದೆ. ಏರುತ್ತಿರುವ ಬೆಲೆ ಒಂದು ಕಾರಣವಾದರೆ, ಸಾಂಪ್ರದಾಯಿಕ ಪೆಟ್ರೋಲ್‌ನಂತಹ ಇಂಧನಗಳಿಗೆ ಎಥೆನಾಲ್‌ನಂತಹ ರಾಸಾಯನಿಕಗಳ ಮಿಶ್ರಣದಿಂದ ಕ್ಷೀಣಿಸಿದ ಮೈಲೇಜ್, ಕಾರ್ಯಕ್ಷಮತೆ, ಎಂಜಿನ್ ಬೇಗನೇ ಕೆಡುವುದು ಇತ್ಯಾದಿ ಕಾರಣಗಳು ಗ್ರಾಹಕರನ್ನು ಚಿಂತೆಗೆ ದೂಡಿವೆ.

ಇದಕ್ಕೆ ಪರಿಹಾರವೆಂಬಂತೆ ವಿಜ್ಞಾನಿಗಳು ಹೊಸ ಬಗೆಯ ಇಂಧನ ಪರಿಹಾರವನ್ನು ಕಂಡುಹಿಡಿದಿದ್ದಾರೆ. ಇರುವ ಹಾಲಿ ಇಂಧನಕ್ಕೆ ಬದಲಾವಣೆ ತರುವ ಬದಲಿಗೆ, ಕಸವನ್ನು ರಸವನ್ನಾಗಿಸುವ ಅತ್ಯಾಧುನಿಕ ವಿಧಾನವನ್ನು ಕಂಡುಹಿಡಿದಿದ್ದಾರೆ. ಅದುವೇ ಇಂಗಾಲದ ಡೈ ಆಕ್ಸೈಡ್ ಅನ್ನು ಮಿಥೆನಾಲ್ ಅನ್ನಾಗಿ ಪರಿವರ್ತಿಸಿ ಅದನ್ನು ಇಂಧನವಾಗಿ ಬಳಸುವ ವಿಧಾನ. ಇದು ಭವಿಷ್ಯದ ಬಹುತೇಕ ಇಂಧನ ಸವಾಲುಗಳನ್ನು ಪರಿಹರಿಸುತ್ತದೆ ಎಂದು ಇಂಧನತಜ್ಞರು ವಿಶ್ಲೇಷಿಸಿದ್ದಾರೆ.

ಮಿಥೆನಾಲ್ ಈಗಾಗಲೇ ಕೈಗಾರಿಕಾ ಹಾಗೂ ವಾಹನ ಕ್ಷೇತ್ರದಲ್ಲಿ ಬಳಕೆಯಲ್ಲಿದೆ. ಇದು ಎಥೆನಾಲ್‌ನಂತೆ ಅಲ್ಲ. ಎಥೆನಾಲ್ ಕೃಷಿ ಉತ್ಪನ್ನವಾಗಿರುವ ಕಾರಣ, ಅದರಲ್ಲಿ ಕೊಂಚ ಸಕ್ಕರೆಯ ಅಂಶ, ತೇವಾಂಶ ಇತ್ಯಾದಿಗಳು ಇರುತ್ತವೆ. ಒಂದು ಇಂಗಾಲದ ಪರಮಾಣು, ಐದು ಜಲಜನಕದ ಪರಮಾಣು ಹಾಗೂ ಒಂದು ಜಲಜನಕ–ಆಮ್ಲಜನಕದ ಒಂದು ಪರಮಾಣು (C2H5OH) ಎಥೆನಾಲ್‌ನಲ್ಲಿ ಇರುತ್ತದೆ. ಈ ಎಲ್ಲ ಕಾರಣಗಳಿಂದ ಎಥೆನಾಲ್ ಪರಿಸರಸ್ನೇಹಿ ಇಂಧನವೇ ಆದರೂ, ಮೈಲೇಜ್, ಕಾರ್ಯಕ್ಷಮತೆ ಹಾಗೂ ಎಂಜಿನ್‌ನ ಆರೋಗ್ಯದ ದೃಷ್ಟಿಯಿಂದ ಅದು ಒಳ್ಳೆಯ ಆಯ್ಕೆಯಲ್ಲ. ಆದರೆ, ಮಿಥೆನಾಲ್ ಹಾಗಲ್ಲ. ಇದರಲ್ಲಿ ಇಂಗಾಲದ ಒಂದು ಪರಮಾಣು ಮಾತ್ರವೇ ಇರುತ್ತದೆ. ಮಿಕ್ಕಂತೆ, ಜಲಜನಕ 3 ಪರಮಾಣು ಹಾಗೂ ಜಲಜನಕ–ಆಮ್ಲಜನಕದ ಒಂದು ಪರಮಾಣು ಇರುತ್ತವೆ (CH3OH). ಇಲ್ಲಿ ಸ್ಪಷ್ಟವಾಗುವುದೇನೆಂದರೆ, ಮಿಥೆನಾಲ್‌ನಲ್ಲಿ ಇಂಗಾಲದ ಅಂಶ ಕಡಿಮೆ. ಹಾಗಾಗಿ, ಇದನ್ನು ದಹಿಸಿದಾಗ ಅತಿ ಕಡಿಮೆ ಇಂಗಾಲದ ತ್ಯಾಜ್ಯ ಹೊರಬರುತ್ತದೆ.

ಹೊಸ ವಿಧಾನದ ಶೋಧ

ವಿಚಾರ ಇಲ್ಲಿ ಸಂಪೂರ್ಣವಾಗಿ ಈ ಇಂಧನಗಳ ರಚನೆಯ ಬಗ್ಗೆ ಅಲ್ಲ. ಅದನ್ನು ಉತ್ಪಾದಿಸುವ ಹೊಸ ವಿಧಾನದ ಬಗ್ಗೆ. ಸ್ವಿಟ್ಜರ್ಲೆಂಡ್ ಇಟಿಎಚ್ ಜೂರಿಚ್‌ನ ಕ್ಯಾಟಲಿಸಿಸ್ ಎಂಜಿನಿಯರಿಂಗ್ ವಿಭಾಗದ ಪ್ರಾಧ್ಯಾಪಕ ಜೇವಿಯರ್ ಪೆರೇಜ್ ರಾಮೆರಿಜ್ ಅವರ ತಂಡವು ಈ ಸಂಶೋಧನೆಯನ್ನು ಮಾಡಿದೆ. ಬೆಳ್ಳಿಯನ್ನು ಹೋಲುವ 'ಇಂಡಿಯಂ' ಎಂಬ ಲೋಹವೊಂದಿದೆ. ಅದನ್ನು ಬಳಸಿಕೊಂಡು ಅದರ ಪರಮಾಣುಗಳನ್ನು ಇಂಗಾಲದ ಡೈ ಆಕ್ಸೈಡ್ ಜೊತೆಗೆ ಡಿಕ್ಕಿ ಹೊಡೆಸಿ, ಆಗ ಹೊರಹೊಮ್ಮುವ ಪರಮಾಣುಗಳ ಮಿಲನವನ್ನು ಪರಿಶೀಲಿಸಿದ್ದಾರೆ. ಅಚ್ಚರಿ ಎಂಬಂತೆ ಅದು ಬಹುತೇಕ ಮಿಥೆನಾಲ್ ಇಂಧನವನ್ನು ಹೋಲುತ್ತಿದೆ. ತಾವು ಸಂಗ್ರಹಿಸಿದ ಮಿಥೆನಾಲ್ ಅನ್ನು ಅವರು ದಹನ ಕ್ರಿಯೆಗೆ ಒಳಪಡಿಸಿದ್ದು, ಅದು ಬಹುತೇಕ ಶೇ 90ರಷ್ಟು ದಕ್ಷತೆಯಿಂದ ಉರಿದಿದೆ. ಹಾಗಾಗಿ, ಈ ಇಂಧನವು ಕೈಗಾರಿಕೆ ಹಾಗೂ ವಾಹನ ಬಳಕೆಗೆ ಅರ್ಹ ಎಂದು ವಿಜ್ಞಾನಿಗಳು ಘೋಷಿಸಿದ್ದಾರೆ.

ಹೇಗಿದರ ಉತ್ಪಾದನೆ?

ಸಾಮಾನ್ಯವಾಗಿ ಇಂಧನವೊಂದನ್ನು ಉರಿಸಿದಾಗ ತ್ಯಾಜ್ಯವಾಗಿ ಇಂಗಾಲದ ಡೈ ಆಕ್ಸೈಡ್ ಹೊರಬರುತ್ತದೆ. ಇದರಿಂದ ಅಪಾರ ಪ್ರಮಾಣದ ಪರಿಸರ ಮಾಲಿನ್ಯವಾಗುತ್ತದೆ. ವಾತಾವರಣದಲ್ಲಿ ಈಗಾಗಲೇ ಸಾಕಷ್ಟು ಪ್ರಮಾಣದಲ್ಲಿ ಇಂಗಾಲದ ಡೈ ಆಕ್ಸೈಡ್ ಇದೆ. ಇದನ್ನು ಬಳಸಿಕೊಂಡು ಅದಕ್ಕೆ ಇಂಡಿಯಂ ಲೋಹದ ಪರಮಾಣುಗಳನ್ನು ನಿಯಂತ್ರಿತವಾಗಿ ಡಿಕ್ಕಿ ಹೊಡೆಸಲಾಗುತ್ತದೆ. ಆಗ ಉತ್ಪಾದನೆಯಾಗುವುದೇ ಈ ಹೊಸ ಬಗೆಯ ಇಂಧನ. ಸಾಮಾನ್ಯವಾಗಿ ಇಂಡಿಯಂನಂತಹ ಲೋಹದ ಪರಮಾಣುವನ್ನು ಯಾವುದೇ ಇತರ ಪರಮಾಣು ಅಥವಾ ಪರಮಾಣು ಮಿಶ್ರಣದೊಂದಿಗೆ ಡಿಕ್ಕಿ ಹೊಡೆಸಬಹುದು. ಇಲ್ಲಿ ಇಂಗಾಲದ ಡೈ ಆಕ್ಸೈಡ್ ಅನ್ನೇ ಆಯ್ಕೆ ಮಾಡಿಕೊಂಡಿರುವ ಕಾರಣವೆಂದರೆ ಅದರ ಲಭ್ಯತೆ ಹಾಗೂ ಅದನ್ನು ಬಳಸುವುದರಿಂದ ಭವಿಷ್ಯದಲ್ಲಿ ವಾತಾವರಣದಲ್ಲಿ ಅದರ ಪ್ರಮಾಣವನ್ನು ತಗ್ಗಿಸುವಂತೆ ಮಾಡುವುದು. ಈ ಪ್ರಕ್ರಿಯೆಯು ಈಗ ವಿಜ್ಞಾನಿಗಳ ಪ್ರಯೋಗಾಲಯದಲ್ಲಿ ನಡೆದಿದೆ. ಇದನ್ನು ದೊಡ್ಡ ಪ್ರಮಾಣದಲ್ಲಿ ಕಾರ್ಖಾನೆಗಳಲ್ಲೂ ಉತ್ಪಾದಿಸಬಹುದು ಎಂದು ವಿಜ್ಞಾನಿಗಳು ತಿಳಿಸಿದ್ದಾರೆ.

ನೈತಿಕ ಸಮಸ್ಯೆಗಳು ಅಧಿಕ!

ಎಲ್ಲ ಸಂಶೋಧನೆಗಳಿಗೂ ಕೆಲವು ನೈತಿಕ ಇತಿಮಿತಿಗಳಿರುತ್ತವೆ. ಮಿಥೆನಾಲ್ ಅತಿ ಕಡಿಮೆ ಪರಿಸರ ಮಾಲಿನ್ಯ ಉಂಟುಮಾಡುವುದು ನಿಜವಾದರೂ, ಇದು ಸಹಜವಾಗಿಯೇ ವಿಷಕಾರಿ ಅನಿಲ. ಮಿಥೆನಾಲ್ ಅನ್ನು ಉಸಿರಾಡಿದರೆ ತೀವ್ರತರಹ ಆರೋಗ್ಯದ ಸಮಸ್ಯೆಗಳು ಎದುರಾಗಬಹುದು. ಹಾಗಾಗಿ, ಈ ಇಂಧನವನ್ನು ನಿಯಂತ್ರಿತವಾಗಿ ಬಳಸುವುದು ಹೇಗೆ ಎಂಬ ಚರ್ಚೆಗಳು ನಡೆದಿವೆ. ಈ ವಿಧಾನಗಳ ಅಳವಡಿಕೆಯಾದ ಬಳಿಕ, ಈ ಸಂಶೋಧನೆಯು ವಿಜ್ಞಾನಿಗಳ ವಲಯದಲ್ಲಿ ಅಂಗೀಕೃತಗೊಂಡರೆ ಇದರ ಉತ್ಪಾದನಾ ಸೂತ್ರವನ್ನು ಸಾರ್ವಜನಿಕವಾಗಿ ಬಿಡುಗಡೆಗೊಳಿಸುವುದಾಗಿ ವಿಜ್ಞಾನಿಗಳು ಹೇಳಿದ್ದಾರೆ.

ಈಗಾಗಲೇ ಕೈಗಾರಿಕೆಗಳಲ್ಲಿ ಕೆಲವು ಕ್ಷೇತ್ರಗಳಲ್ಲಿ ಮಿಥೆನಾಲ್ ಅನ್ನು ಇಂಧನವಾಗಿ ಬಳಸಲಾಗುತ್ತಿದೆ. ಈ ಅನಿಲಕ್ಕೆ ಬಣ್ಣವಿಲ್ಲ. ಹೊಗೆಯು ಕೆಲವೊಮ್ಮೆ ಕೊಂಚ ಬಿಳಿ ಬಣ್ಣಕ್ಕೂ, ಕೆಲವೊಮ್ಮೆ ಸಂಪೂರ್ಣ ಪಾರದರ್ಶಕವಾಗಿಯೂ ಇರುತ್ತದೆ. ಹಾಗಾಗಿ, ಈ ಅನಿಲದ ಸೋರಿಕೆಯಾದರೆ ಪತ್ತೆಹಚ್ಚುವುದು ಕಷ್ಟ. ಇದೇ ಸಮಸ್ಯೆ ಎಲ್‌ಪಿಜಿಯಲ್ಲೂ ಇದೆ. ಆದರೆ, ಎಲ್‌ಪಿಜಿಗೆ ಕೃತಕವಾಗಿ ವಾಸನೆಯನ್ನು ಸೇರಿಸಲಾಗುತ್ತದೆ. ಅದೇ ರೀತಿ ಮಿಥೆನಾಲ್‌ಗೂ ಸೇರಿಸಬಹುದು ಎಂಬ ಪರಿಹಾರವನ್ನು ಆಗಲೇ ವಿಜ್ಞಾನಿಗಳು ಸೂಚಿಸಿದ್ದಾರೆ.

ಹಾಲಿ ಇರುವ ಇಂಧನಗಳಿಗಿಂತ ಈ ಇಂಧನದ ಉತ್ಪಾದನೆ ಶೇ 50ರಷ್ಟು ಅಗ್ಗವಾಗಲಿದೆ. ಹಾಗಾಗಿ, ಹಣಕಾಸಿನ ದೃಷ್ಟಿಯಿಂದ ಗ್ರಾಹಕರಿಗೆ ಇದು ಅನುಕೂಲಕರವಾದರೂ ಆಗಬಹುದು. ಸುರಕ್ಷಾ ವಿಧಾನಗಳು ಸೂಕ್ತರೀತಿಯಲ್ಲಿ ಪಾಲನೆಯಾದಲ್ಲಿ, ಹಾಲಿ ಇಂಧನ ಸಮಸ್ಯೆಗಳಿಗೆ ಪರಿಹಾರವೂ ಸಿಗಬಹುದು. ❖

'ನೀಟ್' ದಿಕ್ಸೂಚಿ

'ಸಿಇಟಿ' ದಿಕ್ಸೂಚಿ

CHEMISTRY

26)
Which of the following statements are true about $[NiCl_4]^{2-}$?
(a) The complex has tetrahedral geometry
(b) Co-ordination number of Ni is 2 and oxidation state is +4
(c) The complex is sp3 hybridised
(d) It is a high spin complex
(e) The complex is paramagnetic

Ans Code:-
(A) a,c,d and e (B) a,b,d and e
(C) b,c,d and e (D) a,b,c and d

Ans. A

Expln:-

$[NiCl_4]^{-2}$

O – S of Ni – +2

Coordination no. of Ni^{+2} – 4

Cl^- is weak field ligand, pairing does not take place

Ni^{+2} –$[Ar]3d^8$ $4s^0$ $4p^0$



sp^3 hybridization

$[NiCl_4]^{-2}$ is paramagnetic

27) Among the following, choose the ones with equal number of atoms.
A. 212 g of $Na_2CO_3(s)$ [molar mass = 106 g]
B. 248 g of $Na_2O(s)$ [molar mass = 62 g]
C. 240 g of NaOH(s) [molar mass = 40 g]
D. 12 g of $H_2(g)$ [molar mass = 2 g]
E. 220 g of $CO_2(g)$ [molar mass = 44 g]

Choose the correct answer from the options given below :
(a) B, D, and E only (b) A, B, and C only
(c) A, B, and D only (d) B, C, and D only

Ans (c)

Expln:-

$$\text{Number of atoms} = \frac{\text{given mass}}{\text{molar mass}} \times \text{atomicity} \times N_A$$

A. $\frac{212}{106} \times 6 \times N_A = 12\ N_A$

B. $\frac{248}{62} \times 3 \times N_A = 12\ N_A$

C. $\frac{240}{40} \times 3 \times N_A = 18\ N_A$

D. $\frac{12}{2} \times N_A \times 2 = 12\ N_A$

E. $\frac{220}{44} \times N_A \times 3 = 15\ N_A$

A, B and D have same number of atoms

28) Intermolecular forces are forces of attraction and repulsion between interacting particles that will include:
A. dipole-dipole forces.
B. dipole - induced dipole forces,
C. hydrogen bonding.
D. covalent bonding.
E. dispersion forces.

Choose the most appropriate answer from the options given below:
a) A, C, D, E are correct.
b) B, C, D, E are correct.
c) A, B, C, D are correct.
d) A, B, C, E are correct

Ans:- (d) Covalent bonding is NOT an intermolecular force while rest all are considered as intermolecular forces.

29)
Match List I with List II.

	List-I (Process)		List-II (Conditions)
A.	Isothermal process	I.	No heat exchange
B.	Isochoric process	II.	Carried out at constant temperature
C.	Isobaric process	III.	Carried out at constant volume
D.	Adiabatic process	IV.	Carried out at constant pressure

Choose the correct answer from the options given below:
(a) A-IV, B-III, C-II, D-I
(b) A-IV, B-II, C-III, D-I
(c) A-I, B-II, C-III, D-IV
(d) A-II, B-III, C-IV, D-I

Ans:- (d)

Expln:
(A) Isothermal process ⇒ Temperature is constant throughout the process
(B) Isochoric process ⇒ Volume is constant throughout the process
(C) Isobaric process ⇒ Pressure is constant throughout the process
(D) Adiabatic process ⇒ No exchange of heat (q) between system and surrounding

30) Which of the following statements are NOT correct?
A) Hydrogen is used to reduce heavy metal oxides to metals.
B). Heavy water is used to study reaction mechanism.
C) Hydrogen is used to make saturated fats from oils.
D) The H-H bond dissociation enthalpy is lowest as compared to a single bond between two atoms of any element.
E) Hydrogen reduces oxides of metals that are more active than iron.

Choose the most appropriate answer from the options given below:
a) A, B, C only **b) B, C, D, E only**
c) B, D only **d) D, E only**

Ans:- (d) A, B and C are correct statements.

Expln:- The H-H bond dissociation enthalpy is highest for a single bond between two atoms of any element. Hydrogen does not reduce oxides of metals that are more active than iron.

PHYSICS

53) The I-V graph for a conductor at two different temperatures $100\ ^0C$ and $400^0\ C$ is as shown in the figure. The temperature coefficient of resistance of the conductor is about (in per degree Celsius) *(……Contd)*



a) 3×10^{-3} b) 6×10^{-3}
c) 9×10^{-3} (d) 12×10^{3}

Ans:- a

54) A focal length of a lens is 10 cm. What is power of a lens in dioptre?
a) 15 D b) 0.1 D
c) 20 D d) 10 D

Soln: (d): Power of a lens,

$$P\ (\text{in dioptre}) = \frac{1}{\text{Focal length f(in cm)}} = \frac{100}{\text{f (in cm)}}$$

$$\therefore P = \frac{100}{10} = 10\ D$$

55) In the circuit shown, the end A is at potential V_0, and end B is grounded. The electric current indicated in the circuit is…………..



a) $V_0/2R$ b) V_0/R
c) $V_0/3R$ d) V_0/R

Ans:- (C) $V_0/3R$

56) The number of electrons in one coulomb of charge is
a) 6.25×10^{18} b) 6.25×10^{16}
c) 6.25×10^{10} d) 6.25×10^{12}

Ans: (a) 6.25×10^{18}

Expln:-

$Q = ne$

$$\therefore n = \frac{Q}{e} = \frac{1C}{1.602 \times 10^{-19}} = 6.25 \times 10^{18}\ \text{electrons.}$$

57) A rod of length 2 m slides with a speed of 5 ms^{-1} on a rectangular conducting frame as shown in figure. There exists a uniform magnetic field of 0.04 T perpendiculars to the plane of the figure. If the resistance of the rod is 3Ω then the current through the rod is



a). 1.33 A b) 75mA
c) 133 mA d). 0.75 A

Ans: c

We know that the current,
$i = Blv/R = (0.04\times2\times5)/3 = 133$ mA

58) The ratio of magnetic field at the centre of a current carrying circular coil to its magnetic moment is 'x'. If the current and the radius both are doubled then the new ratio will become
a) x/8 b). 2x
c). 4x d). x/4

Ans: a

Expln:- Magnetic field at the center of the current carrying loop is given by $B=(\mu_0/4\pi)\times(2\pi i/a)=(\mu_0\ i)/2a$.
Magnetic moment at the center of the current carrying loop is given by $M=i\pi a^2$
thus $B/M=\mu_0/(2\pi a^3)=x$ (given) when both current and radius are doubled ratio become x/8 times.

59) A particle A has charge +q and particle B has charge +4q, each of then having the same mass m. when allowed to fall from rest through the same electrical potential difference, the ratio of their speeds will become
a) 2:1 b) 1:2
c) 1:4 d) 4:1

Ans: (c) 1:4

Expln:-
F = ma………..(1); F = qE…………(2)
Equating both, ma = qE; a α q

$$\therefore \frac{a_1}{a_2} = \frac{q_1}{q_2} = \frac{1}{4};\ a_1 : a_2 = 1 : 4.$$

60) In a CE amplifier, the input ac signal to be amplified is applied across
a) Forward biased emitter base junction
b) Reverse biased collector base junction
c) Reverse biased emitter-base junction
d) Forwared biased collector base junction

Ans:- a

Expln:- Emitter Base junction should be forward bisased. But Collector- Base junction should be reverse biased

61) A stone weighs 100 N on the surface of the earth. The ratio of its weight at a height of half the radius of the earth to a depth of half the radius of the earth will be approximately
a) 3.6 b) 2.2
c) 1.8 d) 0.9

Ans: (d) 0.9

ಕೇಂದ್ರ–ವಿಪಕ್ಷಗಳ ನಡುವೆ ಜಟಾಪಟಿ?

ಕ್ಷೇತ್ರ ಮರುವಿಂಗಡಣೆ ಜೊತೆ ಮಹಿಳಾ ಮೀಸಲಾತಿ ನಂಟಿಗೆ ಆಕ್ಷೇಪ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಹಿಳಾ ಮೀಸಲಾತಿ ಕಾಯ್ದೆಗೆ ತಿದ್ದುಪಡಿ ತರುವ ಮಸೂದೆ ಹಾಗೂ ಲೋಕಸಭಾ ಮತ್ತು ವಿಧಾನಸಭೆ ಕ್ಷೇತ್ರಗಳ ಮರುವಿಂಗಡಣೆ ಉದ್ದೇಶದ ಮಸೂದೆಯನ್ನು ಇದೇ 16ರಂದು ಆರಂಭವಾಗಲಿರುವ ಸಂಸತ್‌ನ ಮೂರು ದಿನಗಳ ವಿಶೇಷ ಅಧಿವೇಶನದಲ್ಲಿ ಮಂಡಿಸಲು ಕೇಂದ್ರ ಸರ್ಕಾರ ಸಜ್ಜಾಗಿದೆ.

ಸಂಸತ್‌ನಲ್ಲಿ ಈ ಎರಡು ಮಸೂದೆಗಳನ್ನು ಮಂಡಿಸಿದ ವೇಳೆ ಕೇಂದ್ರದ ವಿರುದ್ಧ ಚಾಟಿ ಬೀಸಲು ಅನುಸರಿಸಬೇಕಾದ ಕಾರ್ಯತಂತ್ರ ಕುರಿತು ಚರ್ಚಿಸಲು ವಿರೋಧ ಪಕ್ಷಗಳು ನಿರ್ಧರಿಸಿವೆ. ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಈ ಕುರಿತು ಚರ್ಚಿಸಲು ಬುಧವಾರ ಸಭೆ ಕರೆದಿದ್ದಾರೆ. ಎಲ್ಲ ವಿರೋಧ ಪಕ್ಷಗಳ ಹಿರಿಯ ಮುಖಂಡರು ಈ ಸಭೆಯಲ್ಲಿ ಪಾಲ್ಗೊಂಡು ರಣತಂತ್ರ ರೂಪಿಸುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

‘ಪ್ರಸ್ತಾವಿತ ತಿದ್ದುಪಡಿ ಮಸೂದೆಗಳು ಅಪಾಯಕಾರಿ ಹಾಗೂ ಸಂವಿಧಾನದ ಮೇಲಿನ ದಾಳಿ’ ಎಂದು ಹೇಳುವ ಕಾಂಗ್ರೆಸ್ ಸಂಸದೀಯ ಪಕ್ಷದ ಮುಖ್ಯಸ್ಥೆ ಸೋನಿಯಾ ಗಾಂಧಿ, ಪಕ್ಷದ ನಿಲುವನ್ನು ಈಗಾಗಲೇ ಸ್ಪಷ್ಟಪಡಿಸಿದ್ದಾರೆ.

ಕೇಂದ್ರವು ಮಹಿಳಾ ಮೀಸಲಾತಿ ಜಾರಿ ಜೊತೆಗೆ ಕ್ಷೇತ್ರಗಳ ಮರುವಿಂಗಡಣೆ ಜಾರಿಗೂ ಮುಂದಾಗಿದೆ ಎಂಬುದು ವಿಪಕ್ಷಗಳ ಆರೋಪ. 2024ರ ಲೋಕಸಭಾ ಚುನಾವಣೆ ವೇಳೆ ಮಹಿಳಾ ಮೀಸಲಾತಿ ಜಾರಿಗೊಳಿಸಬೇಕು ಎಂಬ ವಿಪಕ್ಷಗಳ ಬೇಡಿಕೆಯನ್ನು ಕೇಂದ್ರ ತಿರಸ್ಕರಿಸಿತ್ತು. ಈಗ ಇದನ್ನು ಜಾರಿಗೊಳಿಸಲು ಅವಸರವೇಕೆ ಎಂದು ವಿರೋಧ ಪಕ್ಷಗಳು ಪ್ರಶ್ನಿಸಿವೆ.

ಸರ್ವಪಕ್ಷ ಸಭೆ: ಮೂಡದ ಒಮ್ಮತ

ಮಹಿಳಾ ಮೀಸಲಾತಿ ಜಾರಿ ಕುರಿತಂತೆ ಚರ್ಚಿಸಲು ಸರ್ವಪಕ್ಷ ಸಭೆ ಕರೆಯುವ ವಿಚಾರದಲ್ಲಿ ಕೂಡ ಆಡಳಿತ ಮತ್ತು ವಿರೋಧ ಪಕ್ಷಗಳ ನಡುವೆ ಭಿನ್ನಾಭಿಪ್ರಾಯ ಮುಂದುವರಿದಿದೆ.

ಸದ್ಯ ನಡೆಯುತ್ತಿರುವ ವಿಧಾನಸಭಾ ಚುನಾವಣೆ ಏಪ್ರಿಲ್ 29ರಂದು ಮುಗಿಯಲಿದ್ದು, ಆ ಬಳಿಕವಷ್ಟೆ ಸರ್ವಪಕ್ಷ ಸಭೆ ಕರೆಯುವಂತೆ ವಿರೋಧ ಪಕ್ಷಗಳು ಆಗ್ರಹಿಸಿವೆ.

ಕೇಂದ್ರ ಸರ್ಕಾರ ವಿಪಕ್ಷಗಳ ಈ ಬೇಡಿಕೆಯನ್ನು ತಿರಸ್ಕರಿಸಿದೆ. ಈಗಾಗಲೇ ಕೆಲ ವಿರೋಧ ಪಕ್ಷಗಳೊಂದಿಗೆ ಕೇಂದ್ರ ಸರ್ಕಾರ ಈ ವಿಚಾರ ಕುರಿತು ಸಮಾಲೋಚನೆಯನ್ನೂ ನಡೆಸಿದೆ. ಆದರೆ, ಸರ್ವಪಕ್ಷ ಸಭೆ ನಡೆಸುವಂತೆ ಆಗ್ರಹಿಸುತ್ತಿರುವ ಕಾಂಗ್ರೆಸ್, ಟಿಎಂಸಿ ಹಾಗೂ ಸಿಪಿಎಂ, ಸಮಾಲೋಚನೆ ಕುರಿತಂತೆ ಕೇಂದ್ರದ ಆಹ್ವಾನವನ್ನು ತಿರಸ್ಕರಿಸಿವೆ.

ಪ್ರಮುಖ ಅಂಶಗಳು

- ಕಾಂಗ್ರೆಸ್, ಟಿಎಂಸಿ, ಡಿಎಂಕೆ, ಸಿಪಿಎಂ, ಸಿಪಿಐ ಈಗಾಗಲೇ ಕ್ಷೇತ್ರ ಮರುವಿಂಗಡಣೆ ಪ್ರಸ್ತಾವವನ್ನು ವಿರೋಧಿಸಿವೆ
- ಮಹಿಳಾ ಮೀಸಲಾತಿಯನ್ನು 2011ರ ಜನಗಣತಿ ಆಧಾರದಲ್ಲಿ ಜಾರಿಗೊಳಿಸುತ್ತಿರುವುದನ್ನು ಸಮಾಜವಾದಿ ಪಕ್ಷ ಪ್ರಶ್ನಿಸಿದೆ
- ಕ್ಷೇತ್ರಗಳ ಮರುವಿಂಗಡಣೆಯನ್ನು ವಿರೋಧಿಸುವುದಾಗಿ ಎಎಪಿ ಹೇಳಿದೆ. ಮಹಿಳಾ ಮೀಸಲಾತಿಯನ್ನು ಪ್ರಸ್ತುತ ಲೋಕಸಭೆ ಮತ್ತು ವಿಧಾನಸಭೆ ಕ್ಷೇತ್ರಗಳ ಸಂಖ್ಯೆ ಆಧರಿಸಿ ಜಾರಿಗೊಳಿಸಿದಲ್ಲಿ ಬೆಂಬಲಿಸುವುದಾಗಿ ಘೋಷಿಸಿದೆ
- ಪಶ್ಚಿಮ ಬಂಗಾಳ ವಿಭಜಿಸುವುದಕ್ಕಾಗಿ ಕ್ಷೇತ್ರಗಳ ಮರುವಿಂಗಡಣೆ ಜಾರಿಗೊಳಿಸಲಾಗುತ್ತಿದೆ ಎಂದು ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಆರೋಪಿಸಿದ್ದಾರೆ

ಪ್ರಧಾನಿ ಪತ್ರ
ಮಹಿಳೆಯರ ಭಾಗೀದಾರಿಕೆಯಿಂದ ಪ್ರಜಾತಂತ್ರ ಬಲಿಷ್ಠ: ಮೋದಿ

ನವದೆಹಲಿ (ಪಿಟಿಐ): ರಾಜಕೀಯದಲ್ಲಿ ಮಹಿಳೆಯರಿಗೆ ಶೇ33ರಷ್ಟು ಮೀಸಲಾತಿ ನೀಡುವ ಕಾನೂನನ್ನು ಅನುಷ್ಠಾನಗೊಳಿಸುವ ಅಗತ್ಯವನ್ನು ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಮತ್ತೊಮ್ಮೆ ಪ್ರತಿಪಾದಿಸಿದ್ದಾರೆ.

ಈ ಕುರಿತು ದೇಶದ ಮಹಿಳೆಯರಿಗೆ ಬಹಿರಂಗ ಪತ್ರ ಬರೆದಿರುವ ಅವರು, ‘2029ರ ಲೋಕಸಭಾ ಮತ್ತು ವಿಧಾನಸಭೆಗಳ ಚುನಾವಣೆಯನ್ನು ಮಹಿಳಾ ಮೀಸಲಾತಿಯೊಂದಿಗೆ ನಡೆಸಿದಲ್ಲಿ ಭಾರತದ ಪ್ರಜಾತಂತ್ರ ವ್ಯವಸ್ಥೆ ಬಲಿಷ್ಠ ಹಾಗೂ ಚೈತನ್ಯಶಾಲಿ ಆಗಲಿದೆ’ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

‘ಮಹಿಳೆಯರು ನೀತಿ ನಿರೂಪಣೆ ಹಾಗೂ ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯ ಭಾಗೀದಾರರಾದಾಗ ‘ವಿಕಸಿತ ಭಾರತ’ದತ್ತ ನಮ್ಮ ಪಯಣಕ್ಕೆ ಮತ್ತಷ್ಟು ಶಕ್ತಿ ತುಂಬಿದಂತಾಗಲಿದೆ’ ಎಂದಿದ್ದಾರೆ.

ನಮ್ಮ ಶಾಸನಸಭೆಗಳಲ್ಲಿ ಮಹಿಳೆಯರ ಧ್ವನಿ ಗಟ್ಟಿಯಾದಷ್ಟೂ ಪ್ರಜಾಪ್ರಭುತ್ವ ವ್ಯವಸ್ಥೆಯೂ ಬಲಿಷ್ಠಗೊಳ್ಳುತ್ತದೆ. ದೇಶದ ಜನಸಂಖ್ಯೆಯ ಅರ್ಧದಷ್ಟಿರುವ ಮಹಿಳೆಯರಿಗೆ ನ್ಯಾಯ ಸಿಗುವುದನ್ನು ಖಾತ್ರಿಪಡಿಸೋಣ
ನರೇಂದ್ರ ಮೋದಿ, ಪ್ರಧಾನಿ

‘ಏ.16ರಿಂದ ಆರಂಭವಾಗಲಿರುವ ಸಂಸತ್‌ನ ಮೂರು ದಿನಗಳ ವಿಶೇಷ ಅಧಿವೇಶನದಲ್ಲಿ ‘ನಾರಿ ಶಕ್ತಿ ವಂದನ ಅಧಿನಿಯಮ’ಕ್ಕೆ ತಿದ್ದುಪಡಿ ತರುವ ಉದ್ದೇಶದ ಮಸೂದೆ ಅಂಗೀಕಾರವಾಗಲು ನನಗೆ ಆಶೀರ್ವದಿಸುವಂತೆ ದೇಶದ ಎಲ್ಲ ಮಹಿಳೆಯರನ್ನು ಕೋರುವೆ’ ಎಂದು ಮೋದಿ ಹೇಳಿದ್ದಾರೆ.

ಪತ್ರದ ಸಾರಾಂಶ

- ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರು ಅದ್ಭುತ ಸಾಧನೆ ತೋರುತ್ತಿದ್ದಾರೆ. ಶಾಸನಸಭೆಗಳಲ್ಲಿಯೂ ಅವರ ಪಾಲ್ಗೊಳ್ಳುವಿಕೆ ಹೆಚ್ಚಳವಾಗುವುದು ಯೋಗ್ಯ
- ಶಾಸನಸಭೆಗಳಲ್ಲಿ ಮಹಿಳೆಯರಿಗೆ ಅಕ್ಷರಶಃ ಪ್ರಾತಿನಿಧ್ಯ ಕಲ್ಪಿಸುವುದು ಮುಖ್ಯ. ಇದನ್ನು ಖಾತ್ರಿಪಡಿಸಲು ನಾವೆಲ್ಲರೂ ಕೈಜೋಡಿಸುವುದು ಮುಖ್ಯ
- ಮಹಿಳಾ ಮೀಸಲಾತಿ ತಿದ್ದುಪಡಿ ಕಾನೂನು ಅನುಷ್ಠಾನ ವಿಚಾರದಲ್ಲಿ ತೋರುವ ಯಾವುದೇ ವಿಳಂಬವು ದೇಶದ ಮಹಿಳೆಯರಿಗೆ ಮಾಡುವ ಘೋರ ಅನ್ಯಾಯವಾಗಲಿದೆ. ಹೀಗಾಗಿ ಈ ಐತಿಹಾಸಿಕ ಸಂಸತ್ ಅಧಿವೇಶನದಲ್ಲಿ ಪಾಲ್ಗೊಳ್ಳುವಂತೆ ಒತ್ತಾಯಿಸಿ ತಮ್ಮ ಸ್ಥಳೀಯ ಸಂಸದರಿಗೆ ಮಹಿಳೆಯರು ಪತ್ರ ಬರೆಯಬೇಕು

ನಿಮ್ಮನ್ನು ಬೆದರಿಸುತ್ತಿಲ್ಲ. ಎಚ್ಚರಿಸುತ್ತಿದ್ದೇವೆ. ಕ್ಷೇತ್ರ ಪುನರ್‌ವಿಂಗಡಣೆಯಲ್ಲಿ ಅನ್ಯಾಯವಾದರೆ ನೀವು ಇದುವರೆಗೂ ನೋಡದ ತಮಿಳುನಾಡನ್ನು ನೋಡಲಿದ್ದೀರಿ. ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಕ್ಷೇತ್ರ ಪುನರ್‌ವಿಂಗಡಣೆಗೆ ಮಾಡುತ್ತಿರುವ ಅವಸರವು, ಪ್ರಜಾಪ್ರಭುತ್ವ ಹಾಗೂ ರಾಜ್ಯಗಳ ಹಕ್ಕುಗಳ ಮೇಲಿನ ನೇರ ಹಲ್ಲೆಯಾಗಿದೆ. ಡಿಎಂಕೆ ಮಾತ್ರವಲ್ಲ, ತಮಿಳುನಾಡಿನ ರಾಜಕೀಯ ಪಕ್ಷಗಳು ಹಾಗೂ ರಾಜ್ಯ ಸರ್ಕಾರವನ್ನು ಸಂಪರ್ಕಿಸದೆ, ಕೇಂದ್ರ ಸರ್ಕಾರವು ಏಕಪಕ್ಷೀಯವಾಗಿ ಈ ಪ್ರಕ್ರಿಯೆ ನಡೆಸುತ್ತಿದೆ
ಎಂ.ಕೆ. ಸ್ಟಾಲಿನ್, ತಮಿಳುನಾಡು ಮುಖ್ಯಮಂತ್ರಿ

ಉತ್ತರದ ರಾಜ್ಯಗಳಲ್ಲಿ ಮಹಿಳೆಯರು, ಪರಿಶಿಷ್ಟರು, ಹಿಂದುಳಿದವರ ಕ್ಷೇತ್ರಗಳ ಸಂಖ್ಯೆ ಅನುಪಾತದ ಆಧಾರದಲ್ಲಿ ಹೆಚ್ಚಲಿದೆ. ಆದರೆ ದಕ್ಷಿಣದಲ್ಲಿ ಇವರ ಕ್ಷೇತ್ರಗಳ ಸಂಖ್ಯೆ ಕಡಿಮೆಯಾದರೆ ಅನ್ಯಾಯವಾಗಲಿದೆ. ತೆಲಂಗಾಣ ಸೇರಿ ದಕ್ಷಿಣ ರಾಜ್ಯಗಳಲ್ಲಿ ಹೋರಾಟ ನಡೆಸಲಾಗುವುದು. ಕೇರಳದಲ್ಲಿ ಲೋಕಸಭಾ ಕ್ಷೇತ್ರಗಳು 20ರಿಂದ 30ಕ್ಕೆ ಹೆಚ್ಚಳವಾಗಲಿವೆ. ಆದರೆ, ಉತ್ತರ ಪ್ರದೇಶದಲ್ಲಿ 80ರಿಂದ 120ಕ್ಕೆ ಹೆಚ್ಚಳವಾಗಲಿವೆ. ರಾಜಕೀಯ ಪಕ್ಷಗಳು ಹಾಗೂ ರಾಜ್ಯ ಸರ್ಕಾರಗಳೊಂದಿಗೆ ವ್ಯಾಪಕ ಸಮಾಲೋಚನೆ ನಡೆಸುವ ಮೂಲಕ ಒಮ್ಮತ ಅಭಿಪ್ರಾಯ ರೂಪಿಸುವ ಪ್ರಕ್ರಿಯೆ ನಡೆಸಬೇಕು
ರೇವಂತ ರೆಡ್ಡಿ, ತೆಲಂಗಾಣ ಮುಖ್ಯಮಂತ್ರಿ

ಮಹಿಳಾ ಮೀಸಲಾತಿ ಸವಾಲು

ಒಂದನೇ ಪುಟದಿಂದ...

ಸಂವಿಧಾನ ತಿದ್ದುಪಡಿ ಮಸೂದೆಯ ಜೊತೆಗೆ, ಕೇಂದ್ರವು 2002ರ ಕ್ಷೇತ್ರ ಪುನರ್ ವಿಂಗಡಣೆ ಕಾಯ್ದೆ ರದ್ದುಗೊಳಿಸಲು ಮತ್ತು ಬದಲಿಸಲು 2026ರ ಕ್ಷೇತ್ರ ಪುನರ್ ವಿಂಗಡಣೆ ಮಸೂದೆಯನ್ನೂ ಮಂಡಿಸಲಿದೆ.

2029ರ ಲೋಕಸಭಾ ಚುನಾವಣೆಯಲ್ಲಿ ಮಹಿಳಾ ಮೀಸಲು ಜಾರಿಗೆ ತರುವ ಉದ್ದೇಶದಿಂದ ಮೂರು ಮಸೂದೆಗಳ ಕುರಿತ ಚರ್ಚೆ ಮತ್ತು ಅಂಗೀಕಾರಕ್ಕಾಗಿ ಏಪ್ರಿಲ್ 16ರಿಂದ 18ರವರೆಗೆ ಅಧಿವೇಶನ ನಡೆಯಲಿದೆ.

ಲೋಕಸಭೆ ಮತ್ತು ವಿಧಾನಸಭೆಗಳ ಕ್ಷೇತ್ರಗಳ ಅಂತಿಮ ಸಂಖ್ಯೆಯನ್ನು ನಿರ್ಧರಿಸುವ ಅಧಿಕಾರವನ್ನು ಕ್ಷೇತ್ರ ಪುನರ್‌ವಿಂಗಡಣಾ ಆಯೋಗಕ್ಕೆ ಬಿಡಲಾಗಿದೆ. ಮಸೂದೆಗೆ ಒಪ್ಪಿಗೆ ಸಿಕ್ಕ ಬಳಿಕ ಸರ್ಕಾರ ಆಯೋಗವನ್ನು ರಚಿಸಲಿದೆ.

ಲೋಕಸಭಾ ಕ್ಷೇತ್ರಗಳ ಸಂಖ್ಯೆಯನ್ನು ಹೆಚ್ಚಿಸುವ ಪ್ರಸ್ತಾವವು ದಕ್ಷಿಣ ರಾಜ್ಯಗಳು, ಲೋಕಸಭಾ ಕ್ಷೇತ್ರಗಳ ಸಂಖ್ಯೆ ಕಡಿಮೆ ಇರುವ ಪಂಜಾಬ್, ಹಿಮಾಚಲ ಪ್ರದೇಶ ಮತ್ತು ಹರಿಯಾಣದಂತಹ ರಾಜ್ಯಗಳು ಹಾಗೂ ಈಶಾನ್ಯ ರಾಜ್ಯಗಳಿಗೆ ಹಾನಿಕಾರಕವಾಗಿದೆ ಎಂದು ವಿಪಕ್ಷಗಳು ಆರೋಪಿಸಿವೆ.

ಸಂವಿಧಾನದ (131ನೇ ತಿದ್ದುಪಡಿ) ಮಸೂದೆಯ ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆಯ ಪ್ರಕಾರ, ಈ ಮಸೂದೆಯು ಕ್ಷೇತ್ರಗಳ ಪುನರ್‌ವಿಂಗಡಣೆ ಪ್ರಕ್ರಿಯೆಯನ್ನು ಸುಗಮಗೊಳಿಸುತ್ತದೆ ಮತ್ತು ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಸ್ಥಾನಗಳ ಮೀಸಲಾತಿ ಒದಗಿಸುವ ಕಾನೂನಿನ ಜಾರಿಗೆ ಅನುವು ಮಾಡಿಕೊಡುತ್ತದೆ.

ಸ್ಥಾನಗಳ ಸಂಖ್ಯೆ ಮತ್ತು ಮಿತಿ ನಿರ್ಣಯಕ್ಕೆ ಸಂಬಂಧಿಸಿದ 81, 82 ಮತ್ತು 170ನೇ ಪರಿಚ್ಛೇದಗಳನ್ನು ತಿದ್ದುಪಡಿ ಮಾಡುವುದರ ಜೊತೆಗೆ, ಮಹಿಳಾ ಮೀಸಲಾತಿಯ ಅನುಷ್ಠಾನಕ್ಕಾಗಿ 334 (ಎ) ಪರಿಚ್ಛೇದಕ್ಕೆ ಬದಲಾವಣೆಗಳನ್ನೂ ಮಸೂದೆ ಪ್ರಸ್ತಾಪಿಸುತ್ತದೆ. ಮಹಿಳೆಯರಿಗೆ ಮೀಸಲಾಗಿರುವ ಕ್ಷೇತ್ರಗಳನ್ನು ರೋಸ್ಟರ್ (ಸರದಿ) ಪ್ರಕಾರ ಬದಲಾಯಿಸುತ್ತಾ ಹೋಗಲಾಗುತ್ತದೆ.

ಪ್ರಸ್ತುತ, ಸಂವಿಧಾನದ 82 ಮತ್ತು 170(3)ನೇ ಪರಿಚ್ಛೇದದ ಪ್ರಕಾರ ಪ್ರತಿ ಜನಗಣತಿಯ ನಂತರ ಕ್ಷೇತ್ರ ಪುನರ್‌ವಿಂಗಡಣೆಗೆ ಅವಕಾಶ ನೀಡಲಾಗಿದ್ದರೂ, ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಸ್ಥಾನಗಳ ಸಂಖ್ಯೆಯನ್ನು ಹೆಚ್ಚಿಸುವುದನ್ನು ಸ್ಥಗಿತಗೊಳಿಸಲಾಗಿತ್ತು. ಈ ಸ್ಥಗಿತವು 2001ರವರೆಗೆ ಜಾರಿಯಲ್ಲಿತ್ತು ಮತ್ತು 2002ರ ನಂತರದ ಜನಗಣತಿ ವರದಿಗೆ ಅನುಸಾರವಾಗಿ ಕ್ಷೇತ್ರ ಪುನರ್‌ವಿಂಗಡಣೆ ಮಾಡಲಾಗಿತ್ತು.

ಬೇರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕ ಸೇರಿದಂತೆ ದಕ್ಷಿಣದ ರಾಜ್ಯಗಳು ಜನಸಂಖ್ಯಾ ನಿಯಂತ್ರಣದಲ್ಲಿ ಉತ್ತಮ ಸಾಧನೆ ಮಾಡಿವೆ. ವಿಶೇಷವಾಗಿ, ಉತ್ತರ ಪ್ರದೇಶ ಮತ್ತು ಉತ್ತರ ಭಾರತದ ಇತರ ಕೆಲವು ರಾಜ್ಯಗಳಿಗೆ ಹೋಲಿಸಿದರೆ ಈ ರಾಜ್ಯಗಳಿಗೆ ಅನನುಕೂಲ ಆಗಬಾರದು ಎಂಬ ಕಾರಣಕ್ಕೆ 1971ರ ಜನಗಣತಿಯ ಆಧಾರದಲ್ಲಿ ಸ್ಥಾನಗಳ ಹೆಚ್ಚಳವನ್ನು ಸ್ಥಗಿತಗೊಳಿಸಲಾಗಿತ್ತು.

‘ವಿಳಂಬವಾಗಲಿದೆ’

‘2027ರ ಜನಗಣತಿ ನಂತರ ಪುನರ್‌ವಿಂಗಡಣೆ ಪ್ರಕ್ರಿಯೆ ನಡೆಸಿದಲ್ಲಿ, ಸಾಕಷ್ಟು ಸಮಯ ತೆಗೆದುಕೊಳ್ಳುತ್ತದೆ ಮತ್ತು ಗಣತಂತ್ರದ ರಾಜಕೀಯದಲ್ಲಿ ಮಹಿಳೆಯರ ಪಾಲುದಾರಿಕೆ ವಿಳಂಬವಾಗುತ್ತದೆ. ಈ ಪ್ರಸ್ತಾವಿತ ಮಸೂದೆಯ ಮೂಲ ಉದ್ದೇಶವೆಂದರೆ, ಇತ್ತೀಚಿನ ಜನಗಣತಿಯ ವರದಿ ಆಧಾರದ ಮೇಲೆ ಪುನರ್‌ವಿಂಗಡಣೆ ಪ್ರಕ್ರಿಯೆ ನಡೆಸಿ ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಮೀಸಲಾದ ಕ್ಷೇತ್ರಗಳೂ ಸೇರಿದಂತೆ ಎಲ್ಲ ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಮೂರರಲ್ಲಿ ಒಂದರಷ್ಟು ಮೀಸಲಾತಿ ಒದಗಿಸುವುದಾಗಿದೆ’ ಎಂದು ಮಸೂದೆ ತಿಳಿಸಿದೆ.

‘1971ರ ಜನಗಣತಿ ವರದಿಯಲ್ಲಿ ಉಲ್ಲೇಖಿಸಲಾದ ಜನಸಂಖ್ಯೆಯ ಆಧಾರದ ಮೇಲೆ ಸ್ಥಾನಗಳ ಹೆಚ್ಚಳ ಪ್ರಕ್ರಿಯೆಯ ಸ್ಥಗಿತ ಆಗಿನ ಸಮಯದಲ್ಲಿ ಬಹುಮುಖ್ಯ ನಿರ್ಧಾರವಾಗಿತ್ತು. ಆದರೆ, ಅಂದಿನಿಂದ ಇಂದಿನವರೆಗೆ ದೇಶದ ಜನಸಂಖ್ಯೆಯಲ್ಲಿ ಗಣನೀಯ ಬದಲಾವಣೆಯಾಗಿದೆ. ಈ ಅಂಶವು ಅದರ ನಂತರದ ಜನಗಣತಿ ವರದಿಯಲ್ಲಿ ಪ್ರತಿಬಿಂಬಿಸಿದೆ. ಅಂತರರಾಜ್ಯ ಜನಸಂಖ್ಯೆ, ನಗರೀಕರಣ, ವಲಸೆ ಮತ್ತು ಹಲವು ಪ್ರದೇಶಗಳ ಅನಿಯಮಿತ ಬೆಳವಣಿಗೆಗಳಿಂದ ಜನಸಂಖ್ಯೆ ಮತ್ತು ಕ್ಷೇತ್ರಗಳ ಸಂಖ್ಯೆಯಲ್ಲಿ ಸಾಕಷ್ಟು ಅಸಮಾನತೆ ಉಂಟಾಗಿದೆ’ ಎಂದು ಮಸೂದೆ ಉಲ್ಲೇಖಿಸಿದೆ.

‘ನಿರ್ದಿಷ್ಟ ಹಣಕಾಸು ವರ್ಷದ ಆದಾಯ ಪ್ರಮಾಣಪತ್ರ ಕಡ್ಡಾಯ’

ಪ್ರಜಾವಾಣಿ ವಾರ್ತೆ

ನವದೆಹಲಿ: ಆರ್ಥಿಕವಾಗಿ ದುರ್ಬಲ ವರ್ಗ(ಇಡಬ್ಲ್ಯುಎಸ್) ಕೋಟಾ ಅಡಿ ಮೀಸಲಾತಿ ಕೇಳುವ ಅಭ್ಯರ್ಥಿಯು ನಿಗದಿತ ಗಡುವು ಅಥವಾ ಅದಕ್ಕೂ ಮುಂಚಿನ ದಿನಾಂಕದೊಳಗಾಗಿ ನಿರ್ದಿಷ್ಟ ಹಣಕಾಸು ವರ್ಷಕ್ಕೆ ಸಂಬಂಧಿಸಿ ನಿಗದಿತ ನಮೂನೆಯಲ್ಲಿ ಆದಾಯ ಮತ್ತು ಸ್ವತ್ತುಗಳ ಪ್ರಮಾಣಪತ್ರ ಹೊಂದಿರುವುದು ಕಡ್ಡಾಯ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ನಿರ್ದಿಷ್ಟ ಹಣಕಾಸು ವರ್ಷಕ್ಕೆ ಸಂಬಂಧಿಸಿದ ಪ್ರಮಾಣಪತ್ರ ಸಲ್ಲಿಸಲು ಹೇಳಿದಾಗ, ಬೇರೊಂದು ವಿತ್ತೀಯ ವರ್ಷದ ಪ್ರಮಾಣಪತ್ರ ಸಲ್ಲಿಸಿದಲ್ಲಿ ಅದು ಮೀಸಲಾತಿ ಕೇಳುವ ಅಭ್ಯರ್ಥಿಯ ಅರ್ಹತೆಯನ್ನೇ ಪ್ರಶ್ನಿಸುವಂತೆ ಮಾಡಲಿದೆ ಎಂದು ಹೇಳಿದೆ.

ನ್ಯಾಯಮೂರ್ತಿಗಳಾದ ಮನೋಜ್ ಮಿಶ್ರಾ ಹಾಗೂ ಪಿ.ಬಿ.ವರಾಳೆ ಅವರು ಇದ್ದ ಪೀಠವು ಈ ಕುರಿತ ಅರ್ಜಿ ವಿಚಾರಣೆ ವೇಳೆ ಈ ಮಾತು ಹೇಳಿದೆ.

ಅಲಹಾಬಾದ್ ಹೈಕೋರ್ಟ್‌ನ ವಿಭಾಗೀಯ ಪೀಠವು 2023ರ ಜನವರಿ 9ರಂದು ನೀಡಿದ್ದ ಆದೇಶ ಪ್ರಶ್ನಿಸಿ ಪೂನಂ ದ್ವಿವೇದಿ ಹಾಗೂ ಇತರರು ಸಲ್ಲಿಸಿದ್ದ ಮೇಲ್ಮನವಿಗಳನ್ನು ಪೀಠವು ವಜಾಗೊಳಿಸಿದೆ.

ಅರ್ಜಿದಾರರನ್ನು ಆರೋಗ್ಯ ಕಾರ್ಯಕರ್ತೆಯರ ಹುದ್ದೆಗೆ ಪರಿಗಣಿಸುವಂತೆ ಹೈಕೋರ್ಟ್‌ನ ಏಕಸದಸ್ಯ ಪೀಠವೊಂದು ಉತ್ತರ ಪ್ರದೇಶದ ಅಧೀನ ಸೇವೆಗಳ ನೇಮಕಾತಿ ಆಯೋಗಕ್ಕೆ ನೀಡಿದ್ದ ಆದೇಶವನ್ನು ಕೂಡ ಸುಪ್ರೀಂ ಕೋರ್ಟ್ ರದ್ದು ಮಾಡಿದೆ.

ಈ ಪ್ರಕರಣದಲ್ಲಿ, ಮೇಲ್ಮನವಿದಾರರು ನಿಗದಿತ ನಮೂನೆಯಲ್ಲಿರುವ ಅಗತ್ಯ ಪ್ರಮಾಣಪತ್ರಗಳನ್ನು ಕಟ್ ಆಫ್ ದಿನದಂದು ಹೊಂದಿರಲಿಲ್ಲ. ಹೀಗಾಗಿ ಅವರಿಗೆ ಯಾವುದೇ ಪರಿಹಾರ ನೀಡಲು ಸಾಧ್ಯ ಇಲ್ಲ ಎಂದು ಏಪ್ರಿಲ್ 10ರಂದು ನೀಡಿರುವ ತೀರ್ಪಿನಲ್ಲಿ ನ್ಯಾಯಪೀಠ ಸ್ಪಷ್ಟಪಡಿಸಿದೆ.

ಮೇ 1ರಿಂದ ಆಟೊ, ಟ್ಯಾಕ್ಸಿ ಚಾಲಕರಿಗೆ ಮರಾಠಿ ಕಡ್ಡಾಯ

ಠಾಣೆ (ಪಿಟಿಐ): ‘ಲೈಸೆನ್ಸ್ ಹೊಂದಿರುವ ಎಲ್ಲ ಆಟೊ, ಟ್ಯಾಕ್ಸಿ ಚಾಲಕರು ಮೇ 1ರಿಂದಲೇ ಮಹಾರಾಷ್ಟ್ರದಾದ್ಯಂತ ಮರಾಠಿ ಕಲಿತಿರುವುದನ್ನು ಕಡ್ಡಾಯಗೊಳಿಸಲಾಗಿದೆ. ಮೋಟಾರ್ ಸಾರಿಗೆ ಇಲಾಖೆಯಿಂದ ಭಾಷಾ ಜ್ಞಾನದ ಕುರಿತು ಪರೀಕ್ಷಿಸಲು ರಾಜ್ಯದಾದ್ಯಂತ ಅಭಿಯಾನ ನಡೆಸಲಾಗುವುದು’ ಎಂದು ಮಹಾರಾಷ್ಟ್ರದ ಸಾರಿಗೆ ಸಚಿವ ಪ್ರತಾಪ್ ಸರ್‌ನಾಯಕ್ ತಿಳಿಸಿದ್ದಾರೆ.

‘ಮರಾಠಿ ಕುರಿತಂತೆ ಪ್ರಾಥಮಿಕ ಜ್ಞಾನ ಹೊಂದಿರದ ಚಾಲಕರ ಲೈಸೆನ್ಸ್ ಅನ್ನು ರದ್ದುಪಡಿಸಲಾಗುವುದು’ ಎಂದು ಅವರ ಕಚೇರಿಯು ಬಿಡುಗಡೆಗೊಳಿಸಿದ ಪ್ರಕಟಣೆಯಲ್ಲಿ ತಿಳಿಸಿದೆ.

‘ಮಹಾರಾಷ್ಟ್ರ ದಿನವಾದ ಮೇ 1 ರಂದು ಚಾಲಕರ ತಪಾಸಣೆ ನಡೆಸಲಾಗುವುದು. ಸ್ಥಳೀಯ ಭಾಷೆ ತಿಳಿದಿರಬೇಕು ಎಂಬ ನಿಯಮವೂ ಈಗಾಗಲೇ ಜಾರಿಯಲ್ಲಿದೆ. ಈ ಕ್ರಮವೂ ಚಾಲಕರಿಗೆ ಮಾತ್ರ ಸೀಮಿತವಾಗಿರುವುದಿಲ್ಲ’ ಎಂದು ಸ್ಪಷ್ಟಪಡಿಸಿದ್ದಾರೆ.

ಆರು ವರ್ಷಗಳಿಂದ ಸತತವಾಗಿ ಶೇ.ನೂರು ಫಲಿತಾಂಶ ದಾಖಲೆ ಬರೆಯುತ್ತಿರುವ

ಪುತ್ತೂರಿನ ಅಂಬಿಕಾ ಪ.ಪೂ.ವಿದ್ಯಾಲಯ

ಪುತ್ತೂರು: ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನಲ್ಲಿರುವ ಅಂಬಿಕಾ ವಿದ್ಯಾಸಂಸ್ಥೆಯು ದಶಕವೊಂದರಲ್ಲಿ ಮಾಡಿದ ಸಾಧನೆ, ಏರಿದ ಎತ್ತರ ರೋಚಕವಾದದ್ದು.

ಈ ಸಂಸ್ಥೆ ಕಳೆದ ಆರು ವರ್ಷಗಳಿಂದ ಸತತವಾಗಿ ಶೇ 100ರ ಫಲಿತಾಂಶ ದಾಖಲಿಸುತ್ತಿದೆ. ಪ್ರಸಕ್ತ ಸಾಲಿನಲ್ಲಿ ಸಂಸ್ಥೆಯ ಶೇ 75ಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆಯಾಗುವ ಮೂಲಕ, ತಾಲ್ಲೂಕಿನಲ್ಲೇ ಈ ಸಾಧನೆ ಮಾಡಿದ ಸಂಸ್ಥೆ ಎಂಬ ಕೀರ್ತಿಗೆ ಅಂಬಿಕಾ ಸಂಸ್ಥೆ ಪಾತ್ರವಾಗಿದೆ. ಪರೀಕ್ಷೆ ಬರೆದಿದ್ದ 484 ವಿದ್ಯಾರ್ಥಿಗಳಲ್ಲಿ 363 ಮಂದಿ ವಿಶಿಷ್ಟ ಶ್ರೇಣಿ ಹಾಗೂ 120 ಮಂದಿ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. ವಿಜ್ಞಾನ ವಿಭಾಗದಲ್ಲಿ 597 ಅಂಕ ಪಡೆಯುವ ಮೂಲಕ ರಾಜ್ಯಕ್ಕೆ ಮೂರನೇ ರ‍್ಯಾಂಕ್, 594 ಅಂಕದ ಮೂಲಕ ಆರನೇ ರ‍್ಯಾಂಕ್... ಹೀಗೆ ಮೊದಲ ಹತ್ತು ರ‍್ಯಾಂಕ್ ಒಳಗೆ ಸಂಸ್ಥೆಯ ಹನ್ನೊಂದು ವಿದ್ಯಾರ್ಥಿಗಳು ಸ್ಥಾನ ಪಡೆದಿದ್ದಾರೆ.

ಪಿ.ಯು ಪರೀಕ್ಷೆ ಬರೆದಿರುವ ವಿದ್ಯಾರ್ಥಿಗಳಲ್ಲಿ 158 ಮಂದಿ ತಾವು ಹತ್ತನೆಯ ತರಗತಿಯಲ್ಲಿ ಪಡೆದ ಅಂಕಕ್ಕಿಂತ ಹೆಚ್ಚಿನ ಅಂಕ ಪಡೆದಿದ್ದಾರೆ ಎಂಬುದು ಉಲ್ಲೇಖಾರ್ಹ.

ಕಾಮರ್ಸ್ ಶಿಕ್ಷಣ : ಅಂಬಿಕಾ ಸಂಸ್ಥೆಯಲ್ಲಿ ಕಾಮರ್ಸ್ ಶಿಕ್ಷಣವನ್ನೂ ಒದಗಿಸಿಕೊಡಲಾಗುತ್ತಿದೆ. ಪಿ.ಯು.ಸಿ.ಯಿಂದಲೇ ಸಿ.ಎ, ಸಿ.ಎಸ್ ತರಬೇತಿ ವ್ಯವಸ್ಥೆ ಇದೆ. ಹಲವು ವಿದ್ಯಾರ್ಥಿಗಳು ಈಗಾಗಲೇ ಸಿ.ಎ ಫೌಂಡೇಶನ್ ಹಾಗೂ ಐಪಿಸಿಸಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದಾರೆ.

ಮಾತೃಸಂಸ್ಥೆ: ಈ ಅಂಬಿಕಾ ಪದವಿಪೂರ್ವ ವಿದ್ಯಾಲಯವನ್ನು ಹುಟ್ಟು ಹಾಕಿದ್ದು ಪುತ್ತೂರಿನ ನಟ್ಟೋಜ ಫೌಂಡೇಶನ್ ಟ್ರಸ್ಟ್. ನಿತ್ಯವೂ ಬಂದುಹೋಗುವ ವಿದ್ಯಾರ್ಥಿಗಳಿಗೆ ಒಂದು ಕಾಲೇಜು ಹಾಗೂ ಹಾಸ್ಟೆಲ್‌ನಲ್ಲಿದ್ದು ಅಧ್ಯಯನ ನಡೆಸುವವರಿಗಾಗಿ ಪ್ರತ್ಯೇಕ ಕಾಲೇಜು ಆರಂಭಿಸಿದ್ದು ನಟ್ಟೋಜ ಫೌಂಡೇಶನ್ ಟ್ರಸ್ಟ್‌ನ ಹೆಚ್ಚುಗಾರಿಕೆ. ಪುತ್ತೂರು ಬಸ್ ನಿಲ್ದಾಣದ ಪಕ್ಕದ ನೆಲ್ಲಿಕಟ್ಟೆಯಲ್ಲಿ 2010ರಲ್ಲಿ ಅಂಬಿಕಾ ಪದವಿಪೂರ್ವ ವಿದ್ಯಾಲಯ ಸ್ಥಾಪನೆಯಾದರೆ, 2015ರಲ್ಲಿ ಪುತ್ತೂರಿನಿಂದ ಒಂದೂವರೆ ಕಿಲೋಮೀಟರ್ ದೂರದ ಬಪ್ಪಳಿಗೆಯಲ್ಲಿ ಅಂಬಿಕಾ ವಸತಿಯುತ ಪದವಿಪೂರ್ವ ವಿದ್ಯಾಲಯವನ್ನು ಆರಂಭಿಸಲಾಯಿತು. 2013ರಲ್ಲಿ ಒಂದು ಸಿಬಿಎಸ್‌ಇ ವಿದ್ಯಾಲಯವನ್ನೂ ಟ್ರಸ್ಟ್ ಆರಂಭಿಸಿದೆ.

ವಿದ್ಯಾರ್ಥಿ ವೇತನ: ಹತ್ತನೆಯ ತರಗತಿಯಲ್ಲಿ ಅತ್ಯುತ್ತಮ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ, ಹಲವು ಪ್ರತಿಭಾನ್ವಿತರಿಗೆ ಶುಲ್ಕ ರಿಯಾಯಿತಿಯೇ ಮೊದಲಾದ ವಿದ್ಯಾರ್ಥಿಪರ ಯೋಜನೆಗಳು ಅಂಬಿಕಾದಲ್ಲಿವೆ. ಸಂಸ್ಥೆಯ ವತಿಯಿಂದ ಪ್ರತಿ ವರ್ಷ ಒಂದು ಕೋಟಿಗೂ ಮಿಕ್ಕಿದ ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ.

ಕಡಿಮೆ ಶುಲ್ಕ: ಅತಿ ಕಡಿಮೆ ಶುಲ್ಕದಲ್ಲಿ ಸಂಸ್ಥೆಯು ಜೆಇಇ, ನೀಟ್, ಸಿಇಟಿ ಮೊದಲಾದ ಕೋಚಿಂಗ್ ಒದಗಿಸುತ್ತಿದೆ. ಹತ್ತನೇ ತರಗತಿಯಲ್ಲಿ 610ಕ್ಕೂ ಹೆಚ್ಚು ಅಂಕ ಪಡೆದವರಿಗೆ ಶುಲ್ಕದಲ್ಲಿ ವಿವಿಧ ಹಂತಗಳ ರಿಯಾಯಿತಿಯೂ ಇದೆ.

ವಿಶೇಷತೆಗಳು

- 24 ಗಂಟೆಯೂ ವಿದ್ಯಾರ್ಥಿಗಳಿಗೆ ನೆರವಾಗುವ ಆಪ್ತ ಸಮಾಲೋಚಕರನ್ನು ಹೊಂದಿರುವ ಬೆರಳೆಣಿಕೆಯ ಕಾಲೇಜುಗಳಲ್ಲಿ ಒಂದು
- ವಸತಿಯುತ ಪದವಿಪೂರ್ವ ವಿದ್ಯಾಲಯದಲ್ಲಿ ಪ್ರತಿ ದಿನ ವಿದ್ಯಾರ್ಥಿಗಳಿಗೆ ಭಗವದ್ಗೀತೆ, ವಿಷ್ಣುಸಹಸ್ರನಾಮ, ಲಲಿತಾ ಸಹಸ್ರನಾಮ ಪಠಣ, ಯೋಗಾಭ್ಯಾಸ
- ಪ್ರತಿ ವಿದ್ಯಾರ್ಥಿಗೆ ಓರ್ವ ಮಾರ್ಗದರ್ಶಿ ಉಪನ್ಯಾಸಕ ನಿಗದಿ. ಕಲಿಕೆಯಲ್ಲಿ ಹಿಂದುಳಿದವರಿಗಾಗಿ ವಿಶೇಷ ತರಗತಿಗಳು, ತಂತ್ರಜ್ಞಾನ ಆಧರಿತ ತರಗತಿಗಳು, ಹವಾ ನಿಯಂತ್ರಿತ ತರಗತಿ ಕೊಠಡಿಗಳು
- ಯೋಧರ ಮಕ್ಕಳಿಗೆ ಶುಲ್ಕದಲ್ಲಿ ರಿಯಾಯಿತಿ
- ವಿಶಾಲ ಕ್ರೀಡಾಂಗಣ, ಈಜುಕೊಳ, ಗ್ರಂಥಾಲಯ, ಪ್ರಯೋಗಾಲಯ ಮೊದಲಾದ ವ್ಯವಸ್ಥೆ
- ಪ್ರತಿ ತರಗತಿಯಲ್ಲಿ ಇಂಟರ‍್ಯಾಕ್ಟಿವ್ ಸ್ಮಾರ್ಟ್ ಬೋರ್ಡ್. ವಿದ್ಯಾರ್ಥಿಗಳ ವ್ಯಾಯಾಮಕ್ಕಾಗಿ ಜಿಮ್ ವ್ಯವಸ್ಥೆ

ಪೋಷಕರ ವಿಶ್ವಾಸ ಉಳಿಸಿಕೊಳ್ಳುವುದು ನಮ್ಮ ಜವಾಬ್ದಾರಿ. ನಿನ್ನೆಗಿಂತ ಹೆಚ್ಚಿನದನ್ನು ಏನು ಮಾಡಬಹುದು ಎಂದು ಪ್ರತಿದಿನವೂ ನಾವು ಯೋಚಿಸುತ್ತೇವೆ. ಉತ್ಕೃಷ್ಟತೆಯೆಡೆಗೆ ಸಾಗುವ ನಮ್ಮ ಪ್ರಯತ್ನ ನಿರಂತರವಾಗಿರುತ್ತದೆ.
– ಸುಬ್ರಹ್ಮಣ್ಯ ನಟ್ಟೋಜ, ಅಧ್ಯಕ್ಷರು, ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳು

ಈ ವರ್ಷದ ಪಿಯು ಫಲಿತಾಂಶ
ಪರೀಕ್ಷೆ ಬರೆದವರು ವಿದ್ಯಾರ್ಥಿಗಳು: 484
ವಿಶಿಷ್ಟ ಶ್ರೇಣಿ: 363 ವಿದ್ಯಾರ್ಥಿಗಳು
570ಕ್ಕೂ ಹೆಚ್ಚು ಅಂಕ ಪಡೆದವರು: 116 ವಿದ್ಯಾರ್ಥಿಗಳು

ಮಾಹಿತಿಗೆ:
9448835488 / 9741481600 / 7353661688 / 08251 - 235688, 298688, 238688

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಬಿಜೆಪಿ, ಟಿಎಂಸಿ ವಿರುದ್ಧ ರಾಹುಲ್ ಗಾಂಧಿ ವಾಗ್ದಾಳಿ

ರಾಯ್‌ಗಂಜ್/ಮಾಲದಾ/ಕೋಲ್ಕತ್ತ (ಪಿಟಿಐ): ‘ಮತಗಳ್ಳತನದಲ್ಲಿ ತೊಡಗಿಕೊಂಡಿರುವ ಮತ್ತು ತಮ್ಮ ದ್ವೇಷ ತುಂಬಿದ ಯೋಚನೆಗಳ ಮೂಲಕ ಬಿಜೆಪಿ ಮತ್ತು ಆರ್‌ಎಸ್‌ಎಸ್ ಸೇರಿಕೊಂಡು ಸಂವಿಧಾನವನ್ನು ನಾಶಪಡಿಸುತ್ತಿವೆ’ ಎಂದು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಹೇಳಿದರು.

ಪಶ್ಚಿಮ ಬಂಗಾಳದಲ್ಲಿ ತಮ್ಮ ಪ್ರಚಾರ ಆರಂಭಿಸಿದ ಕಾಂಗ್ರೆಸ್ ನಾಯಕ ರಾಹುಲ್, ರಾಯ್‌ಗಂಜ್ ಮತ್ತು ಮಾಲದಾಗಳಲ್ಲಿ ಮಂಗಳವಾರ ಸಭೆ ನಡೆಸಿದರು.

‘ಎಸ್‌ಐಆರ್ ಪ್ರಕ್ರಿಯೆಯು ಅಸಾಂವಿಧಾನಿಕವಾದುದು. ಅವಕಾಶ ಸಿಕ್ಕಾಗಲೆಲ್ಲಾ ಬಿಜೆಪಿ ಮತ್ತು ಆರ್‌ಎಸ್‌ಎಸ್‌ನವರು ಸಂವಿಧಾನದ ಕುರಿತು ಪ್ರಚೋದನಕಾರಿ ಮಾತುಗಳನ್ನು ಆಡುತ್ತಾರೆ’ ಎಂದು ದೂರಿದರು.

‘ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ, ಎಸ್‌ಐಆರ್ ಪ್ರಕ್ರಿಯೆ ಮೂಲಕ ಮತದಾರರ ಪಟ್ಟಿಯಿಂದ ಹೆಸರು ಅಳಿಸಿ ಹೋದವರ ಹೆಸರುಗಳನ್ನು ಮತ್ತೊಮ್ಮೆ ಪಟ್ಟಿಗೆ ಸೇರಿಸಲಾಗುವುದು’ ಎಂದು ಹೇಳಿದರು.

‘ಉದ್ಯೋಗ ನೀಡದ ಮಮತಾ’: ‘ಐದು ಲಕ್ಷ ಯುವಕರಿಗೆ ಉದ್ಯೋಗ ನೀಡುವುದಾಗಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಭರವಸೆ ನೀಡಿದ್ದರು. ಆದರೆ, ಸರ್ಕಾರ ನೀಡುವ ಉದ್ಯೋಗ ಭತ್ಯೆ ಪಡೆದುಕೊಳ್ಳಲು 84 ಲಕ್ಷ ಯುವಕರು ಅರ್ಜಿ ಸಲ್ಲಿಸಿದ್ದಾರೆ. ರಾಜ್ಯದಲ್ಲಿ ಉದ್ಯೋಗ ದೊರೆಯದಿರುವುದಕ್ಕೆ ಟಿಎಂಸಿ ಸರ್ಕಾರವೇ ಜವಾಬ್ದಾರ’ ಎಂದು ರಾಹುಲ್ ಟಿಎಂಸಿ ವಿರುದ್ಧ ವಾಗ್ದಾಳಿ ನಡೆಸಿದರು.

ಅಮೆರಿಕದೊಂದಿಗೆ ವ್ಯಾಪಾರ ಒಪ್ಪಂದ ಮಾಡಿಕೊಂಡು ಮೋದಿ ಅವರು ಭಾರತವನ್ನು ಮಾರಿದ್ದಾರೆ. ಅವರು ದೇಶಭಕ್ತನಲ್ಲ; ದೇಶದ್ರೋಹಿ
ರಾಹುಲ್ ಗಾಂಧಿ, ಲೋಕಸಭೆ ವಿರೋಧ ಪಕ್ಷದ ನಾಯಕ

‘ರಾಜ್ಯದಲ್ಲಿರುವ ಎಲ್ಲ ಕಾರ್ಖಾನೆಗಳನ್ನು ಟಿಎಂಸಿ ಮುಚ್ಚಿದೆ. ದೊಡ್ಡ ಜಾಲವೊಂದು ರಾಜ್ಯವನ್ನು ನಡೆಸುತ್ತಿದೆ. ಭ್ರಷ್ಟಾಚಾರದಲ್ಲಿ ಟಿಎಂಸಿ ಕೂಡ ಹಿಂದೆ ಬಿದ್ದಿಲ್ಲ. ರಾಜ್ಯದಲ್ಲಿ ಹಿಂಸೆಯನ್ನು ಪ್ರಚೋದಿಸಿ, ಸುಳ್ಳು ಭರವಸೆಗಳನ್ನು ನೀಡುತ್ತಿದೆ’ ಎಂದು ದೂರಿದರು.

‘ಬಿಜೆಪಿ ವಿರುದ್ಧ ದೇಶದಾದ್ಯಂತ ಹೋರಾಡಲು ಟಿಎಂಸಿಗೆ ಸಾಧ್ಯವಿಲ್ಲ. ಇದು ಕಾಂಗ್ರೆಸ್‌ಗೆ ಮಾತ್ರವೇ ಸಾಧ್ಯ’ ಎಂದರು.

ಪ್ರಜಾ ಮತ

ಪೊರಕೆ ಹಿಡಿದು ನಿಲ್ಲಿ: ಮಮತಾ

‘ಕೇಂದ್ರೀಯ ಪಡೆಗಳು ಶಾಂತಿ ಕಾಪಾಡಲು ಇರುವುದು. ಆದರೆ, ಅವರು ಮತದಾನ ಮಾಡುವುದನ್ನು ತಡೆದರೆ? ಮಹಿಳೆಯರೆ, ಬೂಟು ಹಾಕಿ ಕೈಯಲ್ಲಿ ಬಂದೂಕು ಹಿಡಿದು ಬರುವವರ ಮುಂದೆ ನೀವು ಪೊರಕೆ ಹಿಡಿದು ನಿಲ್ಲಿ. ಯಾರನ್ನೋ ಹೊಡೆಯಿರಿ ಎಂದು ಹೇಳುವುದಿಲ್ಲ. ಆದರೆ, ನಿಮ್ಮ ಹಕ್ಕು ರಕ್ಷಿಸಿಕೊಳ್ಳಲು ಎಲ್ಲವನ್ನೂ ಮಾಡಬೇಕಾಗುತ್ತದೆ’ ಎಂದು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಕರೆ ನೀಡಿದರು.

ಪಶ್ಚಿಮ ಮೇದಿನಿಪುರದಲ್ಲಿ ಪ್ರಚಾರ ಸಭೆಯಲ್ಲಿ ಮಾತನಾಡಿ, ‘ಬಿಜೆಪಿಯಷ್ಟು ಕೆಟ್ಟ ಪಕ್ಷವನ್ನು ನಾನು ನೋಡಿಯೇ ಇಲ್ಲ’ ಎಂದರು.

‘ಬಿಜೆಪಿಗೆ ಆಪ್ತರಾಗಿರುವ ಅಧಿಕಾರಿಗಳನ್ನು ಇಲ್ಲಿಗೆ ನಿಯೋಜಿಸಿಕೊಂಡಿದ್ದಾರೆ. ಶಾಂತಿ ಕಾಪಾಡಬೇಕು ಎಂದಿದ್ದರೆ ನಮ್ಮ ರಾಜ್ಯದ ಪೊಲೀಸರನ್ನೇ ಬಳಸಿಕೊಳ್ಳಬೇಕಿತ್ತು. ಕೇಂದ್ರೀಯ ಪಡೆಗಳ ನಿಯೋಜನೆ ಯಾಕೆ ಮಾಡಬೇಕಿತ್ತು? ಮತದಾನಕ್ಕೆ ಅಡ್ಡಿ ಮಾಡುವ, ಹಿಂಸೆ ನೀಡುವ ಪೊಲೀಸ್ ಅಧಿಕಾರಿಯ ವಿರುದ್ಧ ತಕ್ಷಣವೇ ದೂರು ನೀಡಿ’ ಎಂದರು.

‘2002ರ ಮತದಾರರ ಪಟ್ಟಿಯಲ್ಲಿ ಇದ್ದ ಪೋಷಕರ ಹೆಸರು ಎಸ್‌ಐಆರ್ ವೇಳೆ ಹೊಂದಿಕೆಯಾಗಬೇಕು, ಪೋಷಕರು ಮತ್ತು ಮಕ್ಕಳ ಮಧ್ಯದ ವಯಸ್ಸಿನ ಅಂತರ ಇಂತಿಷ್ಟೇ ಇರಬೇಕು ಎಂಬ ‘ಲಾಜಿಕಲ್ ಡಿಸ್‌ಕ್ರಿಪೆನ್ಸಿ’ ಎಂಬೆಲ್ಲಾ ಪದಗಳು ಚುನಾವಣಾ ಆಯೋಗದ ಅಡಿ ಬರುವುದೇ ಇಲ್ಲ. ಬಿಜೆಪಿಗೆ ಅನುಕೂಲ ಮಾಡಿಕೊಡಲು ರಾಜ್ಯದಲ್ಲಿ ಇದನ್ನೆಲ್ಲಾ ಮಾಡಲಾಗುತ್ತಿದೆ’ ಎಂದು ಆರೋಪಿಸಿದರು.

ಮಹಿಳೆ, ರೈತರು, ಯುವಕರಿಗೆ ಬಿಜೆಪಿ ಹಲವು ಭರವಸೆ

ಚೆನ್ನೈ (ಪಿಟಿಐ): ಕೇಂದ್ರ ಸಚಿವ ಜೆ.ಪಿ.ನಡ್ಡಾ ಅವರು ತಮಿಳುನಾಡು ವಿಧಾನಸಭಾ ಚುನಾವಣೆಗೆ ಬಿಜೆಪಿ ಪ್ರಣಾಳಿಕೆಯನ್ನು ಮಂಗಳವಾರ ಬಿಡುಗಡೆ ಮಾಡಿದರು.

ಮಾಜಿ ರಾಜ್ಯಪಾಲ ತಮಿಳಿಸೈ ಸೌಂದರ್‌ರಾಜನ್ ಅವರ ನೇತೃತ್ವದ 13 ಸದಸ್ಯರನ್ನೊಳಗೊಂಡ ಸಮಿತಿ ಸಿದ್ಧಪಡಿಸಿರುವ ಈ ಪ್ರಣಾಳಿಕೆಯಲ್ಲಿ ಆಡಳಿತ, ಕಾನೂನು ಮತ್ತು ಸುವ್ಯವಸ್ಥೆ, ಸಾಮಾಜಿಕ ನ್ಯಾಯ, ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ, ಆರೋಗ್ಯ ಮತ್ತು ರೈತರ ಕಲ್ಯಾಣ ಸೇರಿದಂತೆ 12 ಪ್ರಮುಖ ವಿಷಯಗಳನ್ನು ಒಳಗೊಂಡಿದೆ.

ಮತಗಳನ್ನು ಸೆಳೆಯಲು ಮಹಿಳೆಯರು, ರೈತರು ಮತ್ತು ಯುವಜನತೆ ಗುರಿಯಾಗಿಸಿಕೊಂಡು ಮಹತ್ವದ ಭರವಸೆಗಳನ್ನು ಘೋಷಿಸಲಾಗಿದೆ.

ತಮಿಳರ ಹೊಸ ವರ್ಷಾಚರಣೆ ದಿನದಂದೇ ಬಿಡುಗಡೆಯಾದ ಪ್ರಣಾಳಿಕೆಯಲ್ಲಿ, ಸುಬ್ರಹ್ಮಣ್ಯ ಸ್ವಾಮಿ (ಮುರುಗ) ದೇವರನ್ನು ಗೌರವಿಸಲು ‘ಥೈಪೂಸಂ’ ಅನ್ನು ರಾಜ್ಯದ ಹಬ್ಬವೆಂದು ಘೋಷಿಸಲಾಗುವುದು. ತಿರುಪ್ಪರನ್‌ಕುಂಡ್ರಂ ಬೆಟ್ಟದಲ್ಲಿ ಕಾರ್ತಿಕ ದೀಪವನ್ನು ಬೆಳಗಿಸುವ ಸಂಪ್ರದಾಯವನ್ನು ಪುನರಾರಂಭಿಸಿ, ಆಚರಣೆಯನ್ನು ರಕ್ಷಿಸಲಾಗುವುದು ಎಂದು ಭರವಸೆ ನೀಡಲಾಗಿದೆ.

ಪ್ರಣಾಳಿಕೆ ಬಿಡುಗಡೆ ಮಾಡಿ ಮಾತನಾಡಿದ ನಡ್ಡಾ, ‘ತಮಿಳುನಾಡಿನ ಜನರು ಡಿಎಂಕೆ ಆಳ್ವಿಯಿಂದ ಬೇಸರಗೊಂಡಿದ್ದಾರೆ. ಕುಟುಂಬ ಆಡಳಿತವನ್ನು ಕೊನೆಗಾಣಿಸಲು ಬಯಸುತ್ತಿದ್ದಾರೆ’ ಎಂದು ಹೇಳಿದರು. ಎಂ.ಕೆ.ಸ್ಟಾಲಿನ್ ನೇತೃತ್ವದ ಡಿಎಂಕೆ ಸರ್ಕಾರದಲ್ಲಿ ರಾಜ್ಯವನ್ನು ‘ಸಾಂಸ್ಕೃತಿಕ ರಾಜಧಾನಿ’ಯಿಂದ ‘ಅಪರಾಧ ರಾಜಧಾನಿ’ಯನ್ನಾಗಿ ಮಾಡಲಾಗಿದೆ ಎಂದು ಅವರು ಆರೋಪಿಸಿದರು.

ಪ್ರಮುಖ ಘೋಷಣೆಗಳು

- ಮನೆ ಯಜಮಾನಿಗೆ ಮಾಸಿಕ ₹2,000 ಆರ್ಥಿಕ ನೆರವು ಮತ್ತು ಪ್ರತಿ ಕುಟುಂಬಕ್ಕೆ ₹10,000 ಅನುದಾನ
- ಪ್ರತಿ ಮನೆಗೆ ವಾರ್ಷಿಕ 3 ಎಲ್‌ಪಿಜಿ ಸಿಲಿಂಡರ್ ಉಚಿತ (ಪೊಂಗಲ್ ಸುಗ್ಗಿಯ ಹಬ್ಬ, ತಮಿಳು ಹೊಸ ವರ್ಷ ಮತ್ತು ದೀಪಾವಳಿಯ ಸಮಯದಲ್ಲಿ ತಲಾ ಒಂದೊಂದು)
- ಇ-ಸ್ಕೂಟರ್ ಖರೀದಿಗೆ ಮಹಿಳೆಯರಿಗೆ ₹25,000 ಸಬ್ಸಿಡಿ
- ಲೈಂಗಿಕ ಅಪರಾಧಗಳು ಸೇರಿದಂತೆ ಘೋರ ಪ್ರಕರಣಗಳಿಗೆ ತ್ವರಿತಗತಿ ನ್ಯಾಯಾಲಯ ಸ್ಥಾಪನೆ
- ಮಹಿಳೆ ನೇತೃತ್ವದ ಸಹಕಾರ ಸಂಘಗಳು, ಸ್ವಸಹಾಯ ಸಂಘಗಳು, ಎಂಎಸ್‌ಎಂಇಗಳಿಗೆ ₹50 ಲಕ್ಷದವರೆಗೆ ಸಾಲ
- ಪಶುಸಂಗೋಪನೆ, ಜಾನುವಾರು ಸಾಕಣೆ, ಸೀಗಡಿ ಸಾಕಾಣಿಕೆ, ಜೇನು ಸಾಕಾಣಿಕೆ ಮತ್ತು ಕೋಳಿ ಸಾಕಾಣಿಕೆ ಮತ್ತಿತರ ಚಟುವಟಿಕೆಗಳಿಗೆ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಒಂದು ಬಾರಿ ₹50,000 ಅನುದಾನ
- ಪದವಿ ಮುಗಿಸಿದ ವಿದ್ಯಾರ್ಥಿಗಳಿಗೆ ₹10 ಲಕ್ಷ ಬಡ್ಡಿರಹಿತ ಸಾಲ. ನಿರುದ್ಯೋಗದಿಂದಾಗಿ ಇಎಂಐ ಪಾವತಿಸಲು ಸಾಧ್ಯವಾಗದವರಿಗೆ ಶಿಕ್ಷಣ ಸಾಲ ಮನ್ನಾ

ಉದ್ಯೋಗ ವಾಣಿ

ಚಾಂಪಿಯನ್ಸ್ ಪಿಯು ಕಾಲೇಜು
CHAMPIONS PU COLLEGE

WALK-IN-INTERVIEW
Near APMC Market, Sira, Tumakuru

Lecturer in English, Kannada & PCMB (For PU Students)	• PG from reputed university/ experience from reputed college in Karnataka • Salary best & negotiable
Receptionist	• Pleasant looking female with 0-5 year experience • Degree/ PG with Communication Skills in Kannada/ English/ Hindi
Hostel Wardens	• Male/ Female • Degree/ PG with or without experience
Data Entry, Tele Calling, Marketing, PRS, Nurse, Office Boy	• Male/ Female • 0 to 5 years of experience

Attractive Packages shall be offered
Free Food and Accommodation will be provided.
Interested may walk-in with resume & relevent certificates between
11AM - 4PM | 18.04.26, Saturday & 19.04.26, Sunday
championspu@gmail.com 88874 88870, 88874 88871

GUJARAT STATE FERTILIZERS & CHEMICALS LIMITED
Fertlizernagar-391 750. Dist. Vadodara, Gujarat, India

CAREER OPPORTUNITY

GSFC invites applications from exceptional, dynamic, and result-driven professionals to assume the following positions:

Sr. No.	Position
1.	Lead - Digitization & Artificial Intelligence (On Contract)
2.	Associate Vice President (Communication, Media and Market Outreach) - On Contract - Location Delhi
3.	Corporate Communications Officer (On Contract) - Location Mumbai

The successful candidate will be appointed on a contractual basis with the Company. Candidates are requested to apply through the career portal in compliance with the criteria specified on the website.

APPLICATIONS: Only applications submitted through our official e-recruitment portal will be considered.

For comprehensive details regarding the Job Specifications and Job Descriptions, kindly visit our website at www.gsfclimited.com or scan the QR code provided.

B.M.S. Educational Trust

Late B.M.Sreenivasaiah
Founder

Late B.S.Narayan
Former Donor Trustee

B.M.S COLLEGE FOR WOMEN
Autonomous Institution Affiliated to
Dr. Manmohan Singh Bengaluru City University
NAAC Accreditation: "A" Grade
Bugle Rock Road, Basavanagudi, Bengaluru-560 004.
Website: www.bmscw.edu.in Ph: 080-26601836 / 26676729
Invites Applications for teaching faculty for the following Departments in the College

Post	Subject	Essential Qualification & Eligibility
Professor/ Associate Professor	Computer Science (BCA) Management (BBA)	I) Postgraduate in the relevant discipline from a recognized University with a minimum of 55% marks or equivalent grade ii) Should have Ph.D degree from a recognized University by UGC in the relevant subject (with course work included as part of Doctoral Programme) iii) Research Publications in SCI journals UGC Care/ Scopus Indexed /AICTE Journal, approved list. iv) Funded Projects, Post-Doctoral experience in the relevant subject, ICT in Teaching. v) Teaching experience: More than 12 years for Professor and more than 8 years for Associate Professor in Teaching/Research/Industry
Assistant Professor	Computer Science (BCA) Management (BBA) Economics	i) Postgraduate in the relevant discipline from a recognized University with a minimum of 55% marks or equivalent grade. ii) With NET/SLET examination or Ph.D. degree from a recognized University by UGC in the relevant subject (with course work included as part of Doctoral Programme) iii) Teaching experience: More than 5 years of experience in teaching/ research / valuation/BoS/BoE. iv) Knowledge of Computer Skills, Usage of ICT in Teaching.

1. Salary commensurate with qualification and experience.
2. Decision of the Selection Committee is final
3. Resorting to any form of influence will be deemed to be a disqualification of the candidature.
4. The hard copies of the application with Bio-data and copies of certificates of qualifications and experience should reach The Principal, BMS College for Women on the above address on or before 25.04.2026 duly superscribing the envelope with "APPLICATION FOR THE POST OF ....".
5. Also download the application from College website: www.bmscw.edu.in. and upload soft copy in addition to hard copies to principal@bmscw.edu.in on or before 25.04.2026.

Principal Chairperson

ಪ್ರಜಾವಾಣಿ
ಉದ್ಯೋಗಾವಕಾಶದ ಜಾಹೀರಾತಿಗಾಗಿ ಸಂಪರ್ಕಿಸಿ:
ಮೊ: 96069 12220

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75
ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ಭಯದಿಂದ ಸಂಧಾನ ಮಾಡಿಕೊಳ್ಳಬೇಕಿಲ್ಲ; ಸಂಧಾನ ಮಾಡಿಕೊಳ್ಳಲು ಹೆದರಬೇಕಿಲ್ಲ.

–ಜಾನ್ ಎಫ್. ಕೆನಡಿ

ಸಂಪಾದಕೀಯ

ಆಶಾದಾಯಕ ಪಿಯು ಫಲಿತಾಂಶ ಫಲ ಕೊಟ್ಟ ಶೈಕ್ಷಣಿಕ ಸುಧಾರಣೆಗಳು

ದ್ವಿತೀಯ ಪಿಯು ಪರೀಕ್ಷೆಯ 2025–26ರ ಸಾಲಿನ ದಾಖಲೆ ಫಲಿತಾಂಶವು ಪದವಿಪೂರ್ವ ಶಿಕ್ಷಣ ವ್ಯವಸ್ಥೆಯ ಬಗ್ಗೆ ಹೊಸ ಭರವಸೆ ಮೂಡಿಸುವಂತಿದೆ. ಪರೀಕ್ಷೆ ಬರೆದಿದ್ದ 6.32 ಲಕ್ಷ ವಿದ್ಯಾರ್ಥಿಗಳಲ್ಲಿ 5.46 ಲಕ್ಷ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಕೋವಿಡ್ ಸಮಯದಲ್ಲಿ (2023–24) ಎಲ್ಲರನ್ನೂ ಉತ್ತೀರ್ಣಗೊಳಿಸಿದ್ದನ್ನು ಹೊರತುಪಡಿಸಿದರೆ, ಈ ಬಾರಿಯ ಶೇ 86.48ರ ಉತ್ತೀರ್ಣತೆಯ ಪ್ರಮಾಣ ಪಿಯು ಪರೀಕ್ಷೆಗಳ ಇತಿಹಾಸದಲ್ಲಿ ಅತ್ಯುತ್ತಮ ಸಾಧನೆಯಾಗಿದೆ. ಕಳೆದ ವರ್ಷದ ಶೇ 73.45ರಷ್ಟು ಸಾಧನೆಗಿಂತಲೂ ಈ ಬಾರಿಯ ಫಲಿತಾಂಶ ಶೇ 13ರಷ್ಟು ಜಿಗಿತ ಕಂಡಿರುವುದು ಗಮನಾರ್ಹ ಸಾಧನೆಯಾಗಿದೆ. ವ್ಯವಸ್ಥೆಯಲ್ಲಿನ ಹಿನ್ನಡೆಗಳ ಬಗ್ಗೆಯೇ ಸಾರ್ವಜನಿಕ ಚರ್ಚೆಗಳು ಹೆಚ್ಚು ನಡೆಯುವ ಸಂದರ್ಭದಲ್ಲಿ, ಶೈಕ್ಷಣಿಕ ಶಿಸ್ತು ಹಾಗೂ ಆಡಳಿತದ ಗಮನಹರಿಸುವಿಕೆಯು ಏನೆಲ್ಲವನ್ನು ಸಾಧಿಸಬಹುದು ಎನ್ನುವುದಕ್ಕೆ ಈ ಫಲಿತಾಂಶ ನಿದರ್ಶನದಂತಿದೆ. ತೇರ್ಗಡೆಯ ಕನಿಷ್ಠ ಅಂಕಗಳನ್ನು ಶೇ 35ರಿಂದ 33ಕ್ಕೆ ಇಳಿಸಿರುವುದನ್ನು ಉತ್ತಮ ಫಲಿತಾಂಶಕ್ಕೆ ಕಾರಣವನ್ನಾಗಿ ಗುರ್ತಿಸಲು ಸಾಧ್ಯವಿದೆ. ಆದರೆ, ಕನಿಷ್ಠ ಅಂಕ ಇಳಿಕೆಯ ಪ್ರಯೋಜನವನ್ನು 5,577 ವಿದ್ಯಾರ್ಥಿಗಳಷ್ಟೇ ಪಡೆದಿದ್ದಾರೆ ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದ್ದಾರೆ. ಹಾಗಾಗಿ, ಈ ಸಾಧನೆಯ ಹಿಂದೆ ಬೇರುಮಟ್ಟದಲ್ಲಿ ಆಗಿರುವ ರಚನಾತ್ಮಕ ಬದಲಾವಣೆಗಳನ್ನು ಗುರ್ತಿಸಬೇಕಾಗಿದೆ. ಹುಡುಗರಿಗಿಂತಲೂ ಹುಡುಗಿಯರು ಫಲಿತಾಂಶದಲ್ಲಿ ಮುಂದಿರುವಂತಹ ಉತ್ತೇಜನಕಾರಿ ಪ್ರವೃತ್ತಿಗಳು ಈ ಸಾರಿಯೂ ಮುಂದುವರಿದಿವೆ. ಇದಕ್ಕಿಂತಲೂ ಮುಖ್ಯವಾದುದು, ನಗರದ ಸಹವರ್ತಿಗಳನ್ನು ಗ್ರಾಮೀಣ ವಿದ್ಯಾರ್ಥಿಗಳು ಹಿಂದಿಕ್ಕಿರುವುದು ಹಾಗೂ ಸರ್ಕಾರಿ ಕಾಲೇಜುಗಳ ಸಾಧನೆ ಸಾಕಷ್ಟು ಸುಧಾರಿಸಿರುವುದು. ಕಳೆದ ವರ್ಷ 13 ಸರ್ಕಾರಿ ಪಿಯು ಕಾಲೇಜುಗಳು ನೂರಕ್ಕೆ ನೂರು ಫಲಿತಾಂಶ ಸಾಧಿಸಿದ್ದರೆ, ಈ ಬಾರಿ 74 ಕಾಲೇಜುಗಳು ಶೇ 100ರ ಯಶಸ್ಸಿನ ಸಾಧನೆ ಮಾಡಿವೆ. ಇದು ಶೈಕ್ಷಣಿಕ ಮೇಲ್ವಿಚಾರಣೆ ಹಾಗೂ ಉತ್ತರ ದಾಯಿತ್ವದ ಫಲಶ್ರುತಿಯಾಗಿದೆ. ದುರ್ಬಲ ಸಮುದಾಯದ ವಿದ್ಯಾರ್ಥಿಗಳನ್ನು ಮುನ್ನೆಲೆಗೆ ತರುವ ಉದ್ದೇಶದಿಂದ ಕಾರ್ಯ ನಿರ್ವಹಿಸುವ 'ಕರ್ನಾಟಕ ರೆಸಿಡೆನ್ಷಿಯಲ್ ಎಜುಕೇಷನಲ್ ಇನ್‌ಸ್ಟಿಟ್ಯೂಷನ್ಸ್ ಸೊಸೈಟಿ'ಯು ಶೇ 93.99ರಷ್ಟು ಫಲಿತಾಂಶದ ಸಾಧನೆ ಮಾಡಿರುವುದು ಈ ಯಶಸ್ಸಿನ ಕಥೆಗೆ ಪೂರಕವಾಗಿದೆ.

ಪ್ರಾದೇಶಿಕ ಅಸಮಾನತೆಯ ನಡುವೆಯೂ ಪಿಯು ಪರೀಕ್ಷೆಯಲ್ಲಿನ ದಾಖಲೆಯ ಫಲಿತಾಂಶವು ಗಮನಸೆಳೆಯುವಂತಿದೆ; ಸಾರ್ವಜನಿಕ ಶಿಕ್ಷಣ ವ್ಯವಸ್ಥೆಗೆ ಬಲ ತುಂಬುವಂತಿದೆ.

ದಾಖಲೆಯ ಫಲಿತಾಂಶದ ನಡುವೆಯೂ ಪ್ರಾದೇಶಿಕ ಅಸಮಾನತೆಯು ಫಲಿತಾಂಶದಲ್ಲಿ ಎದ್ದುಕಾಣಿಸುವಂತಿದೆ. ಕಳೆದ ಸಾಲಿನ ಫಲಿತಾಂಶಕ್ಕೆ ಹೋಲಿಸಿದರೆ ಕೆಲವು ಜಿಲ್ಲೆಗಳ ಸಾಧನೆ ಸುಧಾರಿಸಿದ್ದರೂ, ಕನಿಷ್ಠ 15 ಜಿಲ್ಲೆಗಳು ಫಲಿತಾಂಶದಲ್ಲಿ ರಾಜ್ಯ ಸರಾಸರಿ ಸಾಧಿಸುವಲ್ಲಿ ವಿಫಲವಾಗಿವೆ. ಶೇ 71.21ರಷ್ಟು ಸಾಧನೆಯ ನಡುವೆಯೂ ಯಾದಗಿರಿ ಜಿಲ್ಲೆಯು ಫಲಿತಾಂಶ ಪಟ್ಟಿಯಲ್ಲಿ ಕೊನೆಯ ಸ್ಥಾನದಲ್ಲಿದೆ; ಆದರೆ, ಕಳೆದ ವರ್ಷದ ಶೇ 48.45ರಷ್ಟು ಫಲಿತಾಂಶವನ್ನು ಗಮನಿಸಿದರೆ ಯಾದಗಿರಿಯ ಗಣನೀಯ ಸುಧಾರಣೆ ಕಾಣಿಸುತ್ತದೆ. ಕಳೆದ ವರ್ಷ ಶೇ 58.81ರಷ್ಟು ಫಲಿತಾಂಶ ಗಳಿಸಿದ್ದ ವಿಜಯಪುರ ಈ ಬಾರಿ ಶೇ 92ರ ಫಲಿತಾಂಶದೊಂದಿಗೆ ಉತ್ತಮ ಸಾಧನೆ ಮಾಡಿರುವ ಜಿಲ್ಲೆಯೆನ್ನಿಸಿಕೊಂಡಿದೆ. ಉಡುಪಿ, ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಗಳು ಫಲಿತಾಂಶದಲ್ಲಿ ಮತ್ತೊಮ್ಮೆ ಪ್ರಾಬಲ್ಯ ಸಾಧಿಸಿವೆ.

ಅವಧಿಗೆ ಮೊದಲೇ ಪಠ್ಯಕ್ರಮದ ಬೋಧನೆ ಮುಕ್ತಾಯ, ಪ್ರಮಾಣೀಕೃತ ಪೂರ್ವಸಿದ್ಧತಾ ಪರೀಕ್ಷೆಗಳು, ವಿಸ್ತೃತ ಶೈಕ್ಷಣಿಕ ನೀಲನಕ್ಷೆಗಳು ಮತ್ತು ಕಟ್ಟುನಿಟ್ಟಾದ ಮೇಲ್ವಿಚಾರಣಾ ವ್ಯವಸ್ಥೆಯು ಪಿಯು ಫಲಿತಾಂಶದಲ್ಲಿನ ಸುಧಾರಣೆಗೆ ಹಾಗೂ ಶೈಕ್ಷಣಿಕ ವ್ಯವಸ್ಥೆಯ ಬಲವರ್ಧನೆಗೆ ಕಾರಣಗಳಾಗಿವೆ. ಶೈಕ್ಷಣಿಕ ವರ್ಷದ ಆರಂಭದಲ್ಲೇ ಅತಿಥಿ ಉಪನ್ಯಾಸಕರು ಲಭ್ಯ ಇರುವಂತೆ ನಡೆದ ನೇಮಕಾತಿಯಿಂದಾಗಿ ತರಗತಿಗಳು ಅಡಚಣೆಯಿಲ್ಲದೆ ನಡೆಯಲು ಸಾಧ್ಯವಾಗಿದೆ. ನಿಯಮಿತ ಶೈಕ್ಷಣಿಕ ಪರಾಮರ್ಶೆ ಹಾಗೂ ಉಪನ್ಯಾಸಕರ ಹೊಣೆಗಾರಿಕೆಯನ್ನು ಹೆಚ್ಚಿಸಿದ್ದು ಕೂಡ ಉತ್ತಮ ಫಲಿತಾಂಶಕ್ಕೆ ಕಾರಣಗಳಾಗಿವೆ. ಈ ವರ್ಷದ ಫಲಿತಾಂಶದ ಗತಿಯನ್ನು ಮುಂದೆಯೂ ಉಳಿಸಿಕೊಳ್ಳುವ ಹಾಗೂ ಈಗಲೂ ಉಳಿದಿರುವ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವ ಸವಾಲು ಶಿಕ್ಷಣ ಇಲಾಖೆಯ ಮುಂದಿದೆ. ರಾಜ್ಯದ ಪಿಯು ಫಲಿತಾಂಶವನ್ನು ಅಂಕಿಅಂಶಗಳ ಸಾಧನೆಯ ರೂಪದಲ್ಲಷ್ಟೇ ನೋಡಲಾಗದು. ಈ ಫಲಿತಾಂಶವು, ಸ್ಪಷ್ಟ ಉದ್ದೇಶ ಮತ್ತು ಪರಿಣಾಮಕಾರಿ ಕಾರ್ಯ ನಿರ್ವಹಣೆಯ ಮೂಲಕ ಸಾರ್ವಜನಿಕ ಶಿಕ್ಷಣವು ಸಮಾಜದ ಕಟ್ಟಕಡೆಯ ಸಮುದಾಯಗಳನ್ನೂ ತಲಪುತ್ತದೆ, ಪ್ರಯೋಜನಕಾರಿಯಾಗಿ ಪರಿಣಮಿಸುತ್ತದೆ ಎನ್ನುವುದರ ಸಂಕೇತವಾಗಿದೆ.

'ನಾಯಕತ್ವ' ನಾಯಿಕೊಡೆ ಅಲ್ಲ!

ವಿಶ್ಲೇಷಣೆ

ಚಂದ್ರಕಾಂತ ವಡ್ಡು

ರಾಜಕಾರಣದಲ್ಲಿ ಕಾಲಕ್ರಮೇಣ ಹೊಸ ನಾಯಕರು ಹೊರಹೊಮ್ಮಬೇಕು; ಹೊಸ ನಾಯಕತ್ವದ ಬೆಳಕಿನಲ್ಲಿ ಜನಸಾಮಾನ್ಯರ ಬದುಕಿಗೆ ಭರವಸೆ ಮೂಡಬೇಕು ಎಂದು ಯಾವುದೇ ದೇಶದ ಯಾವುದೇ ಕಾಲದ ನಾಗರಿಕ ಸಮಾಜ ಕಾತರಿಸುವುದು ಸಹಜ. ಆದರೆ, ಸಾರ್ವಜನಿಕ ಬದುಕಿನ ವರ್ತಮಾನದ ಕಳಾಹೀನತೆ ಹಾಗೂ ಭವಿಷ್ಯದ ಬಗೆಗೆ ಕನಸುಗಳನ್ನು ಸ್ಫುರಿಸದ ಏಕತಾನತೆಯಿಂದ ಬೇಸರಗೊಂಡ ನಾಗರಿಕರ ಅಗತ್ಯ ಮತ್ತು ಅಪೇಕ್ಷೆಗೆ ಅನುಗುಣವಾಗಿ ಹೊಸ ನಾಯಕತ್ವ ತಕ್ಷಣ ಉದ್ಭವಿಸಲಾರದು. ರಾಜಕೀಯ ನಾಯಕತ್ವ ಯಾವಾಗ, ಏಕೆ ಮತ್ತು ಹೇಗೆ ಹುಟ್ಟುತ್ತದೆ ಎಂಬ ಪ್ರಶ್ನೆಗೆ ಐತಿಹಾಸಿಕ ನಿದರ್ಶನಗಳು ಹಾಗೂ ರಾಜ್ಯಶಾಸ್ತ್ರ ಮತ್ತು ಸಮಾಜಶಾಸ್ತ್ರದ ವೈಜ್ಞಾನಿಕ ನಿರೂಪಣೆಗಳಲ್ಲಿ ಉತ್ತರ ಹುಡುಕಬೇಕಾಗುತ್ತದೆ.

ರಾಜಕೀಯ ನಾಯಕತ್ವವು ಹುಟ್ಟುವುದಿಲ್ಲ, ಸೃಷ್ಟಿಯಾಗುವುದಿಲ್ಲ, ಉದ್ಭವಿಸುವುದೂ ಇಲ್ಲ ಎಂಬ ಮೂಲಭೂತ ಸತ್ಯವನ್ನು ಎಲ್ಲಕ್ಕಿಂತ ಮೊದಲಿಗೆ ಅರ್ಥೈಸಿಕೊಳ್ಳುವುದು ಅತ್ಯಗತ್ಯ. ಅದು ಆ ಕ್ಷಣದ ಅಥವಾ ಒಬ್ಬ ವ್ಯಕ್ತಿಯ ಮಹತ್ವಾಕಾಂಕ್ಷೆಯ ಫಲಶ್ರುತಿ ಆಗಿರಲೂ ಸಾಧ್ಯವಿಲ್ಲ. ನಾಯಕತ್ವ ಎಂಬುದು ಕಾಲಾನುಕ್ರಮೇಣ ರೂಪು ತಳೆಯುತ್ತಾ ವರ್ತಮಾನದಲ್ಲಿ ಹೊರ ಚಿಮ್ಮುವ ವಿದ್ಯಮಾನ; ಐತಿಹಾಸಿಕ ಸನ್ನಿವೇಶಗಳು, ಸಾಮಾಜಿಕ ಒತ್ತಡಗಳು, ಪ್ರಾದೇಶಿಕ ಸಮಸ್ಯೆಗಳು ಹಾಗೂ ವ್ಯಕ್ತಿಗತ ಮುಂದಾಳತ್ವದ ಗುಣಗಳು ಸಮನ್ವಯಗೊಳ್ಳುವ ಸಂಕೀರ್ಣ ಪ್ರಕ್ರಿಯೆ. ಕೇವಲ ವ್ಯಕ್ತಿಯ ಸಾಧನೆಯಾಗದೇ ಸಮಕಾಲೀನ ಸಂದರ್ಭಕ್ಕೆ ಜನಸಮುದಾಯವು ತೋರುವ ಪ್ರತಿಕ್ರಿಯಾತ್ಮಕ ಅಭಿವ್ಯಕ್ತಿಯಾಗಿ ಪ್ರಕಟವಾಗುವ ರಾಜಕೀಯ ನಾಯಕತ್ವ ಹುಟ್ಟುವ ಬಗೆ ಮತ್ತು ಸಂದರ್ಭ ಸೋಜಿಗದ ಸಂಗತಿ ಎಂಬುದನ್ನು ಒಪ್ಪಬೇಕಾಗುತ್ತದೆ.

ರಾಜಕೀಯ ನಾಯಕತ್ವವು ಹೆಚ್ಚಾಗಿ ಆರ್ಥಿಕ ಕುಸಿತ, ಸಾಮಾಜಿಕ ಅಶಾಂತಿ, ಯುದ್ಧ ಅಥವಾ ಸಾಂಸ್ಕೃತಿಕ ಅವನತಿಯ ಕ್ಷಣಗಳಲ್ಲಿ ಹೊರಹೊಮ್ಮುತ್ತದೆ. ಮಹಾತ್ಮ ಗಾಂಧಿಯವರ ನಾಯಕತ್ವವು ವಸಾಹತುಶಾಹಿಯ ದಮನಕಾರಿ ಆಡಳಿತ ಮತ್ತು ಸಮುದಾಯದೊಳಗಿನ ಅತೃಪ್ತಿಯ ಸಮಯದಲ್ಲಿ ರೂಪು ತಳೆದಿದ್ದನ್ನು ಈ ಬೆಳಕಿನಲ್ಲಿಯೇ ಅವಲೋಕಿಸಬಹುದು. ಗಾಂಧೀಜಿ ಭಾರತದ ಸ್ವಾತಂತ್ರ್ಯ ಹೋರಾಟದ ಭಾಗವಾಗುವುದಕ್ಕೆ ಮುಂಚೆಯೇ ದಕ್ಷಿಣ ಆಫ್ರಿಕಾದಲ್ಲಿನ ಲೌಕಿಕ ಅನುಭವಗಳ ಮೂಲಕ ನಾಯಕತ್ವಕ್ಕೆ ಪೂರಕವಾದ ಸತ್ವ, ವ್ಯಕ್ತಿತ್ವ ಮತ್ತು ಮಾನಸಿಕ ಸಿದ್ಧತೆಯನ್ನು ಗಳಿಸಿದ್ದರು. ಅದೇ ರೀತಿ ದಕ್ಷಿಣ ಆಫ್ರಿಕಾದ ನೆಲ್ಸನ್ ಮಂಡೇಲಾ ವ್ಯವಸ್ಥಿತ ಜನಾಂಗೀಯ ಅನ್ಯಾಯ ಮತ್ತು ಪ್ರತಿರೋಧದ ಸಂದರ್ಭದಲ್ಲಿ ಐತಿಹಾಸಿಕ ನಾಯಕರಾಗಿ ಹೊರಹೊಮ್ಮಿದ್ದನ್ನು ಗಮನಿಸಬೇಕು.

ಹೊರನೋಟಕ್ಕೆ ಕೆ. ಚಂದ್ರಶೇಖರ ರಾವ್ ಅವರು ತೆಲಂಗಾಣ ಸ್ವಾಭಿಮಾನದ ಚಳವಳಿ ರೂಪಿಸುವ ಮೂಲಕ ನಾಯಕರಾಗಿ ಚಿಮ್ಮಿದರು ಎನ್ನಿಸಬಹುದು. ಆದರೆ, ವಾಸ್ತವದಲ್ಲಿ ಅವರು ಸುಪ್ತವಾಗಿದ್ದ ಪ್ರಜೆಗಳ ಅಸಮಾಧಾನದ ಪ್ರತೀಕವಾಗಿ, ದನಿಯಾಗಿ ಕಾಣಿಸಿಕೊಂಡರೇ ವಿನಾ ಅವರಿಂದಾಗಿ ತೆಲಂಗಾಣ ಹೋರಾಟ ಜೀವ ತಳೆಯಲಿಲ್ಲ. ಅದೇ ಪ್ರಕಾರ ಎಂಬತ್ತರ ದಶಕದಲ್ಲಿ ಕರ್ನಾಟಕ ಕಂಡ ಕನ್ನಡ ಜಾಗೃತಿ, ದಲಿತ ಚಳವಳಿ ಮತ್ತು ರೈತ ಹೋರಾಟಗಳ ಹುಟ್ಟು ಮತ್ತು ಆ ಜನಾಂದೋಲನಗಳು ಹುಟ್ಟಿಸಿದ ನಾಯಕತ್ವಗಳ ಗುಟ್ಟನ್ನು ಹುಡುಕಬಹುದು. ಪ್ರೊ. ಎಂ.ಡಿ. ನಂಜುಂಡಸ್ವಾಮಿ ಅವರು ಕರ್ನಾಟಕದಲ್ಲಿ ರೈತ ಚಳವಳಿಯನ್ನು ಹುಟ್ಟುಹಾಕಿದರು ಎಂದು ಹೇಳುವುದು ಕೇವಲ ಅಭಿಮಾನ ಮೂಲದ, ಅರ್ಧ ಸತ್ಯದ ಮಾತಾಗುತ್ತದೆ. ರೈತ ಚಳವಳಿ ಮೂಲಕ ಎಂಡಿಎನ್ ನಾಯಕರಾಗಿ ಹೊರಹೊಮ್ಮಿದರು ಎಂಬ ತರ್ಕದಲ್ಲಿ ಪೂರ್ಣ ಸತ್ಯವಿರುವುದನ್ನು ಗಮನಿಸಬೇಕು.

ಇತ್ತೀಚೆಗೆ ಸುಮ್ಮನೆ ಅಮ್ಮನ ಸೆರಗಿನಲ್ಲಿ, ಅಪ್ಪನ ದಪ್ಪನೆಯ ಹೆಗಲಿನಲ್ಲಿ, ಅಜ್ಜನ ಕೋಲಿನ ಆಸರೆಯಲ್ಲಿ ಇದ್ದಕ್ಕಿದ್ದಂತೆ ಉದ್ಭವಿಸುವ, ಹಣ, ಅಧಿಕಾರ, ಜಾತಿ ಹೂಡಿಕೆಯಲ್ಲಿ ಚುನಾವಣೆಗಳನ್ನು ಗೆಲ್ಲುವ ಕೃತ್ರಿಮ ನಾಯಕರನ್ನು ಎಲ್ಲೆಡೆ ಕಾಣುತ್ತಿದ್ದೇವೆ.

> ಜನರ ಆಶೋತ್ತರಗಳಿಗೆ ಸ್ಪಂದಿಸುವ ರಾಜಕೀಯ ನಾಯಕತ್ವದ ಗೈರುಹಾಜರಿಗೆ ಯಾರನ್ನು ದೂಷಿಸುವುದು? ಅಂಥ ನಾಯಕತ್ವ ಹೊಂದಲಿಕ್ಕೆ ಅರ್ಹತೆಯಿಲ್ಲದ ಜನರನ್ನೋ, ರಾಜಕಾರಣಿಗಳ ಸ್ವಾರ್ಥವನ್ನೋ ಅಥವಾ ಜನಪರ ನಾಯಕತ್ವಕ್ಕೆ ವೇದಿಕೆ ಸೃಷ್ಟಿಸದ ಕಾಲಘಟ್ಟವನ್ನೊ?

ರಾಯಿಸ್ಟ್ ವಿಚಾರಧಾರೆ ಹೊಂದಿದ್ದ ಎಸ್.ಆರ್. ಬೊಮ್ಮಾಯಿ ಅವರ ಕುಟುಂಬದ ಮೂರನೇ ಪೀಳಿಗೆಯ ಕುಡಿ ಭರತ್ ಬೊಮ್ಮಾಯಿ, ಸರ್ವ ಪಕ್ಷಗಳ ಖಜಾಂಚಿ ಆಗಿದ್ದ ಶಾಮನೂರು ಶಿವಶಂಕರಪ್ಪ ಅವರ ಮೊಮ್ಮಗ ಶಾಮನೂರು ಸಮರ್ಥ, ಜನತಾ ಪರಿವಾರ ಬ್ಯಾನರ್ ಹೊಂದಿರುವ ಎಚ್.ಡಿ. ದೇವೇಗೌಡರ ಇಡೀ ಹರದನಹಳ್ಳಿ ಪರಿವಾರ, ಜನಪರ ಹೋರಾಟದ ಹಿನ್ನೆಲೆಯ ಬಿ.ಎಸ್. ಯಡಿಯೂರಪ್ಪರ ಕುಟುಂಬದ ಕುಡಿಗಳು ಕನ್ನಡ ನಾಡಿಗೆ ಇಂಥ ಕೃತ್ರಿಮ ನಾಯಕತ್ವ ನೀಡುವಲ್ಲಿ ಸಫಲರಾಗಿದ್ದಾರೆ. ಬೀದರ್ ಭಾಗದ ಹೋರಾಟಗಾರ–ರಾಜಕಾರಣಿ ಭೀಮಣ್ಣ ಖಂಡ್ರೆ ಅವರ ಮಗ ಈಶ್ವರ ಖಂಡ್ರೆ ಕರ್ನಾಟಕ ರಾಜ್ಯ ಸರ್ಕಾರದಲ್ಲಿ ಅರಣ್ಯ ಸಚಿವರು ಹಾಗೂ ಮುಮ್ಮಡಿ ಕುಡಿ ಸಾಗರ್ ಖಂಡ್ರೆ ಸಂಸತ್ ಸದಸ್ಯರು.

ಇನ್ನು, ಸಮಾಜವಾದಿ ಎಂಬ ಆರೋಪಕ್ಕೆ ಗುರಿಯಾಗಿರುವ ಸಿದ್ದರಾಮಯ್ಯ ಅವರು ಕೂಡ ಕುಡಿ ನಾಯಕರನ್ನು ಕೊಡುಗೆ ನೀಡುವಲ್ಲಿ ಹಿಂದೆಬಿದ್ದಿಲ್ಲ! ಅವರು ರಾಜಕೀಯದಲ್ಲಿ ಆಸಕ್ತಿಯಿದ್ದ ಒಬ್ಬ ಮಗ ತೀರಿಕೊಂಡ ನಂತರ ಸಾರ್ವಜನಿಕ ಜೀವನದ ಹತ್ತಿರವೂ ಸುಳಿಯದ ಇನ್ನೊಬ್ಬ ಮಗ, ವೈದ್ಯ ವೃತ್ತಿಯ ಯತೀಂದ್ರ ಅವರನ್ನು 'ಶಾಡೋ ಸಿಎಂ' ಎಂದು ಕರೆಯಲಾಗುವಷ್ಟು ರಾಜಕೀಯವಾಗಿ ಬೆಳೆಸಿದ್ದಾರೆ; ಮೊಮ್ಮಗ ಧವನ್ ರಾಕೇಶ್ ಅವರನ್ನು ತಮ್ಮ ಉತ್ತರಾಧಿಕಾರಿ ಎಂದು ವರುಣಾ ಕ್ಷೇತ್ರದಲ್ಲಿ ಘೋಷಿಸಿದ್ದಾರೆ.

ಇಲ್ಲಿ ವಿಶ್ಲೇಷಣೆಗೆ ಎತ್ತಿಕೊಂಡಿರುವುದು ಜನನಾಯಕನ ಜನನದ ವಿಷಯವೇ ಹೊರತು ಮಳೆಗಾಲದಲ್ಲಿ ನಾಯಿಕೊಡೆಗಳಂತೆ ಎಲ್ಲೆಡೆ ಹುಟ್ಟಿಕೊಳ್ಳುವ ಕೃತಕ ನಾಯಕರ ಸಂತತಿಯ ಪ್ರವರ ಅಲ್ಲ. ಹಾಗಾಗಿ ಕೃತ್ರಿಮ ನಾಯಕರ ಕಥೆಗಳನ್ನು ಪ್ರಾಸಂಗಿಕವಾಗಿ ಪ್ರಸ್ತಾಪಿಸಬೇಕಾಯಿತು, ಬೆಳೆಸುವ ಅಗತ್ಯವಿಲ್ಲ.

ನಾಯಕತ್ವ ಎಂಬುದು ನಿರ್ವಾತದಲ್ಲಿ ನಿರ್ಮಾಣವಾಗುವ ಪದಾರ್ಥವಲ್ಲ. ಅದನ್ನು ರೂಪಿಸುವ ಕ್ರಿಯೆಯಲ್ಲಿ ಸಾಂಸ್ಥಿಕ ಪಾತ್ರ ಮತ್ತು ಹೊಣೆಗಾರಿಕೆಯೂ ಬಹಳ ಮುಖ್ಯವಾಗುತ್ತದೆ. ಸಾಂಪ್ರದಾಯಿಕ ರಾಜಕೀಯ ಪಕ್ಷಗಳು ತಾವು ಪ್ರತಿಪಾದಿಸುವ ಸೈದ್ಧಾಂತಿಕತೆಯ ತಿರುಳನ್ನು ತಮ್ಮ ಕಾರ್ಯಕರ್ತರಲ್ಲಿ ಬಿತ್ತುವ ಬೌದ್ಧಿಕ ಚಟುವಟಿಕೆಗಳನ್ನು ನಡೆಸದೇ ಅವರನ್ನು ಕಾಲಾಳುಗಳಂತೆ ಬಳಸುವ, ಬೆಳೆಸುವ ಕಾರ್ಯದಲ್ಲಿ ನಿರತವಾಗಿವೆ. ಹಾಗಾಗಿ ಸಂಘಟನೆ, ಹೋರಾಟ, ಪ್ರತಿಭಟನೆಗಳು ಬೇರೆಯದೇ ಆದ ಶುದ್ಧ ವ್ಯಾವಹಾರಿಕ ಆಯಾಮ ಪಡೆದುಕೊಳ್ಳುವಂತಾಗಿದೆ. ರಿಯಲ್ ಎಸ್ಟೇಟ್ ಉದ್ಯಮಿಗಳು, ಅಡ್ಡ ಮಾರ್ಗಗಳಲ್ಲಿ ದುಡ್ಡು ಮಾಡಿದ ಕುಳಗಳು, ಗಣಿ ವ್ಯಾಪಾರಿಗಳು ರಾಜಕಾರಣದಲ್ಲಿ ವಿಜೃಂಭಿಸಲು ಆರಂಭಿಸಿದ ನಂತರವಂತೂ ಫ್ಲೆಕ್ಸ್–ಬ್ಯಾನರ್ ನಾಯಕರ ನವಪೀಳಿಗೆ ಬಹಳ ದೊಡ್ಡ ಸಂಖ್ಯೆಯಲ್ಲಿಯೇ ಉದ್ಭವಿಸಿದೆ.

ಎಡಪಂಥೀಯ ರಾಜಕೀಯ ಪಕ್ಷಗಳು, ಸಂಘಟನೆಗಳು ಕೂಡ ಕಾರ್ಯಕರ್ತರಿಗಾಗಿ ತರಬೇತಿ ಶಿಬಿರಗಳನ್ನು ಏರ್ಪಡಿಸುವ ಕಾರ್ಯಕ್ರಮಗಳನ್ನು ಕಡಿಮೆ ಮಾಡಿವೆ. ಬಿಜೆಪಿ ಒಂದು ರಾಜಕೀಯ ಪಕ್ಷವಾಗಿ ಇತರ ಪಕ್ಷಗಳಿಗಿಂತ ಈ ವಿಷಯದಲ್ಲಿ ಹೆಚ್ಚೇನೂ ಭಿನ್ನವಾಗಿಲ್ಲ. ಆದರೆ ಸಂಘಟನೆಯ ತಾತ್ವಿಕತೆಯನ್ನು ವ್ಯವಸ್ಥಿತವಾಗಿ ಹರಡುವಲ್ಲಿ ನಿರತವಾಗಿರುವ ಆರ್‌ಎಸ್‌ಎಸ್ ಪರದೆಯ ಹಿಂದೆ ಸಕ್ರಿಯವಾಗಿರುವುದು ಬಿಜೆಪಿಗೆ ಬೌದ್ಧಿಕ–ಭೌತಿಕ ಬೆನ್ನೆಲುಬಾಗಿದೆ. ಇಂತಹ ವಾತಾವರಣದಲ್ಲಿ ಅಪವಾದವೆಂಬಂತೆ 'ಎಸ್‌ಯುಸಿಐ' ಸಂಘಟನೆಯು ತನ್ನ ವಿದ್ಯಾರ್ಥಿ–ಯುವಜನ ವಿಭಾಗವನ್ನು ಸೈದ್ಧಾಂತಿಕವಾಗಿ ಸಿದ್ಧಗೊಳಿಸುವಲ್ಲಿ ಮುತುವರ್ಜಿವಹಿಸುತ್ತಿರುವುದು ಹಾಗೂ ರವಿ ಕೃಷ್ಣಾರೆಡ್ಡಿ ನೇತೃತ್ವದ 'ಕೆಆರ್‌ಎಸ್' ಪಕ್ಷವು ಸಾಂಪ್ರದಾಯಿಕ ರಾಜಕೀಯ ನಾಯಕತ್ವಕ್ಕೆ ಹೊಸತೆನಿಸುವ ಖದರು ನೀಡುತ್ತಿರುವುದು ವಿಶೇಷ ಗಮನಕ್ಕೆ ಅರ್ಹವೆನಿಸುತ್ತವೆ.

ಕರ್ನಾಟಕದಲ್ಲಿ ನಾಯಕತ್ವದ ವಿಕಾಸಕ್ಕೆ ಆರಂಭಿಕ ಅನುಭವ, ತರಬೇತಿಗೆ ತಮ್ಮದೇ ಆದ ಕೊಡುಗೆ ನೀಡುತ್ತಿದ್ದ ಕಾಲೇಜು ವಿದ್ಯಾರ್ಥಿ ಸಂಘಗಳ ಚುನಾವಣೆಗಳು ನಿಷೇಧಕ್ಕೆ ಒಳಗಾಗಿ ದಶಕಗಳೇ ಗತಿಸಿವೆ. ವಿದ್ಯಾರ್ಥಿ ದಿಸೆಯಲ್ಲಿ ಇಂತಹ ಸಂಘಟನಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವ ಅವಕಾಶದಿಂದ ವಂಚಿತರಾದ ಯುವಪೀಳಿಗೆಯ ತಲೆಯಲ್ಲಿ ನಾಯಕತ್ವಕ್ಕೆ ಬುನಾದಿಯಾಗುವ ಪ್ರಜಾತಂತ್ರದ ಪ್ರಾಥಮಿಕ ಪಾಠಗಳು ನಾಟುವುದಾದರೂ ಹೇಗೆ?

ಸ್ವತಂತ್ರ ಭಾರತದಲ್ಲಿ ಆರಂಭಿಕ ಹಂತಕ್ಕೆ ಹೋಲಿಸಿದರೆ ಪ್ರಸ್ತುತ ಮತದಾನದ ಪ್ರಮಾಣ ತೀವ್ರವಾಗಿ ಏರಿಕೆಯಾಗಿರುವುದನ್ನು ಕಾಣಬಹುದು. ಹಾಗೆಂದು ಜಾರಿಯಲ್ಲಿರುವ ಪ್ರಜಾಪ್ರಭುತ್ವ ಪ್ರಬುದ್ಧತೆ ಪಡೆದಿದೆಯೆಂದು ಭಾವಿಸಲು ಹಲವಾರು ಕಾರಣಗಳು ಅಡ್ಡ ಬರುತ್ತವೆ. ಅಧಿಕೃತ ಅಂಕಿಸಂಖ್ಯೆಗಳ ಮೇಲಿನ ಅಪನಂಬಿಕೆ ಮತ್ತು ಜಾರಿಯಾಗದ ಪುಸ್ತಕದ ನೀತಿಸಂಹಿತೆಗಳ ಪರಿಗಣನೆಯಲ್ಲಿ ಚುನಾವಣಾ ವೈಫಲ್ಯ ಬರಿಗಣ್ಣಿಗೂ ಎದ್ದು ಕಾಣುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ನಾಯಕತ್ವವನ್ನು ಉತ್ಪಾದಿಸುವ ಸಾಧನವಾಗಿಯೂ ಚುನಾವಣೆಗಳು ಬಳಕೆಯಾಗುತ್ತಿವೆ. ಮಾಧ್ಯಮ ಖರೀದಿ, ಆರ್ಥಿಕ ಬಲ, ಜಾತಿಯ ಬೆಂಬಲ, ಕುಟುಂಬದ ವರ್ಚಸ್ಸು ಮತ್ತು ಡಿಜಿಟಲ್ ಪ್ರಭಾವ ಬಳಸಿ ಸಮುದಾಯದೊಳಗೆ ಬೇರುಗಳೇ ಇಲ್ಲದ ನಾಯಕತ್ವ ಉತ್ಪಾದನೆಯಾಗುವುದನ್ನು ಏನೆಂದು ಪರಿಭಾವಿಸಬೇಕು?

ಅಂತಿಮವಾಗಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾಯಿತ ನಾಯಕರು ಮತದಾರರ ಪ್ರತಿನಿಧಿಗಳೇ ಆಗಿರುತ್ತಾರೆ ಎನ್ನುವುದು ತಾಂತ್ರಿಕವಾಗಿ ಸರಿ. ನಾಯಕತ್ವದ ಅಯೋಗ್ಯತೆಯು ಮತದಾರರ ಅಯೋಗ್ಯತೆಗೆ ತಕ್ಕಂತೆ ಇರುತ್ತದೆ ಎಂದೂ ವಾದಿಸಬಹುದು. ಆದರೆ, ಚುನಾವಣೆ ಸಂದರ್ಭದಲ್ಲಿ ಅಭ್ಯರ್ಥಿಗಳ ಆಯ್ಕೆಯಿಂದ ಹಿಡಿದು ಫಲಿತಾಂಶ ಘೋಷಣೆ ತನಕ ನಡೆಯುವ ಅಕ್ರಮಗಳನ್ನು ಗಮನಿಸಿದರೆ ಪ್ರಜಾತಂತ್ರದ ಅಸಲಿಯತ್ತು ಅರಿವಿಗೆ ಬರುತ್ತದೆ. ವಸ್ತುಸ್ಥಿತಿ ಹೀಗಿರುವಾಗ ಮತದಾರರನ್ನು ದೂರುವುದರಲ್ಲಿ ಅರ್ಥವಿದೆ ಎಂದು ಅನ್ನಿಸುವುದಿಲ್ಲ.

ವಾಚಕರ ವಾಣಿ

ಮಠಾಧೀಶರಿಗೆ ಸಲ್ಲದ ಉಸಾಬರಿ ಏಕೆ?

ಸಮಾಜದಲ್ಲಿ 'ಸ್ವಾಮೀಜಿ' ಎಂಬ ಪದಕ್ಕೆ ವಿಶೇಷ ಗೌರವವಿದೆ. ಜನರು ಅವರನ್ನು ಧರ್ಮದ ಮಾರ್ಗದರ್ಶಕರಾಗಿ, ಜೀವನದ ದಿಕ್ಕು ತೋರಿಸುವವರಾಗಿ ಕಾಣುತ್ತಾರೆ. ಸ್ವಾಮೀಜಿಯೆಂದರೆ ಸರಳತೆಯು ಅವರ ಜೀವನದ ಮೂಲತತ್ತ್ವವಾಗಿರಬೇಕು; ಆಡಂಬರದ ಜೀವನದಿಂದ ದೂರವಿರಬೇಕು. ನಡೆ–ನುಡಿಯಲ್ಲಿ ವಿನಯ, ಶಾಂತಿ ಇರಬೇಕು. ಜನರೊಂದಿಗೆ ಸೌಜನ್ಯದಿಂದ ವರ್ತಿಸಬೇಕು. ಸಮಾಜದ ದುರ್ಬಲ ವರ್ಗಗಳ ಶ್ರೇಯೋಭಿವೃದ್ಧಿಗೆ ದುಡಿಯುವುದು, ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಕ್ಕೆ ಕೊಡುಗೆ ನೀಡುವುದು ಅವರ ಧರ್ಮವಾಗಿರಬೇಕು. ಆದರೆ, ಇತ್ತೀಚಿನ ದಿನಗಳಲ್ಲಿ ಹಲವಾರು ಸ್ವಾಮೀಜಿಗಳ ನಡೆ–ನುಡಿಯು ಈ ಬದ್ಧತೆಗಳಿಗೆ ವಿರುದ್ಧವಾಗಿದೆ. ಎಲ್ಲರನ್ನೂ ಸಂಶಯದ ದೃಷ್ಟಿಯಿಂದ ನೋಡುವಂತಾಗಿದೆ.

ಕಡೂರು ಫಣಿಶಂಕರ್, ಬೆಂಗಳೂರು

ಉದ್ಯೋಗ ಭರ್ತಿ: ಪ್ರಣಾಳಿಕೆ ಮರೆತ ಸರ್ಕಾರ

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಇತ್ತೀಚೆಗೆ ತಮಿಳುನಾಡಿನಲ್ಲಿ ಕಾಂಗ್ರೆಸ್ ಪಕ್ಷದ ಚುನಾವಣಾ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದ್ದಾರೆ. ಮಹಿಳೆಯರ ಖಾತೆಗೆ ಮಾಸಿಕ ₹2 ಸಾವಿರ, 3 ಲಕ್ಷ ಸರ್ಕಾರಿ ಹುದ್ದೆ ಭರ್ತಿ ಇತ್ಯಾದಿ ಭರವಸೆಗಳು ಪ್ರಣಾಳಿಕೆಯಲ್ಲಿವೆ. ಕರ್ನಾಟಕದಲ್ಲೂ ಅಧಿಕಾರಕ್ಕೆ ಬರುವ ಮೊದಲು ಕಾಂಗ್ರೆಸ್‌ನ ಪ್ರಣಾಳಿಕೆಯಲ್ಲಿ ಒಂದು ವರ್ಷದೊಳಗೆ ಒಂದು ಲಕ್ಷ ಸರ್ಕಾರಿ ಉದ್ಯೋಗಗಳನ್ನು ಭರ್ತಿ ಮಾಡುವುದಾಗಿ ಘೋಷಿಸಲಾಗಿತ್ತು. ಸರ್ಕಾರ ರಚನೆಯಾಗಿ ಮೂರು ವರ್ಷ ಕಳೆದರೂ ಹುದ್ದೆಗಳ ಭರ್ತಿಗೆ ಮನಸ್ಸು ಮಾಡಿಲ್ಲ. ನೇಮಕಾತಿ ಪ್ರಕ್ರಿಯೆ ಆರಂಭಿಸುವ ಮೂಲಕ ಸರ್ಕಾರವು ನೈತಿಕತೆ ಪ್ರದರ್ಶಿಸಲಿ.

ರಾಜು ಬಿ. ಲಕ್ಕಂಪುರ, ಜಗಳೂರು

ಅಂಬೇಡ್ಕರ್ ತತ್ತ್ವ ಎದೆಗಿಳಿಸಿಕೊಳ್ಳಿ

ಬಿ.ಆರ್. ಅಂಬೇಡ್ಕರ್ ಅವರು ಬಾಲ್ಯದಲ್ಲಿ ಅನುಭವಿಸಿದ ಅಪಮಾನಗಳು ಲೆಕ್ಕಕ್ಕೆ ಸಿಗಲಾರವು. ಆ ಕಷ್ಟಗಳನ್ನು ನನ್ನ ಜನ ಅನುಭವಿಸಬಾರದೆಂದು ಅವರ ಹಕ್ಕುಗಳಿಗೆ ಹೋರಾಡಿದರು. ಸಂವಿಧಾನವನ್ನು ಅರ್ಥೈಸಿಕೊಂಡ ಉತ್ಕೃಷ್ಟ ವರ್ಗದ ಜನ ವಿದ್ಯಾಭ್ಯಾಸ ಮಾಡಿ ಉನ್ನತ ಹುದ್ದೆ ಪಡೆದು ಆಯಕಟ್ಟಿನ ಜಾಗದಲ್ಲಿ ಬೇರೂರಿದ್ದಾರೆ. ಅಂಬೇಡ್ಕರ್ ಯಾರಿಗಾಗಿ ಜೀವ ತೇದರೋ ಅವರಿಗೆ ಸಂವಿಧಾನ ಶಿಲ್ಪಿಯ ಆಶಯಗಳೇ ಅರ್ಥವಾಗುತ್ತಿಲ್ಲ. ದಲಿತ ಸಮುದಾಯವು ಅಂಬೇಡ್ಕರ್ ಜಯಂತಿ ಆಚರಿಸುತ್ತದೆ; ಆದರೆ, ಅವರ ಆದರ್ಶಗಳನ್ನು ಎದೆಗೆ ಇಳಿಸಿಕೊಳ್ಳುವಲ್ಲಿ ಸೋತಿದೆ. ದೇವಸ್ಥಾನಗಳ ಜೀರ್ಣೋದ್ಧಾರ, ಅಘೋರಿಗಳಿಗೆ ಆಹ್ವಾನವಿತ್ತು ಪೂಜೆ ಮಾಡಿಸುವುದನ್ನು ಕಂಡಾಗ ಅವರ ತತ್ತ್ವಗಳನ್ನು ಗಾಳಿಗೆ ತೂರಿರುವುದು ಸ್ಪಷ್ಟವಾಗುತ್ತದೆ.

ರಾಮಚಂದ್ರ ಮಂಚಲದೊರೆ, ಗುಬ್ಬಿ

ಕ್ಷುಲ್ಲಕ ಜಗಳ: ಪೊಲೀಸರ ಸಮಯ ವ್ಯರ್ಥ

'ಪತ್ನಿ ನೋಡಿ ಬೊಗಳಿದ ನಾಯಿಗೆ ಥಳಿಸಿದ ಪತಿ' ಸುದ್ದಿ (ಪ್ರ.ವಾ., ಏ. 14) ಓದಿ ಅಚ್ಚರಿಯಾಯಿತು. ಇಂತಹ ಕ್ಷುಲ್ಲಕ ಪ್ರಕರಣಗಳು ಠಾಣೆಯ ಮೆಟ್ಟಿಲೇರಿದರೆ ಪೊಲೀಸರು ಏನು ಮಾಡಬಲ್ಲರು? ಇತರೆ ಪ್ರಮುಖ ಕೆಲಸದತ್ತ ಅವರು ಗಮನ ಹರಿಸಲು ಸಾಧ್ಯವೆ? ಚಿಲ್ಲರೆ ವ್ಯಾಜ್ಯಗಳು ಠಾಣೆ ಮತ್ತು ಕೋರ್ಟ್ ಮೆಟ್ಟಿಲೇರಿದರೆ ಗಂಭೀರ ವ್ಯಾಜ್ಯಗಳಿಗೆ ಸಮಯ ಉಳಿಯುವುದಾದರೂ ಎಲ್ಲಿ? ಹಾಗಾಗಿ, ಸರ್ಕಾರ ಠಾಣೆಯಲ್ಲಿ ದೂರು ದಾಖಲಿಸಲು ಅಥವಾ ಕೋರ್ಟ್‌ನಲ್ಲಿ ಪ್ರಕರಣ ದಾಖಲಿಸಲು ಕನಿಷ್ಠ ಅರ್ಹತಾ ನಿಯಮಗಳನ್ನು ರೂಪಿಸಬೇಕಿದೆ. ಸಾರ್ವಜನಿಕ ಇಲಾಖೆಯ ಸಮಯ ಹಾಳುಮಾಡುವಂತಹ ಪ್ರಕರಣಗಳಿಗೆ ಹೆಚ್ಚಿನ ದಂಡ ವಿಧಿಸಬೇಕು.

ಟಿ.ವಿ.ಬಿ. ರಾಜನ್, ಬೆಂಗಳೂರು

ಬಾಬಾಸಾಹೇಬರ ಸಿದ್ಧಾಂತ ಅಭ್ಯಸಿಸಿ

'ಅಂಬೇಡ್ಕರ್: ಇಂದಿಗೆ–ನಾಳೆಗೆ' ಲೇಖನವು (ಲೇ: ನಾಗತಿಹಳ್ಳಿ ಚಂದ್ರಶೇಖರ, ಪ್ರ.ವಾ., ಏ. 14) ದೇಶದಲ್ಲಿ ಆಳವಾಗಿ ಬೇರೂರಿರುವ ಜಾತಿವ್ಯವಸ್ಥೆಯನ್ನು ತೆರೆದಿಟ್ಟಿದೆ. ಪ್ರತಿಯೊಬ್ಬ ಭಾರತೀಯ ಪ್ರಜೆಯೂ ಅಂಬೇಡ್ಕರ್ ಅವರ ತತ್ತ್ವ, ಸಿದ್ಧಾಂತಗಳನ್ನು ಅಧ್ಯಯನ ಮಾಡಬೇಕಿದೆ.

ಆನಂದಕುಮಾರ್ ಎಚ್.ಕೆ., ಮಂಡ್ಯ

ಹೊರ್ಮುಜ್‌ಗೆ ಬಡಿದಾಟ: ಜನರಿಗೆ ನರಕ

ದೊಡ್ಡಣ್ಣ ಅಮೆರಿಕ ಸೀನಿದರೆ ನಮ್ಮಂತಹ ದೂರ ದೇಶವಾಸಿಗಳಿಗೆ ಶೀತವಾಗುವ ಪ್ರಮೇಯ ಪ್ರಾರಬ್ಧವಲ್ಲದೆ ಮತ್ತೇನೂ ಅಲ್ಲ. ಜನಸಾಮಾನ್ಯರು, ಅದರಲ್ಲೂ ಅಂದೇ ದುಡಿದು ಬದುಕಿನ ಬಂಡಿ ಎಳೆಯುತ್ತಿರುವ ಗ್ಯಾಸ್ ಚಾಲಿತ ಆಟೊ ಚಾಲಕರ ಬವಣೆ ಹೇಳತೀರದಾಗಿದೆ. ಹೊರ್ಮುಜ್ ಜಲಸಂಧಿಯ ಮೇಲಿನ ಹಕ್ಕುಸ್ವಾಮ್ಯದ ಬಡಿದಾಟವು ಮುಗ್ಧ ಜನರ ಪಾಲಿನ ನಿತ್ಯ ನರಕವೇ ಸರಿ.

ಪರಮೇಶ್ವರ ಜಿ.ಎಂ., ಸಂಡೂರು

ಬಯೊಮೆಟ್ರಿಕ್ ಮತ: ಗೋಪ್ಯತೆಗೆ ಅಡ್ಡಿ

ಇತ್ತೀಚೆಗೆ ಸುಪ್ರೀಂ ಕೋರ್ಟ್ ಮುಂದೆ ಬಂದಿರುವ ಒಂದು ಪಿಐಎಲ್, ದೇಶದ ಚುನಾವಣಾ ವ್ಯವಸ್ಥೆಯ ವಿಶ್ವಾಸಾರ್ಹತೆ ಬಗ್ಗೆ ಚರ್ಚೆಯನ್ನು ಹುಟ್ಟುಹಾಕಿದೆ. ಬೆರಳಚ್ಚು ಮತ್ತು ಐರಿಸ್ ಆಧಾರಿತ ಗುರುತಿನ ವ್ಯವಸ್ಥೆಯಾದ 'ಒಬ್ಬ ನಾಗರಿಕ–ಒಂದು ಮತ' ತತ್ತ್ವವು ಚುನಾವಣಾ ವ್ಯವಸ್ಥೆಯನ್ನು ಬಲಪಡಿಸಬಹುದಾದ ಪರಿಣಾಮಕಾರಿ ಕ್ರಮವಾಗಬಹುದು. ನಕಲಿ ಮತದಾನ, ಹಣದ ಆಮಿಷ ಹಾಗೂ ಅಕ್ರಮ ಮತದಾನದ ಪ್ರಭಾವವನ್ನು ಕಡಿಮೆ ಮಾಡಲು ಇದು ಸಹಾಯಕವಾಗುವ ಸಾಧ್ಯತೆ ಇದೆ. ಆದರೆ, ಇಂತಹ ವ್ಯವಸ್ಥೆ ಗೋಪ್ಯತೆ ಮತ್ತು ಡೇಟಾ ಸುರಕ್ಷತೆ ಬಗ್ಗೆ ಗಂಭೀರ ಪ್ರಶ್ನೆಗಳನ್ನೂ ಮುಂದಿಡುತ್ತದೆ. ಭಾರತದಂತಹ ದೊಡ್ಡ ಜನಸಂಖ್ಯೆಯ ದೇಶದಲ್ಲಿ ತಾಂತ್ರಿಕ ದೋಷಗಳು ಅಥವಾ ವ್ಯವಸ್ಥೆಯ ವೈಫಲ್ಯ ಮತದಾನದ ಹಕ್ಕಿನ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿದೆ. ಚುನಾವಣಾ ಆಯೋಗ ಈ ವಿಚಾರದಲ್ಲಿ ಸಮತೋಲನ ಸಾಧಿಸಬೇಕಿದೆ.

ಜಿ. ನಾಗೇಂದ್ರ ಕಾವೂರು, ಸಂಡೂರು

ಚಾಟಿಡಾಟಿ

ಬೆಲೆ ಏರಿಕೆಯ ಬರೆ

ಕರ್ನಾಟಕದ ಜನತೆಗೆ ಬೆಲೆ ಏರಿಕೆಯ ಬರೆ ಎಳೆಯುತ್ತಿರುವ ಕಾಂಗ್ರೆಸ್ ಸರ್ಕಾರ, ಈಗ ಪರಿಸರಸ್ನೇಹಿ ಎಲೆಕ್ಟ್ರಿಕ್ ವಾಹನಗಳ ಮೇಲೂ ತನ್ನ ಕಣ್ಣು ಹಾಕಿದೆ. ಕಳೆದ ಎಂಟು ವರ್ಷಗಳಿಂದ ಜಾರಿಯಲ್ಲಿದ್ದ ಶೇ 100ರಷ್ಟು ರಸ್ತೆ ತೆರಿಗೆ ವಿನಾಯಿತಿಗೆ ಸರ್ಕಾರ ತಿಲಾಂಜಲಿ ಹಾಡಿದೆ!

ಜಿ.ಟಿ. ನರೇಂದ್ರ, ವಕೀಲ, 'ಫೇಸ್‌ಬುಕ್'ನಿಂದ

ಕಿಡಿನುಡಿ

ಮನುವಾದಿಗಳು ಸಂವಿಧಾನ ವಿರೋಧಿಗಳಾಗಿದ್ದು, ಸುಳ್ಳು ಹೇಳಿ ಸಮಾಜದ ದಾರಿ ತಪ್ಪಿಸುತ್ತಾರೆ. ಅಂಬೇಡ್ಕರ್ ಅವರನ್ನು ಕಾಂಗ್ರೆಸ್ ಸೋಲಿಸಿತು, ದೆಹಲಿಯಲ್ಲಿ ಅಂಬೇಡ್ಕರ್ ಅವರ ಶವ ಸಂಸ್ಕಾರ ಮಾಡಲು ಅವಕಾಶ ನೀಡಲಿಲ್ಲ ಎಂದೂ ಅಪಪ್ರಚಾರ ಮಾಡುತ್ತಾರೆ. ಜನ ಇಂಥ ಸುಳ್ಳುಗಳನ್ನು ನಂಬಬಾರದು.

ಸಿದ್ದರಾಮಯ್ಯ, ಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಭಾನುವಾರ, 15-4-2001

• **ಬಿಯರ್ ಚಿಲ್ಲರೆ ಮಾರಾಟ ಅನುಮತಿ ಹಿಂದಕ್ಕೆ**

ಬೆಂಗಳೂರು, ಏ. 14– ಬೆಂಗಳೂರಿನ ನೂರು ದಿನಸಿ ಅಂಗಡಿಗಳಲ್ಲಿ ಚಿಲ್ಲರೆಯಾಗಿ ಬಿಯರ್ ಮಾರಾಟ ಮಾಡುವುದಕ್ಕೆ ಅನುಮತಿ ನೀಡಲು ನಿರ್ಧರಿಸಿದ್ದ ರಾಜ್ಯ ಸರ್ಕಾರ, ಬಾಬಾಸಾಹೇಬ್ ಅಂಬೇಡ್ಕರ್ ಅವರ ಜನ್ಮದಿನವಾದ ಇಂದು ತನ್ನ ಉದ್ದೇಶಿತ ಪ್ರಸ್ತಾವವನ್ನು ಹಿಂತೆಗೆದುಕೊಂಡಿತು.

ವಿಧಾನಸೌಧದ ಮುಂಭಾಗದಲ್ಲಿ ಸಂಜೆ ಹಮ್ಮಿಕೊಂಡಿದ್ದ ಬಿ.ಆರ್. ಅಂಬೇಡ್ಕರ್ ಅವರ 110ನೇ ಜಯಂತಿ ಸಮಾರಂಭ ಉದ್ಘಾಟಿಸಿ ಮಾತನಾಡಿದ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ, ಜನಸಾಮಾನ್ಯರಿಂದ ವಿಶೇಷವಾಗಿ ಮಹಿಳೆಯರಿಂದ ಈ ಬಗ್ಗೆ ವ್ಯಾಪಕ ಪ್ರತಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಮಹತ್ವದ ದಿನವಾದ ಇಂದು ಬಿಯರ್ ಮಾರಾಟಕ್ಕೆ ಅನುಮತಿ ನೀಡುವ ಪ್ರಸ್ತಾವವನ್ನು ಹಿಂತೆಗೆದುಕೊಳ್ಳುತ್ತಿರುವುದಾಗಿ ಪ್ರಕಟಿಸಿದರು.

• **ರಾಜ್ಯಕ್ಕೆ ಕೇಂದ್ರದ 100 ಮೆ.ವಾ. ಹೆಚ್ಚುವರಿ ವಿದ್ಯುತ್**

ಬೆಂಗಳೂರು, ಏ. 14– ಕೇಂದ್ರದಿಂದ ಈಗ ರಾಜ್ಯಕ್ಕೆ ಪೂರೈಕೆಯಾಗುತ್ತಿರುವ ವಿದ್ಯುತ್ ಜತೆಗೆ ಹೆಚ್ಚುವರಿಯಾಗಿ 100 ಮೆಗಾವಾಟ್ ವಿದ್ಯುತ್ ಪೂರೈಸಲಾಗುವುದು ಎಂದು ಕೇಂದ್ರ ಇಂಧನ ಖಾತೆ ರಾಜ್ಯ ಸಚಿವ ಜಯವಂತಿ ಮೆಹತಾ ಇಂದು ಇಲ್ಲಿ ಪ್ರಕಟಿಸಿದರು.

75 ವರ್ಷಗಳ ಹಿಂದೆ

ಭಾನುವಾರ, 15-4-1951

• **35 ಕೋಟಿಗೂ ಮೀರಿದ ಭಾರತದ ಜನಸಂಖ್ಯೆ**

ನವದೆಹಲಿ, ಏ. 14– ಈಗಿನ ಲೆಕ್ಕದ ಪ್ರಕಾರ ಜಮ್ಮು ಮತ್ತು ಕಾಶ್ಮೀರವನ್ನುಳಿದ ಭಾರತದ ಜನಸಂಖ್ಯೆ 35,68,91,624 ಎಂದು 1951ರ ಜನಗಣತಿಯಿಂದ ಗೊತ್ತಾಗಿದೆ. ಇದರಲ್ಲಿ ಗಂಡಸರ ಸಂಖ್ಯೆ 18,33,84,807 ಮತ್ತು ಸ್ತ್ರೀಯರ ಸಂಖ್ಯೆ 17,35,06,817.

1951ರ ಮಾರ್ಚ್ 1ರಂದು ಸ್ಥಾನಪಲ್ಲಟರ ಸಂಖ್ಯೆ 74,79,778. ವಿಶೇಷ ಪರಿಸ್ಥಿತಿಯ ದೆಸೆಯಿಂದ 32,250 ಚದರ ಮೈಲಿಗಳ ಜಮ್ಮು ಮತ್ತು ಕಾಶ್ಮೀರ ಪ್ರದೇಶದಲ್ಲಿ ಜನಗಣತಿ ತೆಗೆದುಕೊಳ್ಳಲಾಗಲಿಲ್ಲ. 1950ರ ಮಾರ್ಚ್ 1ರಂದು ಜಮ್ಮು ಮತ್ತು ಕಾಶ್ಮೀರ ಜನಸಂಖ್ಯೆ 4.37 ದಶಲಕ್ಷಗಳಷ್ಟಿತ್ತೆಂದು ಅಂದಾಜು ಮಾಡಲಾಗಿತ್ತು.

ಚುರುಮುರಿ

ದೆಹಲಿ ದಂಡುಯಾತ್ರೆ

• ಮಣ್ಣೆ ರಾಜು

'ಮಂತ್ರಿ ಸ್ಥಾನ ಖಚಿತಪಡಿಸಿಕೊಂಡೇ ವಾಪಸ್ ಮನೆಗೆ ಬರೋದು...' ಎಂದು ಹೇಳಿ ಶಾಸಕರು ದೆಹಲಿ ಯಾತ್ರೆಗೆ ತೆರಳಿದ್ದರು.

ಶಾಸಕರು ಹೋದಾಗಿನಿಂದ ಅವರ ಪತ್ನಿಗೆ ನಿದ್ರೆ, ನೆಮ್ಮದಿ ಇಲ್ಲದಂತಾಗಿತ್ತು. ದೆಹಲಿಯ ಹವಾಮಾನ, ಅವಮಾನಕ್ಕೆ ಶಾಸಕರು ಹೊಂದಿಕೊಂಡರೋ ಇಲ್ವೋ, ಅವರ ಬಿಪಿ, ಶುಗರ್ ಏರಿದೆಯೋ ಇಳಿದಿದೆಯೋ ಅಂತ ಪತ್ನಿ ಕಳವಳಗೊಂಡಿದ್ದರು.

ಪತಿಗೆ ಫೋನ್ ಮಾಡಿ, 'ರೀ, ಹೈಕಮಾಂಡ್ ದೇವರ ದರ್ಶನವಾಯ್ತೆ? ದೇವರು ವರ ಕೊಟ್ಟನೆ?' ಎಂದು ಕೇಳಿದರು.

'ಒಂದು ದೇವರ ದರ್ಶನ ಆಯ್ತು. ನನ್ನದೇನೂ ಇಲ್ಲ, ದೊಡ್ಡ ದೇವರು ತೀರ್ಮಾನ ಮಾಡ್ತಾರೆ ಎಂದು ಹೇಳಿ ಕಾಫಿ ಕೊಟ್ಟು ಕಳಿಸಿದರು. ದೊಡ್ಡ ದೇವರುಗಳು ಪರರಾಜ್ಯದ ಚುನಾವಣಾ ಪ್ರಚಾರಕ್ಕೆ ಹೋಗಿವೆ. ಬರುವವರೆಗೂ ಕಾಯಬೇಕು' ಎಂದರು ಶಾಸಕರು.

'ನಾಯಕತ್ವ ಬದಲಾವಣೆ ಬಗ್ಗೆ ಮಾಧ್ಯಮದವರಿಗೆ ಯಾಕ್ರೀ ಹೇಳಿಕೆ ಕೊಟ್ರಿ? ಸಿಎಂ, ಡಿಸಿಎಂ ನಿಮ್ಮ ಮೇಲೆ ಉರಿದುಬಿದ್ದಿದ್ದಾರೆ. ಸಿಟ್ಟಿಗೆದ್ದು ಸಚಿವ ಸಂಪುಟ ವಿಸ್ತರಣೆ ಬದಲು ಸರ್ಕಾರ ವಿಸರ್ಜನೆ ಮಾಡಿಬಿಟ್ಟರೆ ಗತಿ ಏನ್ರೀ?'

ಶಾಸಕರು ಗಾಬರಿಯಾದರು.

'ನೀವು ಮಂತ್ರಿಯಾಗಬೇಕೆಂದು ನಿತ್ಯ ಮನೆದೇವರಿಗೆ ತುಪ್ಪದ ದೀಪ ಹಚ್ಚಿ ಬೇಡಿಕೊಳ್ಳುತ್ತಿದ್ದೇನೆ. ಅಭಿಮಾನಿ ಕಾರ್ಯಕರ್ತರು ದೇವಸ್ಥಾನಗಳಲ್ಲಿ ನಿಮ್ಮ ಹೆಸರಿನಲ್ಲಿ ವಿಶೇಷ ಪೂಜೆ ಮಾಡಿಸ್ತಿದ್ದಾರೆ. ನೀವು ಅಲ್ಲಿ ಧ್ಯಾನ, ತಪಸ್ಸು ಮಾಡಿ ಹೈಕಮಾಂಡ್ ದೇವರನ್ನು ಒಲಿಸಿಕೊಂಡು ಮಂತ್ರಿ ಸ್ಥಾನದ ವರ ಪಡೆಯಿರಿ'.

'ನನ್ನ ಸೀನಿಯಾರಿಟಿ, ಸಿನ್ಸಿಯಾರಿಟಿ ಮೆಚ್ಚಿ ದೇವರು ಮಂತ್ರಿ ಭಾಗ್ಯ ಕರುಣಿಸುತ್ತಾರೆ' ಎಂದು ಶಾಸಕರು ಆತ್ಮವಿಶ್ವಾಸದಿಂದ ಹೇಳಿದರು.

'ಓವರ್ ವಿಶ್ವಾಸ ಬೇಡ, ನೀವು ಕೇಳಿದಾಕ್ಷಣ ದೇವರು ವರ ಕೊಡೋದಿಲ್ಲ... ಸೂಕ್ತ ಸಮಯದಲ್ಲಿ ಸೂಕ್ತ ತೀರ್ಮಾನ ಮಾಡ್ತೀವಿ, ನೀವು ವಾಪಸ್ ಹೋಗಿ ಎಂದು ಹೇಳಿಕಳಿಸುತ್ತಾರೆ ಅಷ್ಟೇ...' ಎಂದು ಪತ್ನಿ ಫೋನ್ ಕಟ್ ಮಾಡಿದರು.

ಸಂಗತ

ಹಸಿರು ಟವೆಲ್: ಮರುಕಳಿಸಲಿ ವೈಭವ–ಘನತೆ

ನಾಡಿನ ಆತ್ಮಸಾಕ್ಷಿಯ ಪ್ರತೀಕದಂತಿದ್ದ ರೈತ ಸಂಘ ಈಗ ಒಡೆದಮನೆ. ರೈತರ ಘನತೆಯ ಸಂಕೇತವಾಗಿದ್ದ ಹಸಿರು ಟವೆಲ್ ಈಗ ಬಣ್ಣ ಕಳೆದುಕೊಂಡಂತಿದೆ.

• ಚಂಸು ಪಾಟೀಲ

ಕರ್ನಾಟಕದ ರೈತ ಚಳವಳಿಯಲ್ಲಿ ಹಸಿರು ಟವೆಲ್‌ಗೆ ವಿಶೇಷ ಮಹತ್ವವಿದೆ. ಅದು, ಬರಿಯ ವಸ್ತ್ರವಾಗಿರದೆ, ರೈತರ ಆತ್ಮಾಭಿಮಾನದ ಸಂಕೇತವಾಗಿತ್ತು. ಆ ಹಸಿರು ಟವೆಲ್ ಈಗ ದಲ್ಲಾಳಿಗಳ ಪಾಲಿಗೆ ಲಾಭದಾಯಕವಾಗಿ ಕಾಣಿಸುತ್ತಿದೆ.

1980ರ ದಶಕದಲ್ಲಿ ಕನ್ನಡನಾಡಿನ ಜಡ ರಾಜಕಾರಣ ಹಾಗೂ ಸಾಂಸ್ಕೃತಿಕ ಲೋಕಕ್ಕೆ ಅದಮ್ಯ ಚೈತನ್ಯ ತುಂಬುವ ತೊರೆಯಾಗಿ ಪ್ರವಹಿಸಿದ್ದ ರೈತ ಚಳವಳಿ ಇಂದು ಏದುಸಿರು ಬಿಡುವ ಸ್ಥಿತಿ ತಲಪಿದೆ. ರೈತರಿಗೆ ಅಪಾರ ಆತ್ಮವಿಶ್ವಾಸ ತುಂಬಿದ ಸಂಘಟನೆಗಳು ಈಗ ಸ್ವತಃ ಶಕ್ತಿ ಕಳೆದುಕೊಂಡಿವೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ, ಎಚ್.ಎಸ್. ರುದ್ರಪ್ಪ, ಪೂರ್ಣಚಂದ್ರ ತೇಜಸ್ವಿ, ಕಡಿದಾಳು ಶಾಮಣ್ಣ, ಎನ್.ಡಿ. ಸುಂದರೇಶ್, ಬಾಬಾಗೌಡ ಪಾಟೀಲ ಮೊದಲಾದ ಮಹನೀಯರು ಹಗಲಿರುಳು ಶ್ರಮಿಸಿ ಕರ್ನಾಟಕದ ಶ್ರಮಿಕ ವರ್ಗಕ್ಕೆ, ಅದರಲ್ಲೂ ಮುಖ್ಯವಾಗಿ ನಾಡಿನ ರೈತವರ್ಗಕ್ಕೆ ಒಂದು ಉಜ್ವಲ ಕನಸು ಕಟ್ಟಿಕೊಟ್ಟಿದ್ದರು. ಆ ಕನಸಿಗೆ ಸುಭದ್ರವಾದ ಸೈದ್ಧಾಂತಿಕ ಬುನಾದಿ ಹಾಕಿ, ಅದರ ಮೇಲೆ ಚಳವಳಿ ಕಟ್ಟಲಾಗಿತ್ತು. ನಂಜುಂಡಸ್ವಾಮಿ ಅವರ ನಂತರ ಮುರಿದ ಮನೆಯಂತಾದ ಚಳವಳಿ, ರೈತ ನಾಯಕರ ಪ್ರತಿಷ್ಠೆ ಹಾಗೂ ಪ್ರಜಾಸತ್ತಾತ್ಮಕವಲ್ಲದ ಧೋರಣೆಗಳಿಂದ ತಾಲ್ಲೂಕು, ಹಳ್ಳಿಗಳ ಮಟ್ಟದಲ್ಲೂ ಒಡೆದ ಮನೆಯಂತಾಗಿದೆ.

ರೈತ ಚಳವಳಿ ಮುಗ್ಗರಿಸಲು ಇದಿಷ್ಟೇ ಕಾರಣ ಅಲ್ಲ. ಮುಖ್ಯವಾಗಿ ಅದು ತನ್ನ ಕಾರ್ಯಕರ್ತರನ್ನು ಸೈದ್ಧಾಂತಿಕವಾಗಿ ತರಬೇತು ಗೊಳಿಸದೇ ಹೋದುದು, ಸಂಘಟನೆ ಹಾಗೂ ಸಂರಚನೆಯಲ್ಲಿ ಪ್ರಜಾಸತ್ತಾತ್ಮಕ ವಿಧಿವಿಧಾನಗಳನ್ನು ಕಟ್ಟುನಿಟ್ಟಾಗಿ ಅಳವಡಿಸಿಕೊಳ್ಳದೇ ಹೋದುದು, ಜನಪರ ಧ್ವನಿಯಾಗುವ ಬದಲಾಗಿ ಸರ್ಕಾರ ಮತ್ತು ಜನರ ನಡುವೆ ಮಧ್ಯವರ್ತಿಯಂತೆ ಕಾರ್ಯ ನಿರ್ವಹಿಸುವುದಕ್ಕೆ ಮಾತ್ರ ತನ್ನ ಕ್ರಿಯಾಶೀಲತೆ ಸೀಮಿತಗೊಳಿಸಿಕೊಂಡಿದ್ದು, ಇವೆಲ್ಲವೂ ರೈತ ಚಳವಳಿಯ ಹಿನ್ನಡೆಗೆ ಕಾರಣಗಳಾಗಿವೆ.

ರಾಜ್ಯಮಟ್ಟದ ಹಿರಿಯ ನಾಯಕರಲ್ಲಿನ ಭಿನ್ನಮತದಿಂದಾಗಿ ರೈತ ಸಂಘ ಎರಡು ಮೂರು ಬಣಗಳಾಗಿ ಒಡೆಯಿತು. ಸೈದ್ಧಾಂತಿಕ ಬದ್ಧತೆಯಿಲ್ಲದ ನಾಯಕರು ರೈತ ಸಂಘವನ್ನು ತಮ್ಮ ಜೀವನೋಪಾಯದ ಮಾರ್ಗವನ್ನಾಗಿ ಮಾಡಿಕೊಂಡ ಕಾರಣಕ್ಕೆ ಅದು ಜಿಲ್ಲಾಮಟ್ಟದಲ್ಲಿ ಒಡೆದು ಹೋಳಾಗುತ್ತಲೇ ಇದೆ. ನಾಡಿನ ಜನರಲ್ಲಿ ವೈಚಾರಿಕ ಪ್ರಜ್ಞೆಯನ್ನು ಜಾಗೃತಗೊಳಿಸಿ, ಸಮ ಸಮಾಜದ ಕನಸನ್ನು ಸಾಕಾರಗೊಳಿಸುವ ಹಾದಿಯಲ್ಲಿ ಸಾಮಾಜಿಕ ನ್ಯಾಯದ ದೀವಿಗೆಯನ್ನು ಹೊತ್ತಿಸಬೇಕಾಗಿದ್ದ ಸಂಘ, ತನಗೊಂದು ದೀರ್ಘಾವಧಿಯ ಕನಸಿದೆ ಎಂಬುದನ್ನೇ ಮರೆಯಿತು. ಅದೇ ಕಾರಣಕ್ಕೆ ಜನರು ಈಗ ಹಸಿರು ಟವೆಲ್ ಬಗ್ಗೆ ವಿಶ್ವಾಸ ಕಳೆದುಕೊಳ್ಳುವಂತಾಗಿದೆ.

ಜಾಗತೀಕರಣದ ತುರೀಯಾವಸ್ಥೆಯ ವರ್ತಮಾನದಲ್ಲಿ ರೈತ ಸಂಘದ ಅಗತ್ಯ ಹಿಂದಿಗಿಂತಲೂ ಹೆಚ್ಚಾಗಿದೆ. ಆದರೂ ರೈತ ಸಂಘ ಹಾಗೂ ಅದರ ನಾಯಕರು ಮೈ ಕೊಡವಿಕೊಂಡು ಏಳಲಿಕ್ಕೆ, ಎದ್ದು ಕ್ರಿಯಾಶೀಲರಾಗಲಿಕ್ಕೆ ತಯಾರಿಲ್ಲ. ಅವರು, ಹಂಚಿ ಹೋಗಿರುವ ತಮ್ಮ ಶಕ್ತಿಯ ಅರಿವಿಲ್ಲದೆ, ಪರಸ್ಪರರತ್ತ ಬೆರಳು ತೋರುತ್ತ ದೂರುವುದರಲ್ಲಿ ಮಗ್ನರಾಗಿದ್ದಾರೆ.

ರೈತ ಸಂಘದ ಸದಸ್ಯತ್ವ ಎನ್ನುವುದು, ರೈತರ ಸಮಸ್ಯೆಗಳ ಅರಿವು–ಪರಿಹಾರ ಮತ್ತು ಕಟಿಬದ್ಧ ಹೋರಾಟಕ್ಕೆ ಸಂಕೇತ ಎಂದಾಗಿತ್ತು. ಅದೀಗ ವಾರ್ಷಿಕ ಶುಲ್ಕಕ್ಕೆ ಸಿಗುವ ಕಾರ್ಡು ಎಂಬಂತಾಗಿದೆ.

ರೈತನೊಬ್ಬ ಸಂಘದ ಸದಸ್ಯನಾದರೆ, ರೈತ ಚಳವಳಿಯ ಹುಟ್ಟು, ಬೆಳವಣಿಗೆ, ಹೋರಾಟದ ಇತಿಹಾಸವನ್ನು ಒಳಗೊಂಡ ಒಂದು ಚಿಕ್ಕ ಪುಸ್ತಿಕೆಯನ್ನಾದರೂ ಅವನಿಗೆ ಕೊಡಬೇಕು. ಬದ್ಧತೆ ಹೊಂದಿರುವವರನ್ನು ಗುರ್ತಿಸಿ, ಅವರಿಗೆ ನಾಯಕತ್ವ ಕೊಡಬೇಕು. ಈಗ ಏನಾಗಿದೆ ಎಂದು ನೋಡಲು ಹೊರಟರೆ ನಿರಾಸೆಯಾಗುತ್ತದೆ. ಕೆಲವು ಬಣಗಳು ವಿರೋಧ ಪಕ್ಷದೊಂದಿಗೆ ಒಪ್ಪಂದ ಮಾಡಿಕೊಂಡಿವೆ. ಮತ್ತೆ ಕೆಲವು ಬಣಗಳು ಆಡಳಿತ ಪಕ್ಷದೊಂದಿಗೆ ಒಪ್ಪಂದ ಮಾಡಿಕೊಂಡು ಅಖಾಡದಲ್ಲಿ ಗುರ್ತಿಸಿಕೊಂಡಿವೆ. ಆರು ಕೊಟ್ಟರೆ ಅತ್ತೆ ಕಡೆ, ಮೂರು ಕೊಟ್ಟರೆ ಮಾವನ ಕಡೆ ಎಂಬ ಸೋಗಿನ ನಾಯಕರನ್ನು ನಂಬುವುದು ಹೇಗೆ?

ರೈತರ ಆತ್ಮಾಭಿಮಾನದ ಸಂಕೇತವಾಗಿದ್ದ ಹಸಿರು ಟವೆಲ್ ಇಂದು ತನ್ನ ಕಿಮ್ಮತ್ತು ಕಳೆದುಕೊಂಡಿದೆ. ಹಿಂದೆಲ್ಲ ಸರ್ಕಾರಿ ಅಧಿಕಾರಿಗಳು ರೈತ ಸಂಘಕ್ಕೆ ಅಳುಕುತ್ತಿದ್ದರು. ಈಗ ಪರಿಸ್ಥಿತಿ ಬದಲಾಗಿದೆ. ತಾಲ್ಲೂಕಿಗೆ, ಜಿಲ್ಲೆಗೆ ಹೊಸದಾಗಿ ಬರುವ ಅಧಿಕಾರಿಗಳನ್ನು ರೈತ ಸಂಘದವರು ಮಾಲೆ ಹಾಕಿ ಸ್ವಾಗತಿಸುತ್ತಾರೆ. ಅಧಿಕಾರಿ ಭ್ರಷ್ಟನಾಗಿದ್ದರೆ, ಅವನನ್ನು ಒಲಿಸಿಕೊಂಡೋ ಭಯ ಹುಟ್ಟಿಸಿಯೋ ತಮ್ಮ ಕಾರ್ಯ ಸಾಧಿಸಿಕೊಳ್ಳುವವರಿದ್ದಾರೆ. ಅಧಿಕಾರಿಯು ಪ್ರಾಮಾಣಿಕನಾಗಿದ್ದರೆ, ಅವನಿಗೆ ಕಾಟ ಕೊಟ್ಟು ತಮ್ಮ ದಾರಿಗೆ ತಂದುಕೊಳ್ಳುತ್ತಾರೆ. ಈ ಎಲ್ಲ ಕಾರಣಗಳಿಗಾಗಿ ಜನಸಾಮಾನ್ಯರು, ಅಧಿಕಾರಿಗಳು ಹಸಿರು ಟವೆಲ್ ಅನ್ನು ಅನುಮಾನದಿಂದ ನೋಡುವಂತಾಗಿದೆ.

ಬೇರೆ ಬೇರೆ ಕಾರಣಗಳಿಂದಾಗಿ ರೈತ ಸಮುದಾಯ ಹಿಂದೆಂದಿಗಿಂತಲೂ ಹೆಚ್ಚಿನ ಬಿಕ್ಕಟ್ಟು ಎದುರಿಸುತ್ತಿದೆ. ಇಂಥ ಹೊತ್ತಿನಲ್ಲಿ ಜನರ ಆಶಾಕಿರಣ ಆಗಿರಬೇಕಿದ್ದ ರೈತ ಸಂಘಟನೆಗಳು ಭಸ್ಮಾಸುರನಂತೆ ತಮ್ಮ ಕೈಯನ್ನು ತಮ್ಮ ತಲೆಯ ಮೇಲೆಯೇ ಇರಿಸಿಕೊಳ್ಳುವ ದಾರಿಯಲ್ಲಿವೆ. ಇದು ರೈತ ಸಂಘದ ಪರಂಪರೆಗೆ ಮಾಡುವ ದ್ರೋಹ. ರೈತ ನಾಯಕರು ಈ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕು.

ರೈತ ಸಂಘ ರೈತರ ಹಿತಾಸಕ್ತಿಗೆ ಸೀಮಿತಗೊಳ್ಳದೆ, ನಾಡು–ನುಡಿಯ ಆತ್ಮಸಾಕ್ಷಿಯಂತೆ ಕಾರ್ಯನಿರ್ವಹಿಸುತ್ತಿತ್ತು. ನಾಡಿನ ಸಾಂಸ್ಕೃತಿಕ ಚರಿತ್ರೆಯ ಭಾಗವಾಗಿತ್ತು. ಆ ದಿನಗಳು ಮರುಕಳಿಸುವುದು ನಾಡಿನ ಸ್ವಾಸ್ಥ್ಯದ ದೃಷ್ಟಿಯಿಂದ ಅಪೇಕ್ಷಣೀಯ.

ಲೇಖಕ: ರೈತ ಮತ್ತು ಕವಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕೆ ಪಿ ಎಸ್ ಸಿ ಸ್ವಚ್ಛವಾಗಲಿ

ಪ್ರತಿ ವರ್ಷ ಪರೀಕ್ಷೆ ನಡೆಸುವುದೇ ಪರಿಹಾರ

• ಸಿರಿವೆನ್ನೆಲ

ಈ ವರ್ಷವೇ? ಮುಂದಿನ ವರ್ಷವೇ? ಮತ್ತಾವ ವರ್ಷ? ನನಗೆ ಮತ್ತೊಂದು ವರ್ಷ ಸಿಗುತ್ತದೆಯೇ? ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಪರೀಕ್ಷೆಗಾಗಿ ಕಾಯುವ ಉದ್ಯೋಗಾಕಾಂಕ್ಷಿಗಳನ್ನು ಕಾಡುವ ಮೂಲಭೂತ ಪ್ರಶ್ನೆ ಇದು. ಆದರೆ, ಕೇಂದ್ರ ಲೋಕಸೇವಾ ಆಯೋಗದ (ಯುಪಿಎಸ್‌ಸಿ) ಕಾರ್ಯಶೈಲಿ ಭಿನ್ನ.

2014ರಲ್ಲಿ ನನ್ನ ಮೊದಲ ಪ್ರಯತ್ನದಲ್ಲಿ ಯುಪಿಎಸ್‌ಸಿ ಪ್ರಿಲಿಮ್ಸ್ ತೇರ್ಗಡೆಯಾಗಿಲ್ಲ ಎಂಬುದನ್ನು ವೆಬ್‌ಸೈಟ್ ಮೂಲಕ ಕಂಡುಕೊಂಡ ದಿನವನ್ನು ನಾನು ಇನ್ನೂ ಸ್ಪಷ್ಟವಾಗಿ ನೆನಪಿಟ್ಟುಕೊಂಡಿದ್ದೇನೆ. ಫಲಿತಾಂಶ ಬಂದ ದಿನವೇ ನನ್ನ ಹುಟ್ಟಿದ ದಿನವೂ ಆಗಿತ್ತು. ಅದನ್ನು ನಿಜಕ್ಕೂ ಕ್ರೂರ ಅದೃಷ್ಟವೆಂದು ಹೇಳಬಹುದು. ಸ್ನೇಹಿತರು ನನ್ನ ಹುಟ್ಟುಹಬ್ಬವನ್ನು ಆಚರಿಸುವ ಮನಸ್ಥಿತಿಯಲ್ಲಿದ್ದರು. ನಾನು ಮುಖದಲ್ಲಿ ನಗು ಮೂಡಿಸಲು ಸಾಧ್ಯವಾದಷ್ಟು ಪ್ರಯತ್ನಿಸುತ್ತಿದ್ದೆ. ಆದರೆ, ಅದು ಸುಲಭವಾಗಿರಲಿಲ್ಲ. ಏಕೆಂದರೆ, ನಾನು ವರ್ಷವಿಡೀ ಪರೀಕ್ಷೆಗಾಗಿ ಹೃದಯಪೂರ್ವಕವಾಗಿ ಸಿದ್ಧತೆ ಮಾಡಿಕೊಂಡಿದ್ದೆ.

ಅದು ಜೀವನದಲ್ಲಿ ನಾನು ಅನುಭವಿಸಿದ ಅತ್ಯಂತ ನಿರಾಶಾದಾಯಕ ದಿನವಾಗಿರಬಹುದು. ಪರೀಕ್ಷೆಯ ಅತಿ ಮೂಲಭೂತ ಹಂತವನ್ನೇ ದಾಟಲಾಗಿಲ್ಲವೆಂಬ ಸತ್ಯವನ್ನು ಜೀರ್ಣಿಸಿಕೊಳ್ಳಲು ನನಗೆ ಸಾಧ್ಯವಾಗಲಿಲ್ಲ. ಜಗತ್ತಿನ ಅತ್ಯಂತ ಕಠಿಣ ಪರೀಕ್ಷೆಗಳಲ್ಲಿ ಒಂದನ್ನು ತೇರ್ಗಡೆಯಾಗಿದ್ದೇನೆ ಎಂದು ಹೆಮ್ಮೆಯಿಂದ ಹೇಳಲಾಗದ ಲಕ್ಷಾಂತರ ಜನರಲ್ಲಿ ನಾನೂ ಒಬ್ಬನಾಗಿದ್ದೆ. ನನ್ನ ಸ್ನೇಹಿತರು ಹೋದ ನಂತರ ನನ್ನ ತಾಯಿ ನನ್ನ ಭುಜದ ಮೇಲೆ ಕೈ ಇಟ್ಟು, 'ಚಿಂತಿಸಬೇಡ, ಇನ್ನೂ ಒಂದು ಅವಕಾಶ ಇರುತ್ತದೆ' ಎಂದರು.

ಸಿವಿಲ್ ಸರ್ವೆಂಟ್ ಆಗುವುದೇ ಜೀವನದ ಗುರಿ ಎಂದು ಚಿಕ್ಕವಯಸ್ಸಿನಲ್ಲೇ ನಾನು ನಿರ್ಧರಿಸಿದ್ದೆ; ಅದೂ ನಾಗರಿಕ ಸೇವೆಯ ಹುದ್ದೆಗಳ ಬಗ್ಗೆ ನನಗೆ ಸ್ಪಷ್ಟ ಅರಿವು ಮೂಡುವುದಕ್ಕೂ ಮುಂಚೆಯೇ. ಹೀಗಾಗಿ ನನ್ನ ಮಾನಸಿಕ ಗಟ್ಟಿತನ ಮತ್ತು ಸಹನೆಯನ್ನು ಪರೀಕ್ಷಿಸುವ ದೀರ್ಘ ಹಾಗೂ ಕಠಿಣ ಪ್ರಯಾಣವನ್ನು ಆರಂಭಿಸಿದೆ.

ಈಗ ಮತ್ತೆ ನನ್ನ ಮೊದಲ ಪ್ರಯತ್ನದ ಫಲಿತಾಂಶ ಬಂದ ದಿನಕ್ಕೆ ಮರಳೋಣ. ನನ್ನ ತಾಯಿ ಏನು ಹೇಳಿದ್ದರು ಅಂದರೆ? ಇಲ್ಲಿಯೇ ಯುಪಿಎಸ್‌ಸಿ ಪರೀಕ್ಷೆಯ ಸೌಂದರ್ಯ ಅಡಗಿರುವುದು. ಇದು ಪ್ರತಿ ವರ್ಷ ನಡೆಯುವ ಪರೀಕ್ಷೆ. ನೀವು ಗಂಭೀರ ಅಭ್ಯರ್ಥಿಯಾಗಿದ್ದರೆ, ನಿರಂತರ ಪ್ರಯತ್ನಗಳು ಖಂಡಿತ ಫಲ ನೀಡುತ್ತವೆ. ಯುಪಿಎಸ್‌ಸಿಯಲ್ಲಿ ಒಂದು ವಿಶಿಷ್ಟ ಅನುಕೂಲ ಇದೆ. ಅದು 'ನಿರಂತರತೆ'.

ಇದನ್ನು ಸ್ವಲ್ಪ ವಿವರಿಸಬೇಕು.

ಯುಪಿಎಸ್‌ಸಿ ಪ್ರತಿವರ್ಷ ಪರೀಕ್ಷೆ ನಡೆಸುತ್ತದೆ ಎಂಬುದು ನಿಮಗೆ ಖಚಿತ ಇರುತ್ತದೆ. ಅಂದರೆ, ಈ ವರ್ಷದ ನಿಮ್ಮ ವೈಫಲ್ಯವೇ ಅಂತಿಮವೇನಲ್ಲ. ನೀವು ಮಾಡಿದ ಸಿದ್ಧತೆ, ನಿಮ್ಮ ಅನುಭವ, ನೀವು ಗಳಿಸಿದ ಜ್ಞಾನ–ಇವುಗಳನ್ನು ಮುಂದಿನ ವರ್ಷದ ಸಿದ್ಧತೆಗೆ ಬಳಸಬಹುದು. ನೀವು ಮಾಡಿದ ತಪ್ಪುಗಳಿಂದ ಕಲಿತು, ಮುಂದಿನ ವರ್ಷ ಅವು ಮರುಕಳಿಸದಂತೆ ನಿಮ್ಮ ತಂತ್ರಗಳನ್ನು ತಿದ್ದಿಕೊಳ್ಳಬಹುದು. ಯುಪಿಎಸ್‌ಸಿಯ ನಿರಂತರ ಪರೀಕ್ಷೆಯು ಖಾತ್ರಿ ನೀಡುತ್ತದೆ; ಈ ವರ್ಷ ಆಗದಿದ್ದರೆ ಮುಂದಿನ ವರ್ಷ ಇದೆ, ಅದರ ಮುಂದಿನ ವರ್ಷ ಇದೆ... ಈ ನಂಬಿಕೆಯು ನಿಮ್ಮ ಪ್ರಯತ್ನಗಳಿಗೆ, ಇಚ್ಛಾಶಕ್ತಿ ಮತ್ತು ದೃಢತೆಗೆ ಆಧಾರವಾಗಿರುತ್ತದೆ.

ಹೀಗಿರುವಾಗ ವಿದ್ಯಾರ್ಥಿಗಳು ಯುಪಿಎಸ್‌ಸಿ ಅನ್ನೇ ಏಕೆ ಆಯ್ಕೆ ಮಾಡಿಕೊಳ್ಳುವುದಿಲ್ಲ? ಕೆಪಿಎಸ್‌ಸಿ ನಿಯಮಿತವಾಗಿ ಪರೀಕ್ಷೆ ನಡೆಸುವುದಿಲ್ಲ ಎನ್ನುವುದು ತಿಳಿದಿದ್ದರೂ ಕೆಲವರು ಅದನ್ನೇ ಏಕೆ ಆಯ್ಕೆ ಮಾಡಿಕೊಳ್ಳುತ್ತಾರೆ? ಇದಕ್ಕೆ ಹಲವು ಕಾರಣಗಳಿವೆ.

ಮೊದಲನೆಯದಾಗಿ, ಯುಪಿಎಸ್‌ಸಿಯಲ್ಲಿ ಸ್ಪರ್ಧೆಯ ಮಟ್ಟ ತುಂಬಾ ಹೆಚ್ಚು. ಇಡೀ ದೇಶದ, ವಿವಿಧ ರಾಜ್ಯಗಳ ಅಭ್ಯರ್ಥಿಗಳೊಂದಿಗೆ ನೀವು ಸ್ಪರ್ಧಿಸಬೇಕು. ಲಕ್ಷಾಂತರ ಅಭ್ಯರ್ಥಿಗಳ ನಡುವೆ ಯಶಸ್ಸಿನ ಸಾಧ್ಯತೆ ಕಡಿಮೆ ಇರುತ್ತದೆ. ಆದರೆ, ಕೆಪಿಎಸ್‌ಸಿಯಲ್ಲಿ ನೀವು ಕರ್ನಾಟಕದ ಅಭ್ಯರ್ಥಿಗಳೊಂದಿಗೆ ಮಾತ್ರ ಸ್ಪರ್ಧಿಸುತ್ತೀರಿ. ಆದ್ದರಿಂದ ಯಶಸ್ಸಿನ ಸಾಧ್ಯತೆ ಹೆಚ್ಚು.

ಎರಡನೆಯದಾಗಿ, ಯುಪಿಎಸ್‌ಸಿ ಪರೀಕ್ಷೆ ಕೆಪಿಎಸ್‌ಸಿಗಿಂತ ಹೆಚ್ಚು ಕಠಿಣವಾಗಿರುತ್ತದೆ ಮತ್ತು ಸವಾಲಿನಿಂದ ಕೂಡಿರುತ್ತದೆ.

ಮೂರನೆಯದಾಗಿ, ಭಾಷೆ ಒಂದು ದೊಡ್ಡ ಅಡ್ಡಿಯಾಗಿದೆ. ಇಂಗ್ಲಿಷ್ ಮತ್ತು ಹಿಂದಿಯ ಮೇಲೆ ಉತ್ತಮ ಹಿಡಿತ ಇದ್ದರೆ ಯಶಸ್ಸಿನ ಸಾಧ್ಯತೆ ಹೆಚ್ಚಾಗುತ್ತದೆ. ಕನ್ನಡ ಮಾಧ್ಯಮದ ವಿದ್ಯಾರ್ಥಿಗಳಿಗೆ ಪ್ರಶ್ನೆಗಳನ್ನು ಅರ್ಥಮಾಡಿಕೊಳ್ಳಲು ಹಾಗೂ ಅಧ್ಯಯನ ಸಾಮಗ್ರಿ ಸಂಗ್ರಹಿಸಲು ಕಷ್ಟವಾಗುತ್ತದೆ. ಕನ್ನಡ ಮಾಧ್ಯಮದವರು ಉತ್ತೀರ್ಣರಾಗಿಲ್ಲ ಎಂದಲ್ಲ; ಅವರೂ ಉತ್ತೀರ್ಣರಾಗಿದ್ದಾರೆ. ಆದರೆ, ಅವರ ಪ್ರಮಾಣ ಕಡಿಮೆ.

ನಾಲ್ಕನೆಯದಾಗಿ, ಯುಪಿಎಸ್‌ಸಿ ಮೂಲಕ ಕರ್ನಾಟಕದಲ್ಲೇ ಕೆಲಸ ಸಿಗುತ್ತದೆ ಎಂಬ ಭರವಸೆ ಇಲ್ಲ. ಕೇಡರ್ ವ್ಯವಸ್ಥೆ ಸಂಕೀರ್ಣವಾಗಿದೆ ಮತ್ತು ಅನೇಕ ಸ್ತರಗಳನ್ನು ಒಳಗೊಂಡಿದೆ. ಆದರೆ, ಕೆಪಿಎಸ್‌ಸಿ ಮೂಲಕ ಸ್ವಂತ ರಾಜ್ಯವಾದ ಕರ್ನಾಟಕದಲ್ಲೇ ಕೆಲಸ ನೀಡುತ್ತದೆ.

ಈ ಕಾರಣಗಳಿಂದ ಕೆಪಿಎಸ್‌ಸಿಯು ಉದ್ಯೋಗಾಕಾಂಕ್ಷಿಗಳ ನಡುವೆ ಆಕರ್ಷಣೆ ಉಳಿಸಿಕೊಂಡಿದೆ.

ಕೆಪಿಎಸ್‌ಸಿಯು ಪಠ್ಯಕ್ರಮ, ಮಾದರಿ, ತಂತ್ರಜ್ಞಾನದ ಬಳಕೆ ಮುಂತಾದ ಅಂಶಗಳಲ್ಲಿ ಯುಪಿಎಸ್‌ಸಿ ಮಾದರಿಯನ್ನು ಅನುಸರಿಸಲು ಪ್ರಯತ್ನಿಸಿ ಅಲ್ಪ ಮಟ್ಟಿಗೆ ಯಶಸ್ಸು ಕಂಡಿದೆ. ಆದರೂ ಒಂದು ದೊಡ್ಡ ಲೋಪ ಇದೆ; ಕೆಪಿಎಸ್‌ಸಿ ಪ್ರತಿವರ್ಷ ಪರೀಕ್ಷೆ ನಡೆಸುವುದಿಲ್ಲ. ಕೆಪಿಎಸ್‌ಸಿಗೆ ಯುಪಿಎಸ್‌ಸಿಯಂತೆಯೇ ನಿಶ್ಚಿತ ವೇಳಾಪಟ್ಟಿ ಇಲ್ಲ. ಒಂದು ವರ್ಷ ಅಧಿಸೂಚನೆ ಹೊರಬಂದರೆ, ಮುಂದಿನದು ಯಾವಾಗ ಬರುತ್ತದೆ ಎಂಬುದು ಹೇಳಲು ಸಾಧ್ಯವಿಲ್ಲ. ಎರಡು ವರ್ಷಗಳ ನಂತರ ಇರಬಹುದು, ಐದು ವರ್ಷಗಳ ನಂತರ ಇರಬಹುದು ಅಥವಾ ಅನಿಶ್ಚಿತವಾಗಿ ಮುಂದೂಡಲ್ಪಡಬಹುದು. ಈ ಅನಿಶ್ಚಿತ ಸ್ಥಿತಿ ಅಭ್ಯರ್ಥಿಗಳಲ್ಲಿ ಆತಂಕ ಮತ್ತು ಭಯವನ್ನು ಉಂಟುಮಾಡುತ್ತದೆ– ವಿಶೇಷವಾಗಿ ವಯೋಮಿತಿ ಕಾರಣದಿಂದ. ಮುಂದಿನ ಅವಕಾಶ ಯಾವಾಗ ಸಿಗುತ್ತದೆ ಎಂಬುದು ಗೊತ್ತಿಲ್ಲದ ಕಾರಣ ಯೋಜಿತ ಸಿದ್ಧತೆ ನಡೆಸುವುದು ಕಷ್ಟವಾಗುತ್ತದೆ. ಈ ಭಯ, ಆತಂಕ ಮತ್ತು ಆತುರವನ್ನು ಮಧ್ಯವರ್ತಿಗಳು ದುರುಪಯೋಗಪಡಿಸಿಕೊಳ್ಳುತ್ತಾರೆ.

ಯುಪಿಎಸ್‌ಸಿಯ ಪರೀಕ್ಷೆಗಳು ಕಠಿಣವಾಗಿದ್ದರೂ, ಪ್ರತಿ ವರ್ಷ ಪರೀಕ್ಷೆಗಳು ನಡೆಯುತ್ತವೆ. ಯಶಸ್ಸು ಕಂಡರೆ, ಉನ್ನತ ಸರ್ಕಾರಿ ನೌಕರಿ ಖಚಿತ. ಆದರೆ, ಕೆಪಿಎಸ್‌ಸಿಯಲ್ಲಿರುವುದು ಸೀಮಿತ ಅವಕಾಶಗಳು, ಸೀಮಿತ ಹುದ್ದೆಗಳು. ಹುದ್ದೆಗಳಿಗೆ ಬೇಡಿಕೆ ಹೆಚ್ಚಿರುತ್ತದೆ. ಆದರೆ, ನೇಮಕಾತಿ ಅಧಿಸೂಚನೆ ಎಂದು ಹೊರಬೀಳುತ್ತದೆ ಎನ್ನುವುದು, ಮುಂದಿನ ನೇಮಕಾತಿ–ಪರೀಕ್ಷೆ ಎಂದು ನಡೆಯುತ್ತದೆ ಎನ್ನುವುದು ಅನಿಶ್ಚಿತವಾಗಿರುತ್ತದೆ. ಕೆಪಿಎಸ್‌ಸಿಯನ್ನು ಕಾಡುತ್ತಿರುವ ಸಮಸ್ಯೆಗಳು ಸಾಮಾಜಿಕ ನಿರೀಕ್ಷೆ ಮತ್ತು ಮಾನಸಿಕ ಒತ್ತಡಗಳ ಸಮ್ಮಿಶ್ರಣವಾಗಿವೆ.

ಹೀಗೆ ಕಲ್ಪಿಸಿಕೊಳ್ಳೋಣ: ಕೆಪಿಎಸ್‌ಸಿಯು ಕೂಡ ಯುಪಿಎಸ್‌ಸಿ ಮಾದರಿಯಲ್ಲಿಯೇ ಪ್ರತಿವರ್ಷ ಪರೀಕ್ಷೆ ನಡೆಸುತ್ತದೆ.

2026: ನೀವು ವಿಫಲ. ಸಮಸ್ಯೆಯಿಲ್ಲ. 2027: ಮತ್ತೊಂದು ಅವಕಾಶ, ಮತ್ತೊಂದು ಪ್ರಯತ್ನ. ಅದು ನಿಮ್ಮ ಭಯ, ಆತಂಕ ಮತ್ತು ಕಾತರವನ್ನು ಕಡಿಮೆ ಮಾಡುತ್ತದೆ. ಅವಕಾಶಗಳು ನಿರಂತರವಾಗಿ ಸಿಗುವಂತಿದ್ದರೆ ಅಕ್ರಮ ಮಾರ್ಗಗಳ ಅಗತ್ಯ ಸ್ವಾಭಾವಿಕವಾಗಿ ಕಡಿಮೆಯಾಗುತ್ತದೆ. ಇದು ಸಂಸ್ಥೆಯ ಮೇಲಿನ ವಿಶ್ವಾಸವನ್ನು ಹೆಚ್ಚಿಸುತ್ತದೆ. ಹೀಗಾಗಿಯೇ ಯುಪಿಎಸ್‌ಸಿ ಯಶಸ್ವಿಯಾಗಿದೆ. ಅದಕ್ಕಾಗಿಯೇ ನಾವು ಆಟೊ ಚಾಲಕರ ಮಕ್ಕಳು, ರೈತರ ಮಕ್ಕಳು, ದಿನಗೂಲಿ ಕಾರ್ಮಿಕರ ಮಕ್ಕಳು ಯುಪಿಎಸ್‌ಸಿ ತೇರ್ಗಡೆಯಾದ ಕಥೆಗಳನ್ನು ಕೇಳುತ್ತೇವೆ.

ನಾನು ಸಂಸ್ಥೆಗಳ ಆಡಳಿತದ ಬಗ್ಗೆ ತಜ್ಞನೇನಲ್ಲ. ಆದರೆ, ನನಗೆ ಒಂದು ವಿಷಯದಲ್ಲಿ ನಂಬಿಕೆ ಇದೆ; ಸಂಸ್ಥೆಗಳು ಜನರಿಂದಲೇ ರೂಪುಗೊಳ್ಳುತ್ತವೆ. ಅವುಗಳಲ್ಲಿ ದೋಷಗಳೂ ಇರುತ್ತವೆ. ಯುಪಿಎಸ್‌ಸಿ ಕೂಡ ಅದಕ್ಕೆ ಹೊರತಲ್ಲ. ಆದರೆ, ಮಾನವನ ಮೂಲಭೂತ ಮಾನಸಿಕ ಸ್ಥಿತಿ, ಅವನ ವರ್ತನೆಗಳ ಅರ್ಥೈಸುವಿಕೆ, ಜತೆಗೆ ಉದ್ಯೋಗಾಕಾಂಕ್ಷಿಗಳ ಸಾಮಾಜಿಕ ಆರ್ಥಿಕ ಪರಿಸ್ಥಿತಿಗಳು ಮತ್ತು ಆಶಯಗಳ ಅರಿವು– ಇವುಗಳು ಯಾವುದೇ ಸಂಸ್ಥೆಗಳ ಪುನರ್‌ರಚನೆಗೆ ಅಗತ್ಯವಾದ ಪೂರ್ವಾಪೇಕ್ಷೆಯಾಗಿರುತ್ತವೆ. ಕೆಪಿಎಸ್‌ಸಿಯನ್ನು ಈ ರೀತಿ ಪುನರ್‌ರಚನೆ ಮಾಡಬೇಕು ಎಂದರೆ, ಪರೀಕ್ಷೆಯನ್ನು ವಾರ್ಷಿಕ ಕಾರ್ಯಕ್ರಮವನ್ನಾಗಿ ಮಾಡಬೇಕು.

ಇದರಿಂದ ಎಲ್ಲವೂ ತಕ್ಷಣ ಬದಲಾಗುತ್ತವೆ ಎಂದು ಹೇಳಲಾಗುವುದಿಲ್ಲ. ಆದರೆ, ಇದು ಒಳ್ಳೆಯ ಆರಂಭ. ಉಳಿದವು ಕ್ರಮೇಣ ಸರಿಯಾಗುತ್ತವೆ. ಪ್ರಕೃತಿಯಲ್ಲಿರುವ ಎಲ್ಲದರಂತೆ, ಸಂಸ್ಥೆಗಳ ಬದಲಾವಣೆಗೂ ಅದರದ್ದೇ ಆದ ಸಮಯ ಬೇಕು. ಅದಕ್ಕೆ ಸರಿಯಾದ ದಿಕ್ಕಿನಲ್ಲಿ ಒಂದು ಸಣ್ಣ ಉತ್ತೇಜನ ಸಾಕು.

ಲೇಖಕ: ಪಂಜಾಬ್ ಕೇಡರ್‌ನ ಐಪಿಎಸ್ ಅಧಿಕಾರಿ, ಕರ್ನಾಟಕದವರು

ಅಭ್ಯರ್ಥಿಗಳ ಕನಸಿಗೆ ತಣ್ಣೀರು ಎರಚದಿರಲಿ

• ಭವ್ಯ ನರಸಿಂಹಮೂರ್ತಿ

ಸರ್ಕಾರಿ ಕೆಲಸಕ್ಕೆ ಸೇರಬೇಕು ಎಂಬುದು ಲಕ್ಷಾಂತರ ಯುವಕ ಯುವತಿಯರ ಕನಸು. ಉದ್ಯೋಗ ಪಡೆದು ಸಾರ್ವಜನಿಕರ ಕೆಲಸಗಳನ್ನು ಮಾಡುವುದರ ಜೊತೆಗೆ, ತಮ್ಮ ಕುಟುಂಬದ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಯನ್ನು ಸುಧಾರಿಸುವ ಉದ್ದೇಶವೂ ಅವರ ಈ ಕನಸಿನ ಹಿಂದಿದೆ. ಅದಕ್ಕಾಗಿ ಅವರು ತಮ್ಮ ವಿದ್ಯಾಭ್ಯಾಸದ ನಂತರ ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ನಡೆಸುತ್ತಾರೆ. ನಮ್ಮ ರಾಜ್ಯದಲ್ಲಿ ಇಂತಹ ಕನಸು ಕಟ್ಟಿಕೊಂಡು, ಕರ್ನಾಟಕ ಆಡಳಿತ ಸೇವೆಗೆ (ಕೆಎಎಸ್) ಸೇರಬೇಕು ಎಂಬ ಮಹತ್ವಾಕಾಂಕ್ಷೆಯಿಂದ ಪ್ರತಿ ವರ್ಷ ಹತ್ತು ಲಕ್ಷಕ್ಕೂ ಹೆಚ್ಚು ಪ್ರತಿಭಾವಂತ ಅಭ್ಯರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗೆ ಸಿದ್ಧತೆ ನಡೆಸುತ್ತಾರೆ.

ಈ ಉದ್ದೇಶದಿಂದ ಬೆಂಗಳೂರು, ಧಾರವಾಡ, ವಿಜಯಪುರ ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿರುವ ತರಬೇತಿ ಕೇಂದ್ರಗಳಿಗೆ ದಾಖಲಾಗಿ ಅಭ್ಯಾಸ ಆರಂಭಿಸುತ್ತಾರೆ. ಈ ರೀತಿ ಅಭ್ಯಾಸ ಮಾಡುವವರಲ್ಲಿ ಸಾಮಾನ್ಯ ಆರ್ಥಿಕ ಹಿನ್ನೆಲೆಯವರು ಹಾಗೂ ಮಧ್ಯಮ ವರ್ಗದ ಪ್ರತಿಭಾವಂತರೇ ಹೆಚ್ಚು. ಆದರೆ, ಕರ್ನಾಟಕ ಲೋಕಸೇವಾ ಆಯೋಗವು ಯುವಜನರ ಅಪೇಕ್ಷೆ, ಆಕಾಂಕ್ಷೆಗಳನ್ನು ನಿರ್ಲಕ್ಷಿಸುವ ಮೂಲಕ ಅವರ ಕನಸಿಗೆ ತಣ್ಣೀರು ಎರಚುತ್ತಲೇ ಬಂದಿದೆ.

ರಾಜ್ಯದಲ್ಲಿ ಸರ್ಕಾರಿ ಅಧಿಕಾರಿಗಳ ನೇಮಕಾತಿಗೆ ವಿಶೇಷ ಅಧಿಸೂಚನೆ ಹೊರಡಿಸಿ ಹುದ್ದೆಗಳನ್ನು ಭರ್ತಿ ಮಾಡುವ ಜವಾಬ್ದಾರಿಯನ್ನು ಕೆಪಿಎಸ್‌ಸಿ ಹೊಂದಿದೆ. ಆದರೆ, ಆಯೋಗವು ಈ ಜವಾಬ್ದಾರಿಯನ್ನು ಗಂಭೀರವಾಗಿ ಪರಿಗಣಿಸಿಲ್ಲ ಎಂಬುದನ್ನು ಅದು ತನ್ನ ಕಾರ್ಯವೈಖರಿಯಿಂದ ನಿರೂಪಿಸುತ್ತಲೇ ಬಂದಿದೆ. ಆಯೋಗವು ವರ್ಷಕ್ಕೆ ಕೆಲವು ಹುದ್ದೆಗಳಿಗಷ್ಟೇ ಅಧಿಸೂಚನೆ ಹೊರಡಿಸುತ್ತದೆ. ಆದರೆ, ಕಡಿಮೆ ಹುದ್ದೆಗಳಿಗೂ ನೇಮಕ ಮಾಡುವ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಎರಡರಿಂದ ಮೂರು ಅಥವಾ ಐದು ವರ್ಷಗಳವರೆಗೂ ತೆಗೆದುಕೊಳ್ಳುತ್ತದೆ. ಹೀಗಾಗಿ, ಈ ಪ್ರಕ್ರಿಯೆಯನ್ನು 'ಕರ್ನಾಟಕ ಲೋಕಸೇವಾ ಆಯೋಗದ ಪಂಚವಾರ್ಷಿಕ ಯೋಜನೆ' ಎಂದು ಕರೆಯುವುದು ಹೆಚ್ಚು ಸೂಕ್ತ.

ಯುವಜನಕ್ಕೆ ಅನ್ಯಾಯ

ಕೆಪಿಎಸ್‌ಸಿಯ ಇಂತಹ ಕಾರ್ಯವೈಖರಿಯಿಂದಾಗಿ ರಾಜ್ಯದ ಯುವ ಸಮುದಾಯಕ್ಕೆ ಅನ್ಯಾಯವಾಗುತ್ತಿರುವುದು ಜಗಜ್ಜಾಹೀರಾದ ಸತ್ಯ. ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಬಡವರ ಮಕ್ಕಳು ಎಷ್ಟು ಕಷ್ಟಪಡುತ್ತಾರೆ ಎಂಬುದರ ಅರಿವು ಕೆಪಿಎಸ್‌ಸಿ ಆಡಳಿತಗಾರರಿಗೆ ಇದ್ದಂತಿಲ್ಲ. ಒಂದು ವೇಳೆ ಅರಿವಿದ್ದರೂ ತಮಗೇನೂ ಗೊತ್ತಿಲ್ಲ ಎಂಬಂತಿದೆ ಅವರ ವರ್ತನೆ.

ಪರೀಕ್ಷೆಗೆ ಸಿದ್ಧತೆ ನಡೆಸಲು ಹೆಚ್ಚು ಅಧ್ಯಯನ, ತರಬೇತಿ ಬೇಕು. ಬಹುಪಾಲು ಉದ್ಯೋಗಾಕಾಂಕ್ಷಿಗಳು ಉನ್ನತ ಶಿಕ್ಷಣ ಮುಗಿದ ನಂತರ ಉದ್ಯೋಗಕ್ಕೂ ಸೇರದೆ ಪೂರ್ಣ ಪ್ರಮಾಣದಲ್ಲಿ ಪರೀಕ್ಷಾ ಸಿದ್ಧತೆಯಲ್ಲಿ ತೊಡಗುತ್ತಾರೆ. ತರಬೇತಿಗೆ ಸೇರುತ್ತಾರೆ. ಕಡಿಮೆ ಅವಧಿಯ ಈ ತರಬೇತಿಯ ಶುಲ್ಕ ಹೆಚ್ಚೇ ಇರುತ್ತದೆ. ಬಡವರು, ಮಧ್ಯಮ ವರ್ಗದ ಕುಟುಂಬಗಳಿಂದ ಬಂದ ಅಭ್ಯರ್ಥಿಗಳು ತರಬೇತಿ ಅವಧಿಯ ಖರ್ಚು ವೆಚ್ಚಗಳನ್ನು ಭರಿಸಲು ಸ್ವಿಗ್ಗಿ, ಜೊಮಾಟೊ ಮುಂತಾದ ಆನ್‌ಲೈನ್ ವೇದಿಕೆಗಳಲ್ಲಿ ಡೆಲಿವರಿ ಬಾಯ್ ಆಗಿ, ಕ್ಯಾಟರಿಂಗ್ ಸೇವೆ, ಪೆಟ್ರೋಲ್ ಬಂಕ್ ಸೇರಿದಂತೆ ಇನ್ನಿತರ ಕಡೆಗಳಲ್ಲಿ ಅರೆಕಾಲಿಕ ನೌಕರಿಗೆ ಸೇರುತ್ತಾರೆ. ಇವು ತಮ್ಮ ಶೈಕ್ಷಣಿಕ ಅರ್ಹತೆಗಿಂತಲೂ ಕಡಿಮೆ ಅರ್ಹತೆ ಬೇಡುವ ಉದ್ಯೋಗಗಳಾದರೂ ಅದು ಅವರಿಗೆ ಅನಿವಾರ್ಯ.

ಕೆಲವು ಅಭ್ಯರ್ಥಿಗಳಂತೂ ಇಂದಿರಾ ಕ್ಯಾಂಟೀನ್‌ಗಳಲ್ಲಿ ಊಟ ಮಾಡಿ, ಗ್ರಂಥಾಲಯಗಳಲ್ಲಿ ಮಲಗುತ್ತಿದ್ದಾರೆ. ಮತ್ತೂ ಕೆಲವು ಆಕಾಂಕ್ಷಿಗಳು ಉಚಿತವಾಗಿ ಊಟ ಲಭ್ಯವಿರುವ ಸ್ಥಳಗಳನ್ನು ಪತ್ತೆ ಮಾಡಿ, ಅಲ್ಲಿ ಊಟ ಮಾಡಿ ಹಸಿವನ್ನು ನೀಗಿಸಿಕೊಳ್ಳುತ್ತಿದ್ದಾರೆ. ಎಲ್ಲೆಲ್ಲಿ ಉಚಿತ ಊಟ ಸಿಗುತ್ತದೆ ಎಂಬ ಮಾಹಿತಿಗಳನ್ನು ಹಂಚಿಕೊಳ್ಳುವ ವಾಟ್ಸ್‌ಆ್ಯಪ್ ಗ್ರೂಪ್‌ಗಳೂ ಇವೆ. ಇಂತಹ ಪರಿಸ್ಥಿತಿಗಳನ್ನು ಎದುರಿಸಿ ಸ್ಪರ್ಧಾತ್ಮಕ ಪರೀಕ್ಷೆಗೆ ಸಿದ್ಧತೆ ಮಾಡಿಕೊಳ್ಳುವ ಯುವ ಸಮುದಾಯದವರು ದೈಹಿಕ ಮತ್ತು ಮಾನಸಿಕ ಒತ್ತಡದಿಂದ ಬಳಲುತ್ತಿರುತ್ತಾರೆ. ಇದರೊಂದಿಗೆ ನೇಮಕಾತಿ ಪ್ರಕ್ರಿಯೆಯಲ್ಲಿ ಭ್ರಷ್ಟಾಚಾರ, ನೇಮಕಾತಿ ವಿಳಂಬ, ಇನ್ನಿತರ ಸಮಸ್ಯೆಗಳು ಅವರ ಮೇಲಿನ ಒತ್ತಡವನ್ನು ಇನ್ನಷ್ಟು ಹೆಚ್ಚುವಂತೆ ಮಾಡುತ್ತಿವೆಯಲ್ಲದೆ, ಅವರಲ್ಲಿ ಖಿನ್ನತೆಗೂ ಕಾರಣವಾಗುತ್ತಿವೆ. ಈ ರೀತಿಯ ಸನ್ನಿವೇಶದ ಸೃಷ್ಟಿಗೆ ಮೂಲ ಕಾರಣ ಕರ್ನಾಟಕ ಲೋಕಸೇವಾ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರು ಎಂಬುದು ರಹಸ್ಯವೇನಲ್ಲ.

ಇದಕ್ಕೇನು ಮಾಡಬಹುದು?

ಆಯೋಗವು ಕಳೆದುಕೊಂಡಿರುವ ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ಸರಿಪಡಿಸಲು ಕೆಪಿಎಸ್‌ಸಿ ತನ್ನ ಕಾರ್ಯವೈಖರಿಯಲ್ಲಿ ಕೆಲವು ಬದಲಾವಣೆಗಳನ್ನು ಮಾಡಿಕೊಂಡರೆ ಅದು ಕೂಡ ಯುಪಿಎಸ್‌ಸಿ ಮಾದರಿಯಲ್ಲಿ ವಿಶ್ವಾಸಾರ್ಹ ಸಂಸ್ಥೆಯಾಗಿ ರೂಪುಗೊಳ್ಳಬಹುದು.

- ಆಯೋಗವು ಯಾವುದೇ ನೇಮಕಾತಿ ಪ್ರಕ್ರಿಯೆಯನ್ನು ಒಂದು ವರ್ಷದ ಒಳಗಾಗಿ ಪೂರ್ಣಗೊಳಿಸಬೇಕು. ಜೊತೆಗೆ ಯುಪಿಎಸ್‌ಸಿ ಮಾದರಿಯಲ್ಲಿ ಪರೀಕ್ಷಾ ವೇಳಾಪಟ್ಟಿಯನ್ನು ಸಿದ್ಧಪಡಿಸಿಕೊಂಡು ಅದರಂತೆ ನಡೆದುಕೊಳ್ಳಬೇಕು
- ಪಾರದರ್ಶಕತೆ ಹೆಚ್ಚಿಸಲು, ಭ್ರಷ್ಟಾಚಾರವನ್ನು ತಡೆಯಲು ಮತ್ತು ಅಭ್ಯರ್ಥಿಗಳಲ್ಲಿ ಆಯೋಗದ ಬಗ್ಗೆ ಮತ್ತೆ ವಿಶ್ವಾಸ ಬರುವಂತೆ ಮಾಡಲು, 1:3 ಅನುಪಾತದಲ್ಲಿ ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಮಾಡುವುದಕ್ಕೂ ಮೊದಲೇ ಪರೀಕ್ಷೆ ಬರೆದ ಎಲ್ಲ ಅಭ್ಯರ್ಥಿಗಳ ಅಂತಿಮ ಅಂಕಗಳನ್ನು ಪ್ರಕಟ ಮಾಡಬೇಕು. ಕರ್ನಾಟಕ ಪರೀಕ್ಷಾ ಪ್ರಾಧಿಕಾರವು (ಕೆಇಎ) ಈ ವಿಧಾನವನ್ನು ಅಳವಡಿಸಿಕೊಂಡು ಯಶಸ್ವಿಯಾಗಿ ಜಾರಿಗೆ ತರುತ್ತಿದೆ
- 'ಸಿ' ಗುಂಪಿನ ಹುದ್ದೆಗಳಿಗೆ ನಡೆಯುವ ಎಲ್ಲ ಪರೀಕ್ಷೆಗಳಿಗೆ ಒಂದೇ ಪಠ್ಯಕ್ರಮ ಇರುವುದರಿಂದ, ಎಲ್ಲ 'ಸಿ' ಗುಂಪಿನ ಹುದ್ದೆಗಳನ್ನು ಭರ್ತಿ ಮಾಡಲು ಕೆಪಿಎಸ್‌ಸಿಯು ಪ್ರತಿ ವರ್ಷಕ್ಕೆ ಒಂದು ಪರೀಕ್ಷೆಯನ್ನು ನಡೆಸಬಹುದು
- ಉತ್ತರ ಪತ್ರಿಕೆ ತಿರುಚುವುದು, ಪ್ರಶ್ನೆಪತ್ರಿಕೆಗಳ ಸೋರಿಕೆ ತಡೆಯಲು ಮತ್ತು ನೇಮಕಾತಿ ಪ್ರಕ್ರಿಯೆಯನ್ನು ತ್ವರಿತಗೊಳಿಸಲು ಒಎಂಆರ್ ಶೀಟ್ ಆಧಾರಿತ ಪರೀಕ್ಷೆಯ ಬದಲು ಕಂಪ್ಯೂಟರ್ ಆಧಾರಿತ ಪರೀಕ್ಷೆಯನ್ನು (ಸಿಬಿಟಿ) ಜಾರಿಗೆ ತರಬೇಕು
- ಅಗತ್ಯವಿರುವ ದಾಖಲೆಗಳ ಪರಿಶೀಲನಾ ಕಾರ್ಯದಲ್ಲಿ ಆರ್‌ಡಿ ಸಂಖ್ಯೆಯನ್ನು (ಜಾತಿ/ಆದಾಯ ಪ್ರಮಾಣಪತ್ರದಲ್ಲಿನ 12 ಅಂಕೆಗಳನ್ನು ಹೊಂದಿರುವ ವಿಶಿಷ್ಟ ಗುರುತಿನ ಸಂಖ್ಯೆ) ಬಳಸಿಕೊಂಡು ದಾಖಲೆಗಳ ಪರಿಶೀಲನೆ ಪ್ರಕ್ರಿಯೆಯಲ್ಲಿ ಆಗುತ್ತಿರುವ ವಿಳಂಬ ತಡೆಯಬೇಕು
- ಕರ್ನಾಟಕ ಆಡಳಿತ ಸೇವೆಗಳ (ಕೆಎಎಸ್) ಮಾದರಿಯಲ್ಲಿ ತಾಂತ್ರಿಕ ಹುದ್ದೆಗಳಿಗಾಗಿ ಕರ್ನಾಟಕ ಎಂಜಿನಿಯರಿಂಗ್ ಸೇವೆಗಳು (ಕೆಇಎಸ್) ಎಂಬ ವಿಭಾಗವನ್ನು ಸೃಷ್ಟಿಸಬೇಕು ಮತ್ತು ತಾಂತ್ರಿಕ ಹುದ್ದೆಗಳ ನೇಮಕಾತಿಗಾಗಿ ಸಾಮಾನ್ಯ ತಾಂತ್ರಿಕ ಪರೀಕ್ಷೆ ನಡೆಸಬೇಕು

ಈ ಮೇಲಿನ ಕ್ರಮಗಳನ್ನು ತೆಗೆದುಕೊಂಡರೆ, ಕೆಪಿಎಸ್‌ಸಿಯ ಕಾರ್ಯವಿಧಾನದಲ್ಲಿ ಬದಲಾವಣೆಗಳನ್ನು ಕಾಣಬಹುದು ಹಾಗೂ ಈವರೆಗೂ ಮರೀಚಿಕೆಯಾಗಿರುವ, ಭ್ರಷ್ಟಾಚಾರ– ಸ್ವಜನಪಕ್ಷಪಾತದಿಂದ ಮುಕ್ತವಾದ, ಹೆಚ್ಚು ಪಾರದರ್ಶಕ ಮತ್ತು ಉತ್ತರದಾಯಿ ಆದಂತಹ ನೇಮಕಾತಿಗಳು ನಡೆಯಬಹುದು ಎಂಬುದು ಅಭ್ಯರ್ಥಿಗಳು ಮತ್ತು ಕೆಪಿಎಸ್‌ಸಿಯ ಸುಧಾರಣೆಯನ್ನು ಬಯಸುವ ಎಲ್ಲರ ಅಭಿಪ್ರಾಯ. ಈ ದಿಸೆಯಲ್ಲಿ ಕೆಪಿಎಸ್‌ಸಿ ಗಮನಹರಿಸುತ್ತದೆ ಎಂಬುದು ನನ್ನದೂ ಸೇರಿದಂತೆ ಲಕ್ಷಾಂತರ ಉದ್ಯೋಗಾಕಾಂಕ್ಷಿಗಳ ನಿರೀಕ್ಷೆ.

ಲೇಖಕಿ: ಉದ್ಯೋಗಾಕಾಂಕ್ಷಿಗಳ ಪರ ಹೋರಾಟಗಾರ್ತಿ

ಸರ್ಕಾರ ಏನು ಮಾಡಬೇಕು?

ಕೆಪಿಎಸ್‌ಸಿಯ ಸುಧಾರಣೆಗೆ ಸರ್ಕಾರವೂ ವಿಶೇಷ ಗಮನಹರಿಸಬೇಕು. ಇದರೊಂದಿಗೆ, ವಿವಿಧ ಹುದ್ದೆಗಳಿಗೆ ನೇಮಕಾತಿ ಮಾಡುವ ಬಗ್ಗೆ ತನ್ನ ಯೋಜನೆಯ ಮಾಹಿತಿಯನ್ನು ಸರ್ಕಾರ ಕನಿಷ್ಠ ಮೂರು ವರ್ಷ ಮುಂಚಿತವಾಗಿ ಕೆಪಿಎಸ್‌ಸಿಗೆ ನೀಡಬೇಕು. ಇದರಿಂದ ಆಯೋಗಕ್ಕೆ ನೇಮಕಾತಿಯ ಬಗ್ಗೆ ಅತ್ಯಂತ ವ್ಯವಸ್ಥಿತವಾಗಿ ಯೋಜನೆ ಮಾಡಲು ಸಾಧ್ಯವಾಗುತ್ತದೆ.

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಭದ್ರತಾ ಸಿಬ್ಬಂದಿ ಹಲವು ಜನರಿಗೆ ಥಳಿಸುತ್ತಿರುವ ವಿಡಿಯೊ ತುಣುಕೊಂದನ್ನು ಪ್ರಭಾಕರ್ ಸಿಂಗ್ ಪರಿಹಾರ್ ಎಂಬ ಎಕ್ಸ್ ಬಳಕೆದಾರ ಪೋಸ್ಟ್ ಮಾಡಿದ್ದು, ಇದು ಪಶ್ಚಿಮ ಬಂಗಾಳದಲ್ಲಿ ನಡೆದ ಘಟನೆ ಎಂದೂ, ಚುನಾವಣೆಗೂ ಮುಂಚಿತವಾಗಿ ಸಿಆರ್‌ಪಿಎಫ್ ಸಿಬ್ಬಂದಿ ಗೂಂಡಾಗಳ ವಿರುದ್ಧ ಕ್ರಮ ಕೈಗೊಳ್ಳುತ್ತಿದ್ದಾರೆ ಎಂದೂ ಪ್ರತಿಪಾದಿಸಲಾಗುತ್ತಿದೆ. 'ಸಿಆರ್‌ಪಿಎಫ್‌ನ ಪ್ರವೇಶದೊಂದಿಗೆ ಪಶ್ಚಿಮ ಬಂಗಾಳದಲ್ಲಿ ವಾತಾವರಣ ಬದಲಾಗಿದೆ. ಅವಿತು ಕುಳಿತಿರುವ ಗೂಂಡಾಗಳನ್ನು ಪತ್ತೆ ಮಾಡಲಾಗುತ್ತಿದೆ. ಇನ್ನು ಮುಂದೆ ಮಾತುಕತೆಯ ಪ್ರಶ್ನೆಯೇ ಇಲ್ಲ. ನೇರವಾಗಿ ಕ್ರಮ ಕೈಗೊಳ್ಳಲಾಗುತ್ತಿದೆ. ಬಂಗಾಳದಲ್ಲಿ ಇನ್ನು ಹಿಂದೂಗಳ ಆಡಳಿತ ಮಾತ್ರ ಇರಲಿದೆ' ಎಂದು ಪೋಸ್ಟ್‌ನಲ್ಲಿ ಹೇಳಲಾಗಿದೆ. ಆದರೆ, ಇದು ಸುಳ್ಳು.

ವಿಡಿಯೊ ತುಣುಕಿನ ಕೀಫ್ರೇಮ್ ಅನ್ನು ಗೂಗಲ್ ಲೆನ್ಸ್ ಬಳಸಿಕೊಂಡು ಹುಡುಕಾಡಿದಾಗ, ವಿವಿಧ ಸಾಮಾಜಿಕ ಜಾಲತಾಣಗಳಲ್ಲಿ ಇದೇ ಪ್ರತಿಪಾದನೆ-ಯೊಂದಿಗೆ ವಿಡಿಯೊವನ್ನು ಹಂಚಿಕೊಂಡಿರುವುದು ಕಂಡು ಬಂತು. ಇನ್ನಷ್ಟು ಹುಡುಕಾಟ ನಡೆಸಿದಾಗ ಇದೇ ವಿಡಿಯೊವನ್ನು ಬಾಂಗ್ಲಾದೇಶದ ಡಿಬಿಸಿ ನ್ಯೂಸ್ ಸುದ್ದಿ ವಾಹಿನಿಯು ತನ್ನ ಫೇಸ್‌ಬುಕ್ ಪುಟದಲ್ಲಿ ಈ ವರ್ಷದ ಜನವರಿಯಲ್ಲಿ ಹಂಚಿಕೊಂಡ ಪೋಸ್ಟ್ ಸಿಕ್ಕಿತು. ಅದರಲ್ಲಿನ ವಿವರಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಅದು ಬಾಂಗ್ಲಾದೇಶದಲ್ಲಿ ನಡೆದ ಘಟನೆಯ ವಿಡಿಯೊ ಎಂಬುದು ದೃಢಪಟ್ಟಿತು. ಬಾಂಗ್ಲಾದ ಪಂಚಗಢ ಜಿಲ್ಲೆಯ ಯುವ ಮುಖಂಡ ಉಸ್ಮಾನ್ ಹಾದಿ ಹತ್ಯೆಯನ್ನು ಖಂಡಿಸಿ ಜನರು ನಡೆಸಿದ ಪ್ರತಿಭಟನೆಯ ವೇಳೆ ಅಲ್ಲಿನ ಸೇನಾ ಸಿಬ್ಬಂದಿ ಬಲವಂತವಾಗಿ ಪ್ರತಿಭಟನೆಯನ್ನು ಹತ್ತಿಕ್ಕಲು ಯತ್ನಿಸಿದ್ದರು. ಇದರ ಆಧಾರದಲ್ಲಿ ನಿರ್ದಿಷ್ಟ ಪದಗಳನ್ನು ಬಳಸಿ ಗೂಗಲ್‌ನಲ್ಲಿ ಹುಡುಕಿದಾಗ, ಈ ಘಟನೆಯ ಬಗ್ಗೆ ಹಲವು ಮಾಧ್ಯಮಗಳು ಮಾಡಿರುವ ವರದಿಗಳು ಸಿಕ್ಕಿದವು. ಬಾಂಗ್ಲಾದೇಶದಲ್ಲಿ ನಡೆದ ಘಟನೆಯ ವಿಡಿಯೊವನ್ನು ಈಗ ಪಶ್ಚಿಮ ಬಂಗಾಳದಲ್ಲಿ ನಡೆದಿದೆ ಎಂದು ತಪ್ಪು ಮಾಹಿತಿಯೊಂದಿಗೆ ಹಂಚಿಕೊಳ್ಳಲಾಗುತ್ತಿದೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ನುಡಿ ಬೆಳಗು

ಒಂದು ಪರೀಕ್ಷೆಯ ಕತೆ

ವಾಸುದೇವ ನಾಡಿಗ್

ಮೇಷ್ಟ್ರು ತರಗತಿಯ ಒಳಗೆ ಕಾಲಿಡುತ್ತಲೇ ಒಂದಿಷ್ಟು ಖಾಲಿ ಹಾಳೆಗಳನ್ನು ತಂದು ಕೊಟ್ಟು ವಿದ್ಯಾರ್ಥಿಗಳಿಗೆ ಅಚ್ಚರಿಯ ಪರೀಕ್ಷೆ ಬರೆಯಲು ಹೇಳಿದರು. ವಿದ್ಯಾರ್ಥಿಗಳೆಲ್ಲ ಕಕ್ಕಾಬಿಕ್ಕಿ. ಆದರೆ ಮೇಷ್ಟ್ರು ಸ್ವಲ್ಪ ಬಿಗಿ ಆದ್ದರಿಂದ ಯಾರೊಬ್ಬರೂ ಚಕಾರ ಎತ್ತದೆ ಹಾಳೆಗಳನ್ನು ಪಡೆದುಕೊಂಡರು. ಒಂದೇ ಖಾಲಿ ಹಾಳೆ ನಡುವೆ ವೃತ್ತಾಕಾರದ ಕಪ್ಪು ಚುಕ್ಕೆ. ತುಸು ದೊಡ್ಡದೇ ಇತ್ತು. ಪ್ರಶ್ನೆಪತ್ರಿಕೆ ಇರಲಿಲ್ಲ. ಕೊಟ್ಟ ಹಾಳೆಯಲ್ಲಿ ತೋಚಿದ್ದನ್ನು ಅನಿಸಿದ್ದನ್ನು ಬರೆಯುವ ಅವಕಾಶವಿತ್ತು. ಒಂದು ಗಂಟೆಯಲ್ಲಿ ಪರೀಕ್ಷೆಯೂ ಮುಗಿಯಿತು. ಮೇಷ್ಟ್ರು ಹಾಳೆಗಳನ್ನು ಪಡೆದು ಓದಲು ಶುರುಮಾಡಿದಾಗ, ಎಲ್ಲರೂ ಆ ಕಪ್ಪು ಚುಕ್ಕೆಯ ಬಗೆಗೆ ಟೀಕೆಯನ್ನು ಮಾಡಿದ್ದರು. ಕಪ್ಪು ಚುಕ್ಕೆಯನ್ನು ಕೊರತೆ, ಅಡಚಣೆ, ದೋಷ ಎಂದೆಲ್ಲ ಬರೆಯುತ್ತ ಅನೇಕ ನಕಾರಾತ್ಮಕ ಸಂಗತಿಗಳ ಜೊತೆಗೆ ತಳಕು ಹಾಕಿ ಅಸಮಾಧಾನವನ್ನು ವ್ಯಕ್ತಪಡಿಸಿದ್ದರು.

ಇದನ್ನು ಓದಿ ಕಣ್ಣಾಡಿಸಿದ ಮೇಷ್ಟ್ರು ಆ ವಿದ್ಯಾರ್ಥಿಗಳ ದೃಷ್ಟಿಕೋನವನ್ನು ಕಂಡು ಸ್ವಲ್ಪ ನಿರಾಶರಾದರು. ಯಾರೊಬ್ಬರೂ ಕಪ್ಪು ಚುಕ್ಕೆಯ ಸುತ್ತ ಇದ್ದ ಬಿಳೀ ಜಾಗವನ್ನು ಗಮನಿಸಿಯೇ ಇರದ ಹಾಗೆ ನಡೆದುಕೊಂಡಿದ್ದರು. ಹಾಳೆಯಲ್ಲಿ ಶೇಕಡಾ ತೊಂಬತ್ತೈದು ಭಾಗ ಬಿಳಿ ಭಾಗವೇ ಇದ್ದು, ಶೇಕಡಾ ಐದರಷ್ಟು ಮಾತ್ರ ಕಪ್ಪು ಚುಕ್ಕೆ ಇದ್ದರೂ ಎಲ್ಲರ ಗಮನ ಕಪ್ಪು ಚುಕ್ಕೆಯ ಮೇಲೆಯೇ. ಅಮೃತ ಸೋಮೇಶ್ವರ ಅವರ 'ಹೃದಯ ವಚನ' ಹೇಳುವ ಹಾಗೆ ಒಂಬತ್ತು ಒಳ್ಳೆಯ ಕೆಲಸವನ್ನು ಮಾಡಿ ಒಂದು ತಪ್ಪು ಘಟಿಸಿಬಿಟ್ಟರೆ ಜನ ಅದನ್ನೇ ಎತ್ತಿ ಹಿಡಿದು ಜರೆದು ಹೀಯಾಳಿಸುವ ಹಾಗೆ ಈ ಕತೆ. ನೆಗೆಟಿವಿಟಿಗಳನ್ನೇ ಬೆರಳೆತ್ತಿ ತೋರುವ ಮತ್ತು ಕೊರತೆಗಳನ್ನೇ ಮುಂದೆ ಮಾಡುತ್ತ ಬಾಳನ್ನು ಜರೆವ ಜನರ ಹಾಗೆ ಈ ದೃಷ್ಟಾಂತ.

ಕಪ್ಪು ಕಲೆಯನ್ನು ಹೊರತುಪಡಿಸಿ ಏನಾದರೂ ಬರೆಯಲಿಕ್ಕೆ ಸಾಕಷ್ಟು ಜಾಗವಿತ್ತು ಅಲ್ಲಿ. ಅದನ್ನು ಕಡೆಗಣಿಸಿ ಉಳಿದ ಜಾಗವನ್ನು ಸುಂದರವಾದ ವಿಚಾರಗಳಿಂದ ತುಂಬಬಹುದಿತ್ತು. ಕೊನೆಗೆ ಕಪ್ಪು ಚುಕ್ಕೆಯನ್ನು ಮೂಲವಾಗಿಟ್ಟುಕೊಂಡು ಚಿತ್ರ ರಚಿಸಬಹುದಿತ್ತು. ಬಿಳಿ ಹಾಳೆಯನ್ನು ಅಲಂಕೃತಗೊಳಿಸಬಹುದಿತ್ತು. ಕಷ್ಟವನ್ನು ವೈಭವೀಕರಿಸುವ ಬದಲು ಅದನ್ನು ಮೆಟ್ಟಿಲಾಗಿಸಿಕೊಂಡು ಮುನ್ನಡೆಯಬಹುದಿತ್ತು. ಇಂತಹ ಯೋಚನೆ ಸೃಜನಶೀಲತೆ ಮತ್ತು ಊರ್ಧ್ವಮುಖಿಯಾಗಿ ಚಲಿಸುವ ಸಾಧ್ಯತೆಯನ್ನು ಪರೀಕ್ಷಕ ಮೇಷ್ಟ್ರು ನಿರೀಕ್ಷೆ ಮಾಡಿದ್ದರು. ಆದರೆ ಅದು ಹಾಗೆ ಆಗಲಿಲ್ಲ.

ವಿದ್ಯೆ, ಶಕ್ತಿ, ತಾಕತ್ತು ಮತ್ತು ಆತ್ಮವಿಶ್ವಾಸ ಅನೇಕ ಕಪ್ಪು ಕಲೆಗಳನ್ನು ಮರೆಮಾಡಬಹುದು. ಮಿತಿಗಳನ್ನು ದಾಟುವುದೇ ವಿಕಾಸ ಎಂದು ಜೀವನಪಾಠ ಕಲಿಸಿಕೊಟ್ಟಿರುವಾಗ ಆ ಮಿತಿಯಲ್ಲೇ ಉಳಿಯುವುದಾದಾರೆ ಬಾಳಿಗೆ ಎಲ್ಲಿ ಅರ್ಥವಿದೆ. ಕವಿ, ಕಲೆಗಾರ, ವಿಜ್ಞಾನಿ, ಕಲಾವಿದ, ಗಣಿತಜ್ಞ, ಚಿಂತಕ, ಕ್ರೀಡಾಪಟು ಅಥವಾ ಸರೀಕರ ಕೂಡಾ ತಲೆ ಎತ್ತಿ ಬಾಳಬಹುದಾದ ಮನುಷ್ಯ ತಾಕತ್ತು ಎಲ್ಲವೂ ಇಂತಹ ಮಿತಿಗಳನ್ನು ದಾಟಿಯೇ ಮತ್ತು ಸಾಧ್ಯತೆಗಳನ್ನು ಹಿಗ್ಗಿಸುತ್ತಲೇ ನಡೆದುಬಂದ ಉದಾಹರಣೆ ಹತ್ತು ಹಲವಿವೆ. ಬೆಳೆಯುವ ಬಾಗಿಲು ಎಲ್ಲೆಡೆ ತೆರೆದಿದೆ. ಎಲ್ಲವೂ ಮುಕ್ತವಾದ ಈ ಹೊಸತನದ ಕಾಲದಲ್ಲಿ ಅವರವರ ಫಸಲು ಅವರವರ ಸುಗ್ಗಿಗೆ ಕಾರಣವಾಗಬಲ್ಲದು. ಕಪ್ಪು ಚುಕ್ಕೆಯನ್ನು ದಾಟಿ ಬರೆಯಬಹುದಾದ ಆ ಹಾಳೆ ಬಾಳಿನ ಸಾಧ್ಯತೆಯನ್ನು ಸೂಚಿಸುವ ಸಂಕೇತವಾಗಿತ್ತು.

ಮೇಷ್ಟ್ರು ನಿರೀಕ್ಷೆ ಮಾಡಿದ್ದು ಕೂಡಾ ಇದನ್ನೇ. ❖

ಪದಬಂಧ 6374

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

2.ವಿವೇಚನೆಯಿಲ್ಲದ ಶ್ರದ್ಧೆ (5)
4.ಜಡಿ ಮಳೆಯಲ್ಲಿ ತಂದಿರುವ ವಂದರಿ (3)
5.ಆನೆಯನ್ನು ಹತೋಟಿಯಲ್ಲಿಡಲು ಬಳಸುವ ಸಾಧನ (3)
7.ಹೊರಗೆ ಕಾಣಿಸಿದ ಧೂಮ ಉಲ್ಟಾ ಪಲ್ಟಾ ಆಗಿದೆ (2)
10.ಅತ್ತಿತ್ತ ಕಣ್ಣು ಹಾಯಿಸಿದರೆ ಮೊಟ್ಟೆ ಕಂಡೀತೇ? (2)
11.ಸರ ಮೊದಲಿದ್ದಾಗಿನ ಸಾಲು (3)
12.ಜಳಕವನ್ನು ಹೀಗೆನ್ನಿ (2)
13ತರಗತಿಯಲ್ಲಿರುವ ಗುಂಪು ಕಾಣುತ್ತಿದೆಯೇ? (2)
15.ಈತ ಪಕ್ಕಾ ಹಳ್ಳಿಯವ (3)
18.ವಿಷ್ಣುವಿನ ಹತ್ತು ಅವತಾರಗಳಲ್ಲಿ ಮೂರನೆಯದು (3)
19.ಪರಸ್ಪರ ವಿರೋಧವಾಗಿರುವಂತೆ ತೋರುವುದು (5)

ಮೇಲಿಂದ ಕೆಳಕ್ಕೆ

1.ಕೋರಿಕೆಗೊಂದು ಪರ್ಯಾಯ ಪದ (3)
2.ಬತ್ತಳಿಕೆಯನ್ನು ಹೀಗೂ ಹೇಳುತ್ತಾರೆ (3)
3.ಹತೋಟಿಯೇ ತಿರುವು ಮುರುವಾಗಿದೆಯಲ್ಲಾ (2)
4.ನೀರಿನೊಂದಿಗಿನ ಅಲೆಯ ಜೊತೆಗಿನ ವಾದ್ಯ (5)
6.ಮಲಗುವ ಕೋಣೆ (5)
8.ಬಾಗಿಲ ಚೌಕಟ್ಟಿನ ಕೆಳಭಾಗ (3)
9.ಗಣಿಯ ಹತ್ತಿರ ಕಲಿತಿರುವ ಲೆಕ್ಕ ಶಾಸ್ತ್ರ (3)
14.ಉಪಪತ್ನಿ ತಿರುಗಿ ನಿಂತಿದ್ದಾಳಲ್ಲಾ! (3)
16.ವಿರಮಿಸುತ್ತಿರುವಾಗ ಕಾಣಿಸಿದ ಸೂರ್ಯ (2)
17.ಸನ್ನಿಧಾನದಲ್ಲಿ ನಡೆದ ರಾಜಿ (3)



6373ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

1.ಧ್ಯಾನ 3.ಕಾಮಗಾರಿ
6.ನಮೂನೆ 8.ಗರಗಸ
9.ಪ್ರತೀಕ 10.ಗಟಾರ
11.ರಸಾಭಾಸ 13.ಉಳಿವು
15.ಉಪಕಾರ 16.ಹತ್ತಿ

ಮೇಲಿಂದ ಕೆಳಕ್ಕೆ:

2.ನವೀನ 3.ಕಾಮನೆ
4.ಗಾಣಿಗ 5.ಕಸವರ
7.ಮೂಷಿಕ 9.ಪ್ರಚಾರಕ
10.ಗಯ್ಯಾಳಿ 12.ಸಲ್ಲಾಪ
13.ಉದ್ಗಾರ 14.ವ್ಯಗೇಹ

ಸುಡೊಕು 6757

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	4	5		2		7		3
6		9	5		7			
	3			8		6		
	7			9			3	
	9	3	6		8			4
4				5		8		
7			8		9			
	5						8	7
	8			4		9		

6756 ಸುಡೊಕು

2	1	8	3	7	5	4	6	9
4	9	7	6	1	2	8	5	3
3	6	5	9	4	8	1	7	2
9	2	3	1	8	7	5	4	6
5	7	1	4	6	3	9	2	8
8	4	6	5	2	9	3	1	7
7	3	9	2	5	1	6	8	4
6	5	2	8	9	4	7	3	1
1	8	4	7	3	6	2	9	5

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

15 ಏಪ್ರಿಲ್ 2026 ಬುಧವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಕೃಷ್ಣ ತ್ರಯೋದಶಿ ಗಂ. 22-32 ನಕ್ಷತ್ರ: ಪೂರ್ವಾಭಾದ್ರ ಗಂ. 15-23 ಯೋಗ: ಬ್ರಹ್ಮ ಗಂ. 13-25 ಕರಣ: ಗರ ಗಂ. 11-27 ಮೇಷ ಮಾಸದ 02 ನೇ ದಿನ. ಮಳೆ ನಕ್ಷತ್ರ : ಅಶ್ವಿನಿ 1 ನೇ ಪಾದ. ರಾಹುಕಾಲ : ಮಧ್ಯಾಹ್ನ 12-00 - 01-30, ಸೂರ್ಯೋದಯ : 06-21 ಸೂರ್ಯಾಸ್ತ : 06-40 , ಮುಸ್ಲಿಂ ದಿನಾಂಕ : 26 ಶವ್ವಾಲ್, ಅದೃಷ್ಟ ಸಂಖ್ಯೆ : 7, 2

ಮೇಷ: ಕಂಪ್ಯೂಟರ್‌ನ ಬಿಡಿ ಭಾಗಗಳಂತಹ ಎಲೆಕ್ಟ್ರಾನಿಕ್ ವಸ್ತುಗಳ ಮಾರಾಟಗಾರರಿಗೆ ಮತ್ತು ರಿಪೇರಿ ಮಾಡುವವರಿಗೆ ಅಧಿಕ ಆದಾಯ. ಮಾನಸಿಕ ಅಸ್ಥಿರತೆಯಿಂದ ಕಾರ್ಯಗಳಲ್ಲಿದ್ದ ಉದಾಸೀನತೆ ದೂರಾಗಲಿದೆ.

ವೃಷಭ: ಕೆಲಸದಲ್ಲಿ ಎಲ್ಲರನ್ನು ಜತೆಗೂಡಿಸಿಕೊಂಡು ಗುಂಪಾಗಿ ಕೆಲಸ ನಿರ್ವಹಿಸುವುದರಿಂದ ಶೀಘ್ರ ಮುಗಿಸುವಿರಿ. ನಿರ್ದಿಷ್ಟ ಗುರಿ ಮತ್ತು ಕಠಿಣ ಶ್ರಮ ಯಶಸ್ಸಿನತ್ತ ಕೊಂಡೊಯ್ಯಲಿದೆ. ಮಾತಿನ ಕೌಶಲದಿಂದ ಕಾರ್ಯಸಾಧನೆ.

ಮಿಥುನ: ಜಮೀನು ಖರೀದಿ ಅಥವಾ ನಿವೇಶನಗಳ ಖರೀದಿಯ ವ್ಯವಹಾರಗಳಿಂದ ಲಾಭ ಪಡೆದುಕೊಳ್ಳುವಲ್ಲಿ ಯಶಸ್ವಿಯಾಗುವಿರಿ. ಜವಾಬ್ದಾರಿ ನಿಭಾಯಿಸಲು ಶ್ರಮಪಡಬೇಕಾಗಿಲ್ಲ.

ಕರ್ಕಾಟಕ: ವಾಹನ ಮಾರಾಟದ ಯೋಚನೆಯಲ್ಲಿರುವವರು ಆ ಯೋಚನೆಯನ್ನು ಸದ್ಯದ ಮಟ್ಟಿಗೆ ಕೈಬಿಡುವುದೇ ಸರಿಯಾದ ಮಾರ್ಗ. ಸಮಸ್ಯೆ-ಗಳನ್ನು ಸ್ನೇಹಿತರೊಂದಿಗೆ ಚರ್ಚಿಸಿದಲ್ಲಿ ಪರಿಹಾರ ಸಿಗಲಿದೆ.

ಸಿಂಹ: ಬಳಕೆಯ ಜ್ಞಾನದ ಕೊರತೆಯಿಂದಾಗಿ ಅಥವಾ ಅತಿಯಾದ ಬಳಕೆಯಿಂದಾಗಿ ವಸ್ತು ನಷ್ಟವಾಗಬಹುದು. ಶ್ರೇಯಸ್ಸು ನಿಮ್ಮನ್ನು ಹುಡುಕಿಕೊಂಡು ಬರುವುದರಿಂದ ಸಂತಸ ಸಿಗಲಿದೆ.

ಕನ್ಯಾ: ಸುತ್ತಮುತ್ತಲಿನ ಜನರು ನಾಟಕವನ್ನು ಮಾಡುತ್ತಿದ್ದಾರೆ ಎಂದು ತಿಳಿದರೂ ಏನೂ ಮಾಡದ ಪರಿಸ್ಥಿತಿಯನ್ನು ಹೊಂದುವಿರಿ. ಮನರಂಜನೆಗಾಗಿ ಅಧಿಕ ಮಟ್ಟದಲ್ಲಿ ಖರ್ಚು ಮಾಡುವಿರಿ. ಧನಾಗಮನ ನಿರಂತರವಾಗಿ ಇರಲಿದೆ.

ತುಲಾ: ಸಹವರ್ತಿಗಳ ಅಭಿಪ್ರಾಯಗಳನ್ನು ತಿರಸ್ಕರಿಸುವುದು ಸರಿಯಲ್ಲ, ಆಲಿಸಿ ಉಪಯೋಗಕ್ಕೆ ಬರುವ ಅಂಶವನ್ನು ಸ್ವೀಕರಿಸಿ. ಇಂದಿನ ಸಂತೋಷದ ಬಗ್ಗೆ ಗಮನ ಕೊಡುವುದಕ್ಕಿಂತ ಭವಿಷ್ಯದ ಬಗ್ಗೆ ಗಮನಹರಿಸಿ. ಪರಿವರ್ತನೆಗೆ ಸಕಾಲ.

ವೃಶ್ಚಿಕ: ವಿಚಾರಗಳನ್ನು ಭಿನ್ನ ದೃಷ್ಟಿಯಿಂದ ನೋಡುವ ಅಭ್ಯಾಸದಿಂದ ನಷ್ಟವಾಗುವ ವಿಚಾರದಲ್ಲಿ ಜವಾಬ್ದಾರಿ ವಹಿಸಬಹುದು. ಹಾಲು ಉತ್ಪನ್ನ ಪದಾರ್ಥಗಳ ಮಾರಾಟದಿಂದ ವರಮಾನ ಹೆಚ್ಚುವುದು.

ಧನು: ಕಥೆಗಾರರು, ಕಾದಂಬರಿಕಾರರು ಅನುಭವಕ್ಕೆ ಬರುವ ಘಟನೆಗಳನ್ನೆ ಬರವಣಿಗೆಯಲ್ಲಿ ತರುವ ಪ್ರಯತ್ನವನ್ನು ನಡೆಸಬಹುದು. ವೈವಾಹಿಕ ವಿಚಾರದಲ್ಲಿ ಮನೋಭಿಲಾಷೆಗಳನ್ನು ವ್ಯಕ್ತಪಡಿಸಲು ಹಿಂಜರಿಯಬೇಡಿ.

ಮಕರ: ಸಮಯವನ್ನು ಇನ್ನೊಬ್ಬರಿಗಾಗಿ ಬಳಸಬೇಕಾದ ಪರಿಸ್ಥಿತಿ ಎದುರಾಗುವ ಕಾರಣದಿಂದ ದೈನಂದಿನ ರೀತಿ ರಿವಾಜುಗಳನ್ನು ಉಳಿಸಿಕೊಳ್ಳುವುದಕ್ಕೆ ವೇಗವಾಗಿ ಕೆಲಸ ಮಾಡಬೇಕಾಗುತ್ತದೆ.

ಕುಂಭ: ಜೀವನ ಶೈಲಿಯನ್ನು ಸುಸಂಸ್ಕೃತವಾಗಿ ಬದಲಾಯಿಸಿಕೊಳ್ಳಲು ಈ ದಿನದಿಂದ ಪ್ರಾರಂಭಿಸಿ. ಸದಾ ನಿಮ್ಮ ಬೆಂಬಲಕ್ಕೆ ನಿಲ್ಲುವ ಗೆಳೆಯನೊಬ್ಬ ಸಿಗಲಿದ್ದಾನೆ. ಕಫ ಪ್ರಕೃತಿಯ ದೇಹ ಹೊಂದಿದವರು ಆರೋಗ್ಯದ ಬಗ್ಗೆ ಜಾಗ್ರತೆ ವಹಿಸಿ.

ಮೀನ: ದೈಹಿಕವಾಗಿ ಬಲಾಢ್ಯರಾಗಿರುವ ನಿಮಗೆ ಮಾನಸಿಕವಾಗಿ ದೊಡ್ಡ ಹೊಡೆತ ಬೀಳಲಿದೆ. ನಗದು ವ್ಯವಹಾರವನ್ನು ಮಾಡುವಲ್ಲಿ ಮೋಸ ಹೋಗುವ ಸಾಧ್ಯತೆಗಳಿವೆ. ಹಿರಿಯರು ಅಭ್ಯುದಯಕ್ಕಾಗಿ ಮಾರ್ಗದರ್ಶನ ನೀಡಲಿದ್ದಾರೆ.

ಗುಂಡಣ್ಣ

© 2025 by King Features Syndicate, Inc. World Rights reserved

ಮುಂಬೈ ಧಾರಣೆ (ಶೇಂಗಾ)	
14-04-2026	
ಜಾವಾ 70/80(ಹೊಸ)	11300-11400
ಜಾವಾ 80/90(ಹೊಸ)	10600-10700
ದಪ್ಪ ಮಧ್ಯಪ್ರದೇಶ (ಹೊಸ)	8300-8400
ದಪ್ಪ ಗುಜರಾತ್ (ಹೊಸ)	9600-9700
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1755 (1760)
ಒಂದು ವಾರದ ಡೆಲಿವರಿ	1750 (1755)
ಪಾಮ್ ವಾರದ ಡೆಲಿವರಿ	1443 (1448)
ಸೂರ್ಯಕಾಂತಿ ಎಣ್ಣೆ ಕಚ್ಚಾ	1565 (1570)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,51,200 (1,50,000)
ಬೆಳ್ಳಿ ಕೆ.ಜಿಗೆ	2,47,000 (2,36,500)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಡೀಸೆಲ್ ಮಾರಾಟ: ₹35 ನಷ್ಟ

ಯುದ್ಧದ ಪರಿಣಾಮವಾಗಿ ಕಚ್ಚಾ ತೈಲದ ಬೆಲೆ ತೀವ್ರ ಏರಿಕೆ

ನವದೆಹಲಿ (ಪಿಟಿಐ): ಕಚ್ಚಾ ತೈಲದ ಬೆಲೆಯು ತೀವ್ರ ಏರಿಕೆ ಕಂಡಿದ್ದರೂ ಸರ್ಕಾರಿ ಸ್ವಾಮ್ಯದ ತೈಲೋತ್ಪನ್ನಗಳ ಮಾರಾಟ ಕಂಪನಿಗಳು ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಹೆಚ್ಚಿಸದೆ ಇರುವ ಪರಿಣಾಮವಾಗಿ ಲೀಟರ್ ಪೆಟ್ರೋಲ್‌ಗೆ ₹18ರಷ್ಟು, ಡೀಸೆಲ್‌ಗೆ ₹35ರಷ್ಟು ನಷ್ಟ ಅನುಭವಿಸುತ್ತಿವೆ ಎಂದು ಮೂಲಗಳು ತಿಳಿಸಿವೆ.

ದೇಶದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಸರ್ಕಾರದ ನಿಯಂತ್ರಣದಿಂದ ದಶಕದ ಹಿಂದೆಯೇ ಮುಕ್ತವಾಗಿಸಲಾಗಿದೆ. ಆದರೆ ಸರ್ಕಾರಿ ಸ್ವಾಮ್ಯದ ಕಂಪನಿಗಳಾದ ಇಂಡಿಯನ್ ಆಯಿಲ್ ಕಾರ್ಪೊರೇಷನ್ (ಐಒಸಿ), ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಬಿಪಿಸಿಎಲ್) ಮತ್ತು ಹಿಂದುಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಎಚ್‌ಪಿಸಿಎಲ್) ಪೆಟ್ರೋಲ್, ಡೀಸೆಲ್ ಮಾರಾಟ ಬೆಲೆಯನ್ನು 2022ರ ಏಪ್ರಿಲ್‌ನಿಂದ ಬದಲಾವಣೆ ಮಾಡಿಲ್ಲ.

ಈ ವರ್ಷದ ಆರಂಭದಲ್ಲಿ ಪ್ರತಿ ಬ್ಯಾರಲ್‌ಗೆ 70 ಡಾಲರ್‌ನಷ್ಟಿದ್ದ ಕಚ್ಚಾ ತೈಲದ ಬೆಲೆಯು ಇರಾನ್ ಮೇಲೆ ಅಮೆರಿಕ-ಇಸ್ರೇಲ್ ಒಟ್ಟಾಗಿ ದಾಳಿ ನಡೆಸಿದ ನಂತರದಲ್ಲಿ 120 ಡಾಲರ್‌ವರೆಗೂ ಹೆಚ್ಚಳ ಕಂಡಿತ್ತು.

ಕಚ್ಚಾ ತೈಲದ ಬೆಲೆಯು ಕಳೆದ ತಿಂಗಳು ತೀರಾ ದುಬಾರಿ ಆಗಿದ್ದಾಗ ಈ ಮೂರು ಕಂಪನಿಗಳು ದಿನಕ್ಕೆ ಒಟ್ಟು ₹2,400 ಕೋಟಿಯಷ್ಟು ನಷ್ಟ ಅನುಭವಿಸುತ್ತಿದ್ದವು. ಕೇಂದ್ರ ಸರ್ಕಾರವು ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಎಕ್ಸೈಸ್ ಸುಂಕವನ್ನು ಲೀಟರಿಗೆ ತಲಾ ₹10ರಷ್ಟು ತಗ್ಗಿಸಿದ ನಂತರದಲ್ಲಿ ನಷ್ಟವು ₹1,600 ಕೋಟಿಗೆ ತಗ್ಗಿದೆ. ಎಕ್ಸೈಸ್ ಸುಂಕದ ಇಳಿಕೆಯನ್ನು ಕಂಪನಿಗಳು ಗ್ರಾಹಕರಿಗೆ ವರ್ಗಾವಣೆ ಮಾಡಿಲ್ಲ; ಅದರ ಬದಲಿಗೆ ಅವು ಅದನ್ನು ತಮ್ಮ ನಷ್ಟ ಕಡಿಮೆ ಮಾಡಿಕೊಳ್ಳಲು ಬಳಸಿವೆ ಎಂದು ಮೂಲಗಳು ವಿವರಿಸಿವೆ.

ಮಾರ್ಚ್‌ನಲ್ಲಿ ಆಗಿರುವ ನಷ್ಟವು ಜನವರಿ ಮತ್ತು ಫೆಬ್ರುವರಿಯ ಅಷ್ಟೂ ಗಳಿಕೆಯನ್ನು ಇಲ್ಲವಾಗಿಸಿದೆ. ಮೂರೂ ಕಂಪನಿಗಳು ಮಾರ್ಚ್ ತ್ರೈಮಾಸಿಕದಲ್ಲಿ ನಷ್ಟ ವರದಿ ಮಾಡುವ ಸಾಧ್ಯತೆ ಇದೆ ಎಂದು ಗೊತ್ತಾಗಿದೆ.

ಕಚ್ಚಾ ತೈಲದ ಬೆಲೆಯು ಬ್ಯಾರಲ್‌ಗೆ 10 ಡಾಲರ್‌ನಷ್ಟು ಹೆಚ್ಚಾದರೆ ಪೆಟ್ರೋಲ್, ಡೀಸೆಲ್ ಮಾರಾಟದಿಂದ ಕಂಪನಿಗಳಿಗೆ ಲೀಟರ್‌ಗೆ ಸರಿಸುಮಾರು ₹6ರಷ್ಟು ನಷ್ಟ ಆಗುತ್ತದೆ ಎಂದು ಬ್ರೋಕರೇಜ್ ಕಂಪನಿ ಮಕ್ವೆರಿ ಹೇಳಿದೆ.

ವಿವಿಧ ರಾಜ್ಯಗಳ ವಿಧಾನಸಭೆಗೆ ಈಗ ನಡೆಯುತ್ತಿರುವ ಚುನಾವಣೆಗಳು ಪೂರ್ಣಗೊಂಡ ನಂತರದಲ್ಲಿ ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಳ ಆಗುವ ಸಾಧ್ಯತೆ ಇದೆ ಎಂದು ಕೂಡ ಮಕ್ವೆರಿ ಅಂದಾಜಿಸಿದೆ.

‘ತಾಳಿಕೊಳ್ಳುವ ಶಕ್ತಿ ದೇಶಕ್ಕಿದೆ’

ನವದೆಹಲಿ (ಪಿಟಿಐ): ಭಾರತದ ಅರ್ಥ ವ್ಯವಸ್ಥೆ ಹಾಗೂ ಇಲ್ಲಿನ ಹಣಕಾಸು ವಲಯದ ಮೂಲಭೂತ ಅಂಶಗಳು ಬಲಿಷ್ಠವಾಗಿವೆ. ಕಚ್ಚಾ ತೈಲದ ಬೆಲೆ ಏರಿಕೆಯಿಂದ ಆಗಿರುವ ಆಘಾತ ತಾಳಿಕೊಳ್ಳುವ ಶಕ್ತಿಯನ್ನು ಅವು ದೇಶಕ್ಕೆ ನೀಡಲಿವೆ ಎಂದು ಎಸ್‌ಆ್ಯಂಡ್‌ಪಿ ಗ್ಲೋಬಲ್ ರೇಟಿಂಗ್ಸ್ ಸಂಸ್ಥೆ ಹೇಳಿದೆ.

ಆದರೆ, ಕಚ್ಚಾ ತೈಲದ ಸರಾಸರಿ ಬೆಲೆಯು 2026ರಲ್ಲಿ ಪ್ರತಿ ಬ್ಯಾರಲ್‌ಗೆ 130 ಡಾಲರ್ ಮಟ್ಟದಲ್ಲಿ ಇದ್ದರೆ ದೇಶದ ಜಿಡಿಪಿ ಬೆಳವಣಿಗೆ ದರವು ಶೇ 0.80ರಷ್ಟು ಕಡಿಮೆ ಆಗಬಹುದು ಎಂದು ಅದು ಅಂದಾಜು ಮಾಡಿದೆ.

ಕೆಟ್ಟ ಪರಿಸ್ಥಿತಿಯಲ್ಲಿ ಕಚ್ಚಾ ತೈಲದ ಬೆಲೆಯು 2026ರಲ್ಲಿ 130 ಡಾಲರ್ ಆಗಬಹುದು, 2027ರಲ್ಲಿ ಅದು 100 ಡಾಲರ್ ಆಗಬಹುದು ಎಂದು ಸಂಸ್ಥೆ ಅಂದಾಜು ಮಾಡಿದೆ.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಶ್ರೀವತ್ಸ, ಗಂಗಾನಗರ, ಬೆಂಗಳೂರು

• **ಪ್ರಶ್ನೆ: ನಾನು ಕೆಲವು ವರ್ಷಗಳ ಹಿಂದೆ ಚಿನ್ನದ ಬಾಂಡ್‌ಗಳನ್ನು ಖರೀದಿಸಿದ್ದೆ. ಅವುಗಳಲ್ಲಿ ಕೆಲವು ಬಾಂಡ್‌ಗಳನ್ನು ನಗದೀಕರಿಸುವ ಅವಧಿ ಮುಂದಿನ ಜೂನ್‌ನಲ್ಲಿ ಇದೆ. ಇದಕ್ಕೆ ತೆರಿಗೆ ಹೇಗೆ ಅನ್ವಯಿಸುತ್ತದೆ? ಈ ಲಾಭವನ್ನು ಆದಾಯ ತೆರಿಗೆ ವಿವರ ಸಲ್ಲಿಸುವಾಗ ಹೇಗೆ ತೋರಿಸಬೇಕು? ಸಾಮಾನ್ಯವಾಗಿ ಎಂಟು ವರ್ಷಗಳ ಹೂಡಿಕೆಗೆ ದೀರ್ಘಾವಧಿ ಬಂಡವಾಳ ಲಾಭದ (ಎಲ್‌ಟಿಸಿಜಿ) ಮೇಲೆ ಶೇ 12.5ರ ತೆರಿಗೆ ಅನ್ವಯಿಸುತ್ತದೆ ಎಂಬುದು ನನ್ನ ತಿಳಿವಳಿಕೆ — ಇದು ಸರಿಯೇ?**
ಇದರ ಜೊತೆಗೆ, ನಂತರದ ವರ್ಷಗಳಲ್ಲಿ ಖರೀದಿಸಿದ ಕೆಲವು ಬಾಂಡ್‌ಗಳನ್ನು ಪೂರ್ಣ ಅವಧಿಗೂ ಮುನ್ನ ನಗದೀಕರಿಸುವ ಅವಕಾಶವಿದೆ ಎಂದು ತಿಳಿದಿದ್ದೇನೆ. ಈ ಬಾಂಡ್‌ಗಳನ್ನು ಮಾರಾಟ ಮಾಡುವ ಉದ್ದೇಶವಿದೆ. ಇಂತಹ ಮುಂಚಿತ ನಗದೀಕರಣದ ಸಂದರ್ಭದಲ್ಲಿಯೂ ಮೇಲ್ಕಂಡ ತೆರಿಗೆ ನಿಯಮವೇ ಅನ್ವಯವಾಗುತ್ತದೆಯೇ?
ಈ ಬಾಂಡ್ ಹೂಡಿಕೆ ಮೊತ್ತವಲ್ಲದೆ, ಅಂದಾಜು ಒಂದು ಕೆ.ಜಿ ಬೆಳ್ಳಿಯನ್ನು ನಾನು ಕೆಲವು ವರ್ಷಗಳ ಹಿಂದೆ ಖರೀದಿಸಿದ್ದೆ. ಇದರ ಬಿಲ್ ಸಹಿತ ಖರೀದಿ ಮಾಹಿತಿ ಇದೆ. ಹೆಚ್ಚಿನ ಬೆಲೆ ಇರುವ ಈ ಹೊತ್ತಿನಲ್ಲಿ ಇದನ್ನು ಮಾರಾಟ ಮಾಡಿ ಹಣ ಪಡೆಯಬೇಕೆಂದಿದ್ದೇನೆ. ಯುದ್ಧದ ಕಾರಣದಿಂದ ಚಿನ್ನ-ಬೆಳ್ಳಿ ಮೌಲ್ಯ ತೀವ್ರ ಏರಿಳಿತ ಕಾಣುತ್ತಿರುವುದು ನನ್ನ ಈ ನಿರ್ಧಾರಕ್ಕೆ ಕಾರಣ. ಇದನ್ನು ಈಗ ಮಾರಾಟ ಮಾಡುವುದು ಸೂಕ್ತವೇ? ಇದಕ್ಕೂ ತೆರಿಗೆ ಹೇಗೆ ಅನ್ವಯಿಸುತ್ತದೆ?

ಉತ್ತರ: ನೀವು ಎಂಟು ವರ್ಷ ಪೂರೈಸಿರುವ ಬಾಂಡ್‌ಗಳನ್ನು ಮುಂದಿನ ಜೂನ್ ತಿಂಗಳಲ್ಲಿ ನಗದೀಕರಿಸಲಿದ್ದೀರಿ. ಪ್ರಸ್ತುತ ತೆರಿಗೆ ವರ್ಷದಿಂದ ಬದಲಾಗಿರುವ ನಿಯಮದ ಪ್ರಕಾರ, ಮೂಲ ಹೂಡಿಕೆಯನ್ನು ಸಂಪೂರ್ಣ ಅವಧಿಯ ನಂತರ ನಗದೀಕರಿಸಿದಲ್ಲಿ ಯಾವುದೇ ತೆರಿಗೆ ಇರುವುದಿಲ್ಲ. ಸೆಕ್ಷನ್ 70 (ಎಕ್ಸ್) ಪ್ರಕಾರ ಅದು ವರ್ಗಾವಣೆ ಪರಿಧಿಯಲ್ಲಿ ಬರುವುದಿಲ್ಲ. ಹೀಗಾಗಿ ನಿಮ್ಮ ವಿಚಾರದಲ್ಲಿ ಅದು ತೆರಿಗೆ ಮುಕ್ತವಾಗಿರುತ್ತದೆ. ವಿವರ ಸಲ್ಲಿಸುವಾಗ ಇದನ್ನು ತೆರಿಗೆ ಮುಕ್ತ ಆದಾಯದಲ್ಲಿ ಘೋಷಿಸಿ.

ಇದಲ್ಲದೆ, ಕೆಲವು ಬಾಂಡ್‌ಗಳನ್ನು ಅವಧಿಗೂ ಮುನ್ನ ಮಾರಾಟ ಮಾಡುವುದಾಗಿ ಉಲ್ಲೇಖಿಸಿದ್ದೀರಿ. ಈ ಸಂದರ್ಭದಲ್ಲಿ ತೆರಿಗೆ ನಿಯಮಗಳು ಬದಲಾಗುತ್ತವೆ. ನಿಮ್ಮ ಹೂಡಿಕೆಯ ಅವಧಿ 12 ತಿಂಗಳಿಗಿಂತ ಹೆಚ್ಚು ಇರುವುದರಿಂದ ದೀರ್ಘಾವಧಿ ಬಂಡವಾಳ ಲಾಭ ಅನ್ವಯವಾಗುತ್ತದೆ. ಕಳೆದ ಆರ್ಥಿಕ ವರ್ಷದ ತನಕ ಅವಧಿಪೂರ್ವ ನಗದೀಕರಣಕ್ಕೆ ಮೂಲ ಹೂಡಿಕೆದಾರರಿಗೆ ತೆರಿಗೆ ವಿನಾಯಿತಿ ಇತ್ತು. ಆದರೆ ಬದಲಾದ ನಿಯಮಗಳ ಪ್ರಕಾರ, ಇಂತಹ ದೀರ್ಘಾವಧಿ ಲಾಭಕ್ಕೆ ಶೇ 12.5ರ ದರದಲ್ಲಿ ತೆರಿಗೆ ವಿಧಿಸಲಾಗುತ್ತದೆ ಮತ್ತು ಇಂಡೆಕ್ಸೇಶನ್ ಸೌಲಭ್ಯ ಸಿಗುವುದಿಲ್ಲ. ₹1.25 ಲಕ್ಷದವರೆಗೆ ಲಾಭಕ್ಕೆ ವಿನಾಯಿತಿ ಇದೆ. ಇನ್ನೂ ಹೆಚ್ಚಿನ ಲಾಭದ ಮೊತ್ತಕ್ಕೆ ಶೇ 12.5ರ ದರದಲ್ಲಿ ತೆರಿಗೆ ಇರುತ್ತದೆ.

ಈ ಹೂಡಿಕೆಗಳಲ್ಲದೆ, ನೀವು ಕೆಲವು ವರ್ಷಗಳ ಹಿಂದೆ ಖರೀದಿಸಿದ್ದ ಒಂದು ಕೆ.ಜಿ ಬೆಳ್ಳಿಯನ್ನು ಈಗ ಮಾರುವ ನಿರ್ಧಾರದಲ್ಲಿದ್ದೀರಿ. ಯುದ್ಧದ ಕಾರಣ ಚಿನ್ನ ಮತ್ತು ಬೆಳ್ಳಿ ಮಾರುಕಟ್ಟೆಯ ಮೇಲೆ ಬಹಳ ಸಂಕೀರ್ಣ ಪರಿಣಾಮ ಉಂಟಾಗಿದೆ. ಸಾಮಾನ್ಯವಾಗಿ ಯುದ್ಧದ ಉದ್ವಿಗ್ನತೆ ಹೆಚ್ಚಾದಾಗ, ಹೂಡಿಕೆದಾರರು ಚಿನ್ನ ಮತ್ತು ಬೆಳ್ಳಿಯಂತಹ ಸುರಕ್ಷಿತ ಹೂಡಿಕೆ ಉತ್ಪನ್ನಗಳ ಮೊರೆಹೋಗುವುದು ಸಾಮಾನ್ಯ. ಆದರೆ, ಈಗ ಯುದ್ಧದ ಕಾರಣ ಡಾಲರ್ ಮೌಲ್ಯ ಹೆಚ್ಚಾದಂತೆ, ಜಾಗತಿಕ ಮಟ್ಟದಲ್ಲಿ ಚಿನ್ನ ಮತ್ತು ಬೆಳ್ಳಿಯನ್ನು ಕೊಳ್ಳುವ ಸಾಮರ್ಥ್ಯ ಕಡಿಮೆಯಾಗುತ್ತ-ದೆ. ಇದರ ಪರಿಣಾಮವಾಗಿ ಇವುಗಳ ಮೌಲ್ಯವೂ ಕಳೆದ ಕೆಲವು ವಾರಗಳಿಂದ ಕುಸಿದಿದೆ. ಉತ್ತಮ ಲಾಭದಲ್ಲಿದ್ದ ವಹಿವಾಟುದಾರರು ಸಿಕ್ಕ ಅವಕಾಶ ಬಳಸಿ ತಮ್ಮ ಲಾಭವನ್ನು ನಗದೀಕರಿಸಿದ ಪರಿಣಾಮ, ಪೂರೈಕೆ ಹೆಚ್ಚಾಗಿಯೂ ಬೆಲೆ ಕುಸಿದಿದೆ. ನಿಮ್ಮ ವಿಚಾರದಲ್ಲಿ, ಅನೇಕ ವರ್ಷಗಳ ಹಿಂದೆಯೇ ಇದನ್ನು ಖರೀದಿಸಿರುವ ಕಾರಣ ನೀವು ಪ್ರಸ್ತುತ ಹಂತದಲ್ಲಿ ಮಾರಾಟ ಮಾಡಿದರೂ ಉತ್ತಮ ಲಾಭದಲ್ಲೇ ಇರುವಿರಿ. ಹೀಗಾಗಿ ಹಣದ ತೀವ್ರ ಅಗತ್ಯವಿದ್ದರೆ ಮಾತ್ರ ಮಾರಾಟ ಮಾಡಿ. ಈ ಉತ್ಪನ್ನಗಳಲ್ಲಿ ದೀರ್ಘಾವಧಿಯಲ್ಲಿ ಇನ್ನೂ ಹೆಚ್ಚಿನ ಹೂಡಿಕೆಗೆ ಅವಕಾಶವಿದೆ.

ಇನ್ನು ಈ ಹೂಡಿಕೆಯ ತೆರಿಗೆ ವಿಚಾರವಾಗಿ ಹೇಳುವುದಾದರೆ, ಚಿನ್ನ-ಬೆಳ್ಳಿಯಂತಹ ವಸ್ತುಗಳು ಬಂಡವಾಳ ಆಸ್ತಿಯಾಗಿ ಪರಿಗಣಿತ ಆಗುವುದರಿಂದ, ಅದರ ಮಾರಾಟದಿಂದ ಉಂಟಾಗುವ ಲಾಭವನ್ನು ತೆರಿಗೆಗಾಗಿ ಪರಿಗಣಿಸಲಾಗುತ್ತದೆ. ನೀವು ಇದನ್ನು ಬಿಲ್ ಸಹಿತ ಖರೀ-ದಿಸಿದ್ದರಿಂದ, ಖರೀದಿ ವೆಚ್ಚವನ್ನು ಸರಿಯಾಗಿ ತೋರಿಸುವ ಅವಕಾಶ ಇದೆ. ಈ ಹೂಡಿಕೆಯನ್ನು ಈಗಾಗಲೇ ನೀವು 24 ತಿಂಗಳಿಗಿಂತ ಹೆಚ್ಚು ಅವಧಿಗೆ ಮಾಡಿರುವುದರಿಂದ, ಇದನ್ನು ಮಾರಾಟ ಮಾಡುವ ವರ್ಷದಲ್ಲಿ ದೀರ್ಘಾವಧಿ ಬಂಡವಾಳ ಲಾಭ ಎಂದು ಪರಿಗಣಿಸಲಾಗುತ್ತದೆ. ನಿಯಮಗಳ ಪ್ರಕಾರ, ದೀರ್ಘಾವಧಿ ಲಾಭಕ್ಕೆ ಶೇ 12.5ರ ದರದಲ್ಲಿ ತೆರಿಗೆ ವಿಧಿಸ-ಲಾಗುತ್ತದೆ ಮತ್ತು ಇಂಡೆಕ್ಸೇಶನ್ ಸೌಲಭ್ಯ ಲಭ್ಯವಿರುವುದಿಲ್ಲ.

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ಚಿಟಿಕೆ ಸುದ್ದಿ

ಯುದ್ಧ: ರತ್ನ, ಆಭರಣ ರಫ್ತು ಇಳಿಕೆ

ಮುಂಬೈ (ಪಿಟಿಐ): ಭಾರತದಿಂದ ರತ್ನ ಮತ್ತು ಆಭರಣಗಳ ರಫ್ತು ಮಾರ್ಚ್‌ನಲ್ಲಿ ಶೇಕಡ 35.23ರಷ್ಟು ಕಡಿಮೆ ಆಗಿದೆ. ಪಶ್ಚಿಮ ಏಷ್ಯಾದಲ್ಲಿನ ಯುದ್ಧವು ಈ ಇಳಿಕೆಗೆ ಮುಖ್ಯ ಕಾರಣ ಎಂದು ರತ್ನ ಮತ್ತು ಆಭರಣ ರಫ್ತು ಉತ್ತೇಜನ ಮಂಡಳಿ (ಜಿಜೆಇಪಿಸಿ) ಮಂಗಳವಾರ ಹೇಳಿದೆ.

‘ಯುದ್ಧವು ರತ್ನ ಮತ್ತು ಆಭರಣಗಳ ರಫ್ತಿನ ಮೇಲೆ ಪರಿಣಾಮ ಬೀರಿದೆ. ಪರಿಸ್ಥಿತಿಯು ಹೆಚ್ಚು ಅಪಾಯಕಾರಿ ಆಗಿರುವ ಕಾರಣದಿಂದಾಗಿ ಸರಕು ಸಾಗಣೆ ವಿಮೆಗೆ ಪಾವತಿಸುವ ಪ್ರೀಮಿಯಂ ಮೊತ್ತವು ಭಾರಿ ಪ್ರಮಾಣದಲ್ಲಿ ಹೆಚ್ಚಾಗಿದೆ. ಇದು ಕೂಡ ರಫ್ತಿನ ಮೇಲೆ ಪರಿಣಾಮ ಬೀರಿದೆ’ ಎಂದು ಮಂಡಳಿ ಅಧ್ಯಕ್ಷ ಕಿರೀಟ್ ಭನ್ಸಾಲಿ ತಿಳಿಸಿದ್ದಾರೆ.

ಬಾಯ್ಲರ್ ಸ್ಫೋಟ: 9 ಮಂದಿ ಸಾವು

ಬಾಯ್ಲರ್ ಸ್ಫೋಟದಿಂದಾಗಿ ವಿದ್ಯುತ್ ಸ್ಥಾವರದ ಹೊರಗೆ ಹಬ್ಬಿದ ಹೊಗೆ –ಪಿಟಿಐ ಚಿತ್ರ

ಸಕ್ತಿ (ಛತ್ತೀಸಗಢ) (ಪಿಟಿಐ): ಇಲ್ಲಿನ ವಿದ್ಯುತ್ ಸ್ಥಾವರವೊಂದರಲ್ಲಿ ಮಂಗಳವಾರ ಬಾಯ್ಲರ್ ಸ್ಫೋಟಗೊಂಡ ಪರಿಣಾಮ ಒಂಬತ್ತು ಕಾರ್ಮಿಕರು ಮೃತಪಟ್ಟಿದ್ದು, 15 ಮಂದಿ ಗಾಯಗೊಂಡಿದ್ದಾರೆ.

ಸಿಂಘಿತರಾಯ್ ಗ್ರಾಮದ ಸಮೀಪವಿರುವ ವೇದಾಂತ ಲಿಮಿಟೆಡ್‌ನ ವಿದ್ಯುತ್ ಸ್ಥಾವರದಲ್ಲಿ ಮಂಗಳವಾರ ಮಧ್ಯಾಹ್ನ ಈ ದುರಂತ ಸಂಭವಿಸಿದೆ.

ಬಾಯ್ಲರ್ ಟ್ಯೂಬ್‌ನಲ್ಲಿ ಸ್ಫೋಟ ಸಂಭವಿಸಿದ್ದು, ಮೂವರು ಕಾರ್ಮಿಕರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಉಳಿದ ಆರು ಮಂದಿ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ ಎಂದು ಪೊಲೀಸ್ ವರಿಷ್ಠಾಧಿಕಾರಿ ಪ್ರಫುಲ್ ಠಾಕೂರ್ ಮಾಹಿತಿ ನೀಡಿದ್ದಾರೆ.

ಘಟನಾ ಸ್ಥಳಕ್ಕೆ ಸ್ಥಳೀಯ ಆಡಳಿತದ ಅಧಿಕಾರಿಗಳು ಮತ್ತು ಪೊಲೀಸರು ತೆರಳಿ ರಕ್ಷಣಾ ಕಾರ್ಯ ಕೈಗೊಂಡಿದ್ದಾರೆ. ಕಾರ್ಮಿಕರು ಮತ್ತು ಘಟಕದ ಸಿಬ್ಬಂದಿಯನ್ನು ಸ್ಥಳಾಂತರಿಸಲಾಗಿದೆ ಎಂದೂ ತಿಳಿಸಿದ್ದಾರೆ.

ಘಟನೆಗೆ ಸಂಬಂಧಿಸಿದಂತೆ ತನಿಖೆಗೆ ಆದೇಶಿಸಲಾಗಿದ್ದು, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ವಿಷ್ಣು ದೇವ್ ಸಾಯಿ ಹೇಳಿದ್ದಾರೆ. ಸ್ಥಾವರದ ನಿರ್ವಹಣಾ ಘಟಕವೂ ಕೂಡ ಪ್ರಕಟಣೆ ಹೊರಡಿಸಿ, ಕಾರ್ಮಿಕರಿಗೆ ಸೂಕ್ತ ನೆರವು ಒದಗಿಸುವುದಾಗಿ ಹೇಳಿದೆ.

ಸಂಬಂಧ ಸುಧಾರಣೆಯಲ್ಲಿ ಬದಲಾವಣೆ ಇಲ್ಲ: ಚೀನಾ

ಗುವೊ ಜಿಯಕುನ್

ಬೀಜಿಂಗ್ (ಪಿಟಿಐ): ಭಾರತದೊಂದಿಗಿನ ಸಂಬಂಧ ಸುಧಾರಿಸುವ ನಿಟ್ಟಿನಲ್ಲಿ ಚೀನಾದ ನೀತಿ ಬದಲಾಗಿಲ್ಲ ಎಂದು ಚೀನಾ ತಿಳಿಸಿದೆ. ಆದರೆ, ಅರುಣಾಚಲಪ್ರದೇಶದ ಹಲವು ಸ್ಥಳಗಳಿಗೆ ಹೊಸ ಹೆಸರು ನಾಮಕರಣ ಮಾಡಿರುವುದನ್ನು ಬಲವಾಗಿ ಸಮರ್ಥಿಸಿಕೊಂಡಿದೆ.

‘ಭಾರತದ ಭೂಪ್ರದೇಶಗಳಿಗೆ ಕಾಲ್ಪನಿಕ ಹೆಸರುಗಳನ್ನು ನಾಮಕರಣ ಮಾಡಿದ ಚೀನಾದ ನಿಲುವನ್ನು ಭಾರತವು ಬಲವಾಗಿ ಖಂಡಿಸಿತ್ತು. ಆಧಾರರಹಿತವಾಗಿ ಇಂತಹ ನಿರೂಪಣೆಗಳನ್ನು ಸೃಷ್ಟಿಸುವುದರಿಂದ, ನಿರಾಕರಿಸಲಾಗದ ವಾಸ್ತವವನ್ನು ಬದಲಾಯಿಸಲು ಸಾಧ್ಯವಿಲ್ಲ. ಇದರಿಂದ ಉಭಯ ರಾಷ್ಟ್ರಗಳ ನಡುವಿನ ಬಾಂಧವ್ಯದ ಮೇಲೂ ಪರಿಣಾಮ ಬೀರಲಿದೆ’ ಎಂದು ಭಾರತದ ವಿದೇಶಾಂಗ ಇಲಾಖೆಯ ವಕ್ತಾರ ರಣಧೀರ್ ಜೈಸ್ವಾಲ್ ತಿಳಿಸಿದ್ದರು.

ಇದಕ್ಕೆ ಪ್ರತಿಕ್ರಿಯಿಸಿದ ಚೀನಾ ವಿದೇಶಾಂಗ ಇಲಾಖೆ ವಕ್ತಾರ ಗುವೊ ಜಿಯಕುನ್, ‘ಝಂಗ್ನಾನ್ ಪ್ರದೇಶವು ಚೀನಾದ ಭೂಪ್ರದೇಶವಾಗಿದೆ. ಭಾರತವು ಅಕ್ರಮವಾಗಿ ಸ್ಥಾಪಿಸಿರುವ ಅರುಣಾಚಲ ಪ್ರದೇಶವನ್ನು ಚೀನಾವು ಮಾನ್ಯ ಮಾಡುವುದಿಲ್ಲ’ ಎಂದು ತಿಳಿಸಿದ್ದಾರೆ.

ಅರುಣಾಚಲಪ್ರದೇಶ ರಾಜ್ಯಕ್ಕೆ ಚೀನಾವು ಝಂಗ್ನಾನ್ ಎಂದೇ ಕರೆಯುತ್ತದೆ. ಈ ಭಾಗವು ಟಿಬೆಟ್‌ನ ದಕ್ಷಿಣ ಭಾಗ ಎಂಬುದು ಚೀನಾದ ವಾದ.

‘ಝಂಗ್ನಾನ್ ಪ್ರದೇಶದ ಕೆಲವು ಸ್ಥಳಗಳಿಗೆ ಪ್ರಮಾಣಿತವಾದ ಹೆಸರು ನಾಮಕರಣ ಮಾಡಲು ಚೀನಾ ಸಾರ್ವಭೌಮ ಅಧಿಕಾರ ಹೊಂದಿದೆ. ಚೀನಾ ಹಾಗೂ ಭಾರತದ ನಡುವಿನ ಸಂಬಂಧವು ಸಾಮಾನ್ಯವಾಗಿ ಸ್ಥಿರವಾಗಿದೆ. ಈ ವಿಚಾರದಲ್ಲಿ ಚೀನಾದ ಬದ್ಧತೆಯು ಸುಧಾರಣೆಯಾಗುತ್ತಿದ್ದು, ಬೆಳವಣಿಗೆಯಾಗುತ್ತಿದೆ. ಉಭಯ ರಾಷ್ಟ್ರಗಳು ಇದೇ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದು, ದ್ವಿಪಕ್ಷೀಯ ಸಂಬಂಧ ವೃದ್ಧಿ ನಿಟ್ಟಿನಲ್ಲಿ ಹೆಚ್ಚು ಅನುಕೂಲಕರವಾಗಿ ಕೆಲಸ ಮಾಡುತ್ತಿವೆ’ ಎಂದು ತಿಳಿಸಿದ್ದಾರೆ.

ಪ್ರಯಾಣಿಕ ವಾಹನ ಮಾರಾಟ ಹೆಚ್ಚಳ

ನವದೆಹಲಿ (ಪಿಟಿಐ): ಮಾರ್ಚ್ ತಿಂಗಳಲ್ಲಿ ವಾಹನ ತಯಾರಿಕಾ ಕಂಪನಿಗಳಿಂದ ಡೀಲರ್‌ಗಳಿಗೆ ರವಾನೆ ಆಗಿರುವ ಪ್ರಯಾಣಿಕ ವಾಹನಗಳ ಸಂಖ್ಯೆಯು ದಾಖಲೆಯ 4.42 ಲಕ್ಷಕ್ಕೆ ತಲುಪಿದೆ. ಇದು ಹಿಂದಿನ ವರ್ಷದ ಇದೇ ಅವಧಿಯಲ್ಲಿ ಆಗಿದ್ದ ರವಾನೆಗೆ ಹೋಲಿಸಿದರೆ ಶೇ 16ರಷ್ಟು ಜಾಸ್ತಿ ಎಂದು ಭಾರತೀಯ ವಾಹನ ತಯಾರಕರ ಒಕ್ಕೂಟ (ಎಸ್‌ಐಎಎಂ) ಹೇಳಿದೆ.

ಹಿಂದಿನ ವರ್ಷದ ಇದೇ ಅವಧಿಯಲ್ಲಿ ಒಟ್ಟು 3.81 ಲಕ್ಷ ವಾಹನಗಳನ್ನು ರವಾನಿಸಲಾಗಿತ್ತು. ಮಾರ್ಚ್‌ನಲ್ಲಿ ಡೀಲರ್‌ಗಳಿಗೆ ಕಳುಹಿಸಿಕೊಟ್ಟಿರುವ ದ್ವಿಚಕ್ರ ವಾಹನಗಳ ಸಂಖ್ಯೆ 19.76 ಲಕ್ಷ ಆಗಿದ್ದು, ಹಿಂದಿನ ವರ್ಷದ ಸಂಖ್ಯೆಗೆ ಹೋಲಿಸಿದರೆ ಶೇ 19.3ರಷ್ಟು ಹೆಚ್ಚಳ ಕಂಡುಬಂದಿದೆ.

ತ್ರಿಚಕ್ರ ವಾಹನಗಳ ರವಾನೆಯು ಶೇ 21.4ರಷ್ಟು ಜಾಸ್ತಿ ಆಗಿದೆ ಎಂದು ಎಸ್‌ಐಎಎಂ ಹೇಳಿದೆ.

ಮತ್ತೆ ಮಾತುಕತೆಗೆ ಯತ್ನ

ಒಂದನೇ ಪುಟದಿಂದ...

ಕೆಲವು ಮೂಲಗಳ ಪ್ರಕಾರ ಎರಡನೇ ಸುತ್ತಿನ ಮಾತುಕತೆ ಇಸ್ಲಾಮಾಬಾದ್‌ನಲ್ಲಿ ಗುರುವಾರ ನಡೆಯುವ ಸಾಧ್ಯತೆಯಿದೆ. ಆದರೆ ಅಮೆರಿಕದ ಅಧಿಕಾರಿಯೊಬ್ಬರು ಮಾತುಕತೆ ಜಿನೀವಾದಲ್ಲಿ ನಡೆಯುವ ಸಾಧ್ಯತೆಯಿದೆ ಎಂದಿದ್ದಾರೆ. ಶ್ವೇತಭವನವು ಮಾತುಕತೆ ಬಗ್ಗೆ ಯಾವುದೇ ಅಧಿಕೃತ ಹೇಳಿಕೆ ನೀಡಿಲ್ಲ.

ಜೆ.ಡಿ.ವ್ಯಾನ್ಸ್ ನೇತೃತ್ವದ ಅಮೆರಿಕ ನಿಯೋಗ ಮತ್ತು ಸಂಸತ್‌ನ ಸ್ಪೀಕರ್ ಮೊಹಮ್ಮದ್ ಬಾಘೇರ್ ಖಾಲೀಬಾಫ್ ನೇತೃತ್ವದ ಇರಾನ್‌ನ ನಿಯೋಗದ ನಡುವೆ ಏ.11ರಂದು ಇಸ್ಲಾಮಾಬಾದ್‌ನಲ್ಲಿ ಮಾತುಕತೆ ನಡೆದಿತ್ತು.

ಸಾಕಷ್ಟು ಪ್ರಗತಿ: ‘ಇರಾನ್ ಜತೆಗಿನ ಮಾತುಕತೆಯಲ್ಲಿ ನಾವು ಸಾಕಷ್ಟು ಪ್ರಗತಿ ಸಾಧಿಸಿದ್ದೇವೆ. ಚೆಂಡು ಈಗ ಇರಾನ್‌ನ ಅಂಗಳದಲ್ಲಿದೆ’ ಎಂದು ವ್ಯಾನ್ಸ್ ಅವರು ‘ಫಾಕ್ಸ್ ನ್ಯೂಸ್’ಗೆ ತಿಳಿಸಿದ್ದಾರೆ.

‘ಇರಾನ್‌ನ ನಿಯೋಗಕ್ಕೆ ಒಪ್ಪಂದವನ್ನು ಅಂತಿಮಗೊಳಿಸುವ ಅಧಿಕಾರ ಇಲ್ಲದ ಕಾರಣ ಪಾಕಿಸ್ತಾನದಲ್ಲಿ ನಡೆದ ಶಾಂತಿ ಮಾತುಕತೆ ಯಾವುದೇ ಫಲಿತಾಂಶವಿಲ್ಲದೆ ಕೊನೆಗೊಂಡಿತು’ ಎಂದಿದ್ದಾರೆ.

‘ಮಾತುಕತೆಯ ಸಮಯದಲ್ಲಿ ನಾವು ಮುಂದಿಟ್ಟ ಷರತ್ತುಗಳಿಗೆ ಒಪ್ಪಿಗೆ ನೀಡುವ ಅಧಿಕಾರ ನಿಯೋಗಕ್ಕೆ ಇರಲಿಲ್ಲ. ಅವರು ಟೆಹರಾನ್‌ಗೆ ವಾಪಸಾಗಿ ಪರಮೋಚ್ಚ ನಾಯಕ ಅಥವಾ ಬೇರೆ ನಾಯಕರಿಂದ ಅನುಮೋದನೆ ಪಡೆಯಬೇಕಾಗಿತ್ತು. ಆದ್ದರಿಂದ, ಮಾತುಕತೆಯಲ್ಲಿ ಅಂತಿಮ ನಿರ್ಧಾರ ಹೊರಬೀಳಲಿಲ್ಲ’ ಎಂದು ವಿವರಿಸಿದ್ದಾರೆ.

> **ಪಶ್ಚಿಮ ಏಷ್ಯಾ ಮತ್ತು ಗಲ್ಫ್ ಪ್ರದೇಶದ ಎಲ್ಲ ದೇಶಗಳ ಸಾರ್ವಭೌಮತೆ, ಭದ್ರತೆ ಮತ್ತು ಪ್ರಾದೇಶಿಕ ಸಮಗ್ರತೆಯನ್ನು ಸಂಪೂರ್ಣವಾಗಿ ಗೌರವಿಸಬೇಕು**
> **ಷಿ ಜಿನ್‌ಪಿಂಗ್,** ಚೀನಾ ಅಧ್ಯಕ್ಷ

ದಿನದ ಬೆಳವಣಿಗೆ

- ಹೊರ್ಮುಜ್ ಜಲಸಂಧಿಯಲ್ಲಿ ಹಡಗುಗಳ ಸುಗಮ ಸಂಚಾರ ಖಾತರಿಪಡಿಸುವ ಸಂಬಂಧ ಫ್ರಾನ್ಸ್ ಹಾಗೂ ಬ್ರಿಟನ್‌ನ ಜಂಟಿ ಆತಿಥ್ಯದಲ್ಲಿ ಶುಕ್ರವಾರ ಸಭೆ ನಡೆಯಲಿದೆ
- ಸಂಘರ್ಷ ಕೊನೆಗೊಳಿಸಲು ಮಾತುಕತೆ ಮುಂದುವರಿಸುವಂತೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಾಗೂ ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ ಅವರಿಗೆ ಫ್ರಾನ್ಸ್ ಅಧ್ಯಕ್ಷ ಇಮ್ಯಾನುವೆಲ್ ಮ್ಯಾಕ್ರನ್ ಒತ್ತಾಯಿಸಿದ್ದಾರೆ
- ಇರಾನ್‌ನ ಬಂದರುಗಳ ಮೇಲೆ ದಿಗ್ಬಂಧನ ವಿಧಿಸುವ ಅಮೆರಿಕದ ನಿರ್ಧಾರ ‘ಅಪಾಯಕಾರಿ ಮತ್ತು ಬೇಜವಾಬ್ದಾರಿ’ ನಡೆ ಎಂದು ಚೀನಾ ಮಂಗಳವಾರ ಟೀಕಿಸಿದೆ

16 ಯುದ್ಧನೌಕೆ ನಿಯೋಜನೆ

ಒಂದನೇ ಪುಟದಿಂದ...

ಪರ್ಷಿಯನ್ ಕೊಲ್ಲಿಯಲ್ಲಿ (ಇರಾನ್‌ನ ಹೆಚ್ಚು ಕರಾವಳಿ ಪ್ರದೇಶ ಇರುವ ಪ್ರದೇಶ) ಅಮೆರಿಕದ ಯಾವುದೇ ಯುದ್ಧನೌಕೆಗಳಿಲ್ಲ ಎಂದು ಸೇನೆಯ ಇನ್ನೊಬ್ಬ ಅಧಿಕಾರಿ ತಿಳಿಸಿದ್ದಾರೆ. ಅಮೆರಿಕವು ಇರಾನ್‌ನ ಬಂದರುಗಳ ಮೇಲೆ ವಿಧಿಸಿರುವ ದಿಗ್ಬಂಧನ ಸೋಮವಾರದಿಂದ ಜಾರಿಗೆ ಬಂದಿದೆ.

‘ದಿಗ್ಬಂಧನದ ಪ್ರದೇಶ ಪ್ರವೇಶಿಸಲು ಇರಾನ್‌ನ ಯುದ್ಧನೌಕೆಗಳು ಯತ್ನಿಸಿದರೆ, ಅವನ್ನು ನಾಶಪಡಿಸಲಾಗುವುದು’ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಈಗಾಗಲೇ ಎಚ್ಚರಿಸಿದ್ದಾರೆ.



ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1745 (1750)
ಸೋಯಾ (ರಿಫೈನ್ಡ್)	₹1545 (1550)
ಸೂರ್ಯಕಾಂತಿ (ರಿಫೈನ್ಡ್)	₹1670 (1675)
ಪಾಮೋಲಿನ್	₹1445 (1450)

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	100 ಕ್ಕೆ	₹565
	12 ಕ್ಕೆ	₹78
ಮೈಸೂರು:	100 ಕ್ಕೆ	₹580

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹228
ಆರ್‌ಎಸ್‌ಎಸ್-5	₹221
ಗುಡ್ ಲಾಟ್	₹200

‘ಯುದ್ಧ ನಿಲ್ಲಿಸುವ ಸಾಮರ್ಥ್ಯ ಚೀನಾಕ್ಕೆ ಮಾತ್ರವೇ ಇದೆ’

ಬೀಜಿಂಗ್ (ಎಪಿ): ‘ಇರಾನ್, ಉಕ್ರೇನ್ ಸೇರಿದಂತೆ ಜಗತ್ತಿನ ವಿವಿಧೆಡೆ ನಡೆಯುತ್ತಿರುವ ಯುದ್ಧವನ್ನು ನಿಲ್ಲಿಸಲು ಚೀನಾಕ್ಕೆ ಮಾತ್ರವೇ ಸಾಧ್ಯವಿದೆ. ಚೀನಾ ಅಲ್ಲದೇ ಬೇರೆ ಯಾವ ದೇಶವೂ ಇಂಥ ಕೆಲಸ ಮಾಡಲು ಸಾಧ್ಯವಿದೆ ಎಂದು ನನಗೆ ಅನ್ನಿಸುವುದಿಲ್ಲ’ ಎಂದು ಸ್ಪೇನ್ ಪ್ರಧಾನಿ ಪೆದ್ರೊ ಸ್ಯಾಂಚೆಸ್ ಅಭಿಪ್ರಾಯಪಟ್ಟರು.

ಚೀನಾ ಪ್ರವಾಸದಲ್ಲಿರುವ ಅವರು, ಅಧ್ಯಕ್ಷ ಷಿ ಜಿನ್‌ಪಿಂಗ್ ಅವರನ್ನು ಮಂಗಳವಾರ ಭೇಟಿ ಮಾಡಿದರು.

ಬಳಿಕ ಮಾತನಾಡಿದ ಪೆದ್ರೊ, ‘ಇಸ್ರೇಲ್ ಅಂತರರಾಷ್ಟ್ರೀಯ ಕಾನೂನುಗಳನ್ನು ಉಲ್ಲಂಘಿಸುತ್ತಿದೆ. ಇರಾನ್ ಕೂಡ ಅಕ್ರಮ ರೀತಿಯಲ್ಲಿ ಪ್ರತ್ಯುತ್ತರ ನೀಡುತ್ತಿದೆ. ಗಾಜಾದಲ್ಲಿ ನರಮೇಧ ನಡೆಸಲಾಗುತ್ತಿದೆ. ಹಾಗಿದ್ದರೂ ಶಿಕ್ಷೆಯಿಂದ ಈ ದೇಶ ತಪ್ಪಿಸಿಕೊಳ್ಳುತ್ತಿದೆ. ಇದನ್ನು ನಮ್ಮ ದೇಶ ವಿರೋಧಿಸುತ್ತದೆ’ ಎಂದರು.

ಮೋದಿಗೆ ಕರೆ ಮಾಡಿದ ಟ್ರಂಪ್

ಒಂದನೇ ಪುಟದಿಂದ...

‘ಪಶ್ಚಿಮ ಏಷ್ಯಾದ ಪರಿಸ್ಥಿತಿಯ ಬಗ್ಗೆ ಚರ್ಚಿಸಿದ್ದೇವೆ. ಹೊರ್ಮುಜ್ ಜಲಸಂಧಿಯನ್ನು ಮುಕ್ತ ಮತ್ತು ಸುರಕ್ಷಿತವಾಗಿರಿಸುವ ಮಹತ್ವವನ್ನು ಒತ್ತಿಹೇಳಿದ್ದೇವೆ’ ಎಂದಿದ್ದಾರೆ.

‘ಉಭಯ ನಾಯಕರು ಸುಮಾರು 40 ನಿಮಿಷ ಮಾತುಕತೆ ನಡೆಸಿದ್ದು, ದ್ವಿಪಕ್ಷೀಯ ಸಹಕಾರದ ಬಗ್ಗೆ ಚರ್ಚಿಸಿದ್ದಾರೆ. ಮುಂದಿನ ದಿನಗಳಲ್ಲಿ ಇಂಧನ ಸೇರಿದಂತೆ ಕೆಲವು ಕ್ಷೇತ್ರಗಳಲ್ಲಿ ಎರಡೂ ದೇಶಗಳ ನಡುವೆ ಮಹತ್ವದ ಒಪ್ಪಂದಗಳನ್ನು ನಿರೀಕ್ಷಿಸಲಾಗಿದೆ’ ಎಂದು ಭಾರತದಲ್ಲಿರುವ ಅಮೆರಿಕದ ರಾಯಭಾರಿ ಸೆರ್ಗಿಯೊ ಗೋರ್ ಹೇಳಿದ್ದಾರೆ.

ಟ್ರಂಪ್ ಹಾಗೂ ಮೋದಿ ಈ ವರ್ಷ ನಡೆಸಿರುವ ಮೂರನೇ ದೂರವಾಣಿ ಸಂಭಾಷಣೆ ಇದಾಗಿದೆ. ಇದಕ್ಕೂ ಮುನ್ನ ವ್ಯಾಪಾರ ಒಪ್ಪಂದದಲ್ಲಿನ ಪ್ರಗತಿಯನ್ನು ಘೋಷಿಸಲು ಫೆಬ್ರುವರಿ 2ರಂದು ಹಾಗೂ ಪಶ್ಚಿಮ ಏಷ್ಯಾದ ಪರಿಸ್ಥಿತಿಯನ್ನು ಚರ್ಚಿಸಲು ಮಾರ್ಚ್ 24ರಂದು ಸಂಭಾಷಣೆ ನಡೆಸಿದ್ದರು.

‘ನಾವೆಲ್ಲರೂ ನಿಮ್ಮನ್ನು ಪ್ರೀತಿಸುತ್ತೇವೆ ಎಂಬುದನ್ನು ನಿಮಗೆ ತಿಳಿಸಲು ಬಯಸುತ್ತೇನೆ’ ಎಂದು ಟ್ರಂಪ್ ಅವರು ಸಂಭಾಷಣೆಯ ಕೊನೆಯಲ್ಲಿ ಪ್ರಧಾನಿಗೆ ಹೇಳಿರುವುದಾಗಿ ಗೋರ್ ತಿಳಿಸಿದ್ದಾರೆ.

ಸಿದ್ದರಾಮಯ್ಯ ಭೇಟಿಯಾದ ಜಮೀರ್

ಬೆಂಗಳೂರು: ಕೆಪಿಸಿಸಿ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಸ್ಥಾನಕ್ಕೆ ಅಬ್ದುಲ್ ಜಬ್ಬಾರ್ ರಾಜೀನಾಮೆ ಮತ್ತು ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ಹುದ್ದೆಯಿಂದ ನಸೀರ್ ಅಹಮದ್ ವಜಾಗೊಂಡ ಬೆನ್ನಲ್ಲೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಸಚಿವ ಜಮೀರ್ ಅಹಮದ್ ಖಾನ್ ಭೇಟಿ ಮಾಡಿ ಚರ್ಚೆ ನಡೆಸಿದ್ದಾರೆ.

ಮುಖ್ಯಮಂತ್ರಿ ಅವರನ್ನು ಕಾವೇರಿ ನಿವಾಸದಲ್ಲಿ ಮಂಗಳವಾರ ರಾತ್ರಿ ಭೇಟಿ ಮಾಡಿದ ಜಮೀರ್, ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಉಪ ಚುನಾವಣೆಯ ವೇಳೆ ನಡೆದಿದ್ದ ರಾಜಕೀಯ ಬೆಳವಣಿಗೆಗಳ ಕುರಿತು ಚರ್ಚೆ ನಡೆಸಿದ್ದಾರೆ ಎಂದು ಗೊತ್ತಾಗಿದೆ.

ದಾವಣಗೆರೆ ಉಪ ಚುನಾವಣೆ ಬಳಿಕ ನಡೆಯುತ್ತಿರುವ ಪಕ್ಷದ ಆಂತರಿಕ ವಿದ್ಯಮಾನಗಳನ್ನು ಉಲ್ಲೇಖಿಸಿದ ಸಿದ್ದರಾಮಯ್ಯ ಅವರು, ಹೈಕಮಾಂಡ್ ಕೆಂಗಣ್ಣಿನ ಕುರಿತು ಎಚ್ಚರಿಕೆ ನೀಡಿದ್ದಾರೆ ಎಂದು ತಿಳಿದುಬಂದಿದೆ. ಇದಕ್ಕೆ ಪ್ರತಿಕ್ರಿಯಿಸಿರುವ ಜಮೀರ್, ‘ನಾನು ಪಕ್ಷದ ವಿರುದ್ಧ ಯಾವುದೇ ಕೆಲಸ ಮಾಡಿಲ್ಲ. ಕೇವಲ ಸಮುದಾಯಕ್ಕೆ ಟಿಕೆಟ್ ನೀಡುವಂತೆ ವಿನಂತಿಸಿದ್ದೆ. ನಿಮ್ಮ ಸೂಚನೆಯಂತೆ ದಾವಣಗೆರೆಯಲ್ಲಿ ಸುದ್ದಿಗೋಷ್ಠಿ ನಡೆಸಿ ಅಭ್ಯರ್ಥಿ ಪರ ಕೆಲಸ ಮಾಡಲು ಸೂಚಿಸಿದ್ದೇನೆ’ ಎಂದು ಸಮರ್ಥಿಸಿಕೊಂಡಿದ್ದಾರೆ ಎಂದೂ ಗೊತ್ತಾಗಿದೆ.

ದಾವಣಗೆರೆ ದಕ್ಷಿಣ ಕ್ಷೇತ್ರದ ಟಿಕೆಟ್ ಅನ್ನು ಮುಸ್ಲಿಂ ಸಮುದಾಯಕ್ಕೆ ನೀಡದ ಕಾರಣಕ್ಕೆ ಜಬ್ಬಾರ್, ನಸೀರ್ ಮತ್ತು ಜಮೀರ್ ಅವರು ಚುನಾವಣಾ ಪ್ರಚಾರಕ್ಕೆ ತೆರಳದೆ ದೂರ ಉಳಿದಿದ್ದರು. ಈ ಕುರಿತು ಮತ್ತು ಪಕ್ಷ ವಿರೋಧಿ ಚಟುವಟಿಕೆ ಬಗ್ಗೆ ಎಐಸಿಸಿ ಉಸ್ತುವಾರಿ ಕಾರ್ಯದರ್ಶಿ ಅಭಿಷೇಕ್ ದತ್ತ ಅವರು ಹೈಕಮಾಂಡ್‌ಗೆ ವರದಿ ನೀಡಿದ್ದರು.

ಸಿ.ಎಂ ತೀರ್ಮಾನ– ಡಿಕೆಶಿ

‘ತಮ್ಮದೇ ಮೂಲಗಳಿಂದ ಮಾಹಿತಿ ಪಡೆದಿರುವ ಮುಖ್ಯಮಂತ್ರಿಯವರು, ಪಕ್ಷದ ಹಿತದೃಷ್ಟಿಯಿಂದ ನಸೀರ್ ಅಹಮದ್ ವಿಚಾರದಲ್ಲಿ ತೀರ್ಮಾನ ತೆಗೆದುಕೊಂಡಿದ್ದಾರೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರಕ್ಕೆ ತೆರಳಿ ಬಂಡಾಯ ಅಭ್ಯರ್ಥಿ ಹಿಂದೆ ಸರಿಯುವಂತೆ ಮಾಡಲು ಪಕ್ಷವು ನಸೀರ್ ಅವರಿಗೆ ಸೂಚಿಸಿತ್ತು. ಆದರೆ, ಅವರು ಆ ಜವಾಬ್ದಾರಿ ನಿಭಾಯಿಸಲು ವಿಫಲರಾಗಿದ್ದಾರೆ. ಅಲ್ಲಿ ಏನಾಗಿದೆ ಎಂದು ನನಗೆ ವರದಿ ಬರಬೇಕಿದೆ’ ಎಂದರು.

‘ಪಕ್ಷ ವಿರೋಧಿ ಚಟುವಟಿಕೆ ಮಾಡುವವರಿಗೆ ಇದು ಸಂದೇಶವೇ’ ಎಂಬ ಪ್ರಶ್ನೆಗೆ, ‘ಯಾವುದೇ ಪಕ್ಷವಾದರೂ ಶಿಸ್ತು ಬಹಳ ಮುಖ್ಯ. ಎಲ್ಲರನ್ನು ವಿಶ್ವಾಸಕ್ಕೆ ಪಡೆದುಕೊಂಡೇ ಅಭ್ಯರ್ಥಿ ಆಯ್ಕೆ ಮಾಡಿದ್ದೆವು. ನಂತರ ನಾವು ಎಲ್ಲ ನಾಯಕರೊಂದಿಗೆ ನಿತ್ಯ ಸಂಪರ್ಕದಲ್ಲಿದ್ದೆವು. ನಮ್ಮ ನಾಯಕರ ವರದಿಯ ಆಧಾರದಲ್ಲಿ ಮುಖ್ಯಮಂತ್ರಿ ತೀರ್ಮಾನ ತೆಗೆದುಕೊಂಡಿದ್ದಾರೆ’ ಎಂದರು.

‘ಸಚಿವ ಜಮೀರ್ ವಿರುದ್ಧವೂ ಶಿಸ್ತು ಕ್ರಮ ತೆಗೆದುಕೊಳ್ಳಲಾಗುವುದೇ’ ಎಂಬ ಪ್ರಶ್ನೆಗೆ, ‘ಆ ಬಗ್ಗೆ ನನಗೆ ಮಾಹಿತಿ ಇಲ್ಲ’ ಎಂದರು.

ರಾಜಕೀಯ ಕಾರ್ಯದರ್ಶಿ ನಸೀರ್ ವಜಾ

ಒಂದನೇ ಪುಟದಿಂದ...

ಈ ಬಗ್ಗೆ ಭಾನುವಾರ ಪ್ರತಿಕ್ರಿಯಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ, ‘ನಸೀರ್ ರಾಜೀನಾಮೆ ನೀಡಬಹುದೆಂದು ಅಂದುಕೊಂಡಿದ್ದೇನೆ’ ಎಂದಿದ್ದರು.

ನಸೀರ್ ಅಹಮದ್‌ಗೆ ರಾಜೀನಾಮೆ ನೀಡುವಂತೆ 2–3 ದಿನಗಳ ಹಿಂದೆಯೇ ಹೈಕಮಾಂಡ್ ನಾಯಕರು ಹಾಗೂ ಸಿದ್ದರಾಮಯ್ಯ ಸೂಚಿಸಿದ್ದರು. ಆದರೆ, ಅವರು ರಾಜೀನಾಮೆ ನೀಡಿರಲಿಲ್ಲ.

ಈ ಮಧ್ಯೆ, ಕಾಂಗ್ರೆಸ್‌ನ ಅಲ್ಪಸಂಖ್ಯಾತ ನಾಯಕರಾದ ಸಲೀಂ ಅಹಮದ್ ಮತ್ತು ರಿಜ್ವಾನ್ ಅರ್ಷದ್, ‘ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯನ್ನು ಸೋಲಿಸಲು ಕೆಲವು ನಾಯಕರ ಗುಂಪು ಸಂಚು ರೂಪಿಸಿತ್ತು’ ಎಂದು ಆರೋಪಿಸಿದ್ದರು. ಈ ಬಗ್ಗೆ ಪಕ್ಷದ ವರಿಷ್ಠರಿಗೆ ಚುನಾವಣಾ ಉಸ್ತುವಾರಿ ವರದಿ ನೀಡಿದ್ದರು.

ಮುಂದಿನ ಗುರಿ ಜಮೀರ್?: ಪ್ರಚಾರದಲ್ಲಿ ಭಾಗಿಯಾಗದೆ ಅಸಹಕಾರ ತೋರಿಸಿರುವ ಜಮೀರ್ ಅಹಮದ್ ಖಾನ್ ವಿರುದ್ಧವೂ ಹೈಕಮಾಂಡ್‌ಗೆ ವರದಿ ಸಲ್ಲಿಸಲಾಗಿದ್ದು, ಅವರ ವಿರುದ್ಧವೂ ಕ್ರಮ ಕೈಗೊಳ್ಳಲಾಗುತ್ತದೆಯೇ ಎಂಬ ಪ್ರಶ್ನೆ ಮೂಡಿದೆ. ಉಪ ಚುನಾವಣೆಯಲ್ಲಿ ಪಕ್ಷ ವಿರೋಧಿ ಚಟುವಟಿಕೆ ನಡೆದಿದೆ ಎಂಬ ವರದಿಯನ್ನು ಗಂಭೀರವಾಗಿ ಪರಿಗಣಿಸಿರುವ ಕಾಂಗ್ರೆಸ್, ಇದಕ್ಕೆ ಕಾರಣರಾದವರನ್ನು ಪಟ್ಟಿ ಮಾಡುತ್ತಿದೆ ಎಂದೂ ಗೊತ್ತಾಗಿದೆ.

ನಾನು ‘ಸುಪ್ರೀಂ’ ನಾಯಕ ಅಲ್ಲ: ಜಮೀರ್

‘ನಾನು ಮುಸ್ಲಿಂ ಸಮುದಾಯದ ಸುಪ್ರೀಂ ನಾಯಕ ಅಲ್ಲ. ದಾವಣಗೆರೆಯಲ್ಲಿ ಮುಸ್ಲಿಮರಿಗೆ ಟಿಕೆಟ್ ಕೇಳಿದ್ದರಲ್ಲಿ ಮುಚ್ಚುಮರೆ ಏನೂ ಇಲ್ಲ’ ಎಂದು ಸಚಿವ ಜಮೀರ್ ಅಹಮದ್ ಖಾನ್ ಹೇಳಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, ‘ನಾನು ನಾಯಕ ಆಗಲು ಹೊರಟಿಲ್ಲ. ಮುಂದೆಯೂ ನಾಯಕ ಆಗಲು ಹೋಗುವುದಿಲ್ಲ. ನಾನೊಬ್ಬ ಕಾಂಗ್ರೆಸ್ ಪಕ್ಷದ ಕಾರ್ಯಕರ್ತ. ಸೇವಕ, ಸೇವೆ ಮಾಡುತ್ತಿದ್ದೇನೆ ಅಷ್ಟೇ’ ಎಂದರು.

‘ಶಿಗ್ಗಾವಿಯಲ್ಲಿ ಕೇಳಿ ಟಿಕೆಟ್ ತೆಗೆದುಕೊಂಡಿದ್ದೆವು. ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲೂ ಸಮುದಾಯದ ಯಾರಿಗಾದರೂ ಟಿಕೆಟ್ ಕೊಡಿ, ನಾವು ಗೆಲ್ಲಿಸಿಕೊಂಡು ಬರುತ್ತೇವೆಂದು ಕೆಪಿಸಿಸಿ ಸಭೆಯಲ್ಲಿಯೇ ಎಲ್ಲರೆದುರು ಹೇಳಿದ್ದೇನೆ’ ಎಂದು ಹೇಳಿದರು.

‘ಜಬ್ಬಾರ್ ಅವರು ಮೊದಲು ಟಿಕೆಟ್ ಕೇಳಿದ್ದು ನಿಜ. ಆದರೆ, ತೀರ್ಮಾನ ಮಾಡಬೇಕಾಗಿರುವುದು ಹೈಕಮಾಂಡ್. ಜಬ್ಬಾರ್‌ಗೆ ಕೊಡಲು ಆಗುವುದಿಲ್ಲವೆಂದು ಹೈಕಮಾಂಡ್ ಚಿಂತನೆ ಮಾಡುತ್ತಿದೆ ಅಂದಾಗ ಯಾರಿಗಾದರೂ ಕೊಡಿ ಅಂದಿದ್ದೆ. ಗೆಲ್ಲಿಸಿಕೊಂಡು ಬರಲಿಲ್ಲವೆಂದರೆ ರಾಜೀನಾಮೆ ಕೊಡುತ್ತೇನೆ ಎಂದೂ ಹೇಳಿದ್ದೆ’ ಎಂದರು.

ದಾವಣಗೆರೆಯಲ್ಲಿ ಪಕ್ಷ ವಿರೋಧಿ ಚಟುವಟಿಕೆ ಆರೋಪದ ಕುರಿತು ಪ್ರತಿಕ್ರಿಯಿಸಿದ ಜಮೀರ್, ‘ನಮ್ಮ ಪಕ್ಷದ ಮನೆಗೆ ಬಂದಿದ್ದ ಸಚಿವ ಮಲ್ಲಿಕಾರ್ಜುನ್ ನಮ್ಮ ಮನೆಗೆ ಬಂದಿಲ್ಲವೆಂದು ಜಬ್ಬಾರ್ ಹೇಳಿದರು. ನಾನು ಸ್ಥಳೀಯ ನಾಯಕ, ಅವರ ಜೊತೆಯಲ್ಲೇ ಇದ್ದವನು. ನಮ್ಮ ಮನೆಗೆ ಕನಿಷ್ಠ ಬರಬೇಕಿತ್ತಲ್ಲವೇ ಎಂದೂ ಜಬ್ಬಾರ್ ಬೇಜಾರಾಗಿದ್ದರು. ಅಲ್ಲದೆ, ಅವರ ಆರೋಗ್ಯ ಕೂಡ ಚೆನ್ನಾಗಿರಲಿಲ್ಲವೆಂದು ಮಾಧ್ಯಮಕ್ಕೂ ಹೇಳಿದ್ದಾರೆ. ನಾನು ಕೂಡ ಜಬ್ಬಾರ್ ಜೊತೆ ಮಾತನಾಡಿ, ಪ್ರಚಾರದಲ್ಲಿ ತೊಡಗಿಸಿಕೊಳ್ಳುವಂತೆ ಹೇಳಿದ್ದೆ’ ಎಂದು ತಿಳಿಸಿದರು.

‘ನಸೀರ್ ಅಹಮದ್ ಅವರಿಗೆ ಬಾಗಲಕೋಟೆ ಕ್ಷೇತ್ರದ ಜವಾಬ್ದಾರಿ ಕೊಟ್ಟಿದ್ದರು. ದಾವಣಗೆರೆಗೆ ಬಂದು ಹೋಗುತ್ತೇನೆಂದು ಮುಖ್ಯಮಂತ್ರಿಗೆ ನಸೀರ್ ಹೇಳಿದ್ದರು. ಅಲ್ಪಸಂಖ್ಯಾತರೆಲ್ಲರೂ ಒಗ್ಗಟ್ಟಾಗಿ ಇದ್ದೇವೆ. ಯಾರು ಷಡ್ಯಂತ್ರ ಮಾಡಿದ್ದಾರೆ, ಯಾರು ಬೆನ್ನಿಗೆ ಚೂರಿ ಹಾಕಿದ್ದಾರೆಂದು ಹೆಸರು ಹೇಳಲಿ. ಹೈಕಮಾಂಡ್‌ನಿಂದ ಸ್ಟಾರ್ ಪ್ರಚಾರಕನಾಗಿ ನನ್ನನ್ನು ಕೇರಳಕ್ಕೆ ಕಳುಹಿಸಿದ್ದರು. ಆದರೂ ಮುಖ್ಯಮಂತ್ರಿ ಕರೆದಿದ್ದಕ್ಕೆ ನಾನು ಒಂದು ದಿನ ದಾವಣಗೆರೆಗೆ ಬಂದಿದ್ದೇನೆ. ಮಲ್ಲಿಕಾರ್ಜುನ್ ಮನೆಯಲ್ಲಿ ಊಟ ಮಾಡಿದ್ದೇನೆ. ಸುದ್ದಿಗೋಷ್ಠಿ ಮಾಡಿದ್ದೇನೆ. ಟಿಕೆಟ್ ಕೇಳಿದರೂ ಕೊಟ್ಟಿಲ್ಲ ಎಂಬ ಅಸಮಾಧಾನ ಸ್ಥಳೀಯ ಮುಸ್ಲಿಮರಲ್ಲಿ ಇದ್ದಿದ್ದು ನಿಜ. ಅದು ಸರಿ ಹೋಗಿ, ಪಕ್ಷದ ಅಭ್ಯರ್ಥಿಯಾಗಿ ಸಮರ್ಥ ಅವರಿಗೆ ಅವಕಾಶ ಕೊಟ್ಟರು. ಅಲ್ಲಿ ನಾವು ಗೆದ್ದೇ ಗೆಲ್ಲುತ್ತೇವೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸಚಿವ ಸ್ಥಾನಕ್ಕಾಗಿ ಆರೋಪ ವಿಚಾರವಾಗಿ ಪ್ರತಿಕ್ರಿಯಿಸಿದ ಜಮೀರ್, ‘ಎಲ್ಲರಿಗೂ ಸಚಿವರಾಗುವ ಆಸೆ ಇರುವುದು ಸಹಜ. ಎಲ್ಲರೂ ಪ್ರಯತ್ನ ಮಾಡುತ್ತಾರೆ. ನನಗೂ ಸಚಿವ ಆಗಬೇಕೆಂದು ಆಸೆ ಇತ್ತು. ಆಗಿದ್ದೇನೆ’ ಎಂದರು.

‘ಜಮೀರ್ ವಿರುದ್ಧ ಷಡ್ಯಂತ್ರ ನಡೆಯುತ್ತಿದೆಯೇ’ ಎಂಬ ಪ್ರಶ್ನೆಗೆ, ‘ರಾಜಕೀಯದಲ್ಲಿ ಇದೆಲ್ಲ ಸಹಜ. ಅವರವರ ಪ್ರಯತ್ನ ಅವರು ಮಾಡುತ್ತಾರೆ. ಅವರು ಸಚಿವರಾದರೆ ನನಗೂ ಸಂತೋಷ’ ಎಂದು ಯಾರ ಹೆಸರೂ ಹೇಳದೆ ಜಮೀರ್ ಪ್ರತಿಕ್ರಿಯಿಸಿದರು.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS, ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Teachers/ Professors

SRS PRAJNA VIDYA SCHOOL (KA 409)
Coordinator
Educators for
English | Physics | Chemistry | Biology Mathematics | Computer Science | Home Science | Physical Education
WE'RE HIRING for PUC-ISC JOIN US!
WHO CAN APPLY?
Minimum 2 years of experience in teaching PUC-ISC classes.
Candidates with NEET- CET- JEE expertise will be given preference.
Remuneration: Best as per corpoate standards-negotiable for deserving candidates
7483926303 9448301389 srsprajna2016@gmail.com
Shankar Mutt Road, K.R. Puram, Hassan, Karnataka - 573201

ಸಮರ್ಥನಂ ಬುದ್ಧಿ ವಿಕಲಚೇತನ ಮಕ್ಕಳ ಶಾಲೆ
Samarthanam Trust for the Disabled
ಶಿಕ್ಷಕರ ನೇಮಕಾತಿ
ಅವಶ್ಯಕತೆ : ಭಾರತದ ಪುನರ್ವಸತಿ ಸಮಿತಿ (RCI) ಪ್ರಮಾಣಿತ ವಿಶೇಷ ಶಿಕ್ಷಕರು
ಅರ್ಹತೆ: RCI ನಿಯಮಗಳ ಪ್ರಕಾರ D.Ed in ವಿಶೇಷ ಶಿಕ್ಷಣ (IDD)
ಹುದ್ದೆ : ಪೂರ್ಣಕಾಲಿಕ ಶಿಕ್ಷಕರು
ಖಾಲಿ ಹುದ್ದೆಗಳು:
ಎಚ್. ಎಸ್. ಆರ್. ಲೇಔಟ್, ಬೆಂಗಳೂರು – 2
ಮೈಸೂರು – 2, ಬೆಳಗಾವಿ – 3, ಧಾರವಾಡ – 2
ಸಂಪರ್ಕ (ಶಿಕ್ಷಕರ ನೇಮಕಾತಿಗಾಗಿ):
ಡಾ. ಗೀತಾ ಕೆ (ಕಾರ್ಯಕ್ರಮ ವ್ಯವಸ್ಥಾಪಕಿ): 9480812132
ಶ್ರೀ ಮಲ್ಲಿಕಾರ್ಜುನಗೌಡ ಎನ್. (H.R. ಮ್ಯಾನೇಜರ್)– 9449864783

ವಾಹನ

Four Wheelers Selling

Others

BHARAT BENZ 40 seat 2016 Rs 8 lakh, TT force 26 seat 2016 Rs 7.5 lakh, TT 21 seat 2017 Rs 7.5 Lakh and Ambulance 219 Rs 8 lakh sale on urgent basis. Location Navi Mumbai. Contract : 8976924684.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ಉದ್ಯೋಗಕ್ಕಾಗಿ
BOOK YOUR JOB ADS IN PRAJAVANI ALL KARNATAKA
@500/-* PER SQCM
SINGLE / DOUBLE / MULTIPLE COLUMN
www.dhclassifieds.com
BOOK NOW
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
9845114560
9886213331
*Conditions apply

ಪ್ರವಾಸ

Travel

11.06.2026 13/17ದಿನಗಳು ಕೇದಾರನಾಥ, ಬದರಿನಾಥ್, ಯಮುನೋತ್ರಿ, ಗಂಗೋತ್ರಿ (Subsidy_20000) 38000/, 12.07.2026 13/17ದಿನಗಳು ಅಮರನಾಥ್ ವೈಷ್ಣೋದೇವಿ ಕಾಶ್ಮೀರ್ ಅಮೃತಸರ್ ಆಗ್ರ ದೆಹಲಿ 38000/ 11.05.2026 6ದಿನ ಕಾಶಿ, ಅಯೋಧ್ಯ ಪ್ರಯಾಗರಾಜ್ ''ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್'' 9739847429/ 9845560219

24-4-2026 ಆಗ್ರಾ, ದೆಹಲಿ, ಅಮೃತ್ ಸರ್, ವೈಷ್ಣೋದೇವಿ, ಹರಿದ್ವಾರ. 2-5-2026 ಅಯೋಧ್ಯೆ, ಪ್ರಯಾಗ್‌ರಾಜ್, ಕಾಶಿ, ಗಯಾ. 16-5-2026 ಯಮುನೋತ್ರಿ, ಗಂಗೋತ್ರಿ, ಕೇದಾರನಾಥ್, ಬದ್ರಿನಾಥ್. 29-6-2026 ಅಮರನಾಥ ಯಾತ್ರಾ. ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ) 9845035349, 9482435755

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

KD ಚಿತ್ರಕ್ಕೂ ಸೆನ್ಸಾರ್ ಸಮಸ್ಯೆ

'ಕೆವಿಎನ್ ಪ್ರೊಡಕ್ಷನ್ಸ್' ನಿರ್ಮಾಣ ಮಾಡಿರುವ 'KD' ಚಿತ್ರಕ್ಕೂ ಸೆನ್ಸಾರ್ ಮಂಡಳಿಯಿಂದ ಸಮಸ್ಯೆ ಎದುರಾಗಿದೆ ಎಂದು ಚಿತ್ರತಂಡ ಹೇಳಿದೆ. ಇದೇ ನಿರ್ಮಾಣ ಸಂಸ್ಥೆಯಡಿಯಲ್ಲಿ ದಳಪತಿ ವಿಜಯ್ ನಟಿಸಿರುವ ತಮಿಳು ಸಿನಿಮಾ 'ಜನ ನಾಯಗನ್' ಕೂಡ ಸೆನ್ಸಾರ್ ಸಮಸ್ಯೆ ಎದುರಿಸುತ್ತಿರುವುದು ಗೊತ್ತೇ ಇದೆ.

ಧ್ರುವ ಸರ್ಜಾ ನಟಿಸಿ, ಜೋಗಿ ಪ್ರೇಮ್ ನಿರ್ದೇಶಿಸಿರುವ 'KD' ಚಿತ್ರ 'ಸರ್ಸೆ ಸೆರಗ ಸರ್ಸೆ' ಹಾಡಿನಿಂದ ರಾಷ್ಟ್ರ ಮಟ್ಟದಲ್ಲಿ ಸುದ್ದಿಯಾಗಿತ್ತು. ಸಂಸತ್ತಿನಲ್ಲಿಯೂ ಹಾಡಿನ ಅಶ್ಲೀಲ ಸಾಹಿತ್ಯ ಕುರಿತು ಚರ್ಚೆಯಾಗಿತ್ತು. ಹೀಗಾಗಿ ಚಿತ್ರದ ಮೇಲೆ ಕೇಂದ್ರ ಸೆನ್ಸಾರ್ ಮಂಡಳಿಯೇ ನಿಗಾವಹಿಸಲು ಮುಂದಾಗಿರುವುದು ಚಿತ್ರತಂಡದ ಆಕ್ರೋಶಕ್ಕೆ ಕಾರಣವಾಗಿದೆ.

'ನಮ್ಮ ಸಿನಿಮಾವನ್ನು ಈಗಾಗಲೇ ಪ್ರಾದೇಶಿಕ ಸೆನ್ಸಾರ್ ಮಂಡಳಿ ಸದಸ್ಯರು ವೀಕ್ಷಿಸಿದ್ದಾರೆ. ಈ ಸಿನಿಮಾದಲ್ಲಿ ಸಾಕಷ್ಟು ರಕ್ತಪಾತ ಇರುವುದರಿಂದ 'ಎ' ಪ್ರಮಾಣಪತ್ರ ನೀಡಲು ಸೆನ್ಸಾರ್ ಮಂಡಳಿ ಸಿದ್ಧವಾಗಿತ್ತು. ಹಾಡಿನ ಸಾಹಿತ್ಯದಲ್ಲಿ ಕೆಲವು ಸಾಲುಗಳನ್ನು ಬದಲಾಯಿಸುವಂತೆ ಸೂಚಿಸಿತ್ತು. ಅದನ್ನು ಚಿತ್ರತಂಡ ಕೂಡ ಒಪ್ಪಿಕೊಂಡಿತ್ತು. ಆದರೆ ಅಂತಿಮವಾಗಿ ಈ ಚಿತ್ರಕ್ಕೆ ಪ್ರಮಾಣಪತ್ರ ನೀಡಿಲ್ಲ. ಬದಲಾಗಿ ಮುಂಬೈನಲ್ಲಿರುವ ಕೇಂದ್ರ ಸೆನ್ಸಾರ್ ಮಂಡಳಿ ಹಾಗೂ ಪರಿಷ್ಕರಣೆ ಸಮಿತಿಗೆ ಸಿನಿಮಾವನ್ನು ಕಳುಹಿಸಲಾಗಿದೆ. ನಿರ್ದೇಶಕರಿಗಾಗಲಿ, ನಿರ್ಮಾಣ ಸಂಸ್ಥೆಗಾಗಲಿ ಮಾಹಿತಿ ನೀಡದೆ ಪರಿಷ್ಕರಣೆ ಸಮಿತಿಗೆ ಕಳುಹಿಸುವ ಮೂಲಕ ಸೆನ್ಸಾರ್ ಮಂಡಳಿಯಿಂದ ನಿಯಮ ಉಲ್ಲಂಘನೆಯಾಗಿದೆ' ಎಂದು ಚಿತ್ರತಂಡ ಆರೋಪಿಸಿದೆ.

ಏ.30ರಂದು ಚಿತ್ರ ತೆರೆಗೆ ಬರಲಿದೆ ಎಂದು ಚಿತ್ರತಂಡ ಈ ಹಿಂದೆ ಘೋಷಿಸಿತ್ತು. 'ಚಿತ್ರ ಬಿಡುಗಡೆಯಲ್ಲಿ ಯಾವುದೇ ಬದಲಾವಣೆ ಇಲ್ಲ. ಅಷ್ಟರೊಳಗೆ ಸೆನ್ಸಾರ್ ಪ್ರಮಾಣ ಪತ್ರ ಸಿಗುತ್ತದೆ ಎಂಬ ನಂಬಿಕೆಯಿದೆ. ಸಿಗದಿದ್ದರೆ ಮುಂದಿನ ಕ್ರಮದ ಬಗ್ಗೆ ಯೋಚಿಸುತ್ತೇವೆ' ಎಂದಿದ್ದಾರೆ ನಿರ್ದೇಶಕ ಪ್ರೇಮ್.

ಅಶ್ಲೀಲ ಸಾಹಿತ್ಯ ವಿವಾದದಿಂದಾಗಿ 'ಸರ್ಸೆ ಸೆರಗ ಸರ್ಸೆ' ಹಾಡನ್ನು ಹಿಂದಿಯಲ್ಲಿ ಕೇಂದ್ರ ಸರ್ಕಾರ ರದ್ದುಪಡಿಸಿತ್ತು. 'ಉಳಿದ ಭಾಷೆಗಳಲ್ಲಿಯೂ ಚಿತ್ರತಂಡ ಹಾಡನ್ನು ಹಿಂಪಡೆದು ಸಾಹಿತ್ಯ ಬದಲಿಸಿದೆ. ಅದರ ಬಳಿಕವೇ ಸೆನ್ಸಾರ್‌ಗೆ ಅರ್ಜಿ ಹಾಕಲಾಗಿದೆ' ಎಂದು ನಿರ್ಮಾಣ ಸಂಸ್ಥೆ ತಿಳಿಸಿದೆ.

ಧುರಂದರ್ ₹1700 ಕೋಟಿ ಗಳಿಕೆ

ರಣವೀರ್ ಸಿಂಗ್ ಅಭಿನಯದ 'ಧುರಂದರ್- ದಿ ರಿವೇಂಜ್' ಚಿತ್ರ ತೆರೆಕಂಡು 26 ದಿನಗಳು ಕಳೆದಿವೆ. ಕೆಲ ಚಿತ್ರಮಂದಿರಗಳಲ್ಲಿ ಈಗಲೂ ಯಶಸ್ವಿ ಪ್ರದರ್ಶನ ಕಾಣುತ್ತಿದ್ದು, ಚಿತ್ರದ ಗಳಿಕೆ ₹1700 ಕೋಟಿ ದಾಟಿದೆ ಎಂದು ನಿರ್ಮಾಣ ಸಂಸ್ಥೆಯಾದ ಜಿಯೋ ಸ್ಟುಡಿಯೋಸ್ ತಿಳಿಸಿದೆ.

ಆದಿತ್ಯ ಧರ್ ನಿರ್ದೇಶನದ ಚಿತ್ರ ಪ್ರಾರಂಭದಿಂದಲೇ ಪ್ರೇಕ್ಷಕರನ್ನು ಸೆಳೆದಿತ್ತು. ಮೊದಲ ವಾರ ಟಿಕೆಟ್ ಸಿಗುವುದೇ ಕಷ್ಟ ಎಂಬ ಸ್ಥಿತಿ ಇತ್ತು. ಹೀಗಾಗಿ ಗಳಿಕೆ ₹2000 ಕೋಟಿ ದಾಟಬಹುದು ಎಂದು ಅಂದಾಜಿಸಲಾಗಿತ್ತು. ಚಿತ್ರ ಮೊದಲ ವಾರದಲ್ಲಿ ₹650 ಕೋಟಿಗೂ ಅಧಿಕ ಗಳಿಕೆ ಕಂಡಿತ್ತು. ಆದರೆ ಎರಡನೇ ವಾರದಲ್ಲಿ ಗಳಿಕೆ ₹260 ಕೋಟಿಗೆ ಕುಸಿಯಿತು. ನಂತರದ ವಾರಗಳಲ್ಲಿಯೂ ಗಳಿಕೆ ಇನ್ನಷ್ಟು ಇಳಿಮುಖವಾಯಿತು.

₹1700 ಕೋಟಿಯಲ್ಲಿ ಭಾರತದಿಂದಲೇ ₹1100 ಕೋಟಿ ಗಳಿಕೆಯಾಗಿದೆ. ದೇಶಭಕ್ತಿ, ಪಾಕಿಸ್ತಾನದ ಭೂಗತ ಜಗತ್ತು, ಬೇಹುಗಾರಿಕೆ ಕಥೆಯನ್ನು ಹೊಂದಿರುವ ಚಿತ್ರ ಎಲ್ಲ ನಕಾರಾತ್ಮಕ ವಿಮರ್ಶೆಗಳನ್ನು ಮೀರಿ ಗಳಿಕೆಯಲ್ಲಿ ಯಶಸ್ಸು ಸಾಧಿಸಿದೆ. ತಾಂತ್ರಿಕವಾಗಿಯೂ ಚಿತ್ರರಂಗದ ಹಲವು ತಂತ್ರಜ್ಞರಿಂದ ಈ ಚಿತ್ರಕ್ಕೆ ಮೆಚ್ಚುಗೆ ವ್ಯಕ್ತವಾಗಿದೆ.

ಸಂಜಯ್ ದತ್, ಅಕ್ಷಯ್ ಖನ್ನಾ, ಅರ್ಜುನ್ ರಾಂಪಾಲ್, ಆರ್. ಮಾಧವನ್ ಮತ್ತು ಸಾರಾ ಅರ್ಜುನ್ ಚಿತ್ರದಲ್ಲಿದ್ದಾರೆ. ಆದಿತ್ಯ ಧರ್, ಲೋಕೇಶ್ ಧರ್ ಹಾಗೂ ಬಿ62 ಸ್ಟುಡಿಯೋಸ್ ಕೂಡ ನಿರ್ಮಾಣದಲ್ಲಿ ಕೈಜೋಡಿಸಿದೆ.

4ನೇ ಆವೃತ್ತಿ

ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

ಸಿನಿ ಸಮ್ಮಾನ: ಅರ್ಜಿ ಸಲ್ಲಿಕೆಗೆ

ಇಂದು ಕೊನೆ

'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ'- ಇದು ಚಂದನವನದ ಪ್ರತಿಭೆಗಳನ್ನು ಗುರುತಿಸುವ ಹಾಗೂ ನಮ್ಮ ಶ್ರೀಮಂತ ಸಿನಿಮಾ ಪರಂಪರೆಯನ್ನು ಆಚರಿಸುವ, ಸಂಭ್ರಮಿಸುವ, ಬೆಸೆಯುವ ವೇದಿಕೆ. ಇಂತಹ ವೇದಿಕೆ ಇದೀಗ ನಾಲ್ಕನೇ ಆವೃತ್ತಿಯನ್ನು ಆಯೋಜಿಸಲು ಸಜ್ಜಾಗುತ್ತಿದೆ.

ಅಸಾಧಾರಣ ಪ್ರತಿಭೆಗಳನ್ನು ಪ್ರಶಂಸಿಸಿ, ಕನ್ನಡ ಚಿತ್ರರಂಗದ ಬೆಳವಣಿಗೆಗೆ ಉತ್ತೇಜನ ನೀಡುತ್ತಾ ಕಳೆದ ಮೂರು ಆವೃತ್ತಿಗಳಲ್ಲಿ ಎಲ್ಲರೂ ಮೆಚ್ಚುವಂತಹ ವರ್ಣರಂಜಿತ, ಅದ್ದೂರಿ, ಅರ್ಥಗರ್ಭಿತ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ನಾಲ್ಕನೇ ಆವೃತ್ತಿಗೆ 2025ರಲ್ಲಿ ತೆರೆಕಂಡ ಸಿನಿಮಾಗಳನ್ನು ಪರಿಗಣಿಸಲಾಗುವುದು. ಇಲ್ಲಿ ನೀಡಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ಚಿತ್ರತಂಡಗಳು ನೋಂದಣಿ ಮಾಡಿಕೊಂಡು ಸಿನಿಮಾಗಳನ್ನು ಸಲ್ಲಿಸಬಹುದಾಗಿದೆ. ನೋಂದಣಿಗೆ ಇಂದು(ಏ.15) ಕೊನೆಯ ದಿನ. ಒಟ್ಟು 26 ವಿಭಾಗಗಳಲ್ಲಿ ಪ್ರಶಸ್ತಿಗಳು ಇರಲಿವೆ.

ಕ್ಯಾಂಡಿಡೇಟ್ಸ್ ಪ್ರಶಸ್ತಿ ಗೆದ್ದ ಸಿಂದರೋವ್

ವಿಶ್ವ ಚಾಂಪಿಯನ್ ಪಟ್ಟ: ಡಿ. ಗುಕೇಶ್‌ಗೆ ಎದುರಾಳಿ • ವರ್ಷದ ಕೊನೆಯಲ್ಲಿ ಸೆಣಸಾಟ

ಭಾರತದ ವೈಶಾಲಿ ರಮೇಶಬಾಬು ಹಾಗೂ ಉಜ್ಬೇಕಿಸ್ತಾನದ ಜಾವೊಖಿರ್ ಸಿಂದರೋವ್ — ಫಿಡೆ ಚಿತ್ರಗಳು

ಪಾಫೋಸ್ (ಸೈಪ್ರಸ್): ಇನ್ನೂ ಒಂದು ಸುತ್ತು ಉಳಿದಿರುವಂತೆ ಉಜ್ಬೇಕಿಸ್ತಾನದ ಆಟಗಾರ ಜಾವೊಖಿರ್ ಸಿಂದರೋವ್ ಅವರು ಮಂಗಳವಾರ ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿಯ ಪ್ರಶಸ್ತಿ ಗೆದ್ದುಕೊಂಡರು. ಆ ಮೂಲಕ ವಿಶ್ವ ಚಾಂಪಿಯನ್ ಗುಕೇಶ್ ಅವರಿಗೆ ಚಾಲೆಂಜರ್ ಆಗುವ ಅರ್ಹತೆ ಸಂಪಾದಿಸಿದರು.

ವಿಶ್ವ ಚೆಸ್ ಪಟ್ಟಕ್ಕೆ ಈ ವರ್ಷದ ಕೊನೆಯಲ್ಲಿ ಸೆಣಸಾಟ ನಡೆಯಲಿದೆ. ಇದರ ತಾಣ, ದಿನಾಂಕ ಅಂತಿಮಗೊಂಡಿಲ್ಲ. ಗುಕೇಶ್ 18ನೇ ವಯಸ್ಸಿನಲ್ಲಿ(2024ರ ಡಿಸೆಂಬರ್) ಅತಿ ಕಿರಿಯ ವಿಶ್ವ ಚಾಂಪಿಯನ್ ಆಗಿದ್ದರು.

ವಿಶ್ವಕಪ್ ಚಾಂಪಿಯನ್ ಸಹ ಆಗಿರುವ ಸಿಂದರೋವ್ 13ನೇ ಸುತ್ತಿನಲ್ಲಿ ನೆದರ್ಲೆಂಡ್ಸ್ ಅನಿಶ್ ಗಿರಿ ಅವರ ಜೊತೆ ಹೋರಾಟ ನಡೆಸಿ 58 ನಡೆಗಳಲ್ಲಿ ಡ್ರಾ ಮಾಡಿಕೊಂಡರು. 20 ವರ್ಷ ವಯಸ್ಸಿನ ಸಿಂದರೋವ್ ಈ ಟೂರ್ನಿಯಲ್ಲಿ ಅಮೋಘ ಪ್ರದರ್ಶನದೊಡನೆ ಅಜೇಯರಾಗಿ ಉಳಿದರು. ಅವರು 6 ಪಂದ್ಯ ಗೆದ್ದು, ಏಳು ಡ್ರಾ ಮಾಡಿಕೊಂಡು ಒಟ್ಟು 9.5 ಅಂಕ ಕಲೆಹಾಕಿದರೆ, ಎರಡನೇ ಸ್ಥಾನದಲ್ಲಿರುವ ಡಚ್ ಗ್ರ್ಯಾಂಡ್‌ಮಾಸ್ಟರ್ 7.5 ಅಂಕ ಸಂಗ್ರಹಿಸಿದ್ದಾರೆ.

ಅಮೆರಿಕದ ಫ್ಯಾಬಿಯಾನೊ ಕರುವಾನ (6.5) ಮತ್ತು ಭಾರತದ ಪ್ರಜ್ಞಾನಂದ (5.5) ನಡುವಣ ಪಂದ್ಯ 43 ನಡೆಗಳಲ್ಲಿ ಡ್ರಾ ಆಯಿತು. ಪ್ರಜ್ಞಾನಂದ ಕೊನೆಯ ಸುತ್ತಿನಲ್ಲಿ ಅಮೆರಿಕದ ಹಿಕಾರು ನಕಾಮುರ ಅವರನ್ನು ಎದುರಿಸಲಿದ್ದಾರೆ.

ಓಪನ್ ವಿಭಾಗದ ನಾಲ್ಕೂ ಪಂದ್ಯಗಳು ಡ್ರಾ ಆದವು. ಚೀನಾದ ವೀ ಯಿ (6.5) ಮತ್ತು ರಷ್ಯಾದ ಆ್ಯಂಡ್ರಿ ಇಸಿಪೆಂಕೊ (4.5) ನಡುವಣ, ಅಮೆರಿಕದ ಹಿಕಾರು ನಕಾಮುರ (6) ಮತ್ತು ಜರ್ಮನಿಯ ಮಥಾಯಸ್ ಬ್ಲೂಬಾಮ್ (6) ನಡುವಣ ಪಂದ್ಯಗಳೂ ಡ್ರಾ ಆದವು.

ಪ್ರಶಸ್ತಿ ಸನಿಹ ವೈಶಾಲಿ

ಮಹಿಳೆಯರ ವಿಭಾಗದಲ್ಲಿ ಭಾರತದ ವೈಶಾಲಿ ರಮೇಶಬಾಬು ಮತ್ತು ಕಜಾಕಸ್ತಾನದ ಬಿಬಿಸಾರ ಅಸೌಬಯೇವಾ ಅವರು ತಲಾ 7.5 ಅಂಕ ಗಳಿಸಿ ಅಗ್ರಸ್ಥಾನ ಹಂಚಿಕೊಂಡಿದ್ದಾರೆ. ಬುಧವಾರ ಕೊನೆಯ ಸುತ್ತಿನ ಪಂದ್ಯಗಳು ನಿಗದಿಯಾಗಿವೆ.

ವೈಶಾಲಿ ಅವರು 13ನೇ ಸುತ್ತಿನಲ್ಲಿ ಚೀನಾದ ತಾನ್ ಝೊಂಗ್‌ಇ (5.5) ಜೊತೆ ಡ್ರಾ ಮಾಡಿಕೊಂಡರು. ಈ ವಿಭಾಗದ ಇತರ ಮೂರು ಪಂದ್ಯಗಳಲ್ಲಿ ನಿರ್ಣಾಯಕ ಫಲಿತಾಂಶಗಳು ದಾಖಲಾದವು.

12ನೇ ಸುತ್ತಿನಲ್ಲಿ ವೈಶಾಲಿ ಜೊತೆ ಅಗ್ರ ಸ್ಥಾನ ಹಂಚಿಕೊಂಡಿದ್ದ ಚೀನಾದ ಝು ಜಿನೆರ್ (7), ರಷ್ಯನ್ ಆಟಗಾರ್ತಿ ಅಲೆಕ್ಸಾಂಡ್ರಾ ಗೊರ್ಯಾಚ್ಕಿನಾ ಅವರಿಗೆ ಮಣಿದರು.

ಸಂಜು ಐಸಿಸಿ ತಿಂಗಳ ಆಟಗಾರ

ದುಬೈ (ಪಿಟಿಐ): ಭಾರತದ ಆರಂಭಿಕ ಬ್ಯಾಟರ್ ಸಂಜು ಸ್ಯಾಮ್ಸನ್ ಅವರು ಮಂಗಳವಾರ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಪ್ರಕಟಿಸಿದ 'ಮಾರ್ಚ್ ತಿಂಗಳ ಆಟಗಾರ' ಗೌರವಕ್ಕೆ ಭಾಜನರಾಗಿದ್ದಾರೆ.

31 ವರ್ಷದ ಸ್ಯಾಮ್ಸನ್ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಅಮೋಘ ಪ್ರದರ್ಶನ ನೀಡಿದ್ದರು. ಇದರಿಂದಾಗಿ ಭಾರತ ತಂಡವು ದಾಖಲೆಯ ಮೂರನೇ ಬಾರಿ ಚಾಂಪಿಯನ್ ಕಿರೀಟ ಮುಡಿಗೇರಿಸಿಕೊಂಡಿತ್ತು.

ಟೂರ್ನಿಯ ಆರಂಭದ ಪಂದ್ಯಗಳಲ್ಲಿ ಸ್ಯಾಮ್ಸನ್ ಅವರಿಗೆ ತಂಡದಲ್ಲಿ ಆಡಲು ಅವಕಾಶ ಸಿಕ್ಕಿರಲಿಲ್ಲ. ಆದರೆ, ಕೊನೆಯ ಹಂತದ ನಿರ್ಣಾಯಕ ಪಂದ್ಯಗಳಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿ ತಂಡವು ಪ್ರಶಸ್ತಿ ಉಳಿಸಿಕೊಳ್ಳಲು ಮಹತ್ವದ ಕಾಣಿಕೆ ನೀಡಿದರು.

ವಿಶ್ವಕಪ್ ಟೂರ್ನಿಯ ಗುಂಪು ಹಂತದ ಕೊನೆಯ ಪಂದ್ಯದಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ಸಂಜು ಅಜೇಯ 97 ರನ್ ಬಾರಿಸಿದ್ದರು. ಅವರ ಆಟದ ನೆರವಿನಿಂದ ಭಾರತ ಸೆಮಿಫೈನಲ್ ಪ್ರವೇಶಿಸಿತ್ತು. ಸೆಮಿಫೈನಲ್‌ನಲ್ಲಿ ಇಂಗ್ಲೆಂಡ್ ವಿರುದ್ಧ ಮತ್ತು ಫೈನಲ್‌ನಲ್ಲಿ ನ್ಯೂಜಿಲೆಂಡ್ ವಿರುದ್ಧ ತಲಾ 89 ರನ್ ಬಾರಿಸಿದ್ದರು. ಈ ಮೂರು ಪಂದ್ಯಗಳಲ್ಲಿ 199.27ರ ಸ್ಟ್ರೈಕ್‌ರೇಟ್‌ನಲ್ಲಿ ಒಟ್ಟು 275 ರನ್ ಗಳಿಸಿ ಗಮನ ಸೆಳೆದಿದ್ದರು.

ಜಿಂಬಾಬ್ವೆ ಮತ್ತು ದಕ್ಷಿಣ ಆಫ್ರಿಕಾ ವಿರುದ್ಧದ ಸರಣಿಯಲ್ಲಿ ಉತ್ತಮ ಪ್ರದರ್ಶನ ನೀಡಿದ ನ್ಯೂಜಿಲೆಂಡ್ ತಂಡದ ನಾಯಕಿ ಅಮೇಲಿಯಾ ಕೆರ್ ಅವರು ಮೂರನೇ ಬಾರಿಗೆ 'ತಿಂಗಳ ಮಹಿಳಾ ಆಟಗಾರ್ತಿ' ಗೌರವಕ್ಕೆ ಪಾತ್ರರಾಗಿದ್ದಾರೆ.

'ತಿಂಗಳ ಆಟಗಾರ ಗೌರವ ಲಭಿಸಿರುವುದು ಅದ್ಭುತ ಅನುಭವ. ಟಿ20 ವಿಶ್ವಕಪ್ ಗೆಲುವಿಗೆ ಕೊಡುಗೆ ನೀಡುವುದು ನನ್ನ ಕನಸಾಗಿತ್ತು' ಎಂದು ಸಂಜು ಪ್ರತಿಕ್ರಿಯಿಸಿದ್ದಾರೆ.

ಕಳೆದ ಐದು ತಿಂಗಳಲ್ಲಿ ಐದು ದೇಶಗಳ ಆಟಗಾರರು ಈ ಗೌರವಕ್ಕೆ ಪಾತ್ರರಾದಂತಾಗಿದೆ. ಈ ಮೊದಲು ದಕ್ಷಿಣ ಆಫ್ರಿಕಾದ ಸೈಮನ್ ಹಾರ್ಮರ್, ಆಸ್ಟ್ರೇಲಿಯಾದ ಮಿಚೆಲ್ ಸ್ಟಾರ್ಕ್, ನ್ಯೂಜಿಲೆಂಡ್‌ನ ಡೇರಿಲ್ ಮಿಚೆಲ್ ಮತ್ತು ಪಾಕಿಸ್ತಾನದ ಸಾಹಿಬ್‌ಝಾದಾ ಫರ್ಹಾನ್ ಪ್ರಶಸ್ತಿ ಗೆದ್ದಿದ್ದರು.

ಕೋವಿಡ್ ಲಸಿಕೆ ತಂದೆಯ ಸಾವಿಗೆ ಕಾರಣ: ವಾರ್ನ್ ಪುತ್ರ

ಸಿಡ್ನಿ (ಪಿಟಿಐ): 'ಬಹುಶಃ, ಮೂರು ಅಥವಾ ನಾಲ್ಕು ಡೋಸ್ ಕೋವಿಡ್ ಲಸಿಕೆ ಪಡೆದಿದ್ದೇ ನಮ್ಮ ತಂದೆಯ ಸಾವಿಗೆ ಕಾರಣ' ಎಂದು ಆಸ್ಟ್ರೇಲಿಯಾದ ದಿಗ್ಗಜ ಕ್ರಿಕೆಟಿಗ ಶೇನ್ ವಾರ್ನ್ ಅವರ ಪುತ್ರ ಜಾಕ್ಸನ್ ಆರೋಪಿಸಿದ್ದಾರೆ.

ಪಾಡ್‌ಕಾಸ್ಟ್‌ವೊಂದರಲ್ಲಿ ಮಾತನಾಡಿರುವ ಅವರು, 'ತಂದೆಯವರು ಧೂಮಪಾನ ಮತ್ತು ಮದ್ಯಪಾನ ಮಾಡುತ್ತಿದ್ದರೂ ಸಹ ಆರೋಗ್ಯವಾಗಿದ್ದರು. ಕೋವಿಡ್ ಲಸಿಕೆ ಪಡೆಯುವುದು ಅವರಿಗೆ ಇಷ್ಟವಿರಲಿಲ್ಲ. ಆದರೆ, ಕೆಲಸ ಮಾಡಲು ಲಸಿಕೆ ಪಡೆಯುವುದು ಕಡ್ಡಾಯವಾಗಿದ್ದ ಕಾರಣ, ಎಲ್ಲರಂತೆ ಅವರೂ ಒತ್ತಾಯಪೂರ್ವಕವಾಗಿ ಲಸಿಕೆ ಪಡೆದಿದ್ದರು' ಎಂದು ಹೇಳಿದ್ದಾರೆ.

ಶೇನ್ ವಾರ್ನ್ ಅವರು 2022ರ ಮಾರ್ಚ್‌ನಲ್ಲಿ ಥಾಯ್ಲೆಂಡ್‌ನ ಕೊ ಸಮುಯಿ ದ್ವೀಪದಲ್ಲಿ ವಿಹರಿಸುತ್ತಿದ್ದ ವೇಳೆ ಹೃದಯಾಘಾತದಿಂದ ನಿಧನರಾಗಿದ್ದರು.

ಮೈಸೂರು ಜಿಲ್ಲಾ ಎ ತಂಡಕ್ಕೆ ಪ್ರಶಸ್ತಿ

ರಾಜ್ಯ ಮಹಿಳಾ ಬ್ಯಾಸ್ಕೆಟ್‌ಬಾಲ್ ಲೀಗ್ ಚಾಂಪಿಯನ್‌ಶಿಪ್

ಪ್ರಜಾವಾಣಿ ವಾರ್ತೆ

ಪ್ರಶಸ್ತಿ ಗೆದ್ದ ಮೈಸೂರು ಜಿಲ್ಲಾ ಎ ತಂಡ. (ಹಿಂದಿನ ಸಾಲು) ಎಡದಿಂದ; ಚಂದನಾ, ಅಪೂರ್ವಾ, ಸಾನಿಕಾ ವಿ, ಕೋಚ್ ಗಿರೀಶ್ ಬಿ.ಎಸ್, ಕುಸುಮಾ ಬಿ.ಎಲ್, ರಕ್ಷಿತಾ ಶೆಟ್ಟಿ, (ಮುಂದಿನ ಸಾಲು) ತೇಜಸ್ವಿನಿ, ಸಹನಾ, ಮಂದಾರಾ ಹಾಗೂ ಮಧುಶ್ರೀ ಎಂ.ಆರ್. ಚಿತ್ರ: ಬಿ.ಕೆ. ಜನಾರ್ದನ

ಬೆಂಗಳೂರು: ಟೂರ್ನಿಯಲ್ಲಿ ಸಾಂಘಿಕ ಪ್ರದರ್ಶನ ನೀಡಿದ ಮೈಸೂರು ಜಿಲ್ಲಾ ಎ ತಂಡವು ರಾಜ್ಯ ಮಹಿಳಾ ಬ್ಯಾಸ್ಕೆಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿತು. ಯಂಗ್ ಓರಿಯನ್ಸ್ ತಂಡವು ರನ್ನರ್ಸ್ ಅಪ್ ಆಯಿತು.

ಕಂಠೀರವ ಕ್ರೀಡಾಂಗಣದ ಬ್ಯಾಸ್ಕೆಟ್ ಬಾಲ್ ಕೋರ್ಟ್‌ನಲ್ಲಿ ನಡೆದ ಸೆಮಿ ಫೈನಲ್ ಲೀಗ್‌ನ ನಾಲ್ಕು ಪಂದ್ಯಗಳಲ್ಲಿ ಮೈಸೂರು ತಂಡವು ಮೂರರಲ್ಲಿ ಗೆಲುವು ಸಾಧಿಸಿ ಚಾಂಪಿಯನ್ ಆಯಿತು. ಮಂಗಳವಾರ ನಡೆದ ಪಂದ್ಯದಲ್ಲಿ ಮೈಸೂರು ತಂಡವು 64–32ರಿಂದ ಬೀಗಲ್ಸ್ ಬಿ.ಸಿ ತಂಡವನ್ನು ಮಣಿಸಿತು. ಮೈಸೂರು ತಂಡದ ಸಾನಿಕಾ 27, ಮಂದಾರಾ 11 ಅಂಕ ಗಳಿಸಿದರೆ, ಬೀಗಲ್ಸ್ ತಂಡದ ಸಾನ್ವಿ 11 ಅಂಕ ಕಲೆ ಹಾಕಿದರು.

ಯಂಗ್ ಓರಿಯನ್ಸ್ ತಂಡವು ಸೆಮಿಫೈನಲ್ ಲೀಗ್‌ನ ನಾಲ್ಕು ಪಂದ್ಯಗಳಲ್ಲಿ ಎರಡು ಪಂದ್ಯಗಳನ್ನು ಗೆದ್ದುಕೊಂಡಿತು. ತನ್ನ ಕೊನೆಯ ಪಂದ್ಯದಲ್ಲಿ 74–31ರಿಂದ ಡಿವೈಇಎಸ್ ವಿದ್ಯಾನಗರ ತಂಡವನ್ನು ಮಣಿಸಿತು.

ಚಾಂಪಿಯನ್ ಮೈಸೂರು ಜಿಲ್ಲಾ ಎ ತಂಡಕ್ಕೆ ₹50 ಸಾವಿರ, ರನ್ನರ್ಸ್ ಅಪ್ ಯಂಗ್ ಓರಿಯನ್ಸ್ ತಂಡಕ್ಕೆ ₹35 ಸಾವಿರ, ಮೂರನೇ ಸ್ಥಾನ ಗಳಿಸಿದ ಬೀಗಲ್ಸ್ ಬಿ.ಸಿ ತಂಡಕ್ಕೆ ₹ 20 ಸಾವಿರ, ನಾಲ್ಕನೇ ಸ್ಥಾನ ಗಳಿಸಿದ ಡಿವೈಇಎಸ್ ವಿದ್ಯಾನಗರ ತಂಡಕ್ಕೆ ₹15 ಸಾವಿರ ಬಹುಮಾನ ವಿತರಿಸಲಾಯಿತು.

ಮೈಸೂರು ಜಿಲ್ಲಾ ತಂಡದ ಕುಸುಮಾ 'ಟೂರ್ನಿಯ ಉತ್ತಮ ಆಟಗಾರ್ತಿ' ಮತ್ತು ಯಂಗ್ ಓರಿಯರ್ಸ್ ತಂಡದ ಜೇಷ್ಣವಿ ಅತ್ಯಂತ ಭರವಸೆಯ ಆಟಗಾರ್ತಿ ಗೌರವಕ್ಕೆ ಪಾತ್ರರಾದರು.

ಇಂಗ್ಲೆಂಡ್– ಐರ್ಲೆಂಡ್ ಪ್ರವಾಸ ಮುಂಬೈ ಬ್ಯಾಟರ್ ಪಾಲಿಗೆ ನಿರ್ಣಾಯಕ

ಸೂರ್ಯಕುಮಾರ್ ಮುಂದಿದೆ ಸವಾಲು

ನವದೆಹಲಿ (ಪಿಟಿಐ): ಸೂರ್ಯಕುಮಾರ್ ಯಾದವ್ ಅವರು ಸತತ ಎರಡನೇ ಬಾರಿ ಟಿ20 ವಿಶ್ವಕಪ್ ಟ್ರೋಫಿ ಗೆದ್ದ ಭಾರತ ತಂಡವನ್ನು ಸ್ಫೂರ್ತಿಯುತವಾಗಿ ಮುನ್ನಡೆಸಿದ್ದಾರೆ ನಿಜ, ಆದರೆ ಸತತ ಬ್ಯಾಟಿಂಗ್ ವೈಫಲ್ಯದಿಂದಾಗಿ ಅವರು 2028ರ ಲಾಸ್ ಏಂಜಲೀಸ್ ಒಲಿಂಪಿಕ್ಸ್‌ವರೆಗೆ ಅವರು ತಂಡದಲ್ಲಿ ಇರುತ್ತಾರೆಯೇ ಎಂಬ ಬಗ್ಗೆ ಗಂಭೀರ ಪ್ರಶ್ನೆಗಳೆದ್ದಿವೆ.

ಇದೇ ಜೂನ್ ಮತ್ತು ಜುಲೈನಲ್ಲಿ ಭಾರತ ತಂಡವು ಇಂಗ್ಲೆಂಡ್ ಮತ್ತು ಐರ್ಲೆಂಡ್ ಪ್ರವಾಸ ಕೈಗೊಳ್ಳಲಿದ್ದು, ಸೂರ್ಯ ಅವರ ಪಾಲಿಗೆ ಈ ಕಿರು ಸರಣಿ ನಿರ್ಣಾಯಕವಾಗಲಿದೆ. ನಾಯಕತ್ವಕ್ಕಿಂತ ಹೆಚ್ಚಾಗಿ ಅವರ ಬ್ಯಾಟಿಂಗ್ ನಿರ್ವಹಣೆಯ ಮೇಲೆಯೇ ಗಮನವಿರಲಿದೆ.

ಈ ಪ್ರವಾಸದಲ್ಲಿ ಮುಂಬೈ ಆಟಗಾರ ತೋರುವ ಆಟವು, 2028ರ ಒಲಿಂಪಿಕ್ಸ್ ಮತ್ತು ಟಿ20 ವಿಶ್ವಕಪ್‌ವರೆಗೆ ಅವರು ತಂಡದ ಭಾಗವಾಗಿರುತ್ತಾರೆಯೇ ಎಂಬುದನ್ನು ನಿರ್ಧರಿಸಲಿದೆ.

ಸೂರ್ಯ ಅವರು ಕೋಚ್ ಗೌತಮ್ ಗಂಭೀರ್ ಪಾಲಿಗೆ ಮೊದಲ ಆಯ್ಕೆಯ ನಾಯಕ. ಆದರೆ ಅವರ ನಿಲುವನ್ನು ಅಜಿತ್ ಅಗರಕರ್ ನೇತೃತ್ವದ ಆಯ್ಕೆ ಸಮಿತಿ ಒಪ್ಪುವುದೇ ಎಂಬುದು ಆಸಕ್ತಿಯ ವಿಷಯ. ಹಾಲಿ ಟಿ20 ತಂಡದ ನಾಯಕನ ವಯಸ್ಸು ಆ ವೇಳೆಗೆ (2028) 38 ಆಗಲಿದೆ.

ಸೂರ್ಯಕುಮಾರ್ ಯಾದವ್

2025ರಲ್ಲಿ ಸೂರ್ಯಕುಮಾರ್ ಅವರ ಆಟದ ಮಟ್ಟ ಗಣನೀಯವಾಗಿ ಕುಸಿದಿತ್ತು. ಅವರ ಸ್ಟ್ರೈಕ್‌ರೇಟ್ 120ಕ್ಕಿಂತ ಕೆಳಗಿಳಿದಿತ್ತು. ಅವರು ಒಂದೂ ಅರ್ಧ ಶತಕ ಬಾರಿಸಿರಲಿಲ್ಲ. ಆದರೆ 2026ರಲ್ಲಿ ಸುಧಾರಣೆ ಕಂಡರು. ನಾಲ್ಕು ಅರ್ಧ ಶತಕಗಳನ್ನು ಗಳಿಸಿದ್ದರಲ್ಲದೇ ಸ್ಟ್ರೈಕ್‌ರೇಟ್‌ಅನ್ನು 160ಕ್ಕೆ ಏರಿಸಿದ್ದರು. ಆದರೆ ಟಿ20 ವಿಶ್ವಕಪ್‌ನಲ್ಲಿ ಅಮೆರಿಕ ವಿರುದ್ಧ ಅಮೋಘ ಆಟದ ಅವರು ನಂತರ ಅದೇ ಮಟ್ಟ ಕಾಯ್ದುಕೊಳ್ಳಲಿಲ್ಲ.

ದೊಡ್ಡ ತಂಡಗಳ ಎದುರು ಯಶಸ್ಸು ಗಳಿಸಲಿಲ್ಲ. ದಕ್ಷಿಣ ಆಫ್ರಿಕಾ ಮತ್ತು ವೆಸ್ಟ್ ಇಂಡೀಸ್ ಎದುರು ತಲಾ 18 ರನ್, ಇಂಗ್ಲೆಂಡ್ ವಿರುದ್ಧ ಸೆಮಿಫೈನಲ್‌ನಲ್ಲಿ 11, ಫೈನಲ್‌ನಲ್ಲಿ ನ್ಯೂಜಿಲೆಂಡ್ ವಿರುದ್ಧ ಶೂನ್ಯ ಸಂಪಾದನೆ.

ವೈಭವ್ ಸೂರ್ಯವಂಶಿ ಹೆಸರು ಮುನ್ನೆಲೆಗೆ

ಟಿ20 ತಂಡದಲ್ಲಿ ಆಕ್ರಮಣಕಾರಿ ಆಟಗಾರರ ಪಡೆ ಇರುವಾಗ ಸ್ಥಿರತೆ ಕಾಪಾಡಿಕೊಳ್ಳುವ ಸವಾಲು ಸೂರ್ಯಕುಮಾರ್ ಅವರ ಎದುರಿಗಿದೆ. ಸ್ಫೋಟಕ ಆರಂಭ ಆಟಗಾರ ವೈಭವ್ ಸೂರ್ಯವಂಶಿ ಅವರೂ ತಂಡದಲ್ಲಿ ಪ್ರವೇಶಿಸಲು ಸರದಿಯಲ್ಲಿದ್ದಾರೆ.

ವೈಭವ್ ಸೂರ್ಯವಂಶಿ

ಐರ್ಲೆಂಡ್ ಪ್ರವಾಸದ ಟಿ20 ಲೆಗ್‌ಗೆ 35 ಮಂದಿ ಪರಿಣತ ಆಟಗಾರರ ಪಟ್ಟಿಯಲ್ಲಿ ಸೂರ್ಯವಂಶಿ ಹೆಸರೂ ಇದೆ. ಭಾರತ ಸೀನಿಯರ್ ತಂಡ ಪ್ರವೇಶಿಸಿದ ಅತಿ ಕಿರಿಯ ಆಟಗಾರನೆಂಬ ದಾಖಲೆ ಸದ್ಯ ಸಚಿನ್ ತೆಂಡೂಲ್ಕರ್ (16 ವರ್ಷವಿದ್ದಾಗ) ಹೆಸರಿನಲ್ಲಿದೆ. ಅವರಿಗಿಂತ ಕಿರಿಯ ವಯಸ್ಸಿನಲ್ಲೇ ತಂಡ ಪ್ರವೇಶಿಸಿ ದಾಖಲೆ ಮುರಿಯುವ ಅವಕಾಶ ವೈಭವ್‌ಗೆ ಉಜ್ವಲವಾಗಿದೆ.

'ಅವರು ಯುಕೆ ಪ್ರವಾಸ ಅಥವಾ ಜಿಂಬಾಬ್ವೆ ವಿರುದ್ಧ ಸರಣಿಯಲ್ಲಿ ಆಡಬಹುದು. ಆದರೆ ಏಷ್ಯನ್ ಗೇಮ್ಸ್ ಅಥವಾ ನಂತರ ವೆಸ್ಟ್ ಇಂಡೀಸ್‌ನ ಭಾರತ ಪ್ರವಾಸ ಅವರ ಪದಾರ್ಪಣೆಗೆ ಒಳ್ಳೆಯ ವೇದಿಕೆಯಾಗಬಹುದು. ಏಕೆಂದರೆ ವಿಂಡೀಸ್ ಪ್ರವಾಸ ಮತ್ತು ಏಷ್ಯನ್ ಗೇಮ್ಸ್ ಏಕಕಾಲದಲ್ಲಿ ನಡೆಯುವ ಕಾರಣ ಎರಡು ಟಿ20 ತಂಡಗಳನ್ನು ಕಣಕ್ಕಿಳಿಸಬೇಕಾಗುತ್ತದೆ. ಹೀಗಾಗಿ ಅವರಿಗೆ ಅವಕಾಶ ಸಿಗಬಹುದು' ಎಂದು ಮೂಲ ತಿಳಿಸಿದೆ.

ಫೈನಲ್‌ಗೆ ರಾಜ್ಯ ಬಾಲಕಿಯರ ತಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಕ್ಷಿ ಮಹಾಜನ್ ಹಾಗೂ ಎ.ಸುಭಾತ್ರಾ ಅವರು ಮೊದಲಾರ್ಧದಲ್ಲಿ ಗಳಿಸಿದ ಗೋಲಿನ ನೆರವಿನಿಂದ ಕರ್ನಾಟಕ ತಂಡವು ಪಂಜಾಬ್‌ನಲ್ಲಿ ನಡೆಯುತ್ತಿರುವ 'ಅಸ್ಮಿತಾ' 13 ವರ್ಷದೊಳಗಿನವರ ರಾಷ್ಟ್ರೀಯ ಫುಟ್‌ಬಾಲ್ ಲೀಗ್‌ನಲ್ಲಿ ಮಂಗಳವಾರ 2–0 ಅಂತರದಿಂದ ಮಿಜೋರಾಂ ತಂಡವನ್ನು ಮಣಿಸಿ ಪ್ರಶಸ್ತಿ ಸುತ್ತಿಗೆ ಲಗ್ಗೆ ಇಟ್ಟಿತು.

ಪಂದ್ಯದ 6ನೇ ನಿಮಿಷದಲ್ಲಿ ಗೋಲು ಗಳಿಸಿದ ತಕ್ಷಿ, ಕರ್ನಾಟಕ ತಂಡಕ್ಕೆ ಆರಂಭಿಕ ಮುನ್ನಡೆ ತಂದುಕೊಟ್ಟರು. ಸುಭಾತ್ರಾ (11ನೇ ನಿ.) ಮುನ್ನಡೆಯನ್ನು 2–0ಗೆ ಹಿಗ್ಗಿಸಿದರು. ದ್ವಿತೀಯಾರ್ಧದಲ್ಲಿ ಉಭಯ ತಂಡಗಳಿಂದ ಗೋಲು ದಾಖಲಾಗಲಿಲ್ಲ.

ಗುರುವಾರ ನಡೆಯಲಿರುವ ಫೈನಲ್ ಹಣಾಹಣಿಯಲ್ಲಿ ರಾಜ್ಯ ತಂಡವು ಆತಿಥೇಯ ಪಂಜಾಬ್ ತಂಡವನ್ನು ಎದುರಿಸಲಿದೆ.

ಕೌಟುಂಬಿಕ ಹಾಕಿ: ಕನ್ನಂಡ ತಂಡಕ್ಕೆ ಜಯ

ಪ್ರಜಾವಾಣಿ ವಾರ್ತೆ

ನಾಪೋಕ್ಲು (ಕೊಡಗು ಜಿಲ್ಲೆ): ಇಲ್ಲಿನ ಚೆರಿಯ ಪರಂಬುವಿನ ಜನರಲ್ ಕೆ.ಎಸ್. ತಿಮ್ಮಯ್ಯ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಕೊಡವ ಕೌಟುಂಬಿಕ ಹಾಕಿ ಟೂರ್ನಿಯಲ್ಲಿ ಮಂಗಳವಾರ ಕನ್ನಂಡ ತಂಡವು 6-0ಯಿಂದ ಬಲ್ಲಿಕಾಳಂಡ ವಿರುದ್ಧ ಭರ್ಜರಿ ಗೆಲುವು ಸಾಧಿಸಿತು.

ಕನ್ನಂಡ ತಂಡದ ನಾಚಪ್ಪ ಮತ್ತು ಕಾವೇರಪ್ಪ ತಲಾ 2 ಗೋಲು ಗಳಿಸಿದರೆ, ರೋಹನ್ ಮತ್ತು ಬೋಪಣ್ಣ ತಲಾ ಒಂದೊಂದು ಗೋಲು ಹೊಡೆದರು. ಮತ್ತೊಂದು ಪಂದ್ಯದಲ್ಲಿ ಮಾರ್ಚಂಡ 6-0ಯಿಂದ ಮಾಣೀರ ವಿರುದ್ಧ ಗೆಲುವು ಸಾಧಿಸಿತು. ಮಾರ್ಚಂಡ ತಂಡದ ಪಳಂಗಪ್ಪ ಮೂರು, ನಾಚಪ್ಪ ಎರಡು, ನಂಜಪ್ಪ ಒಂದು ಗೋಲು ದಾಖಲಿಸಿದರು.

ಉಳಿದಂತೆ, ಸೋಮೆಯಂಡ 5-0ಯಿಂದ ಗಾಡಂಗಡ ವಿರುದ್ಧ; ಕೊಂಗೇಟೀರ 5-0ಯಿಂದ ಬಡ್ಡೀರ ವಿರುದ್ಧ; ಚಿಮ್ಮಣಮಾಡ 2-1ರಿಂದ ಕನ್ನಿಕಂಡ ವಿರುದ್ಧ; ಕುಲ್ಲೇಟೀರ 3-0ಯಿಂದ ಮುಂಡೋಟಿರ ವಿರುದ್ಧ; ಚಂಗುಲಂಡ 3-0ಯಿಂದ ಆಪಾಡಂಡ ವಿರುದ್ಧ; ಪಳಂಗಂಡ 2–0ಯಿಂದ ಪಾಲಂದೀರ ವಿರುದ್ಧ; ಮುಂಡಿಯೋಳಂಡ 2-1ರಿಂದ ಅಲ್ಲಾರಂಡ ವಿರುದ್ಧ ಜಯ ಗಳಿಸಿದವು.

ಶಿವಚಾಳಿಯಂಡ 2-0ಯಿಂದ ಕರ್ತಚೀರ ವಿರುದ್ಧ; ಮೈಂದಪಂಡ 2-0ಯಿಂದ ಕೇಟಿರ ವಿರುದ್ಧ; ಮಣವಟ್ಟೀರ 4-0ಯಿಂದ ಅಜ್ಜಮಾಡ ವಿರುದ್ಧ; ಕೇಲೇಟಿರ 1-0ಯಿಂದ ಬೇಪಡಿಯಂಡ ವಿರುದ್ಧ; ಬಿದ್ದಾಟಂಡ 4-3ರಿಂದ ಚಪ್ಪಂಡ ವಿರುದ್ಧ; ಮಲ್ಲಾಜಿರ 2-0ಯಿಂದ ಮುಕ್ಕಾಟಿರ (ಕುಂಜಿಲಗೇರಿ) ವಿರುದ್ಧ; ಪಾಡೆಯಂಡ 3-2ರಿಂದ ಬಾದುಮಂಡ ವಿರುದ್ಧ; ಬೊವ್ವೇರಿಯಂಡ 4-0ಯಿಂದ ಬಾಳೇಕುಟ್ಟಿರ ವಿರುದ್ಧ ಗೆಲುವು ಸಾಧಿಸಿದವು.

ಚೇನಂಡ ಕಪ್ ಕೊಡವ ಕೌಟುಂಬಿಕ ಹಾಕಿ ಟೂರ್ನಿಯಲ್ಲಿ ಮಂಗಳವಾರ ಪಳಂಗಂಡ ಮತ್ತು ಪಾಲಂದೀರ ತಂಡದ ಆಟಗಾರರು ಚೆಂಡಿಗಾಗಿ ಸೆಣಸಾಟ ನಡೆಸಿದರು

ಸಿಎಂ ಕಪ್ : ಫೈನಲ್ ಹಣಾಹಣಿ ಇಂದು

ಬೆಂಗಳೂರು: ಹಾಲಿ ಚಾಂಪಿಯನ್ ಶಾಂತಿನಗರ ತಂಡವು ಬುಧವಾರ ಕೆಎಸ್‌ಎಫ್‌ಎ 2ನೇ ಆವೃತ್ತಿಯ ಸಿಎಂ ಕಪ್ ಫುಟ್‌ಬಾಲ್ ಟೂರ್ನಿಯ ಫೈನಲ್‌ನಲ್ಲಿ ರಾರಾಜಿನಗರ ತಂಡವನ್ನು ಎದುರಿಸಲಿದೆ.

ಕರ್ನಾಟಕ ರಾಜ್ಯ ಫುಟ್‌ಬಾಲ್ ಸಂಸ್ಥೆಯ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ವಿಜೇತ ತಂಡಕ್ಕೆ ₹2 ಲಕ್ಷ ಬಹುಮಾನ, ರನ್ನರ್ಸ್ ಅಪ್ ತಂಡಕ್ಕೆ ₹1 ಲಕ್ಷ ಬಹುಮಾನವಿದೆ. ಸೆಮಿಫೈನಲ್‌ನಲ್ಲಿ ಸೋತ ತಂಡಗಳು ತಲಾ ₹25 ಸಾವಿರ ಮೊತ್ತ ಪಡೆಯಲಿವೆ.

ಟೂರ್ನಿಯಲ್ಲಿ ಒಟ್ಟು 16 ತಂಡಗಳು ಸ್ಪರ್ಧಿಸಿದ್ದವು. ಸೆಮಿಫೈನಲ್‌ನಲ್ಲಿ ಶಾಂತಿನಗರ ತಂಡವು 1-0ಯಿಂದ ಕೆ.ಆರ್.ಪುರ ತಂಡದ ವಿರುದ್ಧ; ರಾಜಾಜಿನಗರ ತಂಡವು 3–2ರಿಂದ ರಾಜರಾಜೇಶ್ವರಿ ನಗರ ತಂಡದ ವಿರುದ್ಧ ಗೆಲುವು ಸಾಧಿಸಿದ್ದವು.

ಪಂದ್ಯ ಆರಂಭ: ಮಧ್ಯಾಹ್ನ 3

ಅಭಿಷೇಕ್, ದೀಪ್ತಿ ಸೇರಿ ಭಾರತದ ಏಳು ಕ್ರಿಕೆಟಿಗರಿಗೆ 'ವಿಸ್ಡನ್' ಪ್ರಶಸ್ತಿ

ಲಂಡನ್ (ಪಿಟಿಐ): 'ವಿಸ್ಡನ್ ಅಲ್ಮನಾಕ್–2026' ಪ್ರಶಸ್ತಿ ಪಟ್ಟಿಯಲ್ಲಿ ಭಾರತದ ಕ್ರಿಕೆಟಿಗರು ಪ್ರಾಬಲ್ಯ ಸಾಧಿಸಿದ್ದು, ಒಟ್ಟು 9 ಪ್ರಶಸ್ತಿಗಳ ಪೈಕಿ ಏಳನ್ನು ಪಡೆದುಕೊಂಡಿದ್ದಾರೆ.

ಅನುಭವಿ ಆಲ್‌ರೌಂಡರ್ ದೀಪ್ತಿ ಶರ್ಮಾ ಅವರು 'ವಿಸ್ಡನ್ ಅಲ್ಮನಾಕ್ ವರ್ಷದ ಕ್ರಿಕೆಟ್ ಆಟಗಾರ್ತಿ' ಹಾಗೂ ಆರಂಭಿಕ ಬ್ಯಾಟರ್ ಅಭಿಷೇಕ್ ಶರ್ಮಾ ಅವರು 'ವರ್ಷದ ಟಿ20 ಕ್ರಿಕೆಟಿಗ' ಪ್ರಶಸ್ತಿಗೆ ಪಾತ್ರರಾಗಿದ್ದಾರೆ.

2025ರ ಋತುವಿನಲ್ಲಿ ಅಭಿಷೇಕ್ ಶರ್ಮಾ ಅವರು ಅವರು 21 ಪಂದ್ಯಗಳಲ್ಲಿ 193ರ ಸ್ಟ್ರೈಕ್‌ರೇಟ್‌ನಲ್ಲಿ 859 ರನ್ ಗಳಿಸಿದ್ದರು. ಅದರಲ್ಲಿ 5 ಅರ್ಧಶತಕಗಳು ಸೇರಿದ್ದವು. ದೀಪ್ತಿ ಶರ್ಮಾ ಅವರು 2025ರ ಮಹಿಳಾ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಒಂಬತ್ತು ಪಂದ್ಯಗಳಲ್ಲಿ ಮೂರು ಅರ್ಧಶತಕ ಸಹಿತ 215 ರನ್ ಬಾರಿಸಿದ್ದರು. ಅಲ್ಲದೆ, ಟೂರ್ನಿಯಲ್ಲಿ ಅತಿ ಹೆಚ್ಚು ವಿಕೆಟ್ (22) ಗಳಿಸಿದ್ದರು. ಅವರ ಆಲ್‌ರೌಂಡರ್ ಆಟದ ನೆರವಿನಿಂದ ಭಾರತವು ಮೊದಲ ಬಾರಿ ವಿಶ್ವಕಪ್ ಜಯಿಸಿತ್ತು.

ಭಾರತ ಟೆಸ್ಟ್ ಮತ್ತು ಏಕದಿನ ತಂಡಗಳ ನಾಯಕ ಶುಭಮನ್ ಗಿಲ್, ವೇಗಿ ಮೊಹಮ್ಮದ್ ಸಿರಾಜ್, ವಿಕೆಟ್ ಕೀಪರ್–ಬ್ಯಾಟರ್ ರಿಷಭ್ ಪಂತ್ ಮತ್ತು ಅನುಭವಿ ಆಲ್‌ರೌಂಡರ್ ರವೀಂದ್ರ ಜಡೇಜ ಅವರನ್ನು 'ವಿಸ್ಡನ್ 5 ಕ್ರಿಕೆಟರ್ಸ್ ಆಫ್ ದಿ ಈಯರ್' ಪ್ರಶಸ್ತಿಗೆ ಹೆಸರಿಸಲಾಗಿದೆ. ಇವರೆಲ್ಲಾ ಕಳೆದ ವರ್ಷ ಇಂಗ್ಲೆಂಡ್‌ನಲ್ಲಿ ನಡೆದಿದ್ದ ಟೆಸ್ಟ್ ಸರಣಿಯಲ್ಲಿ ಗಮನ ಸೆಳೆಯುವ ಪ್ರದರ್ಶನ ನೀಡಿದ್ದರು.

ಪ್ರಶಸ್ತಿ ಪಟ್ಟಿಯಲ್ಲಿ ಇಬ್ಬರು ವಿದೇಶಿ ಆಟಗಾರರು ಸೇರಿದ್ದಾರೆ. ಆಸ್ಟ್ರೇಲಿಯಾದ ವೇಗಿ ಮಿಚೆಲ್ ಸ್ಟಾರ್ಕ್ ಹಾಗೂ ಇಂಗ್ಲೆಂಡ್ ಬ್ಯಾಟರ್ ಹಸೀಬ್ ಹಮೀದ್ ಅವರು ಕ್ರಮವಾಗಿ 'ಅತ್ಯುತ್ತಮ ಕ್ರಿಕೆಟಿಗ' ಹಾಗೂ 'ವಿಸ್ಡನ್ 5 ಕ್ರಿಕೆಟರ್ಸ್ ಆಫ್ ದಿ ಇಯರ್' ಗೌರವಕ್ಕೆ ಪಾತ್ರರಾಗಿದ್ದಾರೆ.

ಗಿಲ್ ಅವರು ಇಂಗ್ಲೆಂಡ್ ಪ್ರವಾಸದಲ್ಲಿ ಅದ್ಭುತ ಫಾರ್ಮ್‌ನಲ್ಲಿದ್ದರು. ಐದು ಪಂದ್ಯಗಳ ಟೆಸ್ಟ್ ಸರಣಿಯಲ್ಲಿ 754 ರನ್‌ಗಳನ್ನು ಗಳಿಸಿದ್ದರು. ಈ ಸರಣಿಯನ್ನು ಭಾರತ 2-2 ಡ್ರಾ ಮಾಡಿಕೊಳ್ಳುವಲ್ಲಿ ಅವರ ಪಾತ್ರ ನಿರ್ಣಾಯಕವಾಗಿತ್ತು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–560 002

ದೂರವಾಣಿ: 080–22213530/22241325 ಫ್ಯಾಕ್ಸ್: 080–22214379

ಇ–ಮೇಲ್: kanbhavblr@gmail.com ವೆಬ್‌ಸೈಟ್: www.kannadasiri.in

No.: DKC-2023-24/SE0009 ದಿನಾಂಕ: 15.04.2026

ಟೆಂಡರ್ ಪ್ರಕಟಣೆ – 5ನೇ ಕರೆ

(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಅಧಿಕಾರಿಗಳ ಅಧಿಕೃತ ಕಚೇರಿ ಕರ್ತವ್ಯಗಳಿಗೆ ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 30 ಶಿವಾನಿ 2019, ಬೆಂಗಳೂರು ದಿ.:31.03.2022ರ ಆದೇಶದ ದರದನ್ವಯ ಮಾರುತಿ ಸ್ವಿಫ್ಟ್ ಡಿಸೈರ್/ಟೊಯೋಟ ಇಟಿಯೋಸ್ ವಾಹನಗಳನ್ನು ಚಾಲಕರನ್ನೊಳಗೊಂಡಂತೆ ಬಾಹ್ಯ ಮೂಲದಿಂದ ಬಾಡಿಗೆ ಆಧಾರದ ಮೇಲೆ ಒಂದು ವರ್ಷದ ಅವಧಿಗೆ 07 ವಾಹನಗಳನ್ನು ಒದಗಿಸಲು ಹಾಗೂ ಅವಶ್ಯಕತೆ ಇದ್ದಲ್ಲಿ ದಿನ ನಿತ್ಯ ಬಾಡಿಗೆ ಆಧಾರದ ಮೇಲೆ ಸೇವೆ ಒದಗಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ–2000 ಅಡಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಅರ್ಹ ಸಂಸ್ಥೆಗಳಿಂದ ಅಲ್ಪಾವಧಿ ಮರು ಇ–ಟೆಂಡರ್ CALL-5 ಟೆಂಡರ್ ಅನ್ನು ಆಹ್ವಾನಿಸಲಾಗಿದೆ. ಟೆಂಡರ್ ಪ್ರಕಟಣೆ, ಷರತ್ತು ಮತ್ತು ನಿಬಂಧನೆಗಳು, ಇತರೆ ವಿವರಗಳನ್ನು ವೆಬ್‌ಸೈಟ್ https://kppp.karnataka.gov.in ಅಂತರ್ಜಾಲದ ಮೂಲಕ ಪಡೆದು ಸಲ್ಲಿಸಬಹುದಾಗಿದೆ.

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯುಮೆಂಟ್ ಆನ್‌ಲೈನ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: 15.04.2025. 2) ಟೆಂಡರ್ ಡಾಕ್ಯುಮೆಂಟ್ ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡುವ ಅಂತಿಮ ದಿನಾಂಕ: 15.05.2025 ಸಂಜೆ 5.30 ಗಂಟೆ. 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 18.05.2025 ಬೆಳಗ್ಗೆ 11.00 ಗಂಟೆ. 4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 21.05.2026 ಬೆಳಗ್ಗೆ 11.00 ಗಂಟೆ. 5) ಟೆಂಡರ್‌ಗೆ ಇಟ್ಟ ಇ.ಎಂ.ಡಿ. ಮೊತ್ತ ರೂ.70,000/– (ರೂಪಾಯಿ ಎಪ್ಪತ್ತು ಸಾವಿರ ಮಾತ್ರ). 6) ಟೆಂಡರ್ ಅಂದಾಜು ಮೊತ್ತ (12 ತಿಂಗಳಿಗೆ) ರೂ. 35,00,000/– (ರೂಪಾಯಿ ಮೂವತ್ತೈದು ಲಕ್ಷ ಮಾತ್ರ).

ಸಹಿ/– ನಿರ್ದೇಶಕರು

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು

ವಾ.ಸಾ.ಸಂ.ಇ/ವಾಪ್ರ/177/ಅಕಾರ್/2025–26

ಜಯದ ಓಟದತ್ತ ಆರ್‌ಸಿಬಿ ನೋಟ

ಅಭ್ಯಾಸ ಮಾಡಿದ ವಿರಾಟ್ ● ಲಖನೌಗೆ ಗೆಲುವಿನ ಹಾದಿಗೆ ಮರಳುವ ಸವಾಲು

● ಗಿರೀಶ ದೊಡ್ಡಮನಿ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮಂಗಳವಾರ ಸಂಜೆ ವಿರಾಟ್ ಕೊಹ್ಲಿ ಬ್ಯಾಟಿಂಗ್ ಅಭ್ಯಾಸ ಮಾಡಿದರು. ಎಂದಿನಂತೆ ಸಹ ಆಟಗಾರರೊಂದಿಗೆ ಲವಲವಿಕೆಯಿಂದ ತಾಲೀಮಿನಲ್ಲಿ ಭಾಗವಹಿಸಿದರು.

ಇದರಿಂದಾಗಿ ಅವರು ಬುಧವಾರ ನಡೆಯಲಿರುವ ಲಖನೌ ಸೂಪರ್ ಜೈಂಟ್ಸ್ ತಂಡದ ಎದುರು ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಕಣಕ್ಕಿಳಿಯುವುದು ಬಹುತೇಕ ಖಚಿತವಾಯಿತು. ಮೂರು ದಿನಗಳ ಹಿಂದೆ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆದ ಮುಂಬೈ ಇಂಡಿಯನ್ಸ್ ತಂಡದ ಎದುರಿನ ಪಂದ್ಯದಲ್ಲಿ ಅವರು ಅರ್ಧಶತಕ ಗಳಿಸಿದ್ದರು. ಆದರೆ 131.57ರ ಸ್ಟ್ರೈಕ್‌ರೇಟ್‌ನಷ್ಟು ನಿಧಾನಗತಿಯಲ್ಲಿ ರನ್ ಗಳಿಸಿದ್ದರು. ಅಲ್ಲದೇ ಫೀಲ್ಡಿಂಗ್ ಸಂದರ್ಭದಲ್ಲಿ ಅವರು ಡ್ರೆಸಿಂಗ್ ರೂಮ್‌ನಲ್ಲಿ ವಿಶ್ರಾಂತಿ ಪಡೆದಿದ್ದರು. 'ವಿರಾಟ್ ಅವರಿಗೆ ಪಾದದ ನೋವು ಇದೆ' ಎಂಬ ವರದಿಗಳು ಕೆಲವು ಸುದ್ದಿ ಜಾಲತಾಣಗಳಲ್ಲಿ ಹರಿದಾಡಿದ್ದವು. ಅದರಿಂದಾಗಿ ಅವರು ಲಖನೌ ಎದುರಿನ ಪಂದ್ಯದಲ್ಲಿ ಕಣಕ್ಕಿಳಿಯುವುದು ಅನುಮಾನ ಎಂಬ ಮಾತುಗಳೂ ಕೇಳಿಬಂದಿದ್ದವು. ಆದರೆ ವಿರಾಟ್ ಅಭ್ಯಾಸ ಮಾಡಿದ್ದರಿಂದ ಈ ಎಲ್ಲ ಊಹಾಪೋಹಗಳಿಗೆ ಬಹುತೇಕ ತೆರೆ ಬಿದ್ದಂತಾಗಿದೆ.

ಹಾಲಿ ಚಾಂಪಿಯನ್ ಆರ್‌ಸಿಬಿಯು ಇದುವರೆಗೆ ಆಡಿರುವ ನಾಲ್ಕು ಪಂದ್ಯಗಳಲ್ಲಿ ಮೂರರಲ್ಲಿ ಜಯಿಸಿದೆ. ಅದರಲ್ಲೂ ತವರಿನಂಗಳದಲ್ಲಿ ಆಡಿದ ಎರಡೂ ಪಂದ್ಯಗಳಲ್ಲಿ ಭರ್ಜರಿ ಜಯಗಳಿಸಿತ್ತು. ಆದರೆ ಗುವಾಹಟಿಯಲ್ಲಿ ರಾಜಸ್ಥಾನ ರಾಯಲ್ಸ್ ಎದುರು ಮುಗ್ಗರಿಸಿತ್ತು. ಮುಂಬೈ ಎದುರು ಮತ್ತೆ ಗೆಲುವಿನ ಹಾದಿಗೆ ಮರಳಿತು.

ಇನ್ನೊಂದು ವಿಶೇಷವೆಂದರೆ ಆರ್‌ಸಿಬಿಯು ಈ ಎಲ್ಲ ಪಂದ್ಯಗಳಲ್ಲಿಯೂ ಇನ್ನೂರಕ್ಕಿಂತ ಹೆಚ್ಚಿನ ಮೊತ್ತಗಳನ್ನು (4ಕ್ಕೆ203, 3ಕ್ಕೆ250, 8ಕ್ಕೆ201 ಹಾಗೂ 4ಕ್ಕೆ240) ಗಳಿಸಿದೆ. ಆರಂಭದ ಪಂದ್ಯಗಳಲ್ಲಿ ಲಯ ಕಳೆದುಕೊಂಡಿದ್ದ ಫಿಲ್ ಸಾಲ್ಟ್ ಮುಂಬೈ ಎದುರು 36 ಎಸೆತಗಳಲ್ಲಿ 78 ರನ್ ಹೊಡೆದಿದ್ದರು. ಅವರು ಮತ್ತು ವಿರಾಟ್ ಮೊದಲ ವಿಕೆಟ್ ಜೊತೆಯಾಟದಲ್ಲಿ 120 ರನ್ ಸೇರಿಸಿದ್ದರು. ಆ ಪಂದ್ಯದಲ್ಲಿ ಮೂರನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದಿದ್ದ ನಾಯಕ ರಜತ್ ಪಾಟೀದಾರ್ ಕೇವಲ 20 ಎಸೆತಗಳಲ್ಲಿ 53 ರನ್ ಗಳಿಸಿದ್ದರು. ಟೂರ್ನಿಯಲ್ಲಿ ಎರಡು ಅರ್ಧಶತಕ ಗಳಿಸಿರುವ ದೇವದತ್ತ ಪಡಿಕ್ಕಲ್ ಮತ್ತು ಮೈದಾನದಿಂದ ಹೊರಗೆ ಚೆಂಡು ಹೊಡೆಯುವ ಕಲೆ ಕರಗತ ಮಾಡಿಕೊಂಡಿರುವ ಟಿಮ್ ಡೇವಿಡ್ ಉತ್ತಮ ಲಯದಲ್ಲಿದ್ದಾರೆ. ಮಂಗಳವಾರ ಸಂಜೆಯೂ ಅವರು ನೆಟ್ಸ್‌ನಲ್ಲಿ ಬ್ಯಾಟಿಂಗ್ ಮಾಡುವಾಗ ಚೆಂಡನ್ನು ಕ್ರೀಡಾಂಗಣದ ಮೇಲ್ಚಾವಣಿಯನ್ನು ದಾಟಿಸುವ ಪ್ರಯತ್ನ ಮಾಡುತ್ತಿದ್ದರು. ಆದರೆ ಚೆಂಡು ಹಲವು ಬಾರಿ ಗ್ಯಾಲರಿಯ ಖಾಲಿ ಕುರ್ಚಿಗಳ ಮೇಲೆ ಪುಟಿದಿತ್ತು.

ಆರ್‌ಸಿಬಿಯ ಬ್ಯಾಟರ್‌ಗಳು ಇದುವರೆಗೆ ಉತ್ತಮ ಸ್ಟ್ರೈಕ್‌ರೇಟ್‌ನಲ್ಲಿ ರನ್ ಗಳಿಸಿದ್ದಾರೆ. ವಿರಾಟ್ (ಸ್ಟ್ರೈಕ್‌ರೇಟ್: 162), ಫಿಲ್ ಸಾಲ್ಟ್ (178), ರಜತ್ (214), ಟಿಮ್ (221) ಮತ್ತು ದೇವದತ್ತ (201) ಮಿಂಚಿದ್ದಾರೆ. ಈ ಐವರು ಬ್ಯಾಟರ್‌ಗಳೂ ಸೇರಿ ನಾಲ್ಕು ಪಂದ್ಯಗಳಲ್ಲಿ ಒಟ್ಟು 52 ಸಿಕ್ಸರ್ ಸಿಡಿಸಿದ್ದಾರೆ.

ಜಿತೇಶ್ ಶರ್ಮಾ, ರೊಮೆರಿಯೊ ಶೆಫರ್ಡ್ ಮತ್ತು ಕೃಣಾಲ್ ಪಾಂಡ್ಯ ಅವರೂ ಕೊನೆಯ ಹಂತದ ಓವರ್‌ಗಳಲ್ಲಿ ರನ್ ಸೂರೆ ಮಾಡುವ ಸಮರ್ಥರು. ಆದ್ದರಿಂದ ಲಖನೌ ತಂಡದ ಅನುಭವಿ ಬೌಲರ್‌ಗಳಾದ ಮೊಹಮ್ಮದ್ ಶಮಿ, ಆವೇಶ್ ಖಾನ್ ಅವರ ಮುಂದೆ ಆರ್‌ಸಿಬಿಯ ಬಲಾಢ್ಯ ಬ್ಯಾಟಿಂಗ್ ಪಡೆಯನ್ನು ಕಟ್ಟಿಹಾಕುವ ಸವಾಲು ಇದೆ. ಪ್ರಿನ್ಸ್ ಯಾದವ್, ಸ್ಪಿನ್ನರ್ ದಿಗ್ವೇಶ್ ಸಿಂಗ್ ರಾಠಿ ಹಾಗೂ ಮಣಿಮಾರನ್ ಸಿದ್ಧಾರ್ಥ್ ಅವರಗೂ ಬಿಗಿದಾಳಿ ನಡೆಸಬೇಕಾದ ಒತ್ತಡವಿದೆ.

ರಿಷಭ್ ಪಂತ್ ನಾಯಕತ್ವದ ಲಖನೌ ಬಳಗವು ನಾಲ್ಕು ಪಂದ್ಯಗಳಲ್ಲಿ ಎರಡು ಗೆದ್ದು, ಇನ್ನೆರಡರಲ್ಲಿ ಸೋತಿದೆ. ನಾಯಕ ರಿಷಭ್, ಆಯುಷ್ ಬಡೋನಿ, ಮುಕುಲ್ ಚೌಧರಿ ಅವರು ಈಗಾಗಲೇ ಅರ್ಧಶತಕ ಗಳಿಸಿದ್ದಾರೆ. ಉತ್ತಮ ಲಯದಲ್ಲಿಯೂ ಇದ್ದಾರೆ. ಆದರೆ ಮಿಚೆಲ್ ಮಾರ್ಷ್, ನಿಕೊಲಸ್ ಪೂರನ್ ಹಾಗೂ ಏಡನ್ ಮರ್ಕರಂ ಅವರು ತಮ್ಮ ನೈಜ ಆಟಕ್ಕೆ ಮರಳಬೇಕಿದೆ. ಆರ್‌ಸಿಬಿಯ ಭುವನೇಶ್ವರ್ ಕುಮಾರ್, ಜೋಶ್ ಹ್ಯಾಜಲ್‌ವುಡ್, ಸ್ಪಿನ್ ಜೋಡಿ ಸುಯಶ್ ಶರ್ಮಾ ಮತ್ತು ಕೃಣಾಲ್ ಪಾಂಡ್ಯ ಅವರನ್ನು ಎದುರಿಸಿ ನಿಲ್ಲಬೇಕಿದೆ.

ಲಖನೌ ತಂಡವು ತನ್ನ ಕಳೆದ ಪಂದ್ಯದಲ್ಲಿ ಗುಜರಾತ್ ಟೈಟನ್ಸ್ ಎದುರು ಸೋತಿತ್ತು. ಅದರಿಂದಾಗಿ ಗೆಲುವಿನ ಹಾದಿಗೆ ಮರಳುವ ಒತ್ತಡದಲ್ಲಿದೆ.

ತಂಡಗಳು

ರಾಯಲ್ ಚಾಲೆಂಜರ್ಸ್ ಬೆಂಗಳೂರು: ರಜತ್ ಪಾಟೀದಾರ್ (ನಾಯಕ), ಫಿಲ್ ಸಾಲ್ಟ್, ವಿರಾಟ್ ಕೊಹ್ಲಿ, ಟಿಮ್ ಡೇವಿಡ್, ಜೇಕಬ್ ಬೆಥೆಲ್, ರೊಮಾರಿಯೊ ಶೆಫರ್ಡ್, ಜೋಶ್ ಹ್ಯಾಜಲ್‌ವುಡ್, ದೇವದತ್ತ ಪಡಿಕ್ಕಲ್, ಜಿತೇಶ್ ಶರ್ಮಾ, ವೆಂಕಟೇಶ್ ಅಯ್ಯರ್, ಸ್ವಪ್ನಿಲ್ ಸಿಂಗ್, ಜೇಕಬ್ ಡಫಿ, ಅಭಿನಂದನ್ ಸಿಂಗ್, ರಸಿಕ್ ದಾರ್, ಭುವನೇಶ್ವರ್ ಕುಮಾರ್, ಕೃಣಾಲ್ ಪಾಂಡ್ಯ, ಮಂಗೇಶ್ ಯಾದವ್

ಲಖನೌ ಸೂಪರ್ ಜೈಂಟ್ಸ್: ರಿಷಭ್ ಪಂತ್ (ನಾಯಕ), ಏಡನ್ ಮರ್ಕರಂ, ಹಿಮ್ಮತ್ ಸಿಂಗ್, ಮ್ಯಾಥ್ಯೂ ಬ್ರೀಜ್‌ಟಕೆ. ಮುಕುಲ್ ಚೌಧರಿ, ಜೋಶ್ ಇಂಗ್ಲಿಸ್, ಮಿಚೆಲ್ ಮಾರ್ಷ್, ಅಬ್ದುಲ್ ಸಮದ್, ಶಾಬಾಜ್ ಅಹಮದ್, ಆಯುಷ್ ಬಡೋನಿ, ಮೊಹಮ್ಮದ್ ಶಮಿ, ಆವೇಶ್ ಖಾನ್, ದಿಗ್ವೇಶ್ ರಾಠಿ, ಪ್ರಿನ್ಸ್ ಯಾದವ್, ಎಂ. ಸಿದ್ಧಾರ್ಥ್, ಅರ್ಜುನ್ ತೆಂಡೂಲ್ಕರ್, ಎನ್ರಿಚ್ ನಾಕಿಯಾ, ಮೊಹಸಿನ್ ಖಾನ್.

ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡದ ಆಟಗಾರ ವಿರಾಟ್ ಕೊಹ್ಲಿ ಅವರಿಗೆ ಮಸಾಜ್ ತಜ್ಞರಾದ ನವನೀತಾ ಗೌತಮ್ ಮಂಗಳವಾರ ಚಿಕಿತ್ಸೆ ನೀಡಿದರು

ಚಿತ್ರಗಳು: ಪ್ರಶಾಂತ್ ಎಚ್‌ಜಿ.

6 ಒಟ್ಟು ಪಂದ್ಯ	ಬಲಾಬಲ
ಆರ್‌ಸಿಬಿ ಜಯ	4
ಲಖನೌ ಗೆಲುವು	2

ಲಖನೌ ಸೂಪರ್ ಜೈಂಟ್ಸ್ ತಂಡದ ನಾಯಕ ರಿಷಭ್ ಪಂತ್ ಅವರು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮಂಗಳವಾರ ಪಿಚ್ ಪರಿಶೀಲಿಸಿದರು

ಇಂದಿನ ಪಂದ್ಯ

ರಾಯಲ್ ಚಾಲೆಂಜರ್ಸ್ ಬೆಂಗಳೂರು V/s ಲಖನೌ ಸೂಪರ್ ಜೈಂಟ್ಸ್
ತಾಣ: ಬೆಂಗಳೂರು,
ಆರಂಭ: ರಾತ್ರಿ 7.30
ಲೈವ್ ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ರಜತ್ ಪಾಟೀದಾರ್

ಮಿಂಚಿದ ಸಂಜು; ಚೆನ್ನೈ ತಂಡಕ್ಕೆ ಸತತ ಎರಡನೇ ಗೆಲುವು

ನೂರ್ ದಾಳಿ; ಕುಸಿದ ಕೆಕೆಆರ್

ಚೆನ್ನೈ (ಪಿಟಿಐ): ಅಫ್ಗಾನಿಸ್ತಾನದ ಸ್ಪಿನ್ನರ್ ನೂರ್ ಅಹಮದ್ (21ಕ್ಕೆ3) ಕೈಚಳಕ ತೋರಿದರು. ಅವರ ಪರಿಣಾಮಕಾರಿ ಬೌಲಿಂಗ್ ನೆರವಿನಿಂದ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಐಪಿಎಲ್‌ನಲ್ಲಿ ಸತತ ಎರಡನೇ ಜಯ ದಾಖಲಿಸಿತು.

ಸಂಜು ಸ್ಯಾಮ್ಸನ್

ಚೆಪಾಕ್ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಆತಿಥೇಯ ಚೆನ್ನೈ ತಂಡವು 32 ರನ್‌ಗಳಿಂದ ಕೋಲ್ಕತ್ತ ನೈಟ್ ರೈಡರ್ಸ್ ತಂಡವನ್ನು ಮಣಿಸಿತು. ಟೂರ್ನಿಯಲ್ಲಿ ಮೊದಲ ಜಯದ ನಿರೀಕ್ಷೆಯಲ್ಲಿದ್ದ ಅಜಿಂಕ್ಯ ರಹಾನೆ ಪಡೆಗೆ ಮತ್ತೆ ನಿರಾಸೆಯಾಯಿತು.

ಸಂಜು ಸ್ಯಾಮ್ಸನ್ (48;32ಎ) ಮತ್ತು ಡಿವಾಲ್ಡ್ ಬ್ರೆವಿಸ್ (41;29ಎ) ಅವರ ಬ್ಯಾಟಿಂಗ್ ಬಲದಿಂದ ಚೆನ್ನೈ ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗೆ 192 ರನ್ ಗಳಿಸಿತು. ಸವಾಲಿನ ಗುರಿ ಬೆನ್ನಟ್ಟಿದ ಕೋಲ್ಕತ್ತ ತಂಡದ ಅಗ್ರ ಬ್ಯಾಟರ್‌ಗಳಿಗೆ ನೂರ್ ಪೆವಿಲಿಯನ್ ದಾರಿ ತೋರಿಸಿದರು. ಇದರಿಂದಾಗಿ ತಂಡವು 7 ವಿಕೆಟ್‌ಗೆ 160 ರನ್ ಗಳಿಸಿ ಹೋರಾಟ ಮುಗಿಸಿತು.

ಆರಂಭ ಆಟಗಾರ ಫಿನ್ ಅಲೆನ್ (1) ಎರಡನೇ ಓವರ್‌ನಲ್ಲೇ ವಿಕೆಟ್ ಒಪ್ಪಿಸಿದರು. ನಂತರದಲ್ಲಿ ಸುನಿಲ್ ನಾರಾಯಣ್ (24), ರಹಾನೆ (28) ಮತ್ತು ಅಂಗಕ್ರಿಷ್ ರಘುವಂಶಿ (27) ತಂಡಕ್ಕೆ ಚೇತರಿಕೆ ನೀಡುವ ಪ್ರಯತ್ನ ಮಾಡಿದರು. ಆಲ್‌ರೌಂಡರ್‌ಗಳಾದ ರಿಂಕು ಸಿಂಗ್ (6) ಮತ್ತು ಕ್ಯಾಮರಾನ್ ಗ್ರೀನ್ (0) ಮತ್ತೆ ವೈಫಲ್ಯ ಅನುಭವಿಸಿದರು. ಹೀಗಾಗಿ, 90 ರನ್ ಗಳಿಸುವಷ್ಟರಲ್ಲಿ ಆರು ವಿಕೆಟ್ ಕಳೆದುಕೊಂಡು ತಂಡವು ಸಂಕಷ್ಟಕ್ಕೆ ಸಿಲುಕಿತು.

ಈ ಹಂತದಲ್ಲಿ ರೋವ್ಮನ್ ಪೊವೆಲ್ (ಔಟಾಗದೇ 31;22ಎ) ಮತ್ತು ರಮಣದೀಪ್ ಸಿಂಗ್ (35;23ಎ) ಕೊಂಚ ಹೋರಾಟ ನಡೆಸಿದರು. ಅವರು ಏಳನೇ ವಿಕೆಟ್ ಜೊತೆಯಾಟದಲ್ಲಿ 63 (40ಎ) ರನ್ ಸೇರಿಸಿದರೂ ಗೆಲುವಿಗೆ ಗುರಿ ದೂರವಿತ್ತು.

ಸಂಜು ಆಸರೆ: ಟಾಸ್ ಗೆದ್ದ ಕೋಲ್ಕತ್ತ ತಂಡ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. 3ನೇ ಓವರ್‌ನಲ್ಲಿ ಅನುಕೂಲ್ ರಾಯ್ ಹಾಕಿದ ಎಸೆತದಲ್ಲಿ ರೋವ್ಮನ್ ಪೊವೆಲ್ ಅವರಿಗೆ ಕ್ಯಾಚಿತ್ತ ಚೆನ್ನೈ ತಂಡದ ನಾಯಕ ಋತುರಾಜ್ ಗಾಯಕವಾಡ್ (7; 6ಎ) ನಿರ್ಗಮಿಸಿದರು. ಅವರ ವೈಫಲ್ಯ ಈ ಪಂದ್ಯದಲ್ಲಿಯೂ ಮುಂದುವರಿಯಿತು.

ಈ ಹಂತದಲ್ಲಿ ಸಂಜು ಅವರ ಜೊತೆಗೂಡಿದ ಯುವ ಪ್ರತಿಭೆ ಆಯುಷ್ ಮ್ಹಾತ್ರೆ (38; 17ಎ, 4X6, 6X2) ಇನಿಂಗ್ಸ್‌ಗೆ ಒಂದಿಷ್ಟು ಸ್ಥಿರತೆ ಒದಗಿಸಿದರು. ಎರಡನೇ ವಿಕೆಟ್ ಜೊತೆಯಾಟದಲ್ಲಿ ಇಬ್ಬರೂ 22 ಎಸೆತಗಳಲ್ಲಿ 47 ರನ್ ಸೇರಿಸಿದರು.

ನಂತರದಲ್ಲಿ ಬ್ರೆವಿಸ್ ಮತ್ತು ಸರ್ಫರಾಜ್ (23) ಅವರು ತಂಡ ಸವಾಲಿನ ಮೊತ್ತ ಗಳಿಸಲು ನೆರವಾದರು.

1 ಕೆಕೆಆರ್ ತಂಡವು ಐಪಿಎಲ್ ಆವೃತ್ತಿಯೊಂದರ ಆರಂಭಿಕ ಐದು ಪಂದ್ಯಗಳಲ್ಲಿ ಜಯ ಸಾಧಿಸದಿರುವುದು ಇದು ಮೊದಲ ಬಾರಿ

ಸಂಕ್ಷಿಪ್ತ ಸ್ಕೋರು: ಚೆನ್ನೈ ಸೂಪರ್ ಕಿಂಗ್ಸ್: 20 ಓವರ್‌ಗಳಲ್ಲಿ 5 ವಿಕೆಟ್‌ಗೆ 192 (ಸಂಜು ಸ್ಯಾಮ್ಸನ್ 48, ಆಯುಷ್ ಮ್ಹಾತ್ರೆ 38, ಡಿವಾಲ್ಡ್ ಬ್ರೆವಿಸ್ 41, ಸರ್ಫರಾಜ್ ಖಾನ್ 23; ಅನುಕೂಲ್ ರಾಯ್ 21ಕ್ಕೆ 1, ಸುನಿಲ್ ನಾರಾಯಣ್ 21ಕ್ಕೆ 1, ಕಾರ್ತಿಕ್ ತ್ಯಾಗಿ 35ಕ್ಕೆ 2). **ಕೋಲ್ಕತ್ತ ನೈಟ್ ರೈಡರ್ಸ್:** 20 ಓವರ್‌ಗಳಲ್ಲಿ 7 ವಿಕೆಟ್‌ಗೆ 160 (ಸುನಿಲ್ ನಾರಾಯಣ್ 24, ಅಜಿಂಕ್ಯ ರಹಾನೆ 27, ಅಂಗಕ್ರಿಷ್ ರಘುವಂಶಿ 27, ರೋವ್ಮನ್ ಪೊವೆಲ್ ಔಟಾಗದೇ 31, ರಮಣದೀಪ್ ಸಿಂಗ್ 35; ಅನ್ಶುಲ್ ಕಂಬೋಜ್ 32ಕ್ಕೆ 2, ನೂರ್ ಅಹಮದ್ 21ಕ್ಕೆ 3).
ಪಂದ್ಯದ ಆಟಗಾರ: ನೂರ್ ಅಹಮದ್

ನೂರ್ ಅಹಮದ್
ಪಿಟಿಐ ಚಿತ್ರ

ತಿದ್ದುಪಡಿ

ರಾಜಸ್ಥಾನ ರಾಯಲ್ಸ್ ತಂಡವು ಐಪಿಎಲ್ ಟೂರ್ನಿಯಲ್ಲಿ ಇದುವರೆಗೆ ಒಟ್ಟು ಐದು ಪಂದ್ಯಗಳನ್ನು ಆಡಿದೆ. ಅದರಲ್ಲಿ ನಾಲ್ಕು ಗೆದ್ದು, ಒಂದರಲ್ಲಿ ಸೋತಿದೆ. ಮಂಗಳವಾರದ ಸಂಚಿಕೆಯಲ್ಲಿ ಪ್ರಕಟವಾದ ಪಾಯಿಂಟ್ ಪಟ್ಟಿಯಲ್ಲಿ ಸೋಲಿನ ಮಾಹಿತಿಯು ತಪ್ಪಾಗಿತ್ತು.

ಐಪಿಎಲ್ 2026: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ಆರ್ ಆರ್	5	4	1	0	8	0.889
ಪಿಬಿಕೆಎಸ್	4	3	0	1	7	0.720
ಆರ್‌ಸಿಬಿ	4	3	1	0	6	1.148
ಎಸ್‌ಆರ್‌ಎಚ್	5	2	3	0	4	0.576
ಡಿ ಸಿ	4	2	2	0	4	0.322
ಜಿ ಟಿ	4	2	2	0	4	-0.029
ಎಲ್‌ಎಸ್‌ಜಿ	4	2	2	0	4	-0.427
ಸಿಎಸ್‌ಕೆ	5	2	3	0	4	-0.846
ಎಂ ಐ	4	1	3	0	2	-0.772
ಕೆಕೆಆರ್	5	0	4	1	1	-1.383

ಆರೇಂಜ್ ಕ್ಯಾಪ್–ಹೆನ್ರಿಚ್ ಕ್ಲಾಸೆನ್, ಎಸ್‌ಆರ್‌ಎಚ್ (224 ರನ್)
ಪರ್ಪಲ್ ಕ್ಯಾಪ್–ಪ್ರಸಿದ್ಧ ಕೃಷ್ಣ, ಜಿಟಿ (10 ವಿಕೆಟ್)